ಶ್ರೀಹರ್ಷಲಾ

ಮಲ್ಲಿಕಾ

ಶ್ರೀಹರ್ಷಲಾ

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಪ್ರಥಮ ಮುದ್ರಣ
೧೯೮೪

ಬೆಲೆ : ಹದಿನೈದು ರೂಪಾಯಿ

ಮುದ್ರಕರು :
ಸಂಯುಕ್ತ ಕರ್ನಾಟಕ (ಜಾಬ್)
೨, ರೆಸಿಡೆನ್ಸಿ ರಸ್ತೆ, ಬೆಂಗಳೂರು-೨೫

“ಭಾರತಮಾತಾ ಪಾದಾರ್ಪಣಮಸ್ತು”

ಶ್ರೀಹರ್ಷಲಾ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ

ನಂ. ೭, ಲ್ಯಾಂಗ್‌ಫೋರ್ಡ್ ರೋಡ್

ಬೆಂಗಳೂರು–೨೫

ನಿವೇದನೆ

ಲಕ್ಷ್ಮಿಶ್ರೀ ಪ್ರಕಾಶನ ಮಾಲಿಕೆಯು
ಇಪ್ಪತ್ತಾರನೆಯದಾದ
ಈ ಕಥಾ ಪುಷ್ಪಸಮುಚ್ಚಯವನ್ನು
ಓದುಗರ ಕರಕಮಲಗಳಿಗೆ
ಸಮರ್ಪಿಸುತ್ತಲಿದೆ

ಮಲ್ಲಿಕಾ
15–12–84

ಪರಿವಿಡಿ

ಶ್ರೀಹರ್ಷಲಾ

Man is worse than animal,
when he is animal

—Tagore

ನ್ಯಾಯಾಲಯದ ಕಟಕಟೆಯಲ್ಲಿ ಶೀರ್ಣಜೀರ್ಣಿತ ಹೆಣ್ಣು !

ನಿಶ್ಶಬ್ದ-ನೀರವ.

ಎದುರಿಗೆ ವೇದಿಕೆಯ ಮೇಲಿನ ವ್ಯಕ್ತಿಯ ಥಳಥಳಿಸುವ ನಯನದ್ವಯಗಳು ನಿಟ್ಟಿಸುವ ರೀತಿ ತನ್ನಂತರಂಗವನ್ನು ಹೊಕ್ಕು ನೋಡುವನಿತು ತೀಕ್ಷ್ಣ ! ತೀಕ್ಷ್ಣಾತಿತೀಕ್ಷ್ಣ !!

ದರಿದ್ರ ಲಕ್ಷ್ಮಿಯೇ ಮೈವೆತ್ತು ಬಂದಂತಿದ್ದ ಪ್ರೌಢ ಹೆಣ್ಣು ಒಮ್ಮೆ ಸುತ್ತಲೂ ನೆಟ್ಟ ನೋಟವನ್ನು ಚೆಲ್ಲಿ ಜನಭರಿತ ನ್ಯಾಯಾಲಯದ ಗಂಭೀರ ರೀತಿಯನ್ನು ಗಮನಿಸಿ ಸರಕಾರಿ ವಕೀಲನ ಪ್ರಶ್ನೋಪಪ್ರಶ್ನೆಗಳಿಗೆ ಉತ್ತರವಾಗಿ ತನ್ನ ಹೇಳಿಕೆಯನ್ನು ಮುಂದುವರಿಸಿದಳು,

"....ನನ್ನ ಗಂಡನಿಂದ ನಾನು ನರಕ ಹಿಂಸೆ ಅನುಭವಿಸಿದುದನ್ನು ನಮ್ಮ ಮನೆಯ ಪರಿಸರವೆಲ್ಲಾ ಬಲ್ಲುದು. ಆತ ಕಡುಮೂರ್ಖ! ಕುಡುಕ! ಧರ್ಮ-ಕರ್ಮ ಏನೇನೂ ಅರಿಯದ ಹುಂಬ! ಆದರೂ ನಾನವನಿಗೆ ವಿಷ ವೂಡಿಸುವಷ್ಟು ಪಾಷಾಂಡಿಯಲ್ಲ! ಅಂಥ ಹೀನ ಕೃತ್ಯ ನಾನೇಕೆ ಮಾಡಲಿ ಸೃಷ್ಟಿಕರ್ತ ಇರುವಾಗ ...?

ಆ ಪ್ರಶ್ನೆ ಹೊಮ್ಮಿದಾಗ ಆ ದೀನ ಕಣ್ಣುಗಳಿಗೆ ಎಲ್ಲೋ ಪರಿತ್ಯಕ್ತ ದಿವ್ಯ ಖಳೆ ಬಂದು ನೆಲೆಗೊಂಡಂತೆ ಕ್ಷಣಕಾಲ ಥಳಥಳಿಸಿ ಮಾಯವಾಯಿತು. ಅವಳು ಮಾಸಲು ಸೀರೆಯ ಸೆರಗನ್ನು ಎಳೆದು ಎದೆಯ ತುಂಬ ಹೊದ್ದು ಅತ್ಯಂತ ವಿಶಾದವಾಣಿಯಲ್ಲಿ ಮುಂದುವರಿದಳು,

"....ಆಗಲೇ ಹೇಳಿದೆ ಅವನು ಕುಡುಕ ಎಂದು. ಅವನು ಕ್ರೂರಿ. ಹೊತ್ತು ಗೊತ್ತುಗಳ ಪರಿವೆಯಿಲ್ಲದೆ ನನ್ನನ್ನು ಹಿಂಸಿಸುತಿದ್ದ. ಉಟ್ಟು ಡಲೂ ಬಿಡುವು ಕೊಡುತ್ತಿರಲಿಲ್ಲ. ನನ್ನ ತಾಯಿ ಬದುಕಿರುವಂದು ಇವ ನನ್ನು ಬಿಟ್ಟು ಮೂರು ಬಾರಿ ಹೊರಟು ಹೋಗಿದ್ದೆ. ಸಮಾಜ ಅದನ್ನು 'ಓಡಿಹೋದಳು' ಎಂಬ ಅಡ್ಡ ಹೆಸರಿಂದ ಕರೆದು ಅಪಮಾನ ಮಾಡಿತು! ಅಲ್ಲಿ ಮೂರು ದಿನವೂ ಬಿಡದೆ ಎಳೆದು ತಂದು ಅತೀವ ಹಿಂಸೆಗೆ ಗುರಿಪಡಿಸಿದ ಈ ಧೂರ್ತ! ಈ ನರಕ ಅನುಭವಿಸುವುದಕ್ಕಿಂತ ಹೋಗದಿರುವುದೇ ಲೇಸು ಎನಿಸುವಷ್ಟು ಸಂಕಟ! ನನ್ನ ತಾಯಿಗೆ ನಾನೊಬ್ಬಳೇ ಮಗಳು. ಐದು ಮಂದಿ ಗಂಡು ಮಕ್ಕಳು ಐವರೂ ಪ್ರೌಢ ವಿದ್ಯಾಭ್ಯಾಸ ಪಡೆದು ತಮ್ಮ ತಮ್ಮ ಯೋಗ್ಯತಾನುಸಾರ ಸುಖವಾಗಿದ್ದಾರೆ. ಹೆಣ್ಣಿಗೇಕೆ ವಿದ್ಯೆ ಎಂದು ನನ್ನ ಬಗ್ಗೆ ತಾತ್ಸಾರ ತೋರಿದುದರಿಂದ ನಾನು ದೃಢ ಭಾವದಿಂದ ಸರಕಾರಿ ಶಾಲೆ ಸೇರಿ ಎಸ್.ಎಸ್.ಎಲ್.ಸಿ ಓದಿ ಟೀಚರ್ ಟ್ರೈನಿಂಗ್ ತೆಗೆದುಕೊಂಡು ಉಪಾಧ್ಯಾಯಿನಿಯಾಗಿ ಕೆಲಸ ಮಾಡುತಿದ್ದೆ. ಮದುವೆಯಾದ ಮೇಲೂ ಕೆಲಸ ಮುಂದುವರಿಸಿದೆ. ತಿಂಗಳ ಕೊನೆಯಲ್ಲಿ ಸಂಬಳ ಪೂರ್ತಿ ಇವನೇ ತೆಗೆದು ಕೊಳ್ಳುತ್ತಿದ್ದ. ಅನೇಕ ವೇಳೆ ಶಾಲೆಗೆ ಬಂದು ಎಲ್ಲರ ಮುಂದೆ ಅವಾಚ್ಯ ಶಬ್ದ ಗಳಿಂದ ಮನಸ್ಸಿಗೆ ಮಾತಾಡಿ ಬೈಗುಳದ ಮಳೆ ಸುರಿಸಿ ಹಣವನ್ನು ಕಬಳಿಸು ತಿದ್ದ. ನನ್ನ ಗೌರವ ಜೀವನಕ್ಕೆ ಧಕ್ಕೆ ಬಂದುದಲ್ಲದೆ ಹಣವೂ ನನಗೆ ದಕ್ಕು ತ್ತಿರಲಿಲ್ಲವಾದುದರಿಂದ ಕೆಲಸ ಬಿಡಬೇಕಾಯಿತು. ಬಿಟ್ಟು ಬಂದೆ. ನಾನು

ಚಿಕ್ಕಂದಿನಲ್ಲಿ ಸಂಗೀತ ಕಲಿತವಳು. ನಮ್ಮ ಮನೆಯ ಹತ್ತಿರದಲ್ಲಿ ದ್ವಾರಕಾನಾಥನ ದೇಗುಲವಿದೆ. ಅಲ್ಲಿಗೆ ದಿನವೂ ಹೋಗಿ ಮೀರಾಭಜನೆಗಳನ್ನು ಹಾಡುತಿದ್ದೆ. ಭಕ್ತಾದಿಗಳು, ಕೆಲವೊಮ್ಮೆ ಪೂಜಾರಿಗಳು ನನಗೆ ಅಷ್ಟಿಷ್ಟು ಪುಡಿಗಾಸು ಕೊಡುತಿದ್ದರು. ಅದು ತಿಳಿದೊಡನೆ ಅಲ್ಲಿಗೂ ಧಾಳಿಯಿಟ್ಟ ಈ ಪತಿ ಮಹಾಶಯ! ಆ ಭಕ್ತಾದಿಗಳ ಮುಂದೆ ಆದ ಅಪಮಾನದಿಂದ ಬೇಸತ್ತು ಮಕ್ಕಳಿಗೆ ಮನೆಪಾಠ ಶುರು ಮಾಡಿದೆ. ಕುಡುಕ ಹೊರ ಹೋದಾಗ ಪಾಠ....ಇಂಥ ಜೀವನ ಯಾವ ಹೆಂಗಸು ಸಹಿಸುತ್ತಾಳೆ?....ಸ್ವಾಮಿ, ನಾನು ಸಹಿಸಿಕೊಂಡೆ. ಇಲ್ಲದಿದ್ದರೆ ನಾನೇ ಆತ್ಮಹತ್ಯೆ ಮಾಡಿಕೊಳ್ಳಬೇಕಿತ್ತು. ಎಷ್ಟೋ ಬಾರಿ ಅದನ್ನು ಯೋಚಿಸಿಯೂ ಸುಮ್ಮನಾದೆ. ದಿನವೂ ಕಣ್ಣೀರಿನ ಕೋಡಿ ಹರಿಸೀ ಹರಿಸಿ ಕಣ್ಣೀರಿನ ಕಟ್ಟೆ ಬರಿದಾಗಿದೆ. ಈಗ ಅಳುತ್ತೇನೆಂದರೂ ಕಂಬನಿ ಸುರಿಯುವುದಿಲ್ಲ....ಮೂಕ ದುಃಖ ಅಷ್ಟೆ, ಅಥವಾ ಪರಿತಾಪ....ಮುಖ್ಯವಾಗಿ ಹೆಣ್ಣಾಗಿ ಹುಟ್ಟಿದ್ದು ತಪ್ಪು!"

ಸರಕಾರಿ ವಕೀಲರು ನ್ಯಾಯಾಧೀಶರನ್ನು ಕುರಿತು "ಮಹಾಶಯಾ! ಶವ ಪರೀಕ್ಷೆ ಮಾಡಿದ ವೈದ್ಯರು ಬಂದಿದ್ದಾರೆ. ಅವರ ಸಾಕ್ಷ್ಯ ಈಗ ತೆಗೆದುಕೊಳ್ಳೋಣವೇ...."

"ಆಗಬಹುದು....ಡಾಕ್ಟರ್ ಮಹಾಶಯಾ! ನೀವು ಗೋಪಾಲನ ಶವ ಪರೀಕ್ಷೆ ಮಾಡಿದ್ದೀರಷ್ಟೆ ? ಅದರ ವಿವರಣೆ ನೀಡಿರಿ."

"ಅವನ ಶವ ಪರೀಕ್ಷೆ ಮಾಡಿದ್ದು ದಿಟ. ಬಲಗಡೆ ಹಣೆಯ ಮೇಲೆ ಗಾಯವಾಗಿದ್ದು ಎದೆಯ ಮೇಲೆ ರಕ್ತ ತೊಟ್ಟಿಕ್ಕಿದ ಕಲೆ ಶರಟಿನ ಮೇಲಿತ್ತು. ಜಠರದಲ್ಲಿ ಹೆಂಡ ಮತ್ತು ಇಲಿಯ ಪಾಶಾಣ ಭರಿತ ರಸವೂ ಇತ್ತು. ಬಹಳ ಜೀರ್ಣಿತ ಶರೀರ....ಹಣೆಯ ಪೆಟ್ಟು ಸಾಮಾನ್ಯ. ಸಾವಿಗೆ ಕಾರಣ ಪಾಷಾಣವೇ...."

"ಇಲಿಯ ಪಾಷಾಣ ಎಂದರೆ ಮನೆಯಲ್ಲಿ ವಿನಾ ಇನ್ನೆಲ್ಲಿಯೂ ಉದರ ಸೇರಲು ಕಾರಣವಿಲ್ಲ. ಬಹುಶಃ ಆತನ ಕುಡುಕತನದ ಹಿಂಸೆಯನ್ನು ನಿವಾರಿಸಿಕೊಳ್ಳಲು ಪಾಷಾಣ ಕೊಟ್ಟಿರಬಹುದು ಗೃಹಿಣಿ."

ಆ ಕೂಡಲೇ ಇಡೀ ನ್ಯಾಯಾಲಯದ ಕಣ್ಣು ಕಟಕಟೆಯ ಕಡೆ ಹರಿಯಿತು. ಅವಳ ದೃಷ್ಟಿ ಒಂದು ಕ್ಷಣ, ಒಂದೇ ಒಂದು ಕ್ಷಣ ಸುತ್ತ ಹರಿದಾಡಿ

ಹಿಮ್ಮರಳಿತು. ಅವಳು ಸ್ವಲ್ಪವೂ ವಿಚಲಿತಳಾಗದೆ ಶಾಂತಭಾವದಿಂದ ನುಡಿದಳು. "ಸ್ವಾಮಿ, ಇದು ಸತ್ಯಕ್ಕೆ ದೂರ....ನಾನು ಇಷ್ಟೊಂದು ಕಠಿಣ ಮನಸ್ಸು ಮಾಡಬಲ್ಲೆನಾಗಿದ್ದಿದ್ದರೆ ಎಂದೋ ನಿವಾರಿಸಿಕೊಳ್ಳಬಹುದಾಗಿತ್ತು. ಖಂಡಿತ ನಾನದರ ಯೋಚನೆ ಮಾಡಿದವಳಲ್ಲ. ನನ್ನಿಂದದು ಸಾಧ್ಯವೂ ಇಲ್ಲ.... ಅಷ್ಟು ಧೂರ್ತತನ ನನ್ನಲ್ಲಿಲ್ಲ."

"ಹಣೆಯ ಮೇಲಿನ ಪೆಟ್ಟು ಹೇಗಾಯ್ತು ?"

"ಅದೂ ಸಹ ನನಗೆ ಗೊತ್ತಿಲ್ಲ. ಹನ್ನೊಂದರ ರಾತ್ರಿ ಯಾರೋ ಅವರನ್ನು ಮನೆಗೆ ಕರೆತಂದು ಬಿಟ್ಟು 'ರಸ್ತೆಯಲ್ಲಿ ಬಿದ್ದುದರಿಂದ ಹಣೆಗೆ ಪೆಟ್ಟಾಗಿದೆ' ಎಂದು ಹೇಳಿ ಹೋದರು. ಅಷ್ಟು ಮಾತ್ರ ನನಗೆ ಗೊತ್ತು. ರಾತ್ರಿ ಅವರು ಊಟ ಮಾಡಲಿಲ್ಲ. ಮಲಗಿದವರು ಬೆಳಗ್ಗೆ ಏಳಲಿಲ್ಲ. ಯಾವಾಗ ಪ್ರಾಣ ಹೋಯಿತೋ ತಿಳಿಯದು...."

"ಈ ಸಾಕ್ಷ್ಯವನ್ನು ಒಪ್ಪುವುದಕ್ಕಾಗುವುದಿಲ್ಲ........!"

ಸರಕಾರಿ ವಕೀಲನ ಪ್ರತಿಪಾದನೆಗೆ 'ಅಸ್ತು' ಎನುವಂತೆ ನ್ಯಾಯಾಧೀಶನ ಮುಖಭಾವದಲ್ಲಿ ಕಂಡು ಬಂದ ಪ್ರಭಾಸ ಮನವನ್ನು ಮುದುಡಿಸಿತು. ಇದ್ದಕ್ಕಿದ್ದಂತೆಯೇ ಹೃದಯ ವ್ಯಾಪ್ತಿಗೆ ಮೀರಿಮಿಡಿಯ ಹತ್ತಿತು. ಹೇಗೋ ಹಾಗೆ ತನ್ನನ್ನು ತಾನು ಬಹಳ ಕಷ್ಟದಿಂದ ಸಾವರಿಸಿಕೊಂಡರೂ ದೇಹದಾದ್ಯಂತ ಮೈನವಿರು ಮೆಲ್ಲನೆ ನಿಮಿರಿತು. ಚಳಿ ಬಂದಂತೆ ತಣ್ಣನೆಯ ಝುರಿ ನರನಾಡಿಗಳಲ್ಲಿ ಹರಿದಾಡಿ ಮೈ ಕಂಪಿಸಿತು. ಅವಳು ಎರಡೂ ಕೈಗಳನ್ನು ಎದೆಗೊತ್ತಿ ಹಿಡಿದು ವ್ಯಾಪ್ತಿಗೆ ಮೀರಿ ದಡದಡನೆ ಮಿಡಿಯುತ್ತಿದ್ದ ಹೃದಯಕ್ಕೆ ಆಸರೆ ನೀಡಿ ವಿಜಾತೀಯವಾದ ದನಿಯಲ್ಲಿ ನುಡಿದಳು.

"ಸ್ವಾಮಿ ...! ನೀವು ಒಪ್ಪಿದರೆ ಒಪ್ಪಿ. ಬಿಟ್ಟರೆ ಬಿಡಿ. ಆದರೂ ಕೈಮುಗಿದು ಹೇಳಿಕೊಳ್ಳುವೆ. ನಾನು ವಿಷ ಕೊಟ್ಟಿದ್ದು ಖಂಡಿತ ಸುಳ್ಳು. ನಾನು ಅಷ್ಟು ಹೀನ ಕುಲದ ಹೆಣ್ಣಲ್ಲ. ನನ್ನ ಬದುಕು ಯಾವತ್ತೂ ಸುಂದರ-ಸತ್ಯ ಸುಂದರವಾಗಿರಲು ಬಯಸಿದ್ದೆ. ಮಕ್ಕಳಿಗೆ ಪಾಠ ಹೇಳುವುದರಲ್ಲಿ ದೇಗುಲದಲ್ಲಿ ಸಂಗೀತ ಹಾಡುವುದರಲ್ಲಿ ಮನಸ್ಸಿಗೆ ಶಾಂತಿ-ಸಮಾಧಾನಗಳನ್ನು ಪಡೆದುಕೊಳ್ಳುತ್ತಿದ್ದೆ. ಆ ಎಲ್ಲಕ್ಕೂ ಕಲ್ಲು ಹಾಕಿದುದರಿಂದ ನನಗೆ ಹುಚ್ಚು ಹಿಡಿಯಬೇಕಿತ್ತು....ಹಾಗಾಗದಿರಲು ನಾನು ಸದಾ ದೈವ ಚಿಂತನೆಯಲ್ಲಿ ಮನವನ್ನು

ಮುಳುಗಿಸಿ ನಿಶ್ಚಿಂತಳಾಗುತ್ತಿದ್ದೆ....ಅದೇ ನನ್ನನ್ನು ಈವರೆಗೆ ಕಾಪಾಡಿದ್ದು.... ನನ್ನ ತಾಯಿ ನನಗಿಟ್ಟ ಹೆಸರು ಹರ್ಷಲಾ ಎಂದು, ನಾನು ಹೈಸ್ಕೂಲು ಸೇರುವ ಮುನ್ನ ಶ್ರೀಹರ್ಷಲಾ ಎಂದು ಮಾರ್ಪಡಿಸಿಕೊಂಡೆ. ನನ್ನ ಜೀವನವೆಲ್ಲಾ 'ಶ್ರೀ'ಮಯವಾಗಿರಲಿ ಎಂಬ ಮಹೋದ್ದೇಶದಿಂದ. ಆದರೆ, ವಿಧಿ ನನ್ನ ಹಣೆಯಲ್ಲಿ ಬರೆದಿದ್ದು ಹೀಗೆ. ನಾನು ಈವರೆವಿಗೆ ಯಾವೊಂದು ತಪ್ಪು ಮಾಡದೆಯೂ ತಪ್ಪಿತಸ್ಥಳಾಗಿರುವೆ. ಹೆಣ್ಣಿನ ಸನಾತನತೆಗೆ–ದಾಸ್ಯಕ್ಕೆ ಸಂಸ್ಕಾರದ ರೂಪು ಕೊಡುವುದೆಂದರೆ ಆಗುವುದು ಹೀಗೆಯೇ! ತಪ್ಪುಗಳು ಬೆಟ್ಟದಷ್ಟು ಬೆಳೆಯುತ್ತವೆ. ಸಮಾಜ ಕಣ್ಣುಗಳನ್ನು ತುದಿ ಬೆರಳಿಂದ ಚುಚ್ಚುತ್ತದೆ....ಏಕೆಂದರೆ ಜೀವನ ಸಾರ್ಥಕತೆಯಲ್ಲಿ ಯಾವ ಹುರುಳನ್ನೂ ಕಂಡಿಲ್ಲ ಸಮಾಜ....ಕ್ಷಮಿಸಿ, ಕಠೋರ ಪುರುಷ ಜಾತಿಗೆ ನೀತಿ ನಿಯಮಗಳಾಗಲೀ ಹೃದಯವಂತಿಕೆಯಾಗಲೀ ಇರುವುದಿಲ್ಲವಾದ್ದರಿಂದ ಮುನ್ನಡೆ ಅಷ್ಟು ಸುಲಭವಲ್ಲ. ರಥ ಎಳೆಯ ಬೇಕಾದರೆ ಎರಡೂ ಚಕ್ರಗಳು ಸರಿಯಿರಬೇಕು. ಹಿಂದೂಸ್ಥಾನದಲ್ಲಿ ಅದೆಂದಾದರೂ ಸಾಧ್ಯವೆ? ಸುತ್ತಮುತ್ತಲೂ ಇದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತಿದ್ದರೂ ಸ್ತ್ರೀ ಜಾತಿ ಜನ್ಮ ಸಾರ್ಥಕತೆಯನ್ನು ಅರ್ಥಮಾಡಿಕೊಳ್ಳುವ ತೊಂದರೆ ತೆಗೆದುಕೊಳ್ಳುತ್ತಿಲ್ಲ....ಅಂತಲೇ ಸಮಾಜ ಸುಧಾರಣೆಯ ತಳ...."

"ಇದೆಲ್ಲಾ ಅನಾವಶ್ಯಕ....ಆತನ ಜಠರದಲ್ಲಿ ವಿಷವಿತ್ತು ಎಂದಮೇಲೆ ಅದರ ಪ್ರಯೋಗ ಮನೆಯಲ್ಲಿ ವಿನಾ ಬೇರೆಲ್ಲೂ ಆಗಿರಲಾರದು. ಅಂದು ವಿಷದ ಹೆಂಡ ಕುಡಿದು ಸತ್ತ ಸುದ್ದಿ ಈವರೆವಿಗೆ ಬೇರೆಲ್ಲಿಯೂ ಕೇಳಿಬರಲಿಲ್ಲವಾದ್ದರಿಂದ ಈ ದೋಷ ಮನೆಯೊಳಗಣದೇ!"

"ಅದು ಹೇಗಾದರೂ ಇರಲಿ; ಈಗ ಈ ನ್ಯಾಯಾಲಯದ ಮುಂದೆ ನನ್ನದೊಂದು ಬೇಡಿಕೆ. ನೀವು ಯಾವುದೇ ತೀರ್ಮಾನ ಕೈಕೊಂಡರೂ ಅದರಿಂದ ನನ್ನ ಸ್ತ್ರೀತ್ವದ ಕೊಲೆಯಾಗಬಾರದು; ಜೀವ ಹರಣವಾದರೆ ಏನೇನೂ ಬಾಧಕವಿಲ್ಲ. ದಯವಿಟ್ಟು ನನಗೆ ಗಲ್ಲು ಶಿಕ್ಷೆ ನೀಡಿ ಬಿಡಿ ಸ್ವಾಮಿ....!"

ಕೋರ್ಟು ಎದ್ದಿತು.

ಜಡ್ಜ್ ಶ್ರೀಪತಿ ಎದ್ದು ಹೋದ. ಕರ್ಣಪಟಲಗಳ ಮೇಲೆ ಆಗ ಅವಳಿಂದ ಮಾತುಗಳು ಕಂಚು ಮಿಡಿದಂತೆ ಮಾರ್ನುಡಿದವು "....ನನ್ನ ತಾಯಿ ನನಗಿಟ್ಟ ಹೆಸರು ಹರ್ಷಲಾ ಎಂದು. ನಾನು ಹೈಸ್ಕೂಲು ಸೇರುವ ಮುನ್ನ ಶ್ರೀಹರ್ಷಲಾ

ಎಂದು ಮಾರ್ಪಡಿಸಿಕೊಂಡೆ. ನನ್ನ ಜೀವನವೆಲ್ಲಾ 'ಶ್ರೀ'ಮಯವಾಗಿರಲಿ ಎಂಬ ಮಹೋದ್ದೇಶದಿಂದ."

ಹಾ! ನಿಜಕ್ಕೂ ಎಂತಹ ವಿಚಾರಧಾರೆ....! ಅದೇ ವಯಸ್ಸಿನಲ್ಲಿ 'ಶ್ರೀ' ಶಬ್ದದ ಅರ್ಥ ನನಗೆಂದಾದರೂ ಆಗಿತ್ತೆ? ಆ ಬಗ್ಗೆ ನಾನೆಂದಾದರೂ ಯೋಚಿಸಿದ್ದೆನೆ? ಅಂಥ ತಿಳಿವಳಿಕೆಯುಳ್ಳ ಹುಡುಗಿಯಾದ ಅವಳಿಗೆ ದೈವ ಕೈಗೂಡಿಸಿದ ಬಾಳಾದರೂ ಎಂತಾದ್ದು? ಹಾ! ದೈವವೇ!

ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದು ನಿಟ್ಟುಸಿರೊಂದು ಹೊರಹೊಮ್ಮಿತು.

ದೇಹದಾದ್ಯಂತ ಬಿಸಿ ನೆತ್ತರಿನ ಝುರಿಯೊಡನೆ ಅದೇ ವಿಚಾರಧಾರೆ ಝಿಲ್ಲನೆ ಹರಿದಾಡಿತು. ಮನಸ್ಸು ಹಿಂದಕ್ಕೆ ಹೊರಳಿ ಗತಕಾಲದ ಪಾವಟಿಗೆಗಳನ್ನು ಚಕಚಕ ಇಳಿಯಿತು....ತನಗಾಗ ಹದಿನೆಂಟರ ಹರೆಯ. ವಿದ್ಯಾರ್ಥಿ ಸಂಘದ ಸೆಕ್ರೆಟರಿಯಾಗಿ ತಾನು ಮಾಡಿದ್ದೇನು? ಪರೀಕ್ಷೆಯಲ್ಲಿ ಕಾಪಿ ಹೊಡೆದ ಹುಡುಗರನ್ನು ಹೊರಹಾಕಿದ್ದು ನ್ಯಾಯವೇ ಇದ್ದರೂ ಅದನ್ನು ಅಲಕ್ಷಿಸಿ ಅಧಿಕಾರ ವರ್ಗದ ವಿರುದ್ಧ ಹೋರಾಟಕ್ಕಿಳಿದು ಹೋರಾಡಿದ ಪ್ರಸಂಗ....ಕಾಲೇಜಿನ ಒಳನುಗ್ಗಿ ವಿಜ್ಞಾನ ವಿಭಾಗದ ಪರಿಕರಣಗಳನ್ನು ಧ್ವಂಸಗೊಳಿಸಿ, ಕಿಟಿಕಿ ಗಾಜುಗಳನ್ನು ಒಡೆದು, ಪೀಠೋಪಕರಣಗಳನ್ನು ವಿನಾಶಗೊಳಿಸಿ ನಾಲ್ಕಾರು ತಿಂಗಳು ಕಾಲೇಜುಗಳನ್ನು ಮುಚ್ಚಲು ಕಾರಣವಾಗಿ 'ಶ್ರೀ' ಹೆಸರಿಗೆ ಕಳಂಕ ಹಚ್ಚಿದ ಬಗೆ ತಕ್ಷಣ ನೆನವರಿಕೆಯಾದೊಡನೆ ದೇಹದಾದ್ಯಂತ ನವಿರು ನಿಮಿರಿದುವು. ಶ್ರೀಪತಿ ಕಾರಿಂದಿಳಿದು ಮನೆಯ ಮೆಟ್ಟಿಲನ್ನು ದಡದಡನೆ ಹತ್ತಿ ಒಳ ಹೋದ. ಪಡಸಾಲೆಗೆ ಹೋಗುತ್ತಲೂ ಒಳಕೊಠಡಿಯಲ್ಲಿ ನಡೆಯುತ್ತಿದ್ದ ತಾಯಿ ಮಗಳ ಸಂವಾದ ಕಿವಿಗೆ ಬಿತ್ತು. ಮಗಳು ಇಂದು ಬರುವ ಪ್ರಸಂಗವಿದ್ದಿಲ್ಲವಾದುದರಿಂದ ಹೇಗೆ ಬಂದಳೆಂಬುದನ್ನರಿಯಲು ಒಳ ಹೋದ. ಮದುವೆಯಾಗಿ ಇನ್ನೂ ಎರಡು ತಿಂಗಳಷ್ಟೆ. ಅಳಿಯ ಲೆಕ್ಚರರ್. ಮಗಳು ಎಂ. ಎ.

"ಏನಮ್ಮಾ ಸರಸೂ! ಹೇಗೆ ಬಂದೆ?"

ತಂದೆಯ ಮುಖ ನೋಡುತ್ತಲೂ ವಿವರ್ಣವಾಯಿತು ಮುಖಬಿಂಬ. ಅವಳು ಏನೋ ಹೇಳಲು ಬಯಸಿದರೂ ತುಟಿಗಳು ಬಿರಿಯದೆ ಸುಮ್ಮನಾದಳು.

"ಏಕೆ? ಏನೋ ಒಂದು ರೀತಿಯಿದ್ದಿ. ಲಕ್ಷ್ಮಣ್ ಎಲ್ಲಿ?"

"ಅವರ ಕಥೆ ಬಿಟ್ಬಿಡಿ! ನಾನಿಲ್ಲಿ ಶಾಶ್ವತವಾಗಿರಲು ಬಂದಿರುವೆ!"

"ಹಾಗೆಂದರೆ....?"

"ಆತ ಹುಟ್ಟಾ ಕುಡುಕ! ಮೈಮೇಲೆ ಪ್ರಜ್ಞೆ ಇಲ್ಲದಷ್ಟು ಕುಡಿತ! ಅವನು ಯಾವ ರೀತಿಯಿಂದಲೂ ನಿಮಗೆ ಯೋಗ್ಯ ಅಳಿಯನಲ್ಲ!"

"ಅಂದರೆ....?" ಆಶ್ಚರ್ಯದಿಂದ ಕಣ್ಣರಳಿಸಿದ ಶ್ರೀಪತಿ.

"ಖಂಡಿತಾ ಸಾಧ್ಯವಿಲ್ಲ. ನಾನು ಹೋಗಲಾರೆ." ತಲೆ ಆಡಿಸಿದಳು ಅವಳು.

ಕೆಲವು ಕ್ಷಣಗಳು ಗಂಭೀರ ಗತಿಯಲ್ಲಿ ಉರುಳಿ ಹೋದುವು. ಮಡದಿಯ ಕಡೆ ನಿಟ್ಟಿಸಿದ. ಯಾವ ಪ್ರತಿಕ್ರಿಯೆಯೂ ಮೂಡದ ಗಂಭೀರ-ಮೂಕ ಮೌನ. ಅಸಹನೀಯ ಮೌನ.

ಶ್ರೀಪತಿಯ ಮುಖಬಿಂಬ ಮುದುಡಿತು. ಏನೂ ಹೇಳಲಾರದೆ ಮಹಡಿಯ ಮೆಟ್ಟಿಲುಗಳನ್ನು ಏರಿ ತನ್ನ ಕೊಠಡಿಗೆ ಹೋದ. ಮನದಲ್ಲಿ ಆನೆಗಳು ನುಗ್ಗಿದಷ್ಟು ಗೊಂದಲ.

....ಸರಸು ಎಂ.ಎ. ಓದಿದ ದಿಟ್ಟ ಹೆಣ್ಣು. ಆತನಿಗೆ ವಿದಾಯ ಹೇಳಿ ಬಂದಿದ್ದಾಳೆ. ತನ್ನ ಕಾಲಮೇಲೆ ತಾನು ನಿಲ್ಲಬಹುದಾದ ವಿದ್ಯೆ ಬುದ್ಧಿ ಎರಡೂ ಇವೆ....ಅದೇ ಶ್ರೀಹರ್ಷಲಾ ಬಡವಿ. ತಾಯಿ ಮನೆಗೆ ಹೋದರೂ ಅಲ್ಲಿ ಉಳಿಯುವ ಸ್ಥೈರ್ಯವಿಲ್ಲ. ಅಲ್ಲಿ ಬೆಂಬಲಿಸುವವರಿಲ್ಲ. ಅಂದಮೇಲೆ ಹಿಂದಿರುಗದೆ ವಿಧಿಯಿರಲಿಲ್ಲ....ಕೊನೆಗೆ ಈ ಗತಿ! ಆ ಜೀರ್ಣಶೀರ್ಣಿತ ಸ್ಥಿತಿ ನಿಜಕ್ಕೂ ಕರುಣಾಜನಕ....

ವಿಚಾರಧಾರೆ ಅಲ್ಲಿಗೆ ಬಂದು ನಿಂತಿತು. ಆರಾಮ ಕುರ್ಚಿಯಮೇಲೆ ಕುಳಿತು ಸಿಗರೇಟು ಹೊತ್ತಿಸಿದ. ಭಾರವಾದ ಹೃದಯ....ಭಾರವಾದ ಚಿತ್ತ ಕಲ್ಪದಲ್ಲಿ ಅಂದಿನ ವಿಚಾರಣೆಯ ಒಂದೊಂದು ಅಕ್ಷರವೂ ಸರಮಾಲೆಯಂತೆ ಸುತ್ತುತ್ತಿದೆ. ಇಪ್ಪತ್ತೆರಡರ ಹರೆಯದ ಹೆಣ್ಣು ಮುಪ್ಪಿನ ಹಾದಿ ಹಿಡಿದಿದ್ದಾಳೆ. ಅತ್ಯಂತ ಕರುಣಾಜನಕವಾದ ಸ್ಥಿತಿಗತಿ ಒಡಲಾಳದಲ್ಲಿ ಕರುಣೆಯ ಕೈಯಾಡಿಸಿತು. ಆದರೂ ಕೊಲೆ ಅಂದಮೇಲೆ ಗಲ್ಲು ಶಿಕ್ಷೆ! ಅವಳು ಕೇಳಿಕೊಂಡಿರುವುದೂ ಅದನ್ನೇ! ಮಾನ ಮರ್ಯಾದೆಗಾಗಿಯೇ ಕೇಳಿಕೊಂಡದ್ದು. ಈಗ ಮುಂದೇನು? ಎಂಬ ಪ್ರಶ್ನೆ ಬೃಹದಾಕಾರವಾಗಿ ತನ್ನ ಮುಂದೆ ನಿಂತಿದೆ. ನಿರಪರಾಧಿ ಎಂದು ಬಿಡುಗಡೆ ಮಾಡುವ ಸಾಧ್ಯತೆಯೂ ಇಲ್ಲ...

ಶ್ರೀಪತಿ ಚಿಂತಿತನಾದ....ಮನಸ್ಸೆಲ್ಲಾ ಮುಜುಗರ. ಯಾವೊಂದು ನಿರ್ಣಯಕ್ಕೂ ಬರಲಾಗದ – ಅಸ್ಥಿರತ್ವ...."ಮನೆಯವರು ಹೆಣ್ಣಿಗೇಕೆ ವಿದ್ಯೆ ಎಂದು ತಾತ್ಸಾರ ತೋರಿದಾಗ ನಾನೇ ಸರಕಾರಿ ಶಾಲೆಗೆ ಸೇರಿ ವಿದ್ಯೆ ಕಲಿತೆ..." ಎಂದು ಶ್ರೀಹರ್ಷಲಾ ಹೇಳಿದ ಮಾತುಗಳು ಕರ್ಣಪಟಲಗಳನ್ನು ಅಪ್ಪಳಿಸಿದುವು. ದೃಷ್ಟಿಪಟಲದ ಮುಂದೆ ಆ ಜೀರ್ಣಶೀರ್ಣಿತ ಶರೀರ ಪುನಃ ಸುಳಿಸುಳಿದಳಿಯಿತು.

ಸ್ವಲ್ಪಹೊತ್ತು ಸದ್ದಿಲ್ಲದೆ ಉರುಳಿಹೋಯಿತು.

ಮೇಜಿನ ಮೇಲಿದ್ದ ಪುಸ್ತಿಕೆಯ ಮೇಲೆ ದೃಷ್ಟಿ ಹೊರಳಿತು. ಅದರಲ್ಲಿ ಕಂಡುಬಂದ ಪಂಕ್ತಿಗಳ ಮೇಲೆ ದೃಷ್ಟಿ ಹೊರಳಿಸಿದ.

> "I think continually of those who were truly great
> The names of those in there lives fought for life,
> who woke at their hearts the fire's centre."

ಆ ಮಹಾತ್ಮನ ವಿಚಾರಧಾರೆ ಹೃತ್ಸಾಗರದಲ್ಲಿ ಕ್ರೀಯಾಡಿಸಿತು.

* * * *

ಲರಕ್. ಲರಕ್. ಪಾದ ಸಪ್ಪಳ ಕೇಳಿಬಂದರೂ ಅತ್ತ ದೃಷ್ಟಿ ಹೊರಳಿಸಲಿಲ್ಲ ಶ್ರೀಪತಿ. ಪಾದ ಸಪ್ಪಳ ನೇರವಾಗಿ ತನ್ನ ಸನಿಹಕ್ಕೆ ಬಂದಾಗ ದೃಷ್ಟಿ ಸುಮ್ಮನೆ–ಸಹಜವಾಗಿ ಅತ್ತ ಹೊರಳಿತು. ಬಳಿಗೆ ಬಂದವಳು ಸರಸು. ಅವಳೂ ಅಷ್ಟೆ; ಸ್ವಂತಿಕೆಯಿಂದ ವಿದ್ಯೆ–ಬುದ್ಧಿಗಳಿಗಾಗಿ ಹೋರಾಡಿ. ಹುದ್ದೆಗಳಿಸಿ ಬೆಳಕಿಗೆ ಬಂದವಳು. ಕಟ್ಟಾ ಸ್ವಾಭಿಮಾನಿ. ಸ್ವಾಭಿಮಾನಕ್ಕೆ ಧಕ್ಕೆ ಬಂದಿರುವುದರಿಂದಲೇ ಸಂಸಾರಕ್ಕೆ ವಿದಾಯ ಹೇಳಿ ದಿಟ್ಟತನದಿಂದ ಹಿಂದಿರುಗಿದ್ದಾಳೆ. ಆದರೆ....ಶ್ರೀಹರ್ಷಲಾ ಆರ್ಥಿಕವಾಗಿ – ವೈಯ್ಯಕ್ತಿಕವಾಗಿ – ವಿದ್ಯೆ ಬುದ್ಧಿಗಳ ಆಗರದಲ್ಲಿ–ಸಂಜೀವನ ಆಶ್ರಯದಲ್ಲಿ ನಿಜಕ್ಕೂ ತ್ರಿಶಂಕು ಸ್ವರ್ಗ ಕಂಡವಳು. ಮುಂದೆ? ಎಲ್ಲಿ, ಯಾವ ವಿಚಾರದಲ್ಲಿ ತಲೆಹಾಕಿದರೂ ದಿಕ್ಸೂಚಿ ಬಂದು ನಿಲ್ಲುವುದು ಆ ದುರ್ದಾಂತ ಬಿಂದುವಿನಲ್ಲೇ.

ಅವಳು ಬರಬರುತ್ತಲೇ ವಿಜಾತೀಯವಾದ ವಾಣಿಯಲ್ಲಿ "ಅಪ್ಪಾ, ಈ ಪ್ರಪಂಚ ಇಷ್ಟೆ. ನಾವು ಯಾವ ಆದರ್ಶಕ್ಕಾಗಿ ಹೊಡೆದಾಡುತ್ತೇವೋ

ಅದೆಲ್ಲಾ ವ್ಯರ್ಥ ಸಾಹಸವೆಂಬುದು ಈಗೀಗ ಅನುಭವಕ್ಕೆ ಬರುತ್ತಿದೆ. ಜೀವನ ಮಾರ್ಗ ಬೋಗ ಕತ್ತಲೆಯಿಂದ ತುಂಬಿರುವ ಕಾರಣ ಸ್ಪಷ್ಟ....!"

"ನೀನು ಸರಿಯಾಗಿ ಅರ್ಥ ಮಾಡಿಕೊಂಡಿರುವೆ...ಎಂದೇನೂ ದೃಢ ವಾಗಿ ಹೇಳಲಾರೆ. ಕಪ್ಪು ಕನ್ನಡಕದ ಮೂಲಕ ನೋಡಿದರೆ ಜಗತ್ತೇ ಕಪ್ಪು! ನಿನ್ನ ನೊಂದ ಮನಸ್ಸು ತಿಳಿಯಾಗುವವರೆಗೆ ನೀನು ಈ ಜೀವನ ವನ್ನು ನಿರ್ಣಯಿಸಲಾರೆ; ಎನಿಸುತ್ತದೆ ನನಗೆ. ಯುಗಯುಗಗಳಿಂದ ಮುಂದುವರಿಯುತ್ತಿರುವ ನರನಾರಿಯರ ಜೀವನ ಚರಿತ್ರೆಯೇ ಸಂಸ್ಕೃತಿ ಸಾರ. ಜೀವನ ಸಿದ್ಧಾಂತ ಏನೇ ಇರಲಿ, ಆದರ್ಶಗಳು–ಸೂತ್ರಗಳು ಕೆಲವರಿಗಾಗಿಯೇ ಸೃಷ್ಟಿಸಲ್ಪಟ್ಟವೆಯೇ ಹೊರತು ಎಲ್ಲರಿಗಾಗಿ ಅಲ್ಲ! ಅದನ್ನು ಜೀವನದ ಸಹಜ ತೆಯ ನಡುವೆ ಕೊಂಡೊಯ್ದರೆ ಉನ್ಮಾದ ಎನಿಸಿದರೆ ಆಶ್ಚರ್ಯವಿಲ್ಲ. ಮಗಳೇ! ಈ ಜೀವನ ಯಾರಿಗೂ ಸುಖವನ್ನೇ ಪ್ರಸಾದಿಸುತ್ತದೆ ಎಂದೇನಿಲ್ಲ. ಇದಕ್ಕೆ ಸಮಾಜದಲ್ಲಿ ಸಾಕಷ್ಟು ನಿದರ್ಶನಗಳಿವೆ....ಅಲ್ಲದೆ ಜೀವನ ಪ್ರಸಾದಕ್ಕಾಗಿ ನಂಬಿ ಕಾದು ಕುಳಿತರೆ ಸಮಾಜದಲ್ಲಾಗಲೀ ರಾಜಕೀಯದಲ್ಲಾಗಲೀ ವಿಷಾದ ಕ್ರಾಂತಿಯನ್ನು ಎದುರಿಸಲೇಬೇಕಾಗುತ್ತದೆ. ಅಂದರೆ, ಅದು ಅನಿವಾರ್ಯ. ಆದ್ದರಿಂದ...."

ಮಾತು ಅಲ್ಲಿಗೆ ನಿಂತು ಹೋಯಿತು.

ಸರಸ್ವತಿ ತನ್ನ ಕಳಕಂಠವಾಣಿಯಲ್ಲಿ ಮುಂದುವರಿದಳು,

"ಅಪ್ಪಾ! ಪ್ರೇಮಹೀನವಾದ ಜೀವನದಲ್ಲಿ ಕೇವಲ ಕಾಮಪಿಪಾಸೆಗೆ ಬಾಯ್ಬಿಟ್ಟು ಕಾಲಹರಣ ಮಾಡುವುದು ಸರಿಯೆಂದೇನೂ ನನಗೆ ಅನಿಸದು. ಆದರೂ ಎಂದೂ, ಯಾವಾಗಲೂ ಪ್ರೇಮಪೂರ್ಣವಾದ ಜೀವನವನ್ನು ಬಯಸಿ ಸೋದರ ಸಂಬಂಧಿ – ಅಂದಿಂದಿಗೂ ತಿಳಿದವನು ಎಂದಲ್ಲವೇ ರಾಮ ಚಂದ್ರನೊಡನೆ ವಿವಾಹ ಸಂಬಂಧಕ್ಕೆ ಒಪ್ಪಿದ್ದು. ಈಗ ನೋಡಿದರೆ ಸಂತಸ ಕ್ಕಿಂತ ವಿರಸ – ತೊಡೆಯಲಾಗದ ವಿರಸ ಘತ್ತೆಂದು ಎದುರು ನಿಂತಿದೆ. ಆದ್ದ ರಿಂದ ಈ ಜೀವನ ಪ್ರಸಾದ ಹೀಗೇ ಎಂದು ನಿರ್ಣಯಿಸುವುದು ಆಗದ ಮಾತು...."

"ಭಾಗ್ಯವಿದ್ದಷ್ಟೇ ಲಭ್ಯ!"

"ಅಷ್ಟೆ...." ಮುಂದೇನೋ ಹೇಳಲು ಬಯಸಿದ್ದು ಮಾತು ಹೊರಡದೆ ಅಷ್ಟಕ್ಕೆ ಸುಮ್ಮನಾದಳು ಸರಸ್ವತಿ.

ಶ್ರೀಪತಿ ಸಿಗರೇಟಿನ ಬೂದಿಯನ್ನು ದಾನಿಯಲ್ಲಿ ಕೆಡವಿ ಸಿಗರೇಟನ್ನು ಒಂದು ದಂ ಎಳೆದು "ಈ ದಿನಗಳಲ್ಲಿ ಯಾರ ಮೇಲೂ ಬಲಾತ್ಕಾರ ಸಲ್ಲ.... ಅದು ಮಾತ್ರ ಸತ್ಯ." ಎಂದಾಗ ಗಂಟಲು ಹಿಡಿಯಿತು. ದೃಷ್ಟಿ ಪಟಲದ ಮುಂದೆ ಶ್ರೀಹರ್ಷಲಾ ಸುಳಿದಳಿದಳು. ಅವಳ ಕೊನೆಯ ಕೋರಿಕೆ "ನನ್ನ ಗಲ್ಲಿಗೆ ಹಾಕಿ ! ಜೇಲಿಗೆ ಹಾಕಬೇಡಿ."

ಅಂತರಾತ್ಮ ಕೂಗಿ ಹೇಳಿತು "ನಿಜವಾಗಿಯೂ ಹೃದಯವಂಚಿಕೆಯ ಬೇಡಿಕೆ. ಮಾನವುಳಿಯಬೇಕಾದರೆ ಜೇಲು ಶಿಕ್ಷೆ ಖಂಡಿತ ನಿಷಿದ್ಧ....ಕೂಡದು. ಜೇಲು ಕಂಡ ಮೇಲೆ ಬದುಕು ಅಸಹ್ಯ-ಅನರ್ಥ-ಅಸುಂದರ...."

ಸರಸು ಒಳಹೋದಳು. ಶ್ರೀಪತಿ ಜಡ್ಜ್‌ಮೆಂಟ್ ಬರೆಯುತ್ತ ಕುಳಿತ. ಬಹಳ ಹೊತ್ತು ಉರುಳಿದರೂ ಹೆಚ್ಚು ಬರವಣಿಗೆ ಸಾಗಲಿಲ್ಲ. ಏನೋ ಒಂದು ಬಗೆಯ ಮುಜುಗರ, ಇನ್ನೇನೋ ಒಂದು ಬಗೆಯ ನಿರುತ್ಸಾಹಗಳಿಂದ ಮನಸ್ಸು ತುಂಬಿಹೋಗಿತ್ತು. ಲೇಖನಿಗೆ ವಿರಾಮ ಕೊಟ್ಟು ಸಿಗರೇಟಿಗೆ ಕೈ ಹಚ್ಚಿದ. ಮಾನಸಿಕ ಉದ್ವೇಗದಿಂದ ಬಹುಶಃ ಸಿಗರೇಟೂ ರುಚಿಸಲಿಲ್ಲವೇನೋ. ಆದರೂ ಅದನ್ನು ದೂರೀಕರಿಸದೆ ಒಂದಾದಮೇಲೊಂದರಂತೆ ಮೂರು-ನಾಲ್ಕು ಸುಟ್ಟುದುದರ ಪರಿವೆಯೇ ಇಲ್ಲದೆ ಆರಾಮ ಕುರ್ಚಿಯ ಮೇಲೆ ಮೈಚೆಲ್ಲಿದ್ದ. ಎದುರಿನ ಕಿಟಕಿಯಲ್ಲಿ ಮೈಯಾಂತ ನೀಲಾಕಾಶ. ಕಪ್ಪನೆಯ ಕಾರ್ಮೋಡಗಳೊಡನೆ ಸ್ಪರ್ಧೆ ಹೂಡಿದಂತೆ ಹಾರಾಡುವ ಕರಿಯ ಮೈಯ್ಯಿನ ಕಾಮಳ್ಳಿಗಳ ಹಿಂಡು. ಒಮ್ಮೆ ಒಗ್ಗೂಡಿ ಹಾರಿದರೆ ಇನ್ನೊಮ್ಮೆ ವಿರಳವಾಗಿ ರೆಕ್ಕೆ ಬಿಚ್ಚಿ ಹಾರುವ ಅವುಗಳ ಮೋಹಕ ರೂಪು : ಛೇ ಅಷ್ಟು ಮಾತ್ರವೇ ? ಎಂತಹ ಸ್ವಚ್ಛಂದ-ಸ್ವಾತಂತ್ರ್ಯ ? ಅವುಗಳಿಗೆ ಯಾವ ನಿರ್ಬಂಧ? ಈ ಧೂರ್ತ ಸಮಾಜ ಹೆಣ್ಣಿಗೇಕೆ ಇಷ್ಟೊಂದು ನಿರ್ಬಂಧ ಹಾಕುತ್ತದೆ? ಅವಳು ಮೊದಲೇ ಅವನ ಸಹವಾಸದಿಂದ ದೂರಾಗಲಿಲ್ಲವೇಕೆ? ದೂರವಾಗಿದ್ದರೆ ಸುಖಜೀವನ ನಡೆಸಬಹುದಾಗಿತ್ತಲ್ಲವೇ ?

ಆದರೆ, ಅಂದೇ ಹೇಳಿದ್ದಳಲ್ಲ, ತಾಯಿ ಮನೆಗೆ ಮೂರು ಸಲ ಹೋಗಿದ್ದೆ. ಅಲ್ಲಿ ಮೂರುದಿನವೂ ಇರಗೊಡದೆ ಎಳೆತಂದ ! ಎಂದು.

ಶ್ರೀಪತಿ ಎದ್ದು ಎರಡೂ ಕೈಗಳಲ್ಲಿ ಕಿಟಕಿಯ ಸರಳುಗಳನ್ನು ಹಿಡಿದುಕೊಂಡು ಕಿಟಕಿಗೆ ಮೈಯಾಂತು ದೂರ ದಿಗಂತದತ್ತ ದಿಟ್ಟಿಯನ್ನು ಅಟ್ಟಿದ. ಸಂಧ್ಯಾಸೂರ್ಯಕಾಂತಿ ಕೃಷ್ಣವರ್ಣದ ಕಾದಂಬಿನಿಯ ಹಿಂದೆ ಮರೆಯಾಗಿದ್ದರೂ ಅಲ್ಲಲ್ಲಿ ತೂರಿಬರುವ ಸಾಹಸ ಮಾಡುತ್ತಿದೆ! ಕಿರಣ-ಅದ್ಭುತ ಕಿರಣಗಳ ಸೂಜಿಮೊನೆಯ ಎಳೆಗಳ ಮೋಹಕ ಶೈಲಿಯಲ್ಲಿ ಭುವಿಯಲ್ಲಿನ ತಾಪಾನುತಾಪಗಳು, ಪಾಪಾನುಪಾಪಗಳು ಮೈಮುದುಡುವ ಬದಲು ಹರೆಕೈಗಳನ್ನು ಚಾಚಿ ಚಾಚಿ ಇಡೀ ಭೂಮಂಡಲವನ್ನೇ ವ್ಯಾಪಿಸಿ ಪ್ರಾಣಕಂಟಕವಾಗಿದೆಯೇ? ಎಂಬ ಪ್ರಶ್ನೆಯು ಹೆಡೆಯೆತ್ತಿತು.

ಒಮ್ಮೆಲೇ ಯೋಚನೆಯಲೆಗಳು ತಟಸ್ಥವಾದುವೋ ಎಂಬಂತೆ ಮನಸ್ಸಾಗರದ ಅಲೆಗಳು ತಣ್ಣಗೆ ಸ್ತಬ್ಧವಾದುವು. ಮೋಡವಾಲೆ ಸರಿದುಹೋಗಿ ಸೂರ್ಯ ಸುವರ್ಣರಾಜಿಯಿಂದ ವಿಜೃಂಭಿಸಿದ. ಎಲ್ಲಿಂದ ಎಲ್ಲಿಯವರೆಗೂ ಸಂಧ್ಯಾಕಾಂತಿ-ಸಂಧ್ಯಾಶಾಂತಿಗಳು ತುಂಬಿ ಹರಡಿವೆ. ಸಾಯಂ ತಂಪು ಮೈಮನಗಳನ್ನು ಸಾನಂದದಿಂದ ಮುದ್ದಿಡುವಷ್ಟು ಮೋಹಕ.

ಅದೇ ಹರ್ಷಲಾ-ಶ್ರೀಹರ್ಷಲಾ ಇವಳಂತಹ ಮಹಿಳೆಯರ ಜೀವನ ಸಾಯಂಪ್ರಭೆಯಲ್ಲಿ ತಂಪು ಕಾಣುವುದಕ್ಕಿಂತ ತಾಪಾಗ್ನಿಯಲ್ಲಿ ಬೆಂದು-ಸುಟ್ಟು ಹೋಗುವುದು ಸರ್ವೇಸಾಮಾನ್ಯ. ಜೀವನ-ತಮ್ಮನ್ನು ರಕ್ಷಿಸಲೇಬೇಕಾದ ಜೀವನ ಇಷ್ಟೊಂದು ಪರಿತಾಪಕಾರಕವಾದರೆ ಅಂತಹ ಬದುಕಾದರೂ ಏಕೆ ಬೇಕು? ಅದನ್ನು ಬಿಟ್ಟುಕೊಡುವಲ್ಲಿ ಕಾನೂನು ಸಹಾಯವಾಗಬೇಕೆ ಹೊರತು ಬೇಲಿಯಾಗಬಾರದಷ್ಟೆ? ಇದನ್ನು ಪುರುಷ ಪ್ರಧಾನವಾದ ರಾಷ್ಟ್ರ-ಪುರುಷ ಪ್ರಧಾನವಾದ ಸಮಾಜ ಹೇಗೆ, ಯಾವ ರೀತಿಯ ರಕ್ಷಣೆ ಕೊಡಬೇಕು ಎಂಬುದನ್ನು ಈಗಲಾದರೂ-ಈ ವರ್ತಮಾನ ಯುಗದ ತುತ್ತತುದಿಯಲ್ಲಾದರೂ ನಿರ್ಣಯಿಸದಿರುವುದು ಶೀರಾ ವಿಷಾದಕರ. ಜೀವನ ಯಾರಿಗೂ ಉರುಳಾಗಬಾರದು....

ಶ್ರೀಪತಿ ಹಿಂದಿರುಗಿ ಬಂದು ಆರಾಮ ಕುರ್ಚಿಯ ಮೇಲೆ ಮೈಚಾಚಿದ. ಭಾರವಾದ ಮನಸ್ಸು, ಭಾರಭಾರವಾದ ಹೃದಯ ವಿಚಾರಶೀಲನಾದರೂ ಏನೂ ಮಾಡಲಾಗದಂತಹ ಅಸಹಾಯಕತೆ. ಇಂಥ ದೀನ ದುಃಖಿಗಳ ಜೀವನಕ್ಕೆ ಸುಂದರ ಚೌಕಟ್ಟು ಹಾಕಬಲ್ಲ ರಾಷ್ಟ್ರಕ್ಕೆ ಮಾತ್ರ ಉತ್ತಮ ಭವಿಷ್ಯ....ಸಿಗರೇ

ಟಿಗೆ ಕೈಹಚ್ಚಿದ. ಪಡಸಾಲೆಯಲ್ಲಿ ಸ್ತ್ರೀಯರ ಮಾತುಕತೆ ಕಿವಿಗೆ ಸ್ಪಷ್ಟವಾಗಿ ಬೀಳುತ್ತಿತ್ತು.

ನಿರ್ಮಲಾ ದ್ವಿವೇದಿ ಮಡದಿಯ ಗೆಳತಿ. ಬರೀ ಗೆಳತಿಯಲ್ಲ: ಆತ್ಮೀಯ ಗೆಳತಿ. ಆವಳು ಬಂದಳೆಂದರೆ ಮನೆಯೆಲ್ಲಾ ಸಡಗರ ಅಥವಾ ಕಳಕಳ ಅಥವಾ ಇನ್ನೇನೊ ಸೇರಿಕೊಳ್ಳುತ್ತದೆ. ಎಲ್ಲೋ ಪರಿತ್ಯಕ್ತ ಸಂತಸ-ಸಂಭ್ರಮಗಳು ಬಂದು ಧಾಳಿಯಿಡುತ್ತವೆ. ಅವಳು ಹೊರಟಾಗ ಅವು ಹೋಗಿಬಿಡುವುದೂ ನಿಜವೇ.

ನಿರ್ಮಲಾ ದ್ವಿವೇದಿ ಹೇಳುತ್ತಿದ್ದಳು-ಶ್ರೀಹರ್ಷಲಾ ವಾಸಿಸುವುದು ನಮ್ಮ ಪಕ್ಕದ ಮನೆಯೇ. ಅವಳನ್ನು ವಿನಾಕಾರಣ ಜೇಲಿಗೆ ಒಯ್ದಿದ್ದಾರೆ. ಅವಳ ಗಂಡ ಕುಡಿದು ಕುಡಿದು ಸತ್ತ. ಮನೆಯಲ್ಲಿದ್ದ ಪಾತ್ರೆ ಪಗಡಿ ಒಂದೂ ಉಳಿಸಿಲ್ಲ. ಅವಳಿಗೆ ಒಂದಿನವೂ ಹೊಡೆತ ಬಡಿತ ತಪ್ಪಲಿಲ್ಲ. ಇಹಲೋಕ ದಲ್ಲೇ ನರಕ ಜೀವನ ಕಾಣಿಸಿಬಿಟ್ಟ. ಅವಳು ತುಂಬಾ ಸಭ್ಯೆ. ತಾಯಿ ತಂದೆ ಇಲ್ಲದ ಹೆಣ್ಣು. ಹೋಗುವುದಾದರೂ ಎಲ್ಲಿಗೆ ...? ಇಷ್ಟಕ್ಕೂ ಇವನು ಎಲ್ಲಿಗೆ ಹೋಗಲೂ ಬಿಡುವವನಲ್ಲ ದರದರ ಎಳೆದು ತರುತಿದ್ದ. ಹೋಗಲಿ, ಈಗ ಸತ್ತಿದ್ದಾನೆ. ಇನ್ನಾದರೂ ನಿರ್ಮಲ ಜೀವನ ನಡೆಸಬಹುದು ಎಂದುಕೊಂಡರೆ ಈಗ ಜೇಲಿನ ಅತಿಥಿ! ಅವಳು ಇಲಿ ಪಾಷಾಣ ಹಾಕಿದ್ದಾಳೆ ಎಂದು ಸರಕಾರಿ ವಕೀಲರು ಅಂಬೋಣ. ಶವ ಪರೀಕ್ಷೆ ಮಾಡಿದ ವೈದ್ಯರ ಪ್ರಕಾರ ಜಠರದಲ್ಲಿ ಇಲಿ ಪಾಷಾಣವಿತ್ತಂತೆ. ಬಹುಶಃ ಆತನೇ ತೆಗೆದುಕೊಂಡನೋ ಅಥವಾ ಇನ್ನಾರ ಕೈವಾಡವೋ ದೇವರಿಗೇ ಗೊತ್ತು. ಅಂತೂ, ಅವಳ ಕತೆ ಮುಗಿ ಯಿತು. ಹೆಣ್ಣಿನ ಬಾಳು ಚೆನ್ನಾಗಿದ್ದರೆ ಚೆನ್ನ ಇಲ್ಲದಿದ್ದರೆ ದೇವರೇ ಕಾಪಾಡ ಬೇಕು....."

ಶ್ರೀಪತಿ ಅತ್ತ ಕಿವಿಕೊಡಬೇಕೆಂದೇನೂ ಇರಲಿಲ್ಲ. 'ಶ್ರೀಹರ್ಷಲಾ' ಹೆಸರು ಕೇಳಬಂದುದರಿಂದ ಅತ್ತ ಕಿವಿಗೊಟ್ಟ. ವಿಷಯ ತೀರ ಸುಮ್ಮನಾದ. ನಿರ್ಮಲಾ ದ್ವಿವೇದಿ ಪ್ರಾಸಂಗಿಕವಾಗಿ ಆ ವಿಚಾರ ಹೇಳಿದ್ದಳೇ ಹೊರತು ಆ ಮೊಕದ್ದಮೆ ಯಾರ ಮುಂದಿದೆ ಎಂಬುದೇನೂ ತೀರ ನುಡಿದವಳಲ್ಲ.

ಶ್ರೀಪತಿ ಹೊರ ಹೋಗಿ ಅಂಗಣದಲ್ಲಿ ಶತಪಥ ಸುತ್ತಿದ.

* * * *

ಧಾಮೂ ಗೆಳೆಯ ತಲೆ ಬಾಗಿಲಲ್ಲಿ ಕಾಣಿಸಿಕೊಂಡಾಗ ಅವನ ಮುಖದಲ್ಲಿ ಕಳೆಯೇ ಇರಲಿಲ್ಲ. ಅವನನ್ನು ಕಂಡು ಶ್ರೀಪತಿ–"ಧಾಮೂ... ! ನಿನ್ನ ಗೆಳೆಯ ಬಂದಿದ್ದಾನೆ!"

"..........."

ನರೇಶ್ ಅಲ್ಲಿಂದಲೇ ಅಂದ "ಅಂಕಲ್ ! ಒಂದು ವಿಷಾದಕರ ಸಂಗತಿ. ಹೇಳಬೇಕು....ಹೇಳಲಾರೆ. ಹೆಡ್‌ಮಿಸ್ಟ್ರೆಸ್ ನಿಮ್ಮನ್ನು ಬರ ಹೇಳಿದ್ದಾರೆ."

"ಏಕೆ ?"

"ಧಾಮೂನ ಆರುವಾರ ಶಾಲೆಯಿಂದ ಸಸ್ಪೆಂಡ್ ಮಾಡಿರುವುದು ನಿಮಗೆ ತಿಳಿಯದೇನೋ...."

"ಇಲ್ಲವಲ್ಲಾ, ಏಕೆ? ಏನು ಮಾಡಿದ್ದಾನೆ?"

"ಅವನು ಡ್ರಿಲ್ ಮಾಸ್ಟರಿಗೆ ಹೊಡೆದುಬಿಟ್ಟ !"

"ನಿಜವಾಗಿ ?"

"ಹೌದು....ಅಂಕಲ್! ಏನೋ ತಪ್ಪಾಗಿ ಹೋಯಿತು !"

"ಅವನೆಲ್ಲಿ ಕಾಣಿಸುತ್ತಲೇ ಇಲ್ಲವಲ್ಲಾ ? ಧಾಮೂ....!"

"ಬಂದೆ ಅಪ್ಪಾ!"

"ಏನೋ ನಿನ್ನ ಶೂರತನ!"

"ಪ್ರಸಂಗ ಹಾಗಿತ್ತು."

"ಅಂದರೆ....?" ಕೋಪದ ಕಿಡಿಗಳು ಉದುರಿದುವು ಕಣ್ಣುಗಳಲ್ಲಿ.

"ಅವರು ವಿನಾಕಾರಣ ನನಗೆ ಗದರಿಸಿದರು...."

"ಅವರು ಗದರಿಸಿದರೆ ನೀನು ಹೊಡೆದಿದ್ದೇಕೆ....? ಮಾಸ್ತರಿಗೆ ಹೊಡೆಯಬಹುದೇ ?" ದನಿ ಮೋಡ ಮುಟ್ಟಿತು.

ಶ್ರೀಪತಿ ಮಗನ ಕೈಹಿಡಿದುಕೊಂಡ. ಆ ಕ್ಷಣವೇ ಕೆಂಪು ಕೆಂಪು ತಳೆದ ಅವನು ಕೈಕೊಡವಿ ಸರಕ್ಕನೆ ಹೊರಟು ಹೋದ. ಆ ಬಾಲಕನ ಮುಂದೆ ಆದ ಅವಮಾನ ಮನ ನೋಯಿಸಿತು. ಒಳ ಬಂದು ಕೋರ್ಟಿಗೆ ಹೊರಡಲು ಸಿದ್ಧನಾದ. ಕಿಟಕಿಯಲ್ಲಿ ನೋಟ ಹರಿದಾಗ ಕಲ್ಲು ಬೆಂಚಿನ ಮೇಲೆ ಸರಸೂ ತನ್ನ ಪೂರ್ವ ಗೆಳೆಯನೊಂದಿಗೆ ಕುಳಿತು ಮಾತು ಕತೆಯಲ್ಲಿ ತೊಡಗಿದ್ದುದು ಕಂಡು ಬಂತು ಅವನು ಸ್ವಜಾತೀಯನಲ್ಲವೆಂದೂ ತಮ್ಮ ಯೋಗ್ಯತೆಗೆ ತಕ್ಕ

ವನಲ್ಲವೆಂದೂ ನಿರಾಕರಿಸಿ ತಮ್ಮ ಸೋದರ ಸಂಬಂಧಿಗೆ ಕೊಟ್ಟು ಮದುವೆಯಾದ ಮಗಳು ಅವನನ್ನು ಕೇವಲ ಕೆಲವೇ ತಿಂಗಳಲ್ಲಿ ಬಿಟ್ಟುಕೊಟ್ಟು ಹಿಂದಿರುಗಿದ್ದು ಅಲ್ಲದೆ ಈತನೊಡನೇ ಸ್ನೇಹ ಬೆಳೆಸಿದ್ದು ತಮ್ಮ ಗೌರವಕ್ಕೆ ದಕ್ಕೆ....

ಯೋಚಿಸಲಾರದೇ ಯೋಚಿಸಿತು ಮನಸ್ಸು.

ಕಾರು ಬಾಗಿಲಲ್ಲಿ ಅಣಿಯಾಗಿತ್ತು. ಮಗಳತ್ತ ನೋಟ ಹೊರಳಿಸವಷ್ಟು ಎಚ್ಚರ ವಹಿಸಿ ಕಾರು ಹತ್ತಿದ.

ಮನಸ್ಸೆಲ್ಲ ಅನುಭವಿಸಲಾಗದ ಮುಜುಗರ.

ನಿಜಕ್ಕೂ ಇವೆಲ್ಲದರ ಹಿಂದೆ ನಡೆಯುತ್ತಿರುವುದು–ನಡೆಸುತ್ತಿರುವುದು ಯಾವ ಶಕ್ತಿಯೋ ಅದರ ಮುಂದೆ ನನ್ನದೇನು ನಡೆದೀತು ? ನಾನೊಬ್ಬ ಜಡ್ಜಿಯಾಗಿ ತೀರ್ಮಾನ ಕೊಡುವುದರಿಂದ ವಿಧಿಯ ಕೈವಾಡ ತಪ್ಪಿಸಬಲ್ಲೆನೇ ? ಪ್ರಶ್ನೆಯೆದ್ದಿತ್ತು. ಉತ್ತರಕ್ಕಾಗಿ ಯೋಚಿಸಿದರೂ ಬಗೆಹರಿಯದ ಪ್ರಶ್ನೆ.... ದೈವೇಚ್ಛೆ ಏನೇ ಇರಲಿ, ನಮ್ಮ ಅಂತರಾತ್ಮ ಪ್ರೇರಣೆಯಂತೆಯೇ ನಡೆಯುವುದರಲ್ಲಿ ಬಾಧಕವಿಲ್ಲ....ಅದನ್ನುಳಿದರೆ ಬೇರೆ ಮಾರ್ಗವೂ ಇಲ್ಲ.

ಶ್ರೀಪತಿ ತನ್ನ ಆಫೀಸಿಗೆ ಹೋದೊಡನೆಯೇ ಸರಕಾರಿ ವಕೀಲ ಆಗಮಿಸಿದ.

"ಇನ್ನು ಐದು ನಿಮಿಷ ಮಾತ್ರ ಇದೆ." ಗಡಿಯಾರ ನೋಡಿಕೊಳ್ಳುತ್ತ ನುಡಿದ ಶ್ರೀಪತಿ.

"ಹೌದು" ತಲೆದೂಗಿದ ವಕೀಲ.

ತರ್ಕವಿತರ್ಕಗಳ ಸಮುದಾಯದ ಪ್ರಾಕಾರವನ್ನು ದಾಟಿದ ಮನಸ್ಸು ಭಾವನಾ ತರಂಗಗಳನ್ನು ಅಂತರ್ಮುಖಿಯಾಗಿ ನೋಡುತಿದ್ದಂತೆಯೇ ವಕೀಲ ಅಂದ "ಹೇಳುವುದು ಏನೂ ಇರಲಿಲ್ಲ ...ಸುಮ್ಮನೆ...." ಇಬ್ಬರೂ ಹೊರಬಿದ್ದರು. ಶ್ರೀಪತಿ ನ್ಯಾಯ ಪೀಠವನ್ನೇರಿದ. ಸುತ್ತಿಗೆ ಮೇಜಿನ ಮೇಲಿತ್ತು. ಎರಡೂ ಕಡೆಯ ವಕೀಲರು ಹಾಜರಿದ್ದರು. ಹಿಂದೆ ವಾದವಿವಾದ ನಡೆದ ಮೊಕದ್ದಮೆಯೊಂದರ ತೀರ್ಪು. ಶ್ರೀಪತಿ ಹದಿನೇಳು ಪುಟಗಳ ತೀರ್ಪನ್ನು ಅರ್ಥವತ್ತಾಗಿ ಓದುತ್ತಿರುವಾಗಲೇ ಅಪರಾಧಿಯು ಚಪ್ಪಲಿಯೊಂದನ್ನು ನ್ಯಾಯ ಪೀಠದತ್ತ ಒಗೆದು ಮನಸ್ಸಿಗೆ ಕೂಗಾಡತೊಡಗಿದಾಗಲೇ ಅವನು ಪೋಲೀಸರ ಅತಿಥಿಯಾದ. ಶ್ರೀಪತಿ ತನ್ನ ತೀರ್ಪನ್ನು ಓದಿ ಮುಗಿಸಿದ. ಗೆದ್ದ ಪ್ರತಿವಾದಿ ಪರಮಾನಂದದಿಂದ ವಕೀಲನನ್ನು ಆಲಂಗಿಸಿ ಸಂತೋಷಾತಿರೇಖವನ್ನು ಸೂಚಿಸಿ

ವಿಜಯೋತ್ಸಾಹದಿಂದ ಹೊರ ಹೋದ. ಅವನ ಗೆಳೆಯ ಬಂಧುಗಳೂ ಹಿಂಬಾಲಿಸಿದರು. ಕಿಕ್ಕಿರಿ ತುಂಬಿದ್ದ ನ್ಯಾಯಾಲಯ ಸ್ವಲ್ಪ ಖಾಲಿಯಾಯಿತು.

ಸ್ವಲ್ಪ ಹೊತ್ತಿನೊಳಗಾಗಿ ಶ್ರೀಹರ್ಷಲಾ ನ್ಯಾಯಾಲಯ ಪ್ರವೇಶಿಸಿದಳು. ಅದೇ ಮಾಸಲು ಸೀರೆ. ಅದೇ ಶೀರ್ಣಜೀರ್ಣಿತ ಶರೀರ. ದೈನ್ಯವೇ ಮೈವೆತ್ತಿ ಬಂದಂತೆ ಕಂಡು ಬರುತಿದ್ದ ಕರುಣಾ ಜನಕ ದೃಶ್ಯ. ಶ್ರೀಪತಿಯ ಕಣ್ಣುಗಳು ನೋಡಲಾರದೇ ನೋಡಿದುವು.

ನಿರ್ಮಲಾ ದ್ವಿವೇದಿಯ ಬಣ್ಣನೆ ಮಾನಸ ಪಟಲದ ಮೇಲೆ ಅಚ್ಚಳಿಯದಿತ್ತು. ಅಂದು ಅವಳು ಕೈಮುಗಿದು ಕೇಳಿಕೊಂಡ ಮನವಿ ಕರ್ಣ ಪಟಲಗಳಲ್ಲಿ ಮೊರೆಯುತ್ತಲೇ ಇದೆ. ಹೆಣ್ಣು ಬಾಗಿದ ತಲೆ ಎತ್ತಲಿಲ್ಲ. ತಲೆಯನ್ನು ಸುತ್ತುವರಿದ ಸೆರಗು ಜಾರದಂತೆ ತುದಿಬೆರಳಲ್ಲಿ ಹಿಡಿದುಕೊಂಡ ರೀತಿ ಮಾನಸಿಕ ಕಳವಳ-ಹೃದಯದ ತಳಮಳವನ್ನು ವ್ಯಕ್ತ ಪಡಿಸುವಂತಿತ್ತು. ಅಂದಿದ್ದ ಧೈರ್ಯ ಇಂದು ಕಾಣಿಸುತಿರಲಿಲ್ಲ. ಅವಳ ಪರವಾಗಿ ಅವಳೊಂದಿಗೆ ಬಂದವರಾರೂ ಇರಲಿಲ್ಲ. ವಿಚಾರಣೆಯ ಸಂದರ್ಭದಲ್ಲಿ ಒಂದಿಬ್ಬರು ಬಂದಿದ್ದುಂಟು ಎಷ್ಟೆಂದರೂ ಅವಳು ಅಬಲೆ-ಗತಿಹೀನೆ-ಬಡಪಿ.

ಶ್ರೀಪತಿ ದೃಷ್ಟಿ ತಗ್ಗಿಸಿದ. ಮೇಜಿನ ಮೇಲೆ ಅವಳ ತೀರ್ಪಿನ ಹದಿನೈದು ಪುಟಗಳ ಕಡತವಿತ್ತು. ಅವಳನ್ನು ಬಿಡುಗಡೆ ಮಾಡುವ ಆಲೋಚನೆಯಿದ್ದರೂ ಪ್ರಾಸಿಕ್ಯೂಷನ್ನಿನ ಕತೆ ಬಹಳ ಜಟಿಲಗೊಂಡಿದ್ದುದರಿಂದ ಆದರ ಯೋಚನೆಯನ್ನು ಬಿಟ್ಟಿದ್ದ. ಹೃದಯರಂಗದಲ್ಲಿ ಭಾವನಾತರಂಗಿಣಿಯ ನಾಟ್ಯ ಭೈರವಿ ಶೋಕರಾಗದಲ್ಲೇ ನಡೆದಿದೆ. ಒಂದೊಂದು ಹೆಜ್ಜೆಯ ಧ್ರುವ ತಾಳವೂ ತತ್ತಳ ತುಳಿಯುವಷ್ಟು ಗಂಭೀರ. ನರನರಗಳೂ ನರಳುತ್ತಿರುವಷ್ಟು ವೇದನಾಲಹರಿಯ ಹುಚ್ಚು ಪ್ರವಾಹ.

ಶ್ರೀಪತಿ ತನ್ನನ್ನು ತಾನು ಸಾವರಿಸಿಕೊಳ್ಳುತ್ತ ತೀರ್ಪು ಓದಿ ಹೇಳಿದ ಮೂರು ವರ್ಷಗಳ ಸಶ್ರಮ ಶಿಕ್ಷೆ. ಗಂಡ ಎಷ್ಟೇ ಕ್ರೂರಿಯಾಗಿದ್ದರೂ ವಿಷವುಣಿಸಿ ಸಾವಿಗೆ ಕಾರಣವಾದುದು ತಪ್ಪು ಎಂಬುದು ತೀರ್ಪಿನ ತೀರ್ಮಾನ.

"ಸ್ವಾಮಿ! ನಾನು ಕೇಳಿದ್ದು ಗಲ್ಲಿನ ಶಿಕ್ಷೆ!"

ಆ ಧ್ವನಿ ಹೊರಟಿತ್ತೋ ಇಲ್ಲವೋ ಅವಳು ಆ ಕ್ಷಣವೇ ಭೂಶಾಯಿಯಾದಳು.

ದುರಂತ ಗತಿ

ವರ್ಧತ್ಯಧರ್ಮೇಣ ನರಸ್ತತೋ ಭದ್ರಾಣಿ ಪಶ್ಯತಿ ।
ತತಃ ಸಪತ್ನಾತ್ ಜಯತಿ ಸಮೂಲಸ್ತು ವಿನಶ್ಯತಿ ॥

ಭಾರತೀಯನಾದ ಜಗ್ಗೂ ಹಲವಾರು ವರ್ಷಗಳಿಂದ ಇಂಗ್ಲೆಂಡಿನ ನಾನಾ ಪ್ರಾಂತ್ಯಗಳಲ್ಲಿದ್ದು ಅಲ್ಲಿನ ಜೀವನ ಸ್ತರದ ರೀತಿ ನೀತಿಗಳನ್ನು ಕಣ್ತುಂಬ ಕಂಡವ. ಅವರ ಅಗಾಧವಾದ ಪ್ರಗತಿಯನ್ನು ಮೆಚ್ಚಿ ಆತ್ಮ ಸಂತೋಷ ಪಡೆದುಕೊಂಡದ್ದು ಸತ್ಯಸ್ಯಸತ್ಯ. ಆದರೂ, ಕೆಲವೊಂದು ವಿಚಾರಗಳಲ್ಲಿ, ತೀರಾ ಜಿಗುಪ್ಸೆ–ಅಸಹ್ಯ. ಅವನದು ನಾಲ್ಕು ಮಂದಿ ಹೆಣ್ಣು ಮಕ್ಕಳೇ ಇದ್ದ ಸುಂದರ ಸಂಸಾರ. ಹಿರಿಯ ಪುತ್ರಿಯಾದ ಅಂಬಿಕ ಆಗಲೇ ಹನ್ನೆರಡರ ಹೊಸ್ತಿಲನ್ನು ಏರಿದ್ದಾಳೆ. ಇನ್ನು ಯೌವ್ವನಕ್ಕೆ ಪದಾರ್ಪಣೆ ಮಾಡುವುದೊಂದು ಬಾಕಿ. ಮಕ್ಕಳ ಮನಸ್ಸು ಬಲಿಯುವ ಮುನ್ನ ಅವರನ್ನು ಭಾರತಕ್ಕೆ ಕಳುಹಿಸಿದರೆ ಭಾರತೀಯತ್ವವನ್ನು ಉಳಿಸಿಕೊಳ್ಳಬಹುದೆಂಬ ಮಹೋದ್ದೇಶದಿಂದ ಸಂಸಾರವನ್ನು ಭಾರತಕ್ಕೆ

ವರ್ಗಾಯಿಸಿದ. ಮಕ್ಕಳಿಗದು ಅಸಮ್ಮತವಾದರೂ ಮಡದಿ ಸಂತೃಪ್ತೆ. ಭಾರತೀಯ ಸಂಸ್ಕೃತಿಯಲ್ಲಿದ್ದ ಅಪಾರವಾದ ಶ್ರದ್ಧಾಭಕ್ತಿಗಳು ಆತ್ಮಪ್ರೇರಣೆ ಮಾಡಿದುವು. ಜಗ್ಗುವಿನ ಜೀವನದಲ್ಲಿ ಅದೊಂದು ತಿರುವಿದ ಅಧ್ಯಾಯ.

ಹೆಂಡತಿ ಮಕ್ಕಳು ದೆಹಲಿಯಲ್ಲಿ ನೆಲಸಿದ ಬಳಿಕ ಜಗ್ಗೂ ಮಹಾಶಯ ಉದ್ದಿಮೆಗಾಗಿ ಇಂಗ್ಲೆಂಡಿಗೂ ದೆಹಲಿಗೂ ಓಡಾಡಿಕೊಂಡಿರುತಿದ್ದ. ಒಂದು ಪಾದ ದೆಹಲಿಯಲ್ಲಿದ್ದರೆ ಇನ್ನೊಂದು ಇಂಗ್ಲೆಂಡಿನಲ್ಲಿ. ಉದ್ದಿಮೆಯ ಮಹಾ ರಂಗವೇ ಅಲ್ಲಿಗೂ ಇಲ್ಲಿಗೂ ಮಹಾಸೇತು.

* * * *

ಜಗ್ಗೂ ಇಂಗ್ಲೆಂಡಿಗೆ ಹೋದಾಗಲೆಲ್ಲಾ ಸ್ನೇಹಿತರಿಗೆ ಅಥವಾ ಬಂಧು ಗಳಿಗೆ ಸಿಂಹ ಸ್ವಪ್ನವಾಗುವ ಬದಲು ಸಮೀಪದ ಗ್ರಾಮೀಣ ಪ್ರದೇಶಗಳಲ್ಲಿನ 'ಇನ್' ವಸತಿಗೃಹಗಳನ್ನು ಹಿಡಿಯುವುದು ರೂಢಿ. ಯಾವುದೇ ಪ್ರಾಂತ್ಯಕ್ಕೆ ಭೇಟಿ ನೀಡಿದಾಗಲೂ ಆ ಸುತ್ತುಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿನ ಇನ್-ಗಳು ಯಾವತ್ತೂ ಸ್ವಾಗತ ನೀಡುತ್ತದೆ. ಹಳ್ಳಿಗಳ ಶಾಂತ ಸುಂದರ ವಾತಾವರಣ ಮನಃಪ್ರಾಣಗಳಿಗೆ ಎಲ್ಲಿಲ್ಲದ ಆನಂದಕರ. ನಗರಗಳಲ್ಲಿನ ಗದ್ದಲ ಗಲಾಟೆಗಳಿಲ್ಲದಿರುವುದು ಮಾತ್ರವಲ್ಲ; ಬೆಲೆಯಲ್ಲಿಯೂ ತಗ್ಗು. ಸ್ನೇಹಾದರ ಗಳೂ ಸಮೃದ್ಧಿ.

ಜಗ್ಗೂ ಸಸ್ಯಾಹಾರಿಯಾದುದರಿಂದ ಬೆಂದ ತರಕಾರಿಗೆ ಉಪ್ಪು ಮೆಣಸು ಅಥವಾ ದೆಹಲಿಯಿಂದ ತರುತಿದ್ದ ಮಸಾಲೆಪುಡಿಯನ್ನು ಸೇರಿಸಿಕೊಳ್ಳುತಿದ್ದ. ಜೊತೆಗೆ ಹಾಲು ಬ್ರೆಡ್ಡುಗಳು ಕೂಡಿದರೆ ಊಟ ಹಿತಕರ. ಎಲ್ಲಿ ಇಳಿದು ಕೊಂಡರೂ ಅಲ್ಲಿನ 'ಕೇರ್ ಟೇಕರ್' ಸುಸ್ವಾಗತದೊಂದಿಗೆ ಸ್ನೇಹ-ಪ್ರೀತಿ-ಆದರಗಳ ಊಟೋಪಚಾರ ಕಾಲಕಾಲಕ್ಕೆ ಸರಿಯಾಗಿ ದೊರೆಯುತ್ತದೆ. ಅಲ್ಲಿನ ಒಬ್ಬ ವ್ಯಕ್ತಿ ನಿರ್ವಹಿಸುವ ಕಾರ್ಯಭಾರ ಇಲ್ಲಿನ ಹತ್ತು ಮಂದಿಯೂ ನಿರ್ವ ಹಿಸಲಾರರು. ಭಾರತದ ಹೋಟೆಲ್‌ಗಳಲ್ಲಿ ಅಡಿಗೆಯವರದು ಒಂದು ದಂಡಾ ವರಿ ಸರಬರಾಜುದಾರರದು ಇನ್ನೊಂದು ದಂಡು, ಮೇಲಾಗಿ, ಶುಚಿಕಾರರ ಹಿಂಡು. ಇವರಿಂದ ಇಡೀ ಹೋಟೆಲ್ ಕೊಳಕು-ಅಸಹ್ಯಗಳ ಆಗರ. ಆ

ಶುಚಿಯನ್ನು ಮರೆತು ತುತ್ತು ನುಂಗಬೇಕು. ಈ ಕರ್ಮಕಾಂಡ ಈ ಯುಗದಲ್ಲಿರಲಿ, ಮುಂದಿನ ಯುಗಕ್ಕೂ ಮುಗಿಯಲಾರದೇನೋ ಎನಿಸುವಷ್ಟು ಸ್ಥಿರಸ್ಥಾಯಿ. ಆ ದೇಶೀಯ ಯಾಂತ್ರೀಕೃತ ಜೀವನದಿಂದ ಸುಖ–ಶುಚಿ–ವಿರಾಮ ಎಲ್ಲವೂ ಇವೆ. ನಮ್ಮವರು ಎಂದಿಗೆ ಹೀಗಾದಾರು? ಎಂಬ ಪ್ರಶ್ನೆ ಆಗಾಗ ಏಳುತ್ತಲೇ ಇರುತ್ತದೆ....ಮರುಕ್ಷಣವೇ ಭ್ರಮೆ ಎನಿಸುವಷ್ಟು ನಿರಾಸೆ-ಜಿಗುಪ್ಸೆ.

ಪ್ರಸ್ತುತ,

ಇನ್-ಗಳಲ್ಲಿ ಸಾಮಾನ್ಯವಾಗಿ ಮಾಂಸದೂಟದೊಂದಿಗೆ 'ಏಲ್' ಎಂಬ ಅಗ್ಗದ ಮದ್ಯವನ್ನು ಒದಗಿಸುವ ಕ್ರಮ. ಜಗ್ಗೂಗೆ ಅದರ ವಾಸನೆ ಸ್ವಲ್ಪವೂ ಹಿಡಿಸುತ್ತಿರಲಿಲ್ಲ. ಹಲವಾರು ವರ್ಷಗಳಿಂದ ಬ್ರಿಟನ್ನಿನ ನಂಟು ಬೆಳೆದಿದ್ದರೂ ಮದ್ಯ ಮಾಂಸಗಳ ನಂಟು ಬೆಳೆಯಲಿಲ್ಲ. ಅವುಗಳ ಕಟುವಾಸನೆ ತೀರಾ ಹಿಂಸ್ರಕ. ಅಂತಲೇ ಊಟವನ್ನು ತನ್ನ ಕೊಠಡಿಗೇ ಅನೇಕ ವೇಳೆ ತರಿಸಿಕೊಳ್ಳುತಿದ್ದ. ಆತನ ಸ್ವಭಾವ-ಅಭಿರುಚಿಗಳನ್ನು ತಿಳಿದ ಸರಬರಾಜುಧಾರಿಣಿಯರು ಇವನು ಕೇಳಿಕೊಳ್ಳುವ ಮೊದಲೇ ಊಟಪಾನಾದಿಗಳನ್ನು ಕೊಠಡಿಗೇ ಒದಗಿಸುವ ಉಪಕಾರ ಮಾಡುತಿದ್ದರು.

ಸಾಯಂಸಮಯದಲ್ಲಿ ಮತ್ತು ಪ್ರಾತಃಕಾಲದಲ್ಲಿ ಅಲ್ಲಲ್ಲೇ ಅಡ್ಡಾಡುತ್ತ ಗ್ರಾಮ್ಯಜೀವನದ ರೀತಿನೀತಿಗಳನ್ನೂ ನೈಸರ್ಗಿಕ ಸೌಂದರ್ಯವನ್ನೂ ಮನಸಾರೆ ಹೀರಿ ಉಲ್ಲಸಗೊಳ್ಳುತಿದ್ದ. ಹಸಿರು ರನ್ನಗಂಬಳಿ ಹಾಸಿದಂತೆ ಹಚ್ಚನೆಯ ಹುಲ್ಲಿನ ಹಾಸು. ವರ್ಣವರ್ಣಮಯ ಎಳೆದಳಿರುಗಳಿಂದ ಸಿಂಗರಗೊಂಡ ದಟ್ಟವನರಾಜಿ. ಶಾಂತಶೀತಲ ವಾತಾವರಣ. ಇವಂತೂ ಸತ್ಯಸುಂದರ: ಭಾವನೋಜ್ವಲತೆಗೆ ನಿಜವಾಗಿಯೂ ಸ್ಫೂರಕ.

ಭಾರತ ಸಾಮ್ರಾಜ್ಯದಲ್ಲಿನ ಕಡುದಾರಿದ್ರ್ಯ-ಅಂಧಶ್ರದ್ಧೆ-ಮತಿಮೌಢ್ಯ-ಕ್ಲೇಷ-ಕೊಳಕುಗಳಿಂದ ದೂರದೂರವಾಗಿರುವ ಆ ಪಾಶ್ಚಾತ್ಯಭೂಮಿ ಅವನಿಗೆ ನಿತ್ಯಸುಂದರವಾಗಿರುವ ದೇವಮಂದಿರ.

* * * *

ನಗರಗಳಲ್ಲಿ ವ್ಯಾಪಾರ ವ್ಯವಹಾರ ಮುಗಿದನಂತರ ಸಂಜೆ ಟ್ಯಾಕ್ಸಿ ಹಿಡಿದು ಹೊರಟರೆ, ತಂಪುಹೊತ್ತುಗಳಲ್ಲಿ ಸಾನಂದದಿಂದ ವಿರಾಮವಾಗಿ ಕಳೆ

ಯಲು ಗ್ರಾಮೀಣ ಪ್ರದೇಶಗಳ ಕಡೆ ಆಕರ್ಷಿಕವಾಗುತಿತ್ತು ಮನಸ್ಸು. ಅವನ ಗೆಳೆಯರನೇಕರು ಅದಕ್ಕೆ ತೀರಾ ವ್ಯತಿರಿಕ್ತ. ಅವರು ಮುಕ್ತಕಂಠದಿಂದ ಟೀಕೆ ಟಿಪ್ಪಣಿಗಳನ್ನು ಹೊರಹಾಕಿ ನಗೆಬುಗ್ಗೆಯನ್ನು ಹರಿಸಿದರೂ ಅವನ ಮನೋಸಂಕಲ್ಪ ಅಚಲಿತ.

"ನೀವು ಎಷ್ಟಾದರೂ ನಕ್ಕುಬಿಡಿ ಪರವಾಯಿಲ್ಲ. ಸಾರಸಗಳ ಕ್ರೇಂಕಾರವ ಹೀಗೆಯೇ ಹೊಮ್ಮುವುದನ್ನು ನೋಡುತ್ತ ಸರೋವರಗಳ ತೀರದಲ್ಲಿ ಪಯಣಿಸುವಾಗ ನಿಮ್ಮನ್ನು ಖಂಡಿತ ನೆನೆಸಿಕೊಳ್ಳುವೆ!"

"ನೀನು ನಿಜಕ್ಕೂ ಮಂಜುಗಡ್ಡೆ ಕಣಯ್ಯ!"

"ನಾನು ಆಶಿಸುವುದೂ ಅದನ್ನೆ."

ಈ ಪ್ರಕಾರ ಮಾತುಕತೆ ಸಾಗಿದರೆ ಆ ಗೆಳೆಯರೇ ಸೋಲಬೇಕು. ಜಗ್ಗೂ ಸೋಲು ಕಂಡರಿಯ. ಗೆಳೆಯರನ್ನು ಸಂದರ್ಶಿಸಿಯಾಗಲೀ ದೂರವಾಣಿಯ ಮೂಲಕ ಮಾತಾಡಿಯಾಗಲೀ ಯೋಗಕ್ಷೇಮ ವಿಚಾರಿಸದೇ ಇರುತ್ತಿರಲಿಲ್ಲ ಜಗ್ಗೂ. ವಾಸ ಮಾತ್ರ ಇನ್--ಗಳಲ್ಲಿ.

ಅಂದು ಸರಬರಾಜುಧಾರಿಣಿ ಊಟದ ಟ್ರೇಯೊಡನೆ ಒಳ ಹೆಜ್ಜೆಯಿಟ್ಟಾಗ ಜಗ್ಗೂ ದಿನಪತ್ರಿಕೆಯನ್ನು ಓದುತಿದ್ದ. ಅವನು ಅದರಿಂದ ತಲೆಯೆತ್ತಿ "ಈವೊತ್ತಿನ ಅಪಘಾತದ ಸುದ್ದಿ ಓದಿದ್ದೀಯಾ?" ಎಂದ.

"ಏನು ಮಾಡೋಣ, ವೈಭವಕ್ಕೂ ಸಾವುಂಟು. ನಮ್ಮೀ ಜೀವನ ಮುನ್ನಡೆಯುವುದೇ ಸಾವಿಗಭಿಮುಖವಾಗಿ. ಎಂದರೆ ಏನೆನ್ನುತ್ತಿ?"

"You are correct."

ಅವಳು ಮೇಲೆ ಮುಚ್ಚಿದ್ದ ಚೌಕವನ್ನು ಸರಿಸಿ."ನಿನ್ನ ಈವೊತ್ತಿನ ಊಟ ನಿನಗೆ ಬಹಳ ಹಿಡಿಸಬಹುದು. ಬಟಾಣಿ ಮತ್ತು ಡಬ್ಬಲ್ ಬೀನ್ಸ್ ಮೇಲೋಗರ!"

"ತುಂಬ ಥ್ಯಾಂಕ್ಸ್! ನನ್ನ ಅಭಿರುಚಿ ನಿನಗೆ ಜ್ಞಾಪಕ ಇದೆಯಲ್ಲಾ ಅದೇ ಸಂತೋಷ!"

"ಅಷ್ಟಿಲ್ಲದೆ ಹೋದರೆ ಹೇಗಾದೀತು?"

ಅವಳು ಹೊರಟಳು. ಸುಮಾರು ಅರವತ್ತರ ಹರೆಯ. ಇಡೀ ಮನೆಯ 'ಹೌಸ್ ಕೀಪಿಂಗ್' ಅವಳದೇ. ಎಲ್ಲಾ ಬಗೆಯ ಗಿರಾಕಿಗಳಿಗೂ ಅವರವರ

ಇಚ್ಛಾನುಸಾರವಾಗಿ ಊಟ ಉಪಚಾರ ಮತ್ತು ಅಗತ್ಯ ಎಲ್ಲವನ್ನೂ ಪೂರೈಸುವವಳು ಅವಳೇ. ಆ ಚಟುವಟಿಕೆ, ಆ ಸಮಯ ಪ್ರಜ್ಞೆ ಹರೆಯದರನ್ನೂ ನಾಚಿಸುವಂತಹ ನಿತ್ಯಸತ್ಯ. ಯಾರಾದರೂ ಆಕಸ್ಮಾತ್ ಜಡ್ಡಾದರೆ ನೋಡಬೇಕು ಅವಳ ಚಟುವಟಿಕೆ !

* * * *

ಈ ಸಲಿ ಜಗ್ಗು ಹಿಡಿದುದು ಆಕ್ಸ್‌ಫರ್ಡಿನ ಹಾದಿ.

ಹಗಲೆಲ್ಲಾ ಉದ್ದಿಮೆಯ ರಾಣಾರಂಪದಲ್ಲಿ ಬಿಡುವಿಲ್ಲದ ಕೆಲಸ. ಮಧ್ಯಾಹ್ನ ಪ್ರಯತ್ನಪೂರ್ವಕವಾಗಿ ಸ್ವಲ್ಪ ಬಿಡುವು ಮಾಡಿಕೊಂಡು ಯೂನಿವರ್ಸಿಟಿಯ ಕಡೆ ಹೊರಟ. ಅಲ್ಲಿಯ ಪ್ರೊಫೆಸರುಗಳನೇಕರು ತನ್ನ ಸಹಪಾಟಿಗಳಾಗಿದ್ದವರು. ಆಕ್ಸ್‌ಫರ್ಡಿಗೆ ಕಳೆದ ಅನೇಕ ವರ್ಷಗಳಿಂದ ಭೇಟಿ ನೀಡಿರಲಿಲ್ಲ. ಈ ಸಲ ಪ್ರೊಫೆಸರ್ ರಾಬಿನ್‌ಸನ್ ನೋಡುವ ಉದ್ದೇಶದಿಂದಲೇ ಹೋಗಿದ್ದು ; ಆತ ಇನ್ನೂ ಆಫೀಸಿಗೆ ಬಂದಿರಲಿಲ್ಲ. ಅಲ್ಲಿದ್ದ ಸೆಕ್ರೆಟರಿ "ಇನ್ನು ಐದಾರು ನಿಮಿಷಗಳಲ್ಲಿ ಬಂದಾರು" ಎಂದಳು ನಗೆ ಮೊಗದ ಸ್ವಾಗತ ನೀಡಿ.

"ಹಾಗೋ....?"

"ನೀವು ಇಲ್ಲಿಯೇ ಕುಳಿತುಕೊಳ್ಳಿ. ಇಂದಿನ ಪತ್ರಿಕೆ ಮತ್ತು ಮಾಸಿಕಗಳಿವೆ. ನೀವು ನೋಡುವುದರೊಳಗಾಗಿ ಬಂದಾರು."

"ಥ್ಯಾಂಕ್ಯೂ !"

ಜಗ್ಗೂ ಮೇಜಿನ ಮೇಲಿದ್ದ ಮಾಸಿಕವೊಂದನ್ನು ತಿರುವಿಹಾಕಿದ. ಅದರಲ್ಲಿ ಪ್ರಕಟವಾದ ಒಂದು ಲೇಖನ ಮನವನ್ನು ಸೆಳೆಯಿತು. ಲೆಫ್ರಿ ಎಂಬ ಪ್ರಸಿದ್ಧ ಲೇಖಕ ಭೂತ ಪ್ರೇತಗಳ ವಿಚಾರ ಪ್ರಸ್ತಾಪಿಸಿದ್ದ. ಆ ವಿಚಿತ್ರ ಲೇಖನವನ್ನು ಸಂಪೂರ್ಣ ಓದಿದ ನಂತರ ಚಿತ್ತ ಕಲ್ಪ ವಿಚಾರ ವಿಪ್ಲವಕ್ಕೊಳಗಾಯಿತು. ಲೇಖಕ ಒಂದು ಘಟನೆಯನ್ನು ನೂರಕ್ಕೆ ನೂರರಷ್ಟು ಸತ್ಯ ಎಂಬಷ್ಟು ಸಮರ್ಥಿಸಿದ್ದಾನೆ. ಅದನ್ನು ನಂಬುವುದೇ ಬಿಡುವುದೇ ಎಂಬಂತಹ ಪರಿಸ್ಥಿತಿ. ವಿಷಯ ಮನದಲ್ಲೇ ಚರ್ವಿತಚರ್ವಣವಾದರೂ ಸತ್ಯಾಸತ್ಯಗಳ ತುಲನೆ ಸಾಧ್ಯವಾಗಲಿಲ್ಲ. ದೇಹದಾದ್ಯಂತ ನೆತ್ತರಿನ ಝರಿ ಬಿಸಿಬಿಸಿಯಾಗಿ ಹರಿದಾಡಿತು. ವಿಚಾರ ವಿಪ್ಲವದಲ್ಲಿ ನೆಟ್ಟ ಮನವನ್ನು ಹಿಂದೆಗೆಯದೆ ಆಲೋಚನಾತತ್ಪರನಾದ.

ಪಟ. ಪಟ. ಪಟ. ಪಟ....

ಧ್ವನಿ ಮೊಳಗಿದತ್ತ ದೃಷ್ಟಿಸಹಜವಾಗಿ ಹೊರಳಿತು. ಪ್ರೊಫೆಸರ್ ರಾಬಿನ್‌ಸನ್ ಕಂಡು ಬಂದ. ಪರಸ್ಪರ ದರ್ಶನಲಾಭದಿಂದ ಮುಖಬಿಂಬಗಳು ಸಂತಸದ ಕಳೆಯಿಂದ ಬೆಳಗಿ ಅರಳಿ ಹೂವಾದುವು.

ಈರ್ವರೂ ಮುಂಬರಿದು ಆತ್ಮೀಯ ಹಸ್ತಲಾಘವ ಪಡೆದ ನಂತರ ಜಗ್ಗೂ ಅಂದ,

"ಏನಯ್ಯಾ, ದೇವರನ್ನಾದರೂ ನೋಡಬಹುದು; ನಿನ್ನನ್ನು ನೋಡು ವುದು ಕಷ್ಟ. ಇಪ್ಪತ್ತು ನಿಮಿಷಗಳಿಂದ ನಿನಗಾಗಿ ಕಾದು ಕುಳಿತಿರುವೆ!"

ಹ ಹ ಹ್ಹ! ಅವನು ಗಟ್ಟಿಯಾಗಿ ನಕ್ಕುಬಿಟ್ಟ.

"ಹಾಗಾದರೆ ನೀನು ದೇವರ ದರ್ಶನ ಮಾಡಿದ್ದಿ!"

ಆ ಮಾತಿಗೆ ಜಗ್ಗೂ ನಕ್ಕು ಬಿಟ್ಟ.

"ಏನಪ್ಪಾ ಆಕ್ಸ್‌ಫರ್ಡಿಗೆ ಅಪರೂಪದ ಭೇಟಿ?"

"ಇಲ್ಲಿಯೂ ಉದ್ದಿಮೆಯ ವ್ಯವಹಾರವಿದೆ· ಅದಕ್ಕಾಗಿ ಬಂದೆ. ಹಾಗೆಯೇ ನಿನ್ನನ್ನೂ ನೋಡಿಹೋಗುವ ಉದ್ದೇಶದಿಂದ ಯೂನಿವರ್ಸಿಟಿಗೆ ಬಂದೆ."

ಪ್ರಸನ್ನ ಮುಖ ಬಿಂಬದಲ್ಲಿ ಹಸನಾದ ಮಂದಹಾಸ ಬೀರಿದ ಜಗ್ಗೂ!

"ಎಷ್ಟೆಂದರೂ ನೀನು ಉದ್ದಿಮೆದಾರ. ನಮ್ಮಂತೆ ಯಾವತ್ತೂ ಕೆಲಸಕ್ಕೆ ಅಂಟಿಕೊಂಡಿರುವ ಪ್ರಸಂಗ ಬರುವುದಿಲ್ಲ. ನನಗೆ ಮನರಂಜನೆ ಎಂಬುದು ಕನಸಿನ ಮಾತು!"

ನಿರಾಶಾಭರಿತವಾಣಿ ಹೊರಹೊಮ್ಮಿದಾಗ ಕಣ್ಣುಗಳ ಭಾವದಲ್ಲಿ ಏನೋ ಒಂದು ಬಗೆಯ ಅಸಹನೀಯತೆ ಇಣಿಕಿ ಮಾಯವಾಯಿತು, ರಾಬಿನ್‌ಸನ್ ವಿಚಾರ ಗಂಭೀರನಾದ.

ಗೆಳೆಯನ ಅಂತರ್ಯದ ಭಾವದರ್ಶನ ಎದೆಯಾಳಕ್ಕಿಳಿಯಿತು. ಕೈಯ ಲ್ಲಿದ್ದ ಪತ್ರಿಕೆಯನ್ನು ತಿರುವಿಹಾಕುತ್ತ ಒಂದೆರಡು ಕ್ಷಣ ತನ್ನಲ್ಲೇ ಯೋಚಿಸಿ ನುಡಿದ ಜಗ್ಗು,

"ನಮ್ಮಂತಹವರಿಗೆ ಇನ್ನೆಲ್ಲಿಯ ಮನರಂಜನೆ ಬಿಡು. ನಾನು ಸುಮ್ಮಾ ರಾಗಿ ಮನರಂಜನೆ ಬಯಸುವ ಪ್ರಕೃತಿಯವನಲ್ಲ. ನೈಸರ್ಗಿಕ ಸೌಂದರ್ಯ ವನ್ನು ಮನದುಂಬಿಕೊಳ್ಳುವುದರಿಂದ ಏನೋ ಒಂದು ಬಗೆಯ ಸಂತೃಪ್ತಿ

ಅಥವಾ ಆನಂದಾವೋದ ಉಂಟಾಗಿ ಆತ್ಮ ದರ್ಶನ ಮಾಡಿದಷ್ಟು ಮನಃಶಾಂತಿ ಮೂಡುತ್ತದೆ. ಅದಕ್ಕಿಂತ ಇನ್ನೇನು ಬೇಕು ಹೇಳು? ನನ್ನ ಮನರಂಜನೆ ಎಂದರೆ ಇದೊಂದೇ."

"ಎಷ್ಟೆಂದರೂ ನೀನು ಸೊಪ್ಪು ಸದೆ ತಿನ್ನುವ ಪ್ರಾಣಿ. ನನ್ನ-ನಿನ್ನ ರೀತಿ ನೀತಿಗಳು ತೀರಾ ಭಿನ್ನ ಭಿನ್ನ. ನಿನ್ನಂತೆ ನಾನಿರುವುದಕ್ಕಾಗುತ್ತದೆಯೇ?"

ಹಾಸ್ಯ ಪ್ರಧಾನವಾಗಿ ನುಡಿದ ರಾಬಿನ್‌ಸನ್.

ನಗು ನಗುತ್ತ ಉತ್ತರಿಸಿದ ಜಗ್ಗೂ,

"ನೀನು ಯೂನಿವರ್ಸಿಟಿಯಲ್ಲಿದ್ದು ಮನರಂಜನೆ ಸಾಲದೇ? ಹುಡುಗ ಹುಡುಗಿಯರ ದಂಥೆ ದಿನನಿತ್ಯ ನೋಡುವಂತಹ ನಾಟಕಗಳು! ಅದಕ್ಕಿಂತ ಹೆಚ್ಚಿನ ಮನರಂಜನೆ ಯಾವುದು?"

"ನಿಜ ಕಣಯ್ಯಾ!"

ಇಬ್ಬರ ತುಟಿಗಳಲ್ಲೂ ತುಂಟನಗೆ ಹರಿದಾಡಿತು.

ರಾಬಿನ್‌ಸನ್ ಉತ್ಸುಕತೆಯಿಂದ ಬಿತ್ತರಿಸಿದ. "ಜಗ್ಗೂ ವಾಸ್ತವ್ಯ! ನಾವು ಸ್ಪೈಟ್ ಕ್ಲಬ್ಬಿನಲ್ಲಿ ನೋಡುವುದು ಕೇವಲ ಒಂದೇ ಒಂದು ಹೆಜ್ಜೆ ಮುಂದೆ!"

"ನಿಜ....ನಿಜ!" ಎಂದ ಜಗ್ಗೂ ಸ್ವಲ್ಪ ಹೊತ್ತು ಸಿಧಾನಿಸಿ ಪುನಃ ಸಮರ್ಥಿಸುವಂತೆ ಮುಂದುವರಿದ "ಖಂಡಿತ ಒಪ್ಪುವಂತಹ ಮಾತು!" ಎಂದ ಮೇಲೆ ಹೆಚ್ಚು ಹೇಳುವುದೇನಿದೆ? ನಿನಗಾಗಿ ನಾನಿಲ್ಲಿ ಕಾದ ಸಮಯ ವ್ಯರ್ಥ ವಾಗಲಿಲ್ಲ. ಈ ಮಾಸಿಕದಲ್ಲಿ ಒಂದು ಲೇಖನ ಓದಿದೆ. ವಿಷಯ ಮಾತ್ರ ನಂಬಲಾಗದ ಕಗ್ಗಂಟು!"

"ಏನದು?"

"ಮೇರಿಯ ಪ್ರೇತ?"

"ನಾನೂ ಲೇಖನ ಓದಿರುವೆ! ಭೂತ ಪ್ರೇತಗಳಲ್ಲಿ ನನಗೆ ಇನಿತೂ ನಂಬುಗೆಯಿಲ್ಲ. ಆದರೆ, ಆ ಲೇಖನ ಸತ್ಯಸ್ಥಿತಿಯನ್ನು ಮುಂದಿಟ್ಟಿದೆ. ನಂಬುವುದೂ ಕಷ್ಟ; ಬಿಡುವುದೂ ಕಷ್ಟ."

ಜಗ್ಗೂ ಆಲೋಚನಾ ಪರವಶನಾದ........ಭಾರತೀಯ ಹಳ್ಳಿಗಾಡುಗಳಲ್ಲಿ ಮತ್ತು ಹಿಂದುಳಿದ ಜನಾಂಗಗಳಲ್ಲಿ ಇಂತಹ ನಂಬಿಕೆಗಳಿಗೆ ಕೊರತೆ

ಯಿಲ್ಲ. ಮಂತ್ರ ಮಾಟಗಳ ಅವಾಂತರವೂ ಇಲ್ಲದಿಲ್ಲ. ಇಲ್ಲಿಯ ವಿಚಾರ ಹೇಗೆಂದರೆ ತುಂಬಾ ಆಶ್ಚರ್ಯ. ಇವಂತೂ ತುಂಬಾ ವಿಶೇಷ!

ರಾಬಿನ್‌ಸನ್ ಕೆಮ್ಮಿ ಗಂಟಲು ಸರಿ ಮಾಡಿಕೊಂಡು ನುಡಿದ 'ಲಂಡನ್ ನಗರದ ವೆಸ್ಟ್ ಕಾರ್ಡ್ ರೋಡ್-ನಲ್ಲಿ ಒಂದು ದೊಡ್ಡ ಬಂಗಲೆಯಿದೆ ಅದು ಎರಡನೆ ರಾಣಿ ಎಲಿಜಬೆತ್ ಕಾಲದಲ್ಲಿ ಕಟ್ಟಿದ್ದು; ರಾಣಿಯ ಉಪಯೋಗಕ್ಕಾಗಿಯೇ ಕಟ್ಟಿದ್ದು ಎಂಬ ಪ್ರತೀತಿ. ಆ ಬಗ್ಗೆ ಕಾಗದ ಪತ್ರಗಳ ದಾಖಲೆಯೇನೂ ಇಲ್ಲ. ಸತ್ಯಾಂಶ ತಿಳಿಯುವುದು ಕಷ್ಟ. ಆಕೆಯ ನಂತರ ಅಲ್ಲಿ ಆಕೆಯ ಪ್ರೇತ ದಿಕ್ಕೆಟ್ಟು ವಾಸಿಸುತ್ತಿದೆ ಎಂದು ನಂಬಿಕೆ. ಅಲ್ಲಿ ತಂಗಿದವರಿಗೆ ಅದರ ಅನುಭವವಾಗಿದೆಯಂತೆ! ಸುದ್ದಿ ಬಾಯಿಂದ ಬಾಯಿಗೆ ಹರಡಿ ರೆಕ್ಕೆ ಪುಕ್ಕ ಬೆಳೆಯಿತು. ಆ ಕಟ್ಟಡ ಬಹಳ ಕಾಲದಿಂದ ಹಾಳು ಬಿದ್ದಿದೆ. ಕೆಲವು ಕಾಲ ಯಾರೋ ಆಫೀಸಿಗಾಗಿ ಹಗಲು ಹೊತ್ತಿನಲ್ಲಿ ಕಟ್ಟಡವನ್ನು ಬಾಡಿಗೆಗೆ ಹಿಡಿದಿದ್ದರು. ಅವರ ಉಚ್ಚ ತರಗತಿಯ ಉದ್ದಿಮೆ ಕ್ಷೀಣಗತಿಗೆ ಇಳಿಯತೊಡಗಿದುದರಿಂದ ಅವರು ಅಲ್ಲಿಂದ ಕಾಲು ಕಿತ್ತರು. ಇದಿಷ್ಟು ನಾನು ಕೇಳಿ ತಿಳಿದ ವಿಷಯ....ರಾತ್ರಿ ಹೊತ್ತಿನಲ್ಲಿ ಇದ್ದಕ್ಕಿದ್ದಂತೆಯೇ ದೀಪಗಳು ಬುಗ್ಗನೆ ಹೊತ್ತಿ ನಂತರ ಆರಿಹೋದುದನ್ನು ಕಂಡವರಿದ್ದಾರೆ! ಆದರೆ ನಂಬುವುದೇ ಕಷ್ಟ. ಕಟ್ಟಡ ಇಂದಿಗೂ ಖಾಲಿ ಇರುವುದು ಸತ್ಯ...."

ದನಿಯಲ್ಲಿ ವಿಚಾರಶೀಲತೆಯ ಗಾಂಭೀರ್ಯ ಸ್ಫುರಿಸಿತು. ಜಗ್ಗೂ ವಿಚಾರ ಪರವಶನಾದ. ಮನದಲೆಗಳು ಅಲ್ಲೋಲ ಕಲ್ಲೋಲವಾದುವು.

* * * *

ಸಾಯಂಸಮಯದ ಸುಂದರ ಶಾಂತ ವಾತಾವರಣ....

ರಕ್ತವರ್ಣರಂಜಿತ ಕಾರು ಗ್ರಾಮೀಣ ಪ್ರದೇಶದ ಹಾದಿ ಹಿಡಿಯಿತು.

ಹೊರಡುವುದು ಹೊತ್ತಾದುದರಿಂದ ರಾತ್ರಿಯ ಊಟವನ್ನು ಭಾರತೀಯ ಹೋಟೆಲೊಂದರಲ್ಲಿ ಮುಗಿಸಿ ಹೊರಟಿದ್ದ ಜಗ್ಗೂ. ಟಾರು ಬಳಿದ ಕರಿಯ ರಸ್ತೆಯ ಮೇಲೆ ಸಾಧಾರಣ ವೇಗದಲ್ಲಿ ಹರಿಯುತಿತ್ತು ಕಾರು. ಸ್ವಲ್ಪದೂರ ಪಯಣಿಸಿದನಂತರ ಮುಸ್ಸಂಜೆಯ ಮುಸುಗಪ್ಪು ಮೆಲ್ಲಮೆಲ್ಲನೆ ಇಳಿಯುನ್ನು

ಆವರಿಸತೊಡಗಿದಾಗ ದೀಪ ಹಚ್ಚಲು ಸ್ವಿಚ್ ಅದುಮಿದರೆ ಅವು ಉರಿಯದೆ ಸಂಪು ಹೂಡಿದುದರ ಅರಿವು ಮೂಡಿತು.

“ಓಹೊ ! ನಾನು ಎಂತಹ ಅವಿವೇಕಿ ? ದೀಪ ನೋಡಿಕೊಳ್ಳದೆ ಕಾರು ಹತ್ತಿದೆನಲ್ಲಾ!”

ನಿರ್ಜನ ಹಾದಿ; ನಿರ್ಜನ ಪ್ರದೇಶ. ಮುಸ್ಸಂಜೆಯ ಮುಸುಕು ಬೆಳಕು. ಜಗ್ಗೂ ಕಾರನ್ನು ಬದಿಗೆ ನಿಲ್ಲಿಸಿಕೊಂಡು ತಾನೇ ಎಷ್ಟೆಷ್ಟು ಪ್ರಯತ್ನಿಸಿದರೂ ದೀಪದ ದುರಸ್ತಿ ಆಗಲಿಲ್ಲ. ಆತನ ಬಳಿ ಟಾರ್ಚೇನೋ ಇತ್ತು. ಅದನ್ನು ಯಾರಾದರೂ ಹಿಡಿದು ಸೂಕ್ತಸ್ಥಳಕ್ಕೆ ಬೆಳಕು ಬಿಡದಿದ್ದರೆ ದುರಸ್ತಿ ಪಡಿಸುವುದು ಕಷ್ಟ. ರಸ್ತೆಯಲ್ಲಿ ಸರಿಯಾದ ಸಹಾಯಕರು ದೊರೆಯುವವರೆಗೆ ಹಾಗೇ ನಿಧಾನವಾಗಿ ಮುಂದುವರಿಯುವ ಯೋಚನೆಯಿಂದ ಕಾರು ಹತ್ತಿದ. ಕಾರು ನಿಧಾನಗತಿಯಲ್ಲಿ ಮುಂದುವರಿಯಿತು. ಸ್ವಲ್ಪ ದೂರ ಸಾಗುವುದರೊಳಗೆ ಕತ್ತಲು ಕವಿಯತೊಡಗಿತು.

ಕಾರು ಒಂದೇ ಪರಿಮಿತಿಯಲ್ಲಿ ಓಡುತ್ತಿದ್ದಂತೆ, ಮುಂದೆ ಸ್ವಲ್ಪ ದೂರದಲ್ಲಿ ಒಂದು ತಿರುವು. ಬದಿಯಲ್ಲಿ ಅಡ್ಡಲಾಗಿ ಬಿದ್ದ ಮರದ ಕಾಂಡ. ಅದರ ಮೇಲೆ ಸಾಲಾಗಿ ಐದು ಮಂದಿ ಕುಳಿತಿದ್ದಾರೆ. ಗಡ್ಡಭರಿತ ಯಜಮಾನ: ಅವನ ಪಕ್ಕಕ್ಕೆ ಮೂವರು ಹದಿಹರೆಯದವರಂತೆ ಕಂಡು ಬರುವ ಹುಡುಗ ಹುಡುಗಿಯರು; ಎಡಬದಿಯಲ್ಲಿ ಮಡದಿಯಂತೆ ತೋರುತಿದ್ದ ಸ್ತ್ರೀ ಮೂರ್ತಿ.

ಆ ಮುಸುಗತ್ತಲಿನಲ್ಲಿ ಸ್ಪಷ್ಟ ಚಿತ್ರ ಕಾಣಿಸಿತು.

ಆಗಸದ ತುಂಬೆಲ್ಲಾ ನಕ್ಷತ್ರ ಜಗತ್ತು. ನಡುವೆ ಕ್ಷೀಣಿತ ಚಂದ್ರಮ. ಅಸ್ಪಷ್ಟವಾಗಿ ಗೋಚರಿಸುವ ಗಿಡಮರಗಳ ಸಾಂದ್ರ. ಕಾರನ್ನು ತಿರುವು ದಾಟಿಸಿ ಪಕ್ಕಕ್ಕೆ ನಿಲ್ಲಿಸಿ `ಇಳಿದು ಇತ್ತ ನೋಡಿದರೆ ಅಡ್ಡಲಾಗಿ ಬಿದ್ದ ಮರ ಮಾತ್ರ ಗೋಚರಿಸಿತು.... ಸಾಲಾಗಿ ಕುಳಿತವರು ಇಲ್ಲವೇ ಇಲ್ಲ! ಇದೇನಾಶ್ಚರ್ಯ? ಅಷ್ಟು ಬೇಗನೆ ಕಣ್ಮರೆಯಾದುದು ಹೇಗೆ? ಜಗ್ಗೂ ಅತ್ಯಂತ ಆಶ್ಚರ್ಯಭರಿತನಾಗಿ ದಿಗ್ಭ್ರಮೆಯಿಂದ ಒಂದೆರಡುಗಳಿಗೆ ಸ್ತಬ್ಧಗತಿಯಲ್ಲಿ ನಿಂತು ನೋಡಿದ. ಸುತ್ತಮುತ್ತಲೂ ಕಣ್ಣಾಲಿಗಳು ಹರಿದಾಡಿದುವು. ಮರದ ಬುಡಕ್ಕೆ ಹೋಗಿ ನೋಡಿದ. ಅಲ್ಲಿಂದಾಚೆ ಮುಂದಿನ ಮರಕ್ಕೆ ಡಿಕ್ಕಿಹೊಡೆದ ಕಾರೊಂದು ಪುಡಿ

ದುಡಿಯಾದ ಘೋರ ಭಯಾನಕ ದೃಶ್ಯ! ಬಹುಶಃ ಇತ್ತೀಚೆಗೆ ಸಂಭವಿಸಿರಬಹುದಾದ ಅಪಘಾತ. ಒಳಗಿದ್ದ ಜನ ಏನಾಗಿದ್ದಾರೋ ದೇವರಿಗೇ ಗೊತ್ತು!

ಆ ಕೂಡಲೇ ಮನೋಮಂಡಲವನ್ನು ಎಲ್ಲೋ ಪರಿತ್ಯಕ್ತ ಆಶ್ಚರ್ಯ-ವಿಭ್ರಮೆಗಳು ಬಂದು ಭೋಂಕನೆ ಆವರಿಸಿದಷ್ಟು ಗೊಂದಲಮಯ. ಯೋಚಿಸಿದರೂ ವಿಷಯ ನಿಚ್ಚಳವಾಗಿ ಹೊಳೆಯದು. ಸ್ವಲ್ಪಹೊತ್ತು ಆಶ್ಚರ್ಯಾಲೋಚನೆಯ ವಶೀಭೂತನಾಗಿ, ನಂತರ ಕಾರು ಹತ್ತಿ ಹೊರಟ. ಅದೇ ಆ ಚಿತ್ರ ಚಿತ್ತಭಿತ್ತಿಯ ಮೇಲೆ ಪುನಃ ಪುನಃ ಸುಳಿಸುಳಿದಳಿಯಿತು. ಟಾರ್ಚ್ ಬೆಳಕಿನ ಸಹಾಯದಿಂದ ಗ್ರೀನ್‌ಬರ್ಗ್ ತಲುಪಿದ. ಅವನು ಇದೇ ಪ್ರಪ್ರಥಮವಾಗಿ ಗ್ರೀನ್‌ಬರ್ಗ್‌ನಲ್ಲಿ ಇಳಿದಿದ್ದು. ಇದಕ್ಕೂ ಹಿಂದೆಲ್ಲಾ ಮುಂದಿನ ಬಹು ಸುಂದರ ಊರಾದ ರೋಸ್‌ಬರ್ಗ್‌ನಲ್ಲಿ ಉಳಿಯುವುದು ರೂಢಿ. ಈ ಸಲ ವಾಹನ ತೊಂದರೆಯಿಲ್ಲದೆ ಇದ್ದರೆ ಇಲ್ಲಿ ಇಳಿಯುತ್ತಲೂ ಇರಲಿಲ್ಲ.

ಒಂದು ದೊಡ್ಡ ಬಂಗಲೆಯ ಪ್ರಾಂಗಣಕ್ಕೆ ಕಾರನ್ನು ನಡೆಸಿ ಸ್ವಿಚ್ ತೆಗೆದ.

* * * *

ಪ್ರಾಂಗಣದ ಸುತ್ತಮುತ್ತ ದೀಪಗಳು ಉರಿಯುತ್ತಿದ್ದುವು.

ಎರಡು ದೊಡ್ಡ ದೊಡ್ಡ ನಾಯಿಗಳು ದೊಡ್ಡ ದನಿಯಲ್ಲಿ ಬೊಗಳುತ್ತ ಧಾವಿಸಿ ಬಂದೊಡನೆಯೇ ವರಾಂಡದಲ್ಲಿ ಕುಳಿತಿದ್ದ ಯಜಮಾನ ಸಹಾಯಕ್ಕೆ ಮುಂದಾದ.

ಎರಡೂ ನಾಯಿಗಳ ತಲೆ ತಟ್ಟಿ ಹಿಮ್ಮೆಟ್ಟಿಸಿ ಮುಂದಾಗುತ್ತಲೂ ಜಗ್ಗೂ ನಗು ಮುಖದಿಂದ ಅಂದ,

“ ಗುಡ್ ನೈಟ್! ”

“ ಗುಡ್ ನೈಟ್! ”

ಇಬ್ಬರೂ ಪರಸ್ಪರ ಆತ್ಮೀಯತೆಯಿಂದ ಹಸ್ತಲಾಘವ ನೀಡಿದರು.

ಜಗ್ಗೂ ಕಾರಿನ ಬಾಗಿಲನ್ನು ಮುಚ್ಚುತ್ತಿದ್ದಂತೆಯೇ ಯಜಮಾನ ಕೇಳಿದ,

“ ದೀಪ ಹಚ್ಚದೆ ಬಂದೆಯಲ್ಲಾ, ಕೆಟ್ಟಿದೆಯೇ ಹೇಗೆ? ”

"ಹೌದು ......! ಲಂಡನ್‌ನಲ್ಲಿ ನಾನು ಅದನ್ನು ನೋಡಿಕೊಳ್ಳದಿದ್ದುದು ತಪ್ಪು. ಈವರೆಗೆ ದಾರಿಯಲ್ಲಿ ಪ್ರಯಾಣಿಕರು ಸಿಗುತಿದ್ದರು. ಈ ಸಲ ಯಾರೂ ಇರಲಿಲ್ಲ. ಈ ಮಸುಗತ್ತಲೆಯಲ್ಲಿ ಕಾರನ್ನು ಸುರಕ್ಷಿತವಾಗಿ ನಡೆಸಿದ್ದೇ ವಿಶೇಷ!"

"ನೀನು ಅದೃಷ್ಟವಂತ !"

"ದೇವರು ದೊಡ್ಡವನು !" ಎಂದು ಮನದಲ್ಲಿ ದೇವರನ್ನು ಸ್ಮರಿಸಿ ನಂತರ ತನ್ನ ಪರಿಚಯ ಹೇಳಿಕೊಂಡ "ನನ್ನ ಹೆಸರು ಜಗ್ಗೂ ! ನಾನು ಭಾರತೀಯ. ಲಂಡನ್ ನಗರದಲ್ಲಿ ಕೊಡು-ಕೊಳ್ಳುವ ವ್ಯಾಪಾರಕ್ಕಾಗಿ ಆಗಾಗ ಬರುತ್ತಿರುವೆ. ಇಂದು ಹೊರಟಿದ್ದು ಲಂಡನ್ ನಗರದಿಂದಲೇ.... ನನಗೆ ಇನ್-ಗಳಲ್ಲಿ ತಂಗುವುದೆಂದರೆ ತುಂಬಾ ಇಷ್ಟ. ನಾನು ಯಾವತ್ತೂ ನಗರಗಳಲ್ಲಿ ಇಳಿಯುವುದಿಲ್ಲ. ನನಗೆ ನಿಮ್ಮ ಪರಿಚಯವಿಲ್ಲ. ನಾನು ಈ ಸಲಿಯೇ ಇಲ್ಲಿಗೆ ಬಂದದ್ದು."

"ನನ್ನನ್ನು ಡೇವಿಡ್ ಎಂದು ಕರೆಯುತ್ತಾರೆ. ಈ ಪ್ರಾಂತ್ಯಕ್ಕೆ ನನ್ನದೇ ಪ್ರಪ್ರಥಮ ಇನ್. ಇಲ್ಲಿ ನೀನು ಎಷ್ಟು ಕಾಲವಾದರೂ ತಂಗಬಹುದು. ನಿನಗೆ ಬೇಕು ಬೇಕಾದ ಎಲ್ಲಾ ಸೌಕರ್ಯಗಳೂ ದೊರೆಯುತ್ತವೆ. ನೀನು ಬಂದದ್ದು ತುಂಬಾ ಸಂತೋಷ !"

ಇಬ್ಬರೂ ಒಳಬಂದರು.

ಸೋಫದ ಮೇಲೆ ಕುಳಿತು ಸ್ವೆಟರ್ ಹೆಣೆಯುತ್ತಿದ್ದ ಸ್ವಾಮಿನಿ ಎದ್ದು ನಿಂತು ಹಸ್ತಲಾಘವ ನೀಡಿ ಸ್ವಾಗತಿಸಿದಳು. ಡೇವಿಡ್ ಮಡದಿಯನ್ನು ಪರಿಚಯಿಸಿ "ಈಗ ಸಧ್ಯಕ್ಕೆ ಇಲ್ಲಿರುವವರು ನಾವಿಬ್ಬರೇ. ಮಕ್ಕಳೆಲ್ಲಾ ನಗರ ಸೇರಿರುವುದರಿಂದ ದೊಡ್ಡ ಮನೆ ಖಾಲಿ ಬಿದ್ದಿದೆ."

"ಓ. ಹಾಗೋ. ಇನ್ ನಡೆಸುವುದಕ್ಕೆ ಇನ್ನೂ ಅನುಕೂಲವಾಯಿತಲ್ಲ ?"

ಮಾಲೀಕನ ಮುಖದಲ್ಲೂ ಮುಗುಳುನಗೆ ಅರಳಿತು.

ಜಗ್ಗೂ ಕೊಠಡಿಗೆ ಹೋಗುವ ಮುನ್ನ ನುಡಿದ.

"ನನ್ನ ಊಟ ಮುಗಿದಿದೆ. ಈಗ ನೀವೇನೂ ತೊಂದರೆ ತೆಗೆದು ಕೊಳ್ಳುವ ಅಗತ್ಯವಿಲ್ಲ."

ಬಲ ಕೊಠಡಿ ಅವನಿಗಾಗಿ ತೆರೆಯಲ್ಪಟ್ಟಿತು. ಸಮಸ್ತ ರೀತಿಯಲ್ಲಿ

ಸಜ್ಜುಗೊಂಡ ಕೊಠಡಿ. ನೆಟ್ಟ ನೋಟ ಒಂದೇ ಕ್ಷಣದಲ್ಲಿ ಅಳಿದು ಹಿಮ್ಮರಳಿತು.

ಡೇವಿಡ್ ನೀರಿನ ಹೂಜಿಯನ್ನು ತಂದಿಟ್ಟು "ನಿನಗಿನ್ನೇನಾದರೂ ಬೇಕೆ?" ಎಂದು ವಿನಯದಿಂದ ಕೇಳಿದ. ಸ್ವಾಮಿನಿ "ನಿನಗೆ ಶುಭ ಸ್ವಪ್ನಗಳಾಗಲಿ !" ಎಂದು ಹಾರೈಸಿದಳು.

ಜಗ್ಗೂ ಇಬ್ಬರಿಗೂ "ಥ್ಯಾಂಕ್ಸ್ !" ಹೇಳಿ ವಿಶ್ರಾಂತಿಗೆ ವಿರಮಿಸಿದ.

* * * *

ಜಗ್ಗೂ ಹಾಸಿಗೆ ಸೇರಿದ. ರಾತ್ರಿಯ ಸಣ್ಣ ಕೆಂಪು ದೀಪವನ್ನು ಉರಿಸಿ, ದೊಡ್ಡ ದೀಪವನ್ನು ನಂದಿಸಿದ. ಬೆಳಗ್ಗೆ ಹೊತ್ತಾಗಿ ಹೊರಡುವುದರಿಂದ ದೀಪದ ತೊಂದರೆಯನ್ನು ಲಂಡನ್ನಿನಲ್ಲೇ ನಿವಾರಿಸಿಕೊಂಡರಾಯಿತು ಎಂಬ ಸಮಾಧಾನ.

ಆದರೆ....?

ದಾರಿಯಲ್ಲಿ ಕಂಡ ಆ ಐವರ ಚಿತ್ರ? ಆ ತಕ್ಷಣವೇ ಅದೃಶ್ಯವಾದುದು ಎಂತಹ ಆಶ್ಚರ್ಯ? ನಿಜವಾಗಿಯೂ ಲೇಖಕ ಲೆಫ್ರಿ ಹೇಳಿದಂತೆ ಭೂತಪ್ರೇತಗಳ ಚಿತ್ರವೇ? ಏನಿರಬಹುದು? ನಾನಂತೂ ಸ್ಪಷ್ಟವಾಗಿ ಕಂಡೆನಲ್ಲ....ಮರುಕ್ಷಣದಲ್ಲೇ ಕಣ್ಮರೆಯಾಗಬೇಕಾದರೆ ಏನೋ ಕಾರಣವಿರಬೇಕು.

ಅದೇ ಯೋಚನೆ...ಅದೇ ಚಿಂತನೆ.

ಬಹಳ ಹೊತ್ತು ನಿದ್ದೆ ಬರಲಿಲ್ಲ.

ಅರ್ಧರಾತ್ರಿ ಕಳೆದು ತಂಗಾಳಿ ತಣ್ಣಗೆ ಶೀಡತೊಡಗಿದನಂತರ ಸುಖ ನಿದ್ದೆ.

ಬೆಳಗಿನ ಝಾವದಲ್ಲೊಂದು ಕನಸು.

ರಕ್ತವರ್ಣರಂಜಿತ ಕಾಡಿಲಾಕ್ ಕಾರ್ ಒಂದೇ ಸಮನೆ ಓಡುತ್ತಿದೆ ಬಿರುಗಾಳಿಯನ್ನೂ ಮೀರಿ. ಅದನ್ನು ಹತೋಟಿಗೆ ತರಲು ಎಷ್ಟೆಷ್ಟು ಪ್ರಯತ್ನಿಸಿದರೂ ಅವನಿಗೆ ಸಾಧ್ಯವಾಗಲಿಲ್ಲ. ಕಾರು ಓಡುತ್ತಲೇ ಇದೆ........ಕೆಲವೇ ಕ್ಷಣಗಳಲ್ಲಿ ಸಾಲಾಗಿ ಮರದ ಕಾಂಡದ ಮೇಲೆ ಕುಳಿತ ಆ ಐವರ ಮೇಲೆಯೇ ಹರಿದು ಬಹುದೂರ ಎಳೆದುಕೊಂಡು ಹೋಗಿ ತಟ್ಟನೆ ನಿಂತಿತು !

ಜಗ್ಗೂ ಬೆದರಿ ಕಣ್ಣು ಬಿಟ್ಟು ಬಿರಿ ಬಿರಿ ನೋಡಿದ.

ಎಂಟು ಗಂಟೆ!

ಸೂರ್ಯ ಗಗನ ಭಿತ್ತಿಯನ್ನೇರಿದ್ದಾನೆ!

ಎಂದೂ ಇಷ್ಟು ಹೊತ್ತು ಮಲಗಿದವನಲ್ಲ! ದಡಕ್ಕನೆ ಎದ್ದು ಮುಖ ಮಜ್ಜನ ಮಾಡಿ ಪ್ರಾತರ್ವಿಧಿಗಳನ್ನು ಮುಗಿಸಿ ಹೊರಬಂದಾಗ ಡೇವಿಡ್ ದಂಪತಿಗಳು ಆಗಲೇ ತಮ್ಮ ದಿನಚರಿಯಲ್ಲಿ ತೊಡಗಿದ್ದಾರೆ.

"ಚೆನ್ನಾಗಿ ನಿದ್ದೆ ಬಂತೆ?" ಡೇವಿಡ್ ಕೇಳಿದ.

"ಹೌದು. ಮಧ್ಯರಾತ್ರಿ ಕಳೆದ ನಂತರ ನಿದ್ದೆ ಬಂದುದರಿಂದ ಏಳುವುದು ತಡವಾಯಿತು."

ಹಹಹ್ಹ! ನಕ್ಕು ಬಿಟ್ಟ ಡೇವಿಡ್.

ಸ್ವಾಮಿನಿ ಬಿಸಿ ಚಹ ಬ್ರೆಡ್ಡು ಬಿಸ್ಕತ್ತುಗಳ ಟ್ರೇಯನ್ನು ಮುಂದಿಟ್ಟಳು.

ಚಹಕ್ಕೆ ಸಕ್ಕರೆಯನ್ನು ಬೆರೆಸುತ್ತ ಜಗ್ಗೂ ಬಾಯ್ದೆರೆದ "ನನಗೆ ದಾರಿಯಲ್ಲಿ ಕಾರಿನ ಲೈಟ್ ಇಲ್ಲವೆಂಬುದರ ಅರಿವಾದುದು ಮುಸುಗತ್ತಲೆ ಕವಿದು ದೀಪ ಹಚ್ಚುವ ಸಮಯದಲ್ಲೇ. ಅದನ್ನು ಸರಿಪಡಿಸಲು ನಾನೇ ಪ್ರಯತ್ನಿಸಿದರೂ ಆಗಲಿಲ್ಲ. ದಾರಿಯಲ್ಲಿ ಯಾರಾದರೂ ಸಹಾಯಕರು ದೊರೆತಾರು ಎಂಬ ಯೋಚನೆಯಲ್ಲಿ ಕಾರನ್ನು ನಿಧಾನಗತಿಯಲ್ಲಿ ನಡೆಸುತಿದ್ದಂತೆಯೇ ಕತ್ತಲುಗವಿಯತೊಡಗಿತು. ಸುಮಾರು ಇಲ್ಲಿಂದ ಐದಾರು ಮೈಲಿಯದೂರದಲ್ಲಿ ಒಂದು ತಿರುವು. ರಸ್ತೆಯ ಬದಿಯಲ್ಲಿ ಅಡ್ಡಲಾಗಿ ಬಿದ್ದ ಮರದ ಕಾಂಡದ ಮೇಲೆ ಸಾಲಾಗಿ ಐವರು ಕುಳಿತಿದುದನ್ನು ಕಂಡು ಅವರ ಸಹಾಯ ಪಡೆಯೋಣವೆಂದು ತಿರುವಿನ ಬದಿಯಲ್ಲಿ ಕಾರು ನಿಲ್ಲಿಸಿ ಇಳಿದು ನೋಡಿದರೆ ಐವರೂ ಇಲ್ಲವೇ ಇಲ್ಲ! ಏನಿದರ ಅರ್ಥ?"

"ಓ! ನಿನಗೂ ಆಯಿತೇ ಆ ಅನುಭವ?"

ಜೋರಾಗಿ ನಕ್ಕು ಬಿಟ್ಟ ಡೇವಿಡ್! ಸ್ವಾಮಿನಿಯೂ ದನಿಗೂಡಿಸಿದಳು.

"ಹಾಗೆಂದರೇನು? ನನಗೂ ಇದು ತಿಳಿಯದು!" ಆಶ್ಚರ್ಯಯುಕ್ತವಾಣಿಯಲ್ಲಿ ಹೊಮ್ಮಿತು ಪ್ರಶ್ನೆ.

"ಅಲ್ಲೊಂದು ಕಾರು ಮರಕ್ಕೆ ಢಿಕ್ಕಿ ಹೊಡೆದು ಪುಡಿಪುಡಿಯಾಗಿರುವುದನ್ನು ಕಂಡೆಯಾ?"

"ಹೌದು....ನೋಡಿದೆ!"

"ಅದರ ಒಡೆಯ ಮತ್ತು ಆತನ ಸಂಸಾರ ಅಲ್ಲಿ ಕುಳಿತವರು! ಆ ಅನುಭವ ಅನೇಕರಿಗಾಗಿದೆ. ನಾನು ಮಾತ್ರ ಕಂಡಿಲ್ಲ. ಆ ಐದು ಮಂದಿಯೂ ಅದೇ ಕ್ಷಣದಲ್ಲಿ ಮೃತಿ ಹೊಂದಿದ್ದಾರೆ! ಬಹುಶಃ ಕಾರು ನಡೆಸುವಾಗ ಆತ ನಿದ್ರಾಮತ್ತನೋ ಪಾನಮತ್ತನೋ ಆಗಿದ್ದಿರಬೇಕು. ಕಾರು ಆಯ ತಪ್ಪಿ ಮರಕ್ಕೆ ಡಿಕ್ಕಿ ಹೊಡೆಯಿತು. ಪಾಪ! ನತದೃಷ್ಟ ವ್ಯಕ್ತಿಗಳು! ಜೀವನದಲ್ಲಿ ಆಸೆ-ಆಕಾಂಕ್ಷೆಗಳು ಕೈಗೂಡುವ ಮುನ್ನ ಜೀವ ತೆತ್ತುದರಿಂದ ಪ್ರೇತಗಳಾಗಿದ್ದರೂ ಇರಬಹುದು. ನಾನು ಸ್ವಂತ ಕಣ್ಣಿಂದ ಕಂಡಿಲ್ಲವಾದುದರಿಂದ ಹೆಚ್ಚಿಗೆ ಹೇಳಲಾರೆ........"

"ಅಪಘಾತ ನಡೆದದ್ದು ಯಾವಾಗ?"

"ಏಳೆಂಟು ದಿನಗಳು ಮಾತ್ರ ಕಳೆದಿವೆ."

"ಪಾಪ! ಇಡೀ ಕುಟುಂಬ ದುರಂತಕ್ಕೀಡಾಯಿತು." ವಿಷಾದ ವಾಣಿಯಲ್ಲಿ ನುಡಿದಳು ಸ್ವಾಮಿನಿ.

ಸ್ವಲ್ಪಹೊತ್ತು ಗಂಭೀರವಾಗಿ ಉರುಳಿ ಹೋಯಿತು.

ಜಗ್ಗೂ ಚಿಂತಾಪರವಶನಾದ. ದೃಷ್ಟಿಪಥದಲ್ಲಿ ಆ ನತದೃಷ್ಟ ಸಂಸಾರ ಚಿತ್ರವತ್ತಾಗಿ ಸುಳಿಸುಳಿದಳಿಯಿತು.

ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು.

"ನಾನು ಆ ಸಂಸಾರವನ್ನು ಮಸುಕು ಬೆಳಕಿನಲ್ಲಿ ಸ್ಪಷ್ಟವಾಗಿ ಕಂಡೆ. ಉತ್ತಮ ಪೋಷಾಕು ಧರಿಸಿದ್ದ ಅವರನ್ನು ಪ್ರೇತ ಸಮೂಹ ಎಂದು ಎಂತಹ ಬುದ್ಧಿವಂತರೂ ಊಹಿಸುವುದು ಸಾಧ್ಯವಾಗುತ್ತಿರಲಿಲ್ಲ. ಎಂದರೆ ತಪ್ಪಾಗಲಾರದೇನೋ. ಅಂತೂ ಇದು ಬಹಳ ಆಶ್ಚರ್ಯ! ನಾನು ಭೂತ ಪ್ರೇತಗಳನ್ನು ಕಂಡವನೂ ಅಲ್ಲ; ನಂಬುವವನೂ ಅಲ್ಲ. ಇದು ಹೊಸ ಅನುಭವವಾದಂತಾಯಿತು."

"ನಾವು ದಿನವೂ ಆ ದಾರಿಯಲ್ಲಿ ಓಡಾಡುತ್ತೇವೆ. ನಮಗೆ ಆ ದರ್ಶನವಾಗಿಲ್ಲ."

ಸ್ವಾಮಿನಿ ಮುಖದ ಮೇಲಿನ ಬೆವರನ್ನು ಕರವಸ್ತ್ರದಿಂದ ಒರಸಿಕೊಳ್ಳುತ್ತ ನುಡಿದಳು.

ಜಗ್ಗೂ ಮಾತಾಡಲಿಲ್ಲ. ಬಿಸಿ ನೆತ್ತರಿನ ಝರಿ ಜರ್ರನೆ ದೇಹದಾದ್ಯಂತ ಹರಿದಾಡಿತು.

"ಆತ ಬಹಳ ಸ್ವಾಭಿಮಾನಿ ...ಯಾರಿಗೂ ಕನಿಕರ-ಸಹಾಯ-ಸಹಕಾರ ಇವುಗಳ ಬಗ್ಗೆ ಯೋಚಿಸಿದವನೇ ಅಲ್ಲ. ನಮ್ಮ ಬೈಬಲ್ ಹೇಳುವುದು ಹೀಗೆ Pride goeth before distruction, and an haughty spirit before a fall.

" ಯಾರ್ಯ್ಯಾರ ಅಂತ್ಯ ಹೇಗ್ಹೇಗೆ ಬರುತ್ತೊ ಯಾರಿಗೆ ಗೊತ್ತು ?" ಎಂದ ಜಗ್ಗೂ.

"ಅದು ನಿಜ." ಎಂದು ತಲೆದೂಗಿದ ಭರ್ತ್ಯಾಣಿ "ಈಗ ಅವರಿಲ್ಲ. ಅವರ ವಿಚಾರದಲ್ಲಿ ಬೇರೊಂದನ್ನು ಮಾತಾಡುವುದಕ್ಕಿಂತ ಅವರ ಆತ್ಮಗಳಿಗೆ ಶಾಂತಿ ಕೋರುವುದು ಲೇಸು ! "

ಆ ಮಾತಿಗೆ ಡೇವಿಡ್ ಮತ್ತು ಜಗ್ಗೂ 'ಹೌದು' ಎಂಬಂತೆ ತಲೆದೂಗಿದರು.

ಹೊರಗಡೆ ಕಟ್ಟಿದ್ದ ನಾಯಿಗಳು ಅಪರಿಚಿತನ ವಾಸನೆ ಹಿಡಿದು ಗಂಟಲು ಹರಿಯುವಂತೆ ಬಾಯ್ದೆರೆದು ಬೊಗಳುತಿದ್ದವು.

ಪರಿಮಳೆಯ ಡೈರಿ

ಸಂಹತಿಃ ಶ್ರೇಯಸೀ ಪುಂಸಾಂ ಸ್ವಕುಲೈರಲ್ಪಕೈರಪಿ ।
ತುಷೇಣಾಪಿ ಪರಿತ್ಯಕ್ತಾ ನ ಪ್ರರೋಹಂತಿ ತಂಡುಲಾಃ ॥

ನಾನು ದಿನನಿತ್ಯ ಡೈರಿ ಬರೆಯುವುದು ನನ್ನ ಮನಃಸಾಂತ್ವನಕ್ಕಾಗಿ. ನಾದರೊಂದು ಸೂಕ್ತ ಶ್ಲೋಕವೋ ಅಥವಾ ಯಾವುದಾದರೊಂದು ಒಳ್ಳೆಯ ನುಡಿಗಟ್ಟೋ ಕಂಡುಬಂದಾಗ ಗುರುತು ಹಾಕಿಕೊಳ್ಳುವುದು ರೂಢಿ.... ಅಥವಾ ಸ್ವಭಾವ ಎಂದರೂ ಸರಿಯೆ....ಹೇಗಾದರೂ ಭಾವಿಸಬಹುದು. ನನ್ನದು ಭಾವುಕ ಪ್ರವೃತ್ತಿ ...ಎಂದು ನನ್ನನ್ನು ನಾನೇ ಪರಿಚಯಿಸಿಕೊಳ್ಳ ದ್ದರೆ ವಾಚಕರಿಗೆ ವಂಚನೆಯಾದೀತು.

ಈ ಜೀವನದ ರುದ್ರನಾಟಕದ ಪಾತ್ರದಾರಿಗಳು ನಾವು. ಯಾರ ಸಂಘ-ಹವಾಸಗಳನ್ನು ಹಚ್ಚಿಕೊಳ್ಳದಿದ್ದರೂ ಈ ಬೃಹದ್ ಸಾಮಾಜಿಕ ಪ್ರಾಕಾರ ನ್ನು ದಾಟಿಹೋಗುವುದು ಸಾಧ್ಯವೇ ಇಲ್ಲ ಎಂಬುದು ನನ್ನ ಅನುಭವ.

ಗೆಳೆಯರು ಬಂಧು ಬಳಗದವರು ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಸುತ್ತು ಮುತ್ತಿನ ವರ್ತುಲ ಎಂದರೆ ತಪ್ಪೇನೂ ಆಗದು. ಈ ಜನ-ಈ ಪರಿಸರ ತುಂಬಾ ಆಹ್ಲಾದಾತ್ಮಕವಾದುದು ಎಂದೇನೂ ಹೃತ್ಪೂರ್ವಕವಾಗಿ ಒಪ್ಪಿ ಕೊಳ್ಳಲಾರೆ. ಎಲ್ಲಾ ಕಾಲ-ದೇಶಗಳಲ್ಲೂ ಇದ್ದಿರಬಹುದಾದ ಸಾಮಾಜಿಕ ನ್ಯೂನತೆಗಳು ಈಗಲೂ ಇರುವುದು ಸಹಜ....ಅದು ಅನಿವಾರ್ಯ.

ನಾನು ಮಹಡಿಯ ಬಿಸಿಲು ಮಚ್ಚಿನ ಮೇಲೆ ಕುಳಿತು ಸಂಧ್ಯಾಕಾಂತಿ ಯನ್ನು ಸವಿಯುವಾಗ ನಮ್ಮವರೆಲ್ಲಾ ಸಿನಿಮಾಗಳಲ್ಲಿ ಅಥವಾ ಪಾನಗೋಷ್ಠಿ ಗಳಲ್ಲಿ ಕಾಲಹರಣ ಮಾಡುತ್ತಿರಬಹುದು. ಅಥವಾ ತಮ್ಮ ತಮ್ಮ ಕರ್ತವ್ಯ ನಿಷ್ಠೆಯಲ್ಲಿ ಮನವಿಟ್ಟಿರಬಹುದು. ಹೇಗಾದರೂ ಇರಲಿ, ಅದು ಅವರವರ ಸ್ವಭಾವಜನ್ಯವಾದ ವ್ಯವಹಾರ.

ಮಾಮರದ ಕೆಂದಳಿರ ಹೊದರಿನಲ್ಲಿ ಹುದುಗಿ ಕೋಗಿಲೆಯೊಂದು ಕೊರಳ್ದನಿಯನ್ನು ಹರಿಯಬಿಟ್ಟಿತು. ಕೂಊಊಊ ! ಕೂಊಊವೂ ! ಕೂಊಊಊವೂ !

ನಾನು ಅತ್ತ ದೃಷ್ಟಿ ಹೊರಳಿಸಿದೆ. ಮಾವಿನಮರದ ಎಲೆಗೊಂಚಲು ಅಲ್ಲಾಡುತ್ತಿರುವುದು ಸ್ಪಷ್ಟ ಕಾಣಿಸಿದರೂ ಕೋಗಿಲೆ ಅದೃಶ್ಯ. ಅಷ್ಟು ಮಧುರ ಸ್ವರವನ್ನು ಹರಿಯಬಿಡುವ ಕೋಗಿಲೆಯೇಕೆ ಹುದುಗಿ ಅಡಗಿಕೊಳ್ಳು ವುದೋ ಆಶ್ಚರ್ಯ. ಏಕೆ ಎದುರು ನಿಂತುಹಾಡಬಾರದು ಎಂಬುದು ಅಂತ ರಂಗಿಕ ಪ್ರಶ್ನೆ. ಬಹುಶಃ ಅಗ್ರಗಣ್ಯರ ಸ್ವಭಾವ....ಎನಿಸಿದಾಗ ನಿಜಕ್ಕೂ ಏನೋ ಒಂದು ಬಗೆಯ ಅನನ್ಯ ಆನಂದ. ನಾನು ಅದರ ಕೂಗನ್ನು ಅನು ಸರಿಸಿ ಅದೇ ಧಾಟಿಯಲ್ಲಿ ಶಿಳ್ಳೆ ಹಾಕಿದೆ. ಅದು ನಿಜಕ್ಕೂ ಮತ್ತೊಂದು ಕೋಗಿಲೆ ಎಂದು ಪರಿಭಾವಿಸಿತೇನೋ....ಕೂಊಊಊ! ಕೂಊಊಊ! ಎಂದು ಪ್ರಸ್ಫುಟವಾದ ದನಿಯಲ್ಲಿ ಮರು ದನಿ ಕೊಟ್ಟಿತು. ಆಹ, ಎಂತಹ ಮಧುರ ಸ್ವರ....?

ನಾನು ಪುನಃ ಮರು ದನಿ ಕೊಟ್ಟೆ. ಅನಂತರ ಅದು ಹೀಗೆಯೇ ಎಷ್ಟೋ ಸಾರಿ ಸಾಗಿತು.

ಯಾರೋ ಹಿಂದುಗಡೆಯಿಂದ ಬಂದು ನನ್ನ ಎರಡೂ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿ ಹಿಡಿದು “ಯಾರು ಊಹಿಸು” ಎಂದಳು ಗೊಗ್ಗರ ದನಿ

ಯಲ್ಲಿ. ದನಿಯನ್ನು ಮಾರ್ಪಾಡು ಮಾಡಿಕೊಂಡಿದ್ದುದರಿಂದ ಗುರುತು ಹಿಡಿಯುವುದು ಕಷ್ಟವಾಗಿ ಕೈ ಕೊಸರಾಡಿ ಬಿಡಿಸಿಕೊಂಡು ಹಿಂದಿರುಗಿ ನೋಡಿದರೆ ನನ್ನ ಆತ್ಮೀಯ ತಂಗಿ ಪ್ರತಿಭಾ !

"ಏನಮ್ಮಾ? ನೀನೊಂದು ಕೋಗಿಲೆಯಾಗಿ ಬಿಟ್ಟೆ ?"

"ನಿಜಕ್ಕೂ ಕೋಗಿಲೆಯಾಗಿ ಹುಟ್ಟಿದ್ದರೆ ಎಷ್ಟು ಒಳ್ಳೆಯದಿತ್ತು? ಆ ಪುಣ್ಯ ನಮಗೆಲ್ಲಿ ಬರಬೇಕು?" ನಿರಾಸೆಯ ದನಿಯಲ್ಲಿ ನುಡಿದೆ ನಾನು.

"ಯಾರಿಗೆ ಗೊತ್ತು? ಮರು ಹುಟ್ಟಿನಲ್ಲಿ ಕೋಗಿಲೆಯಾಗಬಹುದೇನೋ...."

"ಅಷ್ಟಾದರೆ ಸಾಕು ಕಣೆ !"

"ಅದರಿಂದ ಏನು ಸಾಧಿಸುತ್ತಿ ?

"ಸಾಧನೆ ಏನಿಲ್ಲ. ಸುಮ್ಮನೆ ಹಾರುವ-ಹಾಡುವ ಹಕ್ಕಿ ಅಷ್ಟೆ !"

ಅವಳು ನಕ್ಕು ಬಿಟ್ಟಳು.

"ಏಕಮ್ಮಾ?"

"ನರ ಜನ್ಮ ಎಲ್ಲಿ? ಹಾರುವ ಹಕ್ಕಿ ಎಲ್ಲಿ? ಮೊದಲು ಈ ಜನ್ಮದ ಸಾರ್ಥಕ್ಯ ನೋಡಿಕೊ. ಅನಂತರ ಹಾರುವ ಹಕ್ಕಿ ! ಜಿಗಿಯುವ ಜಿಂಕೆ ಎಲ್ಲಾ ಆಗುವೆಯಂತೆ !"

"ಅದೇ ಈಗ ಬಂದಿರುವ ಕಷ್ಟ. ಜನ್ಮ....ಸಾರ್ಥಕ್ಯ...."

"ಏಕೆ ಸುಸ್ತಾಗಿ ಬಿಟ್ಟೆ? ಇಂದು...ದೀಪದ ಕುಡಿಯೆತ್ತಿ ಕಾಂತಿಯನ್ನು ಪ್ರಜ್ವಲಿಸುವಂತೆ ಮಾಡುತ್ತ ಸಂಸ್ಕೃತಿ ಪ್ರಸಾದವನ್ನು ನಿರ್ಲಕ್ಷಿಸುವ ಸ್ತ್ರೀ ಜಾತಿಯಲ್ಲಿ ಹುಟ್ಟಿ, ಜೀವನ ಮಾರ್ಗಯೋಗದಲ್ಲಿ ಸ್ವಂತಿಕೆಯ ಉಜ್ವಲ ನವೋನವ ಕಾಂತಿಯನ್ನು ಸೃಷ್ಟಿಸಲಾರೆವಾದರೆ ಈ ವಿದ್ಯಾ ಸರಸ್ವತಿಯ ಆರಾಧನೆಯಿಂದ ಆಗುವುದಾದರೂ ಏನು ? "

"ಪ್ರತಿಭಾ ! ಇಲ್ಲಿ ಕೇಳು ! ಇದೇ ನನ್ನ ಪ್ರಶ್ನೆಯೂ ಕೂಡಾ. ಈಗ ನಮ್ಮ ತಾಯಿ ವಿದ್ಯಾವಂತೆ. ಅವರಿಂದ ಈ ಸಂಸಾರ ನಿರ್ವಹಣೆ ಹೊರತು ಇನ್ನೇನು ಮಾಡಲು ಸಾಧ್ಯವಾಗಿದೆ?"

"ನಮ್ಮಲ್ಲಿಯ ಹಳೇ ಪದ್ಧತಿ. ಊಟ-ತಿಂಡಿಗೇ ಬಹಳ ಹೊತ್ತು ಹಿಡಿಯುವಂತಹ ವ್ಯವಹಾರ. ಮೇಲಾಗಿ, ಸ್ತ್ರೀ ಜಾತಿಗೆ ಅನುಕೂಲಿಸುವಂತಹ ಪರಿಸರ-ವಾತಾವರಣ-ಸಂಸ್ಕಾರ ಮುಂತಾದ ಯಾವೊಂದೂ ಸುತರಾಂ ನಮ್ಮನ್ನು ಬೆಂಬಲಿಸುವುದಿಲ್ಲ. ನಾವು ಈ ಪ್ರಕಾರಗಳನ್ನು ದಾಟಿ ಹೋಗದ ಹೊರತು ನಮ್ಮ ಜೀವನ ಸುಧಾರಣೆ ಸಾಧ್ಯವಾಗದು. ನಮ್ಮ ನಮ್ಮ ಮೂಗಿನ ನೇರಕ್ಕೇ ನಾವು ನೋಡುವುದರಿಂದ ಸಾಮಾಜಿಕ ಪರಿಸರಕ್ಕೆ ನಮ್ಮಿಂದ ಯಾವ ಸಹಾಯವೂ ಆಗಲಾರದೇನೋ....ಎನಿಸುತ್ತೆ. ಈಗೀಗ ಅಷ್ಟು ಯೋಚಿಸುವ ಸಮಯವಾಗಲೀ ಸಹನೆಯಾಗಲೀ ಇಲ್ಲವೇ ಇಲ್ಲ. ಏನೋ ಒಂದು ರೀತಿಯ ತಾತ್ಸಾರ, ಇನ್ನೇನೋ ಒಂದು ರೀತಿಯ ಅನಾದರ. ಮತ್ತೇನೋ ಒಂದು ರೀತಿಯ ಸ್ವಾಭಿಮಾನ ಇವು ಅಡ್ಡಿ ಬರುವುದು ಸರ್ವೇ ಸಾಮಾನ್ಯ. ಇಂಥ ಪರಿಸ್ಥಿತಿಯಲ್ಲಿ...."

"ಪ್ರತಿಭಾ ! ನಿನ್ನ ವಿವರಣೆ ನಿಜಕ್ಕೂ ಒಪ್ಪುವಂತಾದ್ದು. ಈಗ ನಿನ್ನ ಮುಂದಿರುವ ಧ್ಯೇಯ ಏನೆಂಬುದನ್ನು ತಿಳಿಯಬಹುದೇ ?"

"ಪರಿಮಳೆಯ ಧ್ಯೇಯ ಧೋರಣೆ ಏನಿರುತ್ತೋ ಅದೇ ನನಗೂ ಅನ್ವಯಿಸುತ್ತೆ ಎಂಬುದು ನೀನು ತಿಳಿದ ವಿಷಯ. ಬಿಡು, ಮತ್ತೇಕೆ ಅದರ ಪ್ರಶ್ನೆ. ಈವರೆಗೆ ಓದಿನಲ್ಲಿ ಮುಳುಗಿರುತಿದ್ದುದರಿಂದ ಭವಿಷ್ಯವನ್ನು ಕುರಿತು ಯೋಚಿಸಲೂ ಇಲ್ಲ. ಈ ಸಲ ಪರೀಕ್ಷೆ ಮುಗಿಯಲಿ. ಅನಂತರ ಭವಿಷ್ಯ.

"................"

"ಏಕೆ ಪರೀ ಸುಮ್ಮನಾಗಿಬಿಟ್ಟೆ ?"

"ನಾವೇನೋ ಅಲ್ಪಸ್ವಲ್ಪ ವಿದ್ಯಾವಂತ ಮಹಿಳೆಯರು ಮುಂದಿನ ದಾರಿಗನ್ನು ಪಡೆಗೆ ಸಾಗಿ ಹೋಗ ಬಲ್ಲೆವು. ಆದರ ರೀತಿಯೇ ಬೇರೆ. ಆದರೆ, ಬಡವರ್ಗ-ಅವಿದ್ಯಾವಂತ ಹುಂಬರು ಇವರ ಉದ್ಧಾರ ತುಂಬಾ ಕಷ್ಟ. ಈ ಜೀವಮಾನದಲ್ಲಿ ಆಗಲಾರದೇನೋ ಎಂಬಷ್ಟು ಸಂಕಟ-ಪರಿತಾಪ. ನಾಗರಿಕತೆ-ಸಭ್ಯತೆ-ಸಂಸ್ಕಾರಗಳ ಕೈಗೊಂಬೆಯಾಗದ ಯಾವ ಜೀವನವೂ ಶಿಷ್ಟಪಥವನ್ನು ಹಿಡಿಯಲಾರದು. ಇದಕ್ಕೆಲ್ಲಾ ಅರ್ಧ ಶತಮಾನದ ಸಂಸ್ಕಾರವಾದರೂ ಬೇಕು. ಅಲ್ಲಿಯತನಕ ಸಾಧನೆಗಿಂತ ಎಲ್ಲರೂ ಮೂಕ ಪ್ರೇಕ್ಷಕರಾಗಿರುವುದು ಮಾತ್ರ ಸಾಧ್ಯವಾದೀತೇನೋ. ಅಂದಿಂದಿಗೂ ಈ ನಿಟ್ಟಿನಲ್ಲಿ ಆಗಿಹೋದ ಅಗ್ರಮಾನ್ಯ ಜನ ನಾಯ

ಕಿಯರು-ಜನ ನಾಯಕರು ಏನೇನು ಮಾಡಿದ್ದಾರೆ ಎಂಬುದನ್ನು ತಿಳಿಯ ಬೇಕಾದರೆ ಇತಿಹಾಸದ ಪುಟಗಳನ್ನು ತೆರೆಯಬೇಕು. ಈಗಷ್ಟೆ ಓದಿದೆ....

Hope springs eternal in the human breast
Man never is but is always to be blessed

..:.Pope

ಅಂಥ ಒಂದು ಆಶಾವಾದ ನಮ್ಮನ್ನು ಮುನ್ನಡೆಸುತ್ತದೆ....ಮುನ್ನಡೆಸ ಲೇಬೇಕು. ಆದ್ದರಿಂದ ಎಲ್ಲಾ ಜೀವನವಾಹಿನಿಯೂ ಮುಂದುವರಿಯುವುದು ಅನಿವಾರ್ಯ. ಆದರೂ ಎಲ್ಲರಿಗೂ ಸೋಲು ಇದ್ದದ್ದೆ..."

"ನಿಜ ಪರೀ....! good bye ನಾನಿನ್ನು ಹೊರಡುವೆ ; ನಾಳೆಗೆ ಓದಿಕೊ ಳ್ಳುವುದು ತುಂಬಾ ಇದೆ.

* * * *

ಅನ್ಯಥಾ ಕಾಲದ್ರವ್ಯ ಕಳೆದು ಹೋಗುವುದನ್ನು ನಿಸ್ಸಾಯಕತೆಯಿಂದ ನೋಡುತ್ತಿರುವುದು ನಿಜಕ್ಕೂ ಸಂಕಟ, ನಾವಿರುವ ಸ್ಥಿತಿಯಲ್ಲಿ ಕಾಲವನ್ನು ಸರಿಗಟ್ಟಲಾರೆವು ನಿಜ....ಎನಿಸಿದಾಗಲೇ

"ಪರೀ....ಪರಿಮಳಾ ! ಎಲ್ಲಿದ್ದೀಯಮ್ಮಾ ?"

ಅಮ್ಮ ಏಕೆ ಕರೆದರೋ ಎಂಬುದು ಗೊತ್ತು. ನಾನು ಎದ್ದು ಹೋದೆ. ಒಳಗಡೆ ಬರಲಿರುವ ಬಂಧುಗಳಿಗೆ ಔತಣದ ಏರ್ಪಾಡಿತ್ತು. ನಾನು ಅಮ್ಮ ನೊಂದಿಗೆ ಕೂಡಿಕೊಂಡೆ. ಎಷ್ಟು ಮಾಡಿದರೂ ಮುಗಿಯದಂತಹ ಬದುಕು. ತರತರದ ತಿಂಡಿತೀರ್ಥ, ಬಗೆಬಗೆಯ ಭಕ್ಷ್ಯಗಳ ತಯಾರಿ ಬಹಳ ಹೊತ್ತು ತೆಗೆದುಕೊಂಡಿತು.

ಬಂಧುಗಳು ಬಂದರು. ಆದರದ ಔತಣ ನೀಡಿ ಅತಿಥೇಯರಾದ ನಾವು ಸೈ ಎನಿಸಿಕೊಂಡೆವು. ಅಂತೂ ಆ ದಿನವೆಲ್ಲಾ ವ್ಯರ್ಥ. ಬಂಧುಗಳು ಸಂತಸ ಪಟ್ಟರೂ, ನಮ್ಮ ಶ್ರಮ ಸಾರ್ಥಕವಾದರೂ ಅದರಲ್ಲಿ ಏನೋ ಒಂದು ಕುಂದು ಕಾಣಿಸುತಿತ್ತು. ಏನೆಂಬುದನ್ನು ಮಾತ್ರ ಊಹಿಸಲಾಗಲಿಲ್ಲ.

ನನ್ನ ಏಕಾಂತ ಚಿಂತನೆಯಲ್ಲಿ ಯಾವುಯಾವುದೋ ವಿಚಾರಲಹರಿ ತಲೆ

ಯಲ್ಲಿ ಬಂದು ಹೋಗುತ್ತವೆ. ಈ ಬಂಗಾರದಂತಹ ದೇಶದಲ್ಲಿ ಮಾನವತೆ ಯೊಂದಿಗೆ ಮಾನವ ನಡೆಸುತ್ತಿರುವ ಅನ್ಯಾಯ-ಅನೀತಿ-ಅನಾಚಾರಗಳನ್ನು ಯಾವುದೇ ಮಾನದಂಡದಿಂದ ಅಳೆವರೂ ಕಂಡು ಬರುವ ಮೊತ್ತ ವಿಕೃತಿ. ಆ ವಿಕೃತಿಯಾದರೂ ಎಂಥಾದ್ದು? ಸಂಸ್ಕೃತಿಯ ಸೋಗನ್ನು ಹಾಕಿಕೊಂಡಿರುವ ವಿಕೃತಿ! ಮೇಲು ಮೇಲಕ್ಕೆ ಅನುಪಮ ಬಾಂಧವ್ಯದ ಸೋಗನ್ನು ಹಾಕಿ, ನಗು ಮುಖದ ಮುಖವಾಡ ತೊಟ್ಟು ಗೆದ್ದಲು ಹುಳುಗಳಂತೆ ಬೇರನ್ನು ಸದ್ದಿಲ್ಲದೆ ಕೊರೆಯುವ ಕರ್ಮಾಚಾರ. ಇದು ಇತಿಹಾಸಕಾರರ ದೃಷ್ಟಿಯಲ್ಲಿ, ಅರ್ಥ ಶಾಸ್ತ್ರಜ್ಞರ ತುಲನೆಯಲ್ಲಿ ಒಂದು ಮೈಲಿಗಲ್ಲು ಎನಿಸಬಹುದೇನೋ.... ಅಥವಾ ನಿಜಲಕ್ಷಣವಾಗಿದ್ದರೂ ಇರಬಹುದು. ಅದೇನೇ ಇರಲಿ, ನಾನು ಈ ಎಲ್ಲಾ ಆಂತರಿಕ ವ್ಯಾಪಾರವನ್ನು ಗಮನಿಸುತ್ತಿರುವುದರಿಂದ ಡೈರಿ ಬರೆ ಯುವ ಹವ್ಯಾಸ ಬೆಳೆಸಿಕೊಂಡೆ. ಅದರಲ್ಲಿ ಕೆಲವೇ ಕೆಲವು ಪುಟಗಳನ್ನು ನಿಮ್ಮ ಮುಂದಿಡುವೆ.

ಡೈರಿಯ ಆರಂಭದ ಪುಟ.

ಭಾರತ ಸಂಸ್ಕೃತಿ ವಿಜ್ಞಾನವನ್ನು ಹೃದಯದಲ್ಲಿ ಪೂಜಿಸಿದ ಕಾಲದಿಂದ ನಮ್ಮಲ್ಲಿ ವಿಶೇಷ ಬದಲಾವಣೆಯೇನೂ ಉಂಟಾಗಿಲ್ಲ. ಅಜ್ಞಾನ-ಅವಿದ್ಯೆ-ಕುಟಿಲತೆ-ಕ್ಲೇಶಗಳ ವ್ಯಾಪ್ತಿಯಲ್ಲಿ ಯಾವೊಂದು ಹೆಚ್ಚಿನ ಪರಿಣಾಮ ಮಾಡಿಲ್ಲ ಎಂದು ಒತ್ತಿ ಹೇಳಿದರೆ ಅಪ್ರಕೃತವಾಗದು. ಆದರೂ ಸಹ ನಾವು ಯೋಚಿಸ ಬೇಕಾದುದೂ ಇದೆ. ಅದು ಸ್ತ್ರೀ ಜಾತಿಯ ವ್ಯರ್ಥ ಜೀವನವನ್ನು ಕುರಿತು. ಹಿಂದಿನ ಅಜ್ಞಾನ ಇಂದಿನ ಸುಜ್ಞಾನಗಳಿಗೆ ಮಧ್ಯೆ ಹೆಚ್ಚಿನ ಅಂತರ ಈಗಲೂ ಉಂಟಾಗಲಿಲ್ಲ. ಅದೇ ಆಶ್ಚರ್ಯ! ಒಲೆಯ ಮುಂದೆ ಕುಳಿತು ಬೆಂಕಿಯನ್ನು ಊದಿ ಊದಿ ಪ್ರಜ್ವಲಿಸುವಂತೆ ಮಾಡುತ್ತ ಆತ್ಮ ಜ್ಯೋತಿಯನ್ನು ನಿರ್ಲಕ್ಷ್ಯ ದಿಂದ ನಂದಿಸಿಕೊಳ್ಳುವ ಸ್ತ್ರೀ ಜಾತಿಯನ್ನು ನೋಡಿದರೆ ನಿತ್ಯಸಂಕಟ. ಇವರ ಆತ್ಮೋದ್ಧಾರವಾಗದೆ ಭಾರತ ಸಂಸ್ಕೃತಿಯು ಉಜ್ವಲಿಸುವುದಾಗಲೀ ವಿಶ್ವ ಜಗತ್ತಿನಲ್ಲಿ ಬಹುಮಾನ್ಯತೆಯನ್ನು ಪಡೆಯುವುದಾಗಲೀ ಸಾಧ್ಯವೇ? ಎಂಬ ಪ್ರಶ್ನೆ ಆಗಾಗ ಏಳುತ್ತಲೇ ಇರುತ್ತದೆ? ಉತ್ತರಿಸಬೇಕಾದರೆ ನಮ್ಮ ನಮ್ಮ ಆತ್ಮ ಸಂಸ್ಕಾರವಾಗಲೇ ಬೇಕು.

ಡೈರಿಯ ಮೊದಲ ಪುಟ

ನಮ್ಮ ತಾತ ಸ್ವರ್ಗೀಯ ಶಾಂತಿನಾಥ ಶರ್ಮರು ಮಾಡಿದ 'ಅಗಾಧ ತಪ್ಪು''ಎಂದರೆ ಮಕ್ಕಳಿಗೆ ಅಪಾರವಾದ ಆಸ್ತಿ ಬಿಟ್ಟು ಹೋಗಿದ್ದು ! ತಮ್ಮ ಸಹಧರ್ಮಿಣಿ ಬದುಕಿರುವಂದೇ ಆಸ್ತಿಯನ್ನು ಹಂಚಿ ಉಯಿಲು ಮಾಡುವ ಇಚ್ಛೆ ಹೊಂದಿದ್ದು ಸತ್ಯ. ಆದರೂ ದುರದೃಷ್ಟವಶಾತ್ ಅದು ಸಾಧ್ಯವಾಗ ಲಿಲ್ಲ. ತಮ್ಮ ಪತ್ನೀ ವಿಯೋಗದಿಂದಲೋ ಅಥವಾ ವಿಧಿವತ್ತಾಗಿಯೋ ಅಥವಾ ಮತ್ತಾವ ಕಾರಣದಿಂದಲೋ ಅದು ಮುಂದುವರಿಯುತ್ತಲೇ ಇದ್ದು ಕೊನೆ ಗೊಮ್ಮೆ ಅವರೇ ತೀವ್ರ ಅಪಘಾತಕ್ಕೆ ಸಿಲುಕಿ ಅನಿರೀಕ್ಷಿತವಾಗಿ ಕೊನೆಯುಸಿರೆ ಳೆದರು. ಇದು ಅತ್ಯಂತ ದುರ್ದೈವದ ಸಂಗತಿ.

ಶಾಂತಿನಾಥ ಶರ್ಮರ ಇಬ್ಬರು ಗಂಡು ಮಕ್ಕಳಲ್ಲಿ ಕೃಷ್ಣಶರ್ಮ ಹಿರಿಯರು. ಎರಡನೆಯವರು ಕೀರ್ತಿನಾಥ. ನಾಲ್ಕು ಮಂದಿ ಹೆಣ್ಣು ಮಕ್ಕಳೂ ಇದ್ದಾರೆ. ಅವರ ಕಡೆಗೆ ಸ್ವತಃ ಕೊಡುಗೈ ಚಾಚಲಿಲ್ಲ ತಾತ. ಹೆಣ್ಣು ಮಕ್ಕ ಳಿಗೆ ಸಮಪಾಲು ಕೊಟ್ಟಿದ್ದರೂ ಕರಗದಂತಹ ಆಸ್ತಿ. ಹೆಣ್ಣು ಮಕ್ಕಳು ಪಾಲು ಕೇಳಲಿಲ್ಲವಾಗಿ ಅವರಿಗೆ ಏನೂ ದಕ್ಕಲಿಲ್ಲ. ಹೆತ್ತವರು ಸ್ವರ್ಗಕ್ಕೆ ಏರಿದ್ದೇ ತಡ ಕುಲಪುತ್ರರಲ್ಲಿ ಆಸ್ತಿಗಾಗಿ ಕಚ್ಚಾಟ–ವೈಶಮ್ಯಗಳು ಎಣೆಯಿಲ್ಲ ದಷ್ಟು ಭುಗಿಲೆದ್ದುವು. ಸಂಬಂಧೀಕರು, ಮಿತ್ರರು, ಸಮೀಪವರ್ತಿಗಳು ಹೀಗೆ ಯಾರ್‍ಯಾರೋ ಎರಡೂ ಕಡೆ ಬೆಂಬಲಿಸಿದರು; ಪ್ರಚೋದನೆ ಮಾಡಿದರು; ಹಿತವಾದ ಹೇಳಿದರು. ಅಂತೂ, ಹತ್ತು ಬಗೆಯ ಜನ ಹತ್ತು ರೀತಿಯಲ್ಲಿ ವರ್ತಿಸಿದರು. ಅದರ ದುಷ್ಪರಿಣಾಮ ಯಾವತ್ತೂ ಕುಟುಂಬದಲ್ಲಿ ಸಿಡಿಮದ್ದು ಅಗ್ನಿಜ್ವಾಲೆಯ ಆಸ್ಫೋಟನೆ. ಅಂದಮೇಲೆ ಕೋರ್ಟು ಕಛೇರಿಯ ವ್ಯವ ಹಾರದೊಂದಿಗೆ ಸದಾ ಅವಾಚ್ಯ ಶಬ್ದಗಳ ಅವಾಂತರ; ಕಿವಿಯೆಲ್ಲಾ ಕಿವುಡಾಗು ವಷ್ಟು ದೋಷಾರೋಪಣೆಗಳ ಆವರ್ತನೆ. ಹೀಗೆ ದ್ವಾಪರಯುಗದ ಕುರು ಕ್ಷೇತ್ರವನ್ನೂ ಮೀರಿಸಿತು ನಮ್ಮ ಕುಟುಂಬದ ಕುರುಕ್ಷೇತ್ರ.

ಜ್ಯೇಷ್ಠಪುತ್ರರಾದ ಕೃಷ್ಣ ಶರ್ಮರಿಗೆ ಇಬ್ಬರು ಹೆಣ್ಣು ಮಕ್ಕಳು. ಅವರಲ್ಲಿ ಹಿರಿಯಳಾದ ರಾಧಾಮಣಿ ನನ್ನ ತಾಯಿ. ನನ್ನ ಚಿಕ್ಕ ಅಜ್ಜ ಅಂದರೆ ಕೀರ್ತಿ ನಾಥರಿಗೆ ಮೂವರು ಗಂಡು ಮಕ್ಕಳು. ಅವರಲ್ಲಿ ಹಿರಿಯವ ಶಾಂತಿನಾಥ್.

ತಾತನ ಸವಿನೆನಪಿಗಾಗಿಯೇ ಅವನಿಗೆ 'ಶಾಂತಿನಾಥ್' ಎಂದು ಹೆಸರಿಸಿದ್ದರು ಹಿರಿಯರು. ಅದಕ್ಕನುಗುಣವಾಗಿ ತಾತನ ಕಲ್ಯಾಣಗುಣಗಳನ್ನು ತನ್ನಲ್ಲಿ ಅಳವಡಿಸಿಕೊಂಡಿದ್ದ ಶಾಂತಿನಾಥ್. ಮೃದುಭಾಷಿ, ಶಾಂತಿಪ್ರಿಯ, ಸ್ನೇಹಪರ ಹೀಗೆ ಎಷ್ಟಾದರೂ ಬಣ್ಣಿಸಬಹುದು ಅವನ ಸಜ್ಜನಿಕೆಯನ್ನು. ಸಧ್ಯ ನಮ್ಮ ನಮ್ಮ ಹಿರಿಯರು ಎಷ್ಟೇ ಬಡಿದಾಡಲಿ, ಇನ್ನೆಷ್ಟೇ ದ್ವೇಷಸಾಧನೆ ಮಾಡಲಿ ಈ ಎರಡೂ ಮನೆಯ ಮಕ್ಕಳಲ್ಲಿ ಅದು ಲಕ್ಷ್ಯಕ್ಕೇ ಬರುತ್ತಿರಲಿಲ್ಲ. ಮನೆಯಿಂದ ಹೊರಗಡೆ ಎಲ್ಲೆಲ್ಲಿಯೂ, ಯಾವಾಗಲೂ ಸಂಧಿಸುವ ಪ್ರಸಂಗಗಳಿಗೆ ಕೊರತೆ ಯಿರುವುದಿಲ್ಲ. ಆಗ ನಾವೆಲ್ಲರೂ ಒಂದಾಗಿ ಕೂಡಿ ನಕ್ಕು ನಲಿದು ಕಾಲ ಹರಣ ಮಾಡುತಿದ್ದುದು ಬಂಧು-ಜೀವ ಸಹಜವಾದ ಸ್ನೇಹಸಲಿಲ ಶೈಲಿಯಲ್ಲಿ.

ಶಾಂತಿನಾಥನಿಗೆ ನಾನೆಂದರೆ ಪಂಚಪ್ರಾಣ. ಅಕ್ಕನ ಮಗಳು ಎಂದು ಮಾತ್ರವಲ್ಲ, ಏನೋ ಒಂದು ರೀತಿಯ ಆತ್ಮೀಯತೆ, ಇನ್ನೇನೋ ಒಂದು ಬಗೆಯ ಸಂಜೀವನಾನುಬಂಧ, ಸ್ನೇಹಾನುರಾಗದ ಮಧುರ ಮೈತ್ರಿ, ಎಂದು ಬಿಟ್ಟರೆ ವಿಷಯ ನಿರೂಪಣೆ ಸ್ಪಷ್ಟ. ಅವನು ಓದಿದ್ದು ಇಂಜನಿಯರಿಂಗ್. ಅದರ ವಿಜ್ಞಾನ ವಿಭಾಗದಲ್ಲಿ ಮಂಡಿಸಿದನೆಂದರೆ ಹೊತ್ತು ಉರುಳಿದುದರ ಪರಿವೆಯೇ ಇರದಂತಹ ಭಾವಾತ್ಮಕ ಶ್ರದ್ಧೆ-ಸಂಯೋಜನಾ ಮೈತ್ರಿ. ಅಂದಮೇಲೆ ಅಂತಹ ಬಂಧುವನ್ನು ಮನೆಗೆ ಕರೆಯುವಂತಿಲ್ಲವಲ್ಲಾ ಎಂಬುದೊಂದು ಪರಮ ಸಂಕಟ ನಮ್ಮ ಮನಃಪ್ರಾಣಗಳಲ್ಲಿ.

* * * *

ಡೈರಿಯ ಎರಡನೆಯ ಪುಟ

ದಿನಗಳ ಗಾಲಿ ಯಥೋಚಿತವಾಗಿ ಉರುಳುತ್ತಿವೆ. ಕಾಲಮಾನಕ್ಕೆ ಯಾರ ಭಂಗ ಬವಣೆಯಾಗಲೀ ಸುಖಸಂತೋಷವಾಗಲೀ ಲಕ್ಷ್ಯಕ್ಕೆ ಬರುವುದುಂಟೇ? ತಾನಾಯ್ತು ತನ್ನ ನಾಗಾಲೋಟವಾಯ್ತು. ಅದರೊಂದಿಗೆ ಪೈಪೋಟಿ ಹೂಡದ ಹೊರತು ಯಾರೂ ಗೆಲ್ಲಲಾರರು. ನಮ್ಮವರ ಕಾಲಮಾನ ಕೇವಲ ಕಚ್ಚಾಟದಲ್ಲಿ ವ್ಯರ್ಥವಾಗುತಿದ್ದರೆ ಏನೆನ್ನೋಣ? ಇರಲಿ, ನಾನು ಕ್ರಮವತ್ತಾಗಿ ಸೈನ್ಸ್ ಕಾಲೇಜಿನ ಪಧವೀಧರೆಯಾದೆ. ಇನ್ನೂ ಚಿಕ್ಕವಯಸ್ಸು,

ಮುಂದೆ ಓದುವ ಅತೀವ ಇಚ್ಛೆ. ಆದರೆ ಮನೆಯಲ್ಲಿ ಅದಕ್ಕೆ ತದ್ವಿರುದ್ಧ. ಏನು ಮಾಡಲಿ ? ಎಂಬ ಪ್ರಶ್ನೆ ಎದುರಾಯಿತು.

ಸಂಜೆ ಹೊರಹೋದಾಗ ಶಾಂತಿನಾಥನ ಭೇಟಿ ಅನಿರೀಕ್ಷಿತವಾಗಿ ಒದಗಿತು. ಅವನು ಮಂದಸ್ಮಿತನಾಗಿ ಅನುನಯದಿಂದ ಪ್ರಶ್ನಿಸಿದ. "ಏನು ಪರಿ ? ಮುಂದೇನು ಮಾಡುತ್ತಿ ?"

"ನೀನೇ ಹೇಳಬೇಕು. ಏನು ಮಾಡಲಿ ಹೇಳು."

"ನಿನ್ನ ಅಭಿಪ್ರಾಯವೇ ಮುಖ್ಯ. ನನ್ನನ್ನು ಕೇಳಿದರೆ ಹೇಗೆ ?"

ಅವನ ಸಲ್ಲಕ್ಷಣವಾದ ಮುಖಬಿಂಬವನ್ನು ಲಕ್ಷ್ಯವಿಟ್ಟು ನೋಡುತ್ತ ನುಡಿದೆ "ಅದರಲ್ಲಿ ತಪ್ಪೇನು? ನಾನು ಆತ್ಮೀಯರನ್ನು ಕೇಳದೆ ಹೆಜ್ಜೆ ಮುಂದಿಡಲಾರೆ."

"ಅಕ್ಕ-ಭಾವ ಏನು ಹೇಳುತ್ತಾರೆ ?"

"ಅವರದು ಹಳೇ ಪುರಾಣ ಇದ್ದೇ ಇದೆಯಲ್ಲ...."

"ಮದುವೆ...." ದನಿ ಅಷ್ಟಕ್ಕೇ ತುಂಡುಗಡಿಯಿತು. ಏನೋ ಒಂದು ಬಗೆಯಲ್ಲಿ ಕಂಠ ಭಾಷ್ಪರುದ್ಧವಾದಂತೆ ಸುಮ್ಮನಾದ.

ನಾನು ಆಶ್ಚರ್ಯಚಕಿತಳಾಗಿ ಹುಬ್ಬೆತ್ತಿ ಅವನೆಡೆಗೆ ನೋಡಿದೆ.

ಅವನು ಎದೆಯಾಳದಿಂದ ನಿಟ್ಟುಸಿರೊಂದನ್ನು ಹೊರಹಾಕಿ,

"ಶುಭೆ ! ನೀನು ಎಂ.ಎಸ್ಸಿ. ಮಾಡಿದರೆ ಲೆಕ್ಚರರಾಗಿ ಕೆಲಸ ಮಾಡಬಹುದು. ವೃಥಾ ಕಾಲಹರಣ ಮಾಡುವುದು ನಾಗರಿಕ ಲಕ್ಷಣವಲ್ಲ."

ಆ ಮಾತಿಗೆ ನಾನು ಒಪ್ಪಿದೆ. ನನ್ನ ಅಭಿಲಾಷೆಯೂ ಅದೇ ಆದುದರಿಂದ ಹೃದಯಪುಷ್ಪ ಅರಳಿತು. ಅತ್ಯಂತ ಸಂತಸಪೂರ್ವಕವಾಗಿ ಅಂದೆ. "ನನ್ನ ಯೋಜನೆಯೂ ಅದೇ ಆಗಿತ್ತು. ನೀನೂ ಸಹ ಅದೇ ಅಭಿಪ್ರಾಯವನ್ನು ನೀಡಿದ್ದು ತುಂಬಾ ಸಂತೋಷ. ನಾನು ಎಂ.ಎಸ್ಸಿ. ಮಾಡುವುದು ಖಂಡಿತ."

ನನ್ನ ಉತ್ಸಾಹವನ್ನು ನೋಡಿ ಸಂತುಷ್ಟನಾಗಿ ಅಂದ "ನೀನು ಬುದ್ಧಿವಂತೆ ಪರಿ ! ನಿನ್ನ ಜೀವನ ತೆರೆದ ಗ್ರಂಥದಂತೆ ಪ್ರಸ್ಫುಟ !"

ಅವನ ಮಾತಿಗೆ ನಾನು ಮರು ನುಡಿಯದೆ ನಸುನಗೆಯನ್ನು ಹರಿಯಬಿಟ್ಟೆ.

ಅನಂತರ ಸ್ವಲ್ಪ ದೂರ ಮೌನಮುದ್ರೆಯಲ್ಲಿ ಸಾಗಿತು ಹಾದಿ.

ರಸ್ತೆಯಲ್ಲಿ ಹರಿದಾಡುವ ವಾಹನಾದಿಗಳ ಅತೀವ ಪೈಪೋಟಿ, ಹಾದಿಗರ ಹಲವಾರು ಭಾಷೆಯ ಮಾತಿನ ಮರ್ಮರ, ಬಾರಿಬಾರಿಗೂ ಎದುರಾಗುವರಿಂದ ಕಾಲಿಗೆ ತೊಡರು. ಇಂತಿಂತಹ ಅಡಚಣೆಗಳಿಂದ ನಡಿಗೆ ಬೇಸರವೆನಿಸಿದರೂ ಸಂಜೆಯ ತಂಪು ಇಳೆಯ ಮೇಲೆ ಹರಡಿದ್ದುದು ಎಷ್ಟೋ ಹಿತ. ಅವನ ಮನದಲ್ಲಿ ಯಾವ ತರ್ಕವಿತರ್ಕ ನಡೆಯುತಿತ್ತೋ ಗಜ ಗಾಂಭೀರ್ಯ ತಳೆದಿದ್ದ. ನಾನೂ ಅವನ ನಿಲುವನ್ನು ಗಮನಿಸಿ ಸುಮ್ಮನಾದೆ. ಸ್ವಲ್ಪ ಹೊತ್ತಿನ ಮೇಲೆ ವಿಜಾತೀಯವಾದ ದನಿಯಲ್ಲಿ ಅವನೇ ಮೌನ ಮುರಿದ–"ಪರೀ ! ಈ ಸಾಲಿನಲ್ಲಿ ನಾನು ಅಮೆರಿಕೆಗೆ ಹೋಗುವ ಯೋಚನೆ ಮಾಡಿರುವೆ. ಅಷ್ಟರೊಳಗೆ ಮದುವೆಯಾಗು ಎಂಬುದು ಅಮ್ಮನ ಅಭಿಪ್ರಾಯ. ಆ ಬಗ್ಗೆ ನಾನೇನೂ ಯೋಚನೆ ಮಾಡಿಲ್ಲ. ನೀನು ಯೋಚಿಸಿ ನೋಡು. ಈ ವಿಚಾರದಲ್ಲಿ ನಿನ್ನ ಅಮೂಲ್ಯವಾದ ಸಲಹೆ ಬೇಕಾಗಿದೆ. ಏನು ಹೇಳುತ್ತಿ ?"

" ಓ ! ಎಂತಹ ಪ್ರಶ್ನೆ? ನಾನು ಅಷ್ಟು ನುರಿತವಳೇ ಶಾಂತಿ ?"

" ಇರಲಿ, ಹಾಗೇ ಅಂದುಕೊ. ಈಗ ನಿನ್ನ ಅಭಿಪ್ರಾಯ ಹೇಳು "

" ನಿನಗೆ ಸೂಕ್ತ ಕಂಡಂತೆ ಮಾಡುವುದು ಒಳ್ಳೆಯದು. ನಾನಿನ್ನೂ ಆ ಎತ್ತರಕ್ಕೆ ಏರಿಲ್ಲ ಬಿಡು. "

ಆಗ ಅವನು ನಲ್ಮೆಯಿಂದ ನನ್ನ ತಲೆಯ ಮೇಲೆ ಕೈಯಿಟ್ಟು "ಒಂದು ವೇಳೆ ನಾನು ನಿನ್ನನ್ನೇ ಮದುವೆ ಆಗುವೆ ಎಂದರೆ ನೀನು ಏನು ಹೇಳುತ್ತಿ ?"

ಆ ಮುಹೂರ್ತದಲ್ಲಿ ನಾನು ದಂಗಾಗಿ ಹೋದೆ. ಅವನಿಂದ ಅಂತಹ ಪ್ರಶ್ನೆಯನ್ನು ನಾನು ನಿರೀಕ್ಷಿಸಿಯೇ ಇರಲಿಲ್ಲ. ನಮ್ಮಲ್ಲಿ ಸೋದರಮಾವನನ್ನು ಮದುವೆಯಾಗಬಾರದು ಎಂದೇನಿಲ್ಲ. ಪ್ರಶ್ನೆ ಅನಿರೀಕ್ಷಿತವಾದುದರಿಂದ ಸಿದ್ಧ ಉತ್ತರವಿರಲಿಲ್ಲ. ಸ್ವಲ್ಪ ನಿಧಾನಿಸಿ "ನೀನು ಸ್ವಲ್ಪ ಕಾಲಾವಕಾಶ ಕೊಟ್ಟರೆ ಯೋಚಿಸಿ ಹೇಳುವೆ" ಎಂದೆ ದನಿ ಭಾರವಾಗಿತ್ತು.

"ಆಗಲಿ."

ಆಗ ಈ ಜಗತ್ತು ಸುಖದುಃಖಗಳ ಕೋಟೆ ಮಾತ್ರವಲ್ಲ ಸಮಸ್ಯಾತ್ಮಕವಾದುದು ಕೂಡ ಎನಿಸಿತು ನನಗೆ. ಯೋಚನೆಯಲೆಯಲ್ಲಿ ಸಿಕ್ಕಿಕೊಂಡೆ.

* * * *

ಡೈರಿಯ ಮೂರನೆಯ ಪುಟ.

ವಾರಗಳೂ ತಿಂಗಳುಗಳೂ ಎಷ್ಟೋ ಸಂದು ಹೋದುವು. ಅವನು ಅಮೆರಿಕೆಗೆ ಹೊರಡುವ ದಿನವೂ ಬಳಿಸಾರಿ ಬಂತು. ಈ ಮಧ್ಯೆ ಅವನನ್ನು ಎಷ್ಟೋ ಬಾರಿ ಸಂಧಿಸಿದ್ದೆ. ಅವನ ಪ್ರಶ್ನೆಗೆ ಮಾತ್ರ ನನ್ನಿಂದ ಉತ್ತರ ಹೇಳಲು ಸಾಧ್ಯವಾಗಲಿಲ್ಲ. ಕಾರಣ ಎರಡೂ ಸಂಸಾರಗಳ ಘೋರ ವಿಷಚಕ್ರ. ಈ ವಿಚಾರವನ್ನು ನಮ್ಮ ಹಿರಿಯರ ಮುಂದಾಗಲೀ ಇತರರ ಮುಂದಾಗಲೀ ಇಟ್ಟು ಬಗೆಹರಿಸಿಕೊಳ್ಳಲು ಬಾಯೇ ಬರಲಿಲ್ಲ. ಅಂದು ಹೊತ್ತಿದ ಬೆಂಕಿಯ ಮಹಾ ಜ್ವಾಲೆ ಇನ್ನೂ ಧಗಧಗಿಸುತ್ತಲೇ ಇರುವಾಗ ಪ್ರಸ್ತಾಪಿಸಲು ನಾಲಿಗೆಯಾದರೂ ಹೇಗೆ ಅಲುಗೀತು? ನನ್ನೊಳಗೇ ಚಿಂತಿಸಿದೆ–ತರ್ಕಿಸಿದೆ, ಆದರೂ ವಿಷಯ ಬಗೆ ಹರಿಯಲಿಲ್ಲ. ಕೊನೆಗೊಂದು ನಾಣ್ಯವನ್ನು ಮೇಲೆಸೆದು ನನ್ನ ಭವಿಷ್ಯವನ್ನು ಅವರ ಮುಖೇನ ಪರೀಕ್ಷಿಸಿದೆ. ಅದರಿಂದ ವ್ಯತಿರಿಕ್ತ ಉತ್ತರ ಬಂದುದರಿಂದ ಅಲ್ಲಿಗೆ ಪೂರ್ಣ ವಿರಾಮಹಾಕಿದೆ.

ಶಾಂತಿನಾಥ್ ಹೊರಡುವ ಮುನ್ನಾದಿನ ಅವನಿಗೆ ನಾವೊಂದು ಪಾರ್ಟಿ ಕೊಟ್ಟುದು ನಿಜ. ಅದೊಂದು ಹೋಟೆಲಿನಲ್ಲಿ, ಮನೆಯಲಲ್ಲ. ಅವನ ನೀಳ ವಾದ ದಟ್ಟಪುಷ್ಟ ಶರೀರ ಒಬ್ಬರಿಂದೊಬ್ಬರಿಗೆ ಚಲಿಸಿ ಕುಶಲ ಪ್ರಶ್ನೆ ಮಾಡಿ ಸುಹಾಸ ಬೀರುತಿದ್ದರೆ ನನಗೆ ಎಷ್ಟು ಆನಂದವಾಯಿತೋ ಅಷ್ಟೇ ಮನಃ ಕ್ಷೋಭೆಯಿಂದ ಜೀವ ಸೋತು ಹೋಯಿತು. ಕಾಲುಗಳ ಬಲ ಕುಗ್ಗಿ ಭಾರ ವಾದ ದೇಹವನ್ನು ಹೊರಲಾರದೇ ಬಳಲಿದೆ. ಅಂತೂ, ಆ ಸಂತೋಷ ಕೂಟ ಕೊನೆಗೊಂಡಿತು. ಹೂ ಹಾರವನ್ನು ಕೊರಳಿಗೆ ಹಾಕಿದ್ದು ನನ್ನ ತಮ್ಮನಾ ದರೂ ಕೈಗೆ ಹೂದಂಡೆಯನ್ನು ಕೊಟ್ಟವಳು ನಾನೇ. ಕಟ್ಟಕಡೆಗೆ ಆತ್ಮೀಯ ವಾಗಿ ಅಭಿನಂದಿಸುವಾಗ ಹೃದಯ ತಂತುಗಳು ಕಟ್‌ಕಟ್ಟನೆ ತುಂಡುಗಡಿದಂತೆ ಭಾಸವಾಯಿತು. ಕಣ್ಣುಗಳು ಹನಿಯುವಂತೆ ತಡೆಗಟ್ಟಿದೆನಾದರೂ ಅವು ನನ್ನನ್ನು ಸಂಪೂರ್ಣ ವಂಚಿಸಿದುವು. ಬಹಳ ಕಷ್ಟದಿಂದ ನನ್ನನ್ನು ನಾನು ಹತೋಟಿಯಲ್ಲಿಟ್ಟುಕೊಂಡು "ನಿನಗೆ ಶುಭಾಶಯವನ್ನೂ ಸುಖ ಪ್ರಯಾಣ ವನ್ನೂ ಹಾರೈಸುವೆ ಶಾಂತಿ!" ಎಂದೆ, ಭಾಷ್ಪರುದ್ಧವಾಣಿಯಲ್ಲಿ. ಒಡಲಬಳ್ಳಿ ಕಸಿವಿಸಿಯ ಗಣಿಯಾಗಿತ್ತು.

ಅವನು ನನಗೆ ಹಸ್ತಲಾಘವ ನೀಡಿ "ತುಂಬಾ ವಂದನೆಗಳು!" ಎಂದ. ಅನಂತರ ಅಭಿನಂದನೆಗಳ ಸುರಿಮಳೆಯೇ ಆಯಿತು.

ಅವನು ಹೊರಡುವಂದು ನಮ್ಮ ಹಿರಿಯರಾರೂ ವಿಮಾನ ನಿಲ್ದಾಣಕ್ಕೆ ಹೋಗದಿದ್ದರೂ ನಾವು ಹೋಗಿ ಬೀಳ್ಕೊಟ್ಟು ಮತ್ತೊಮ್ಮೆ ಶುಭ ಹಾರೈಸಿದಾಗ ಅವನಿಗೆ ಯಾವೊಂದು ಉತ್ತರವನ್ನೂ ಹೇಳದೆ ಎಂತಹ ತಪ್ಪು ಮಾಡಿರುವೆ ಎನಿಸದಿರಲಿಲ್ಲ. ಆದರೆ ಸಮಯ ಮೀರಿತ್ತು : ಏನು ಹೇಳಲೂ ಆಗಲಿಲ್ಲ. ಹೃದಯಬನದ ಪಕ್ಷಿ ಒಳಗಿಂದೊಳಗೇ ನರಳಿನರಳಿ ಕೊರಗಿತು. ನಾನು ಮ್ಲಾನಮುಖಿಯಾಗಿ ಹಿಂದಿರುಗಿದೆ. ಎಲ್ಲಾ ಪ್ರಸಂಗಗಳಂತೆ ಇದೂ ಸಹ ಸಂಭವಿಸಿದ ಮರುಗಳಿಗೆಯಲ್ಲೇ ಪುರಾತನವಾಯಿತು.

*　　*　　*　　*　　*

ಡೈರಿಯ ನಾಲ್ಕನೆಯ ಪುಟ.

ಅನಂತರ ಅದೆಷ್ಟು ದಿನಮಾನಗಳು ಉರುಳಿದುವು ಎಂಬುದನ್ನು ಖಚಿತವಾಗಿ ಅರಿಯಬೇಕಾದರೆ ಕ್ಯಾಲೆಂಡರನ್ನೇ ತಿರುವಿ ಹಾಕಬೇಕಾದೀತು. ಶಾಂತಿನಾಥ ಅಲ್ಲೇ ಬಹಳ ಕಾಲ ನೆಲೆ ನಿಂತು ಐಶ್ವರ್ಯದ ಗಣಿಯಲ್ಲಿ ಮುಳುಗಿ ರಾಜವೈಭವದಲ್ಲಿ ಪ್ರತಿಷ್ಠಿತನಾಗಿದ್ದರೂ ಒಮ್ಮೆ ಯಾದರೂ ಬಂದು ಹೋಗಲಿಲ್ಲ. ಅವನು ಪಾಣಿಗ್ರಹಣ ಮಾಡಿಕೊಂಡದ್ದು ಅಲ್ಲಿಯ ಹೆಣ್ಣನ್ನೇ. ಅಂದಮೇಲೆ ಅವನಿಗೆ ಏಕೆ ಬೇಕು ತಾಯ್ನಾಡಿನ ಅಥವಾ ತನ್ನವರ ಚಿಂತೆ?

ಇನ್ನು ಹೇಳಬೇಕಾದುದು ನನ್ನ ವಿಚಾರವನ್ನೇ. ನಾನು ಎಂ. ಎಸ್ಸಿ. ಮುಗಿಸಿ ಲೆಕ್ಚರರ್ ಆದ ಹೊಚ್ಚ ಹೊಸದರಲ್ಲೇ ನನ್ನ ತಂದೆತಾಯಿಯರನ್ನು ಕಳೆದುಕೊಂಡುದುದು ತೀರ ದುರದೃಷ್ಟಕರ. ಅವರಿಬ್ಬರೂ ಹೋದಮೇಲೆ ಸಂಸಾರದ ಹೊಣೆಗಾರಿಕೆ ಹಿರಿಯಳಾದ ನನ್ನ ಮೇಲೆಯೇ ಬಿತ್ತು. ಇಬ್ಬರು ತಮ್ಮಂದಿರು ಇಬ್ಬರು ತಂಗಿಯರು: ಈ ನಾಲ್ವರ ಜೀವನವನ್ನು ಸರಿಯಾದ ರೀತಿಯಲ್ಲಿ ರೂಪಿಸುವವರೆಗೆ ಸ್ವಚಿಂತನೆ ಮಾಡಬಾರದು ಎಂಬ ಆತ್ಮನಿರ್ಣಯಕ್ಕೆ ತಲೆ ಬಾಗಿದೆ. ಜೀವನ ಮಾರ್ಗಯೋಗದಲ್ಲಿ ನಾನಾ ಕಷ್ಟಕಾರ್ಪಣ್ಯಗಳು ಒಂದುಗೂಡಿಯೇ ಹೆಜ್ಜೆ ಹಾಕಿದುವು. ಹಿರಿಯರ ಆಸ್ತಿ ಕರಗಿದ್ದರೂ

ಾಟ್‌ನ ವ್ಯವಹಾರ ಮುಗಿದಿರಲಿಲ್ಲ. ಈ ಎಲ್ಲದರಲ್ಲೂ ಎದೆಗೆಡದೆ ಹೆಣಗಿ ನ್ನ 'ಕರ್ತವ್ಯ' ವನ್ನು ಪೂರೈಸಿದೆ ಎನಿಸಿದಾಗ ನಿಜವಾಗಿಯೂ ಎದೆಯಲ್ಲಿ ರ್ಷಸೂಚಕವಾದ ಜಯ ನಿನಾದ ಕೇಳಿಸಿತು, ನಲ್ಲೆಜ್ಜೆಗಳ ಮೃದು ಮಂದ ದ್ದಿನಂತೆ. ನಾನು ಉಲ್ಲಾಸ ಉತ್ಸಾಹಗಳ ಬೀಡಾದೆ.

ಕ್ರಮಕ್ರಮೇಣ ಒಡಹುಟ್ಟುಗಳು ಸಂಸಾರಸ್ಥರಾಗಿ ಹೊರಹೋದನಂತರ ನೆಯಲ್ಲಿ ನಾನು ಏಕಾಕಿ. ಇನ್ನು ಮುಂದಿನ ಜೀವನವನ್ನು ಯಾವ ರೀತಿ ಸಿಕೊಳ್ಳಬೇಕು ಎಂಬ ಸಮಸ್ಯೆಯ ಕಡೆ ಗಮನ ತಂತಾನೇ ಹರಿಯಿತು. ದ ವರ್ಷ ಅಮೇರಿಕಾದ ಕೆಲವು ಯೂನಿವರ್ಸಿಟಿಗಳಿಗೆ ಪಿ.ಹೆಚ್.ಡಿ. ಾಡಲು ಪ್ರವೇಶ ಕೋರಿ ಅರ್ಜಿ ಕಳುಹಿಸಿದ್ದೆ. ಅದರ ಅಭ್ಯಾಸದ ಸಲುವಾಗಿ ಮೂಲ್ಯಗ್ರಂಥಗಳ ಭಂಡಾರದಲ್ಲಿ ಬಹಳ ಹೊತ್ತು ಕಳೆಯುತ್ತಿದ್ದೆ. ಜೀವನ ಗೊಂದು ರೀತಿಯಲ್ಲಿ ರೂಪುಗೊಳ್ಳಹತ್ತಿತು.

ಇತಿಮಧ್ಯೆ, ಶಾಂತಿನಾಥ ಏಳು ವರ್ಷಗಳ ನಂತರ ಮರಳಿ ಮನೆಗೆ ದ. ಮೂರು ತಿಂಗಳು ರಜೆಯ ಮೇಲೆ ಆಗಮಿಸಿದ ಅವನನ್ನು ಬಹುಶಃ ನು ನೋಡಿದ್ದು ಒಂದುವಾರದ ಮೇಲೆಯೇ. ಆಗ ಹೇಗಿದ್ದನೋ ಈಗಲೂ ಗೆಯೇ ಇದ್ದಾನೆ. ಶಾರೀರಿಕವಾಗಿಯಾಗಲೀ ಮಾನಸಿಕವಾಗಿಯಾಗಲೀ ಲ್ಪವೂ ವ್ಯತ್ಯಾಸ ಕಾಣುತ್ತಿರಲಿಲ್ಲ. ಭಾರತೀಯ ಬಣ್ಣಕ್ಕೆ ಚಳಿದೇಶದ ಪ್ಪು ಒಳ್ಳೆಯ ರಂಗೊರೆದಿತ್ತು. ಅವನು ಹಸನಾದ ನಗುಮುಖದಿಂದ ಹಮಯಿಯಾಗಿ ಅಂದ "ಪರೀ! ನಿನಗೀಗ ಬಹಳ ಆರಾಮ? ಎಲ್ಲಾ ಜವಾ ರಿಯನ್ನು ಕಳೆದುಕೊಂಡೆ. ಎಲ್ಲಿಂದರಲ್ಲಿ ಹಾರಬಹುದಾದ ಹಕ್ಕಿ ನೀನು !"

"ನಿನಗೆ ತಾನೆ ಯಾವ ಕಷ್ಟ? ತಾಯಿತಂದೆ. ಬಂಧುಬಳಗ ಯಾವ ತೆಯೂ ಇಲ್ಲವಲ್ಲಾ? ರೆಕ್ಕೆ ಬಲಿತದ್ದೇ ತಡ ಹಾರಿಬಿಟ್ಟೆ! ನಿನ್ನಷ್ಟು ನಿಶ್ಚಿಂತೆ ಂದ ಬದುಕಲು ಇನ್ನಾರಿಗೆ ಸಾಧ್ಯ?"

ಅವನು ಅತ್ಯಾನಂದ ತುಂದಿಲತೆಯಿಂದ "ಕುಟುಂಬ ದೊಡ್ಡದು. ಸ್ಮಂದಿರಿದ್ದಾರೆ ಇನ್ನೆಲ್ಲಿಯ ಚಿಂತೆ?"

"ಹೇಗಿದೆ ನಿನ್ನ ಸಂಸಾರ? ಒಬ್ಬನೇ ಬಂದಿದ್ದೀಯಲ್ಲ, ನಿನ್ನ ಶ್ರೀಮತಿಯ ಕೆ ಕರೆತರಲಿಲ್ಲ? ಬಹುಶಃ ಈ ದೇಶವನ್ನು 'ಕೊಳೆಗೇರಿ' ಎಂದಾಳು ಎಂಬ ಾಚನೆಯಿಂದಲೇ?" ತಿಳಿಹಾಸ್ಯ ಮಿಶ್ರಿತವಾಣಿಯಲ್ಲಿ ಕೇಳಿದೆ ನಾನು.

ಅವನು ಗಂಭೀರಭಾವದಿಂದ ಉತ್ತರಿಸಿದ–"ನಿನ್ನ ಊಹೆ ತಪ್ಪು. ಬಹುಶಃ ನೀನು ಇತ್ತೀಚಿನ ಜೀವಣಿಗೆಯನ್ನು ಅರಿತುಕೊಂಡಿರಲಾರೆ, ಎನಿಸುತ್ತೆ ನನಗೆ."

ನಾನು ಆಶ್ಚರ್ಯಚಕಿತಳಾಗಿ ಅವನ ಮುಖವನ್ನು ನೋಡಿದೆ. ಏನೊಂದೂ ಅರ್ಥವಾಗಲಿಲ್ಲ. ಅವನು ಸ್ವಲ್ಪವೂ ವಿಚಲಿತನಾಗದೆ ಸ್ವಭಾವ ಜನ್ಯವಾದ ನಗುಮುಖದಿಂದ ಅಂದ "ಅಲ್ಲಿಯ ಜೀವನ ಏನು ಕೇಳುತ್ತಿ ಬಿಡು. ಇಂದು ಇಲ್ಲಿ; ನಾಳೆ ಇನ್ನೆಲ್ಲೋ!"

"ಅಂದರೆ....?"

"ಲ್ಹಾರ ಇನ್ನಾರನ್ನೋ ಕಟ್ಟಿಕೊಂಡಳು. ನಾನು ಕೈಮುಗಿದೆ."

ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಅವನು ಧಾರಾಳವಾಗಿ ನುಡಿದ ನುಡಿ ಎಷ್ಟು ವಿಚಿತ್ರವೋ....ಅಷ್ಟೇ ಸಹಜವೂ ಆಗಿತ್ತು. ನಾನು ಮೆಲುದನಿಯಲ್ಲಿ ಉದ್ಗರಿಸಿದೆ–"ಅಯ್ಯೋ ಹತಭಾಗ್ಯ!"

ಅವನ ಒಂದು ಕೂದಲು ಕೊಂಕಲಿಲ್ಲ. ತುಟಿಗಳಲ್ಲಿ ಅಮಾಯಕ ನಗು ನಲಿಯುತ್ತಲೇ ಇತ್ತು. ಒಂದೆರಡು ಕ್ಷಣ ತಡೆದು ತಿಳಿಹಾಸ್ಯ ವಾಣಿಯಲ್ಲಿ ಕೇಳಿದೆ "ಹಾಗಾದರೆ ನಿನಗೆ ಅಪ್ಪ ಅಮ್ಮನ ನೆನಪಾದುದು ಒಂಟಿತನದ ಬೇಸರದಿಂದ?"

"ಅಲ್ಲ–ಅಲ್ಲ" ಅವನು ತಲೆಯಾಡಿಸುತ್ತ ಮುಂದುವರಿದ "ಈ ಪ್ರವಾಸ ಅವಳಿದ್ದಾಗಲೇ ರೂಪಿತವಾದದ್ದು, ಅವಳಿದ್ದಿದ್ದರೆ ಕರೆತರುತ್ತಿದ್ದೆ. ಅವಳಿಲ್ಲ ನಿರಾಳವಾಗಿ ಉಸಿರಾಡುವೆ."

ಅವನ ವಿನಯ ಪೂರ್ಣ ವ್ಯವಹಾರ, ನಗುಮುಖದ ವ್ಯಕ್ತಿತ್ವ ಮಡದಿಯನ್ನು ಆಕರ್ಷಿಸದಿದ್ದುದು ಆಶ್ಚರ್ಯ....ಸಕಲ ಸಂಪತ್ತಿನ ಒಡೆಯನಾಗಿದ್ದು ವೈವಾಹಿಕ ಜೀವನ ಮುರಿದು ಬೀಳಲು ಕಾರಣವೇನಿರಬಹುದು ಎಂಬುದನ್ನು ಊಹಿಸಲಾಗದೆ ಹೋದೆ.

*

ಡೈರಿಯ ಐದನೆಯ ಪುಟ.

ಅಮೆರಿಕ ದೇಶದ ಪರಡು ಯೂನಿವರ್ಸಿಟಿಯಿಂದ ನನಗೆ ಕರೆ

ಬಂದಾಗ ನನ್ನ ಬಂಧುವರ್ಗ-ಸ್ನೇಹವರ್ಗ ಸಮಸ್ತರಿಗೆ ವಿಷಯವನ್ನು ತಿಳಿಸಿ ಅಂತಿಮವಾದ ವಂದನೆಗಳನ್ನು ಸಲ್ಲಿಸಿದಾಗ ಹೃನ್ಮನಗಳು ಮುಗಿಲೆತ್ತರಕ್ಕೆ ಏರಿದ್ದುವೇನೋ ಹೌದು. ತದನಂತರ ಹೊರಡುವ ದಿನ ಬಳಿ ಸಾರಿಬಂದಂತೆ ಮನದಲ್ಲಿ ಕಳವಳ ತುಂಬಿತು. ಹೇಗೋ ಹಾಗೆ ನನ್ನನ್ನು ನಾನೇ ಸಾವರಿಸಿಕೊಂಡು ತಾಯ್ನಾಡಿಗೆ ತೊಯ್ದ ಕಣ್ಣುಗಳಿಂದ ವಿದಾಯ ಹೇಳಿ ಹೊರಟೆ.

ಮೂರು ದಿನಗಳ ಸುಖಕರವಾದ ಪಯಣ ಇಚ್ಛಿತ ತಾಣವನ್ನು ಮುಟ್ಟಿಸಿತು.

ಪರಡು ಯೂನಿವರ್ಸಿಟಿ!

ಆ ಅದ್ವಿತೀಯ ಪ್ರವೇಶದ್ವಾರದಲ್ಲಿಯೇ ಅದರ ಉದ್ದಗಲದ ಮೇಲೆ ಕಣ್ಣಾಡಿಸಿದೆ. ಆ ಭವ್ಯ ಬಂಧುರ ಸರಸ್ವತೀ ಆಲಯ ಕಣ್ಮನಗಳನ್ನು ಸೂಜಿಗಲ್ಲಿನಂತೆ ಆಕರ್ಷಿಸಿತು. ಒಂದೊಂದು ಹೆಜ್ಜೆಯನ್ನು ಮುಂದಿಡುವಾಗಲೂ ಹೃದಯ ಮೃದಂಗ ವ್ಯಾಪ್ತಿಗೆ ಮೀರಿ ಮಿಡಿಯುತಿತ್ತು. ನವಿರು ನಿಮಿರುತಿದ್ದುವು. ದೇಹದಾದ್ಯಂತ ಒಂದು ಗಳಿಗೆ ನಡುಕಂಪನದ ಅಲೆ ಹರಿದಾಡಿ ಹೋಯಿತು. ಮರುಗಳಿಗೆಯಲ್ಲಿ ನನ್ನನ್ನು ನಾನೇ ಸಾವರಿಸಿಕೊಳ್ಳುತ್ತ ಸಾಲುಮೆಟ್ಟಿಲುಗಳನ್ನು ಏರಿ ಒಳಹೊಕ್ಕೆ. ದೇಶವಿದೇಶಗಳ ವಿದ್ವನ್ಮಣಿಗಳೊಂದಿಗೆ ಅನೇಕಾನೇಕ ಭಾರತೀಯರೂ ಕಾಣಸಿಗುತ್ತಾರೆ. ಹಿರಿಯರ ಶ್ರೇಣಿಯಲ್ಲಿ ಅದ್ಭುತ ವಿಚಾರಶೀಲತೆ ಕಂಡುಬರುತ್ತದೆ.

ನನಗೆ ಬಿಡದಿಯಾದ ಕೊಠಡಿಯಲ್ಲಿ ಮೀರಾನಾಯರ್ ಎಂಬಾಕೆಯ ಸಾಂಗತ್ಯ ನನಗೆ ದೊರೆಯಿತು. ಆಕೆ ವಯಸ್ಸಿನಲ್ಲಿ ನನಗಿಂತ ಚಿಕ್ಕವಳಾದರೂ ಬೌದ್ಧಿಕಸ್ತರದಲ್ಲಿ ಚಿಕ್ಕವಳಲ್ಲ; ಅವಳ ಸಹವಾಸ ಅವಳ ಅದ್ಭುತ ಸ್ಫೂರ್ತಿಯ ಪರಿಚಯ ಮಾಡಿಸಿತು. ನಾನು ತುಂಬಾ ಸಂತುಷ್ಟಳಾದೆ. ಅಲ್ಲಿಯ ಸಹೋದ್ಯೋಗಿಗಳು, ಅಲ್ಲಿಯ ಕೆಲಸ, ಅಲ್ಲಿಯ ವಾತಾವರಣ ಒಂದೊಂದೂ ಆಕರ್ಷಣೀಯವೇ. ಒಂದೆರಡು ತಿಂಗಳನಂತರ ಶಾಂತಿನಾಥನನ್ನು ಅನಿರೀಕ್ಷಿತವಾಗಿ ಸಂಧಿಸುವ ಸಂದರ್ಭ ಒದಗಿತು. ಅವನು ಒಮ್ಮೆಲೇ ಆನಂದ-ಆಶ್ಚರ್ಯಗಳ ಒಕ್ಕೂಟವಾಗಿ ಹುಬ್ಬೇರಿಸಿ ನಗೆಮೊಗದಿಂದ ಪ್ರಶ್ನಿಸಿದ "ಪರೀ ನೀನು ಇಲ್ಲಿ?"

"ಹೌದು. ಮೂರು ತಿಂಗಳಿಂದ ಇಲ್ಲಿಯೇ ಇರುವೆ!"

"ಭೇಷ್! ಇದ್ದರೆ ಹೀಗಿರಬೇಕು! ಅಪ್ಪ ನೆಟ್ಟ ಆಲದಮರ ಎಂದು ಅದಕ್ಕೇ ಅಂಟಿಕೊಂಡರೆ ಏನು ಮಾಡಿದ ಹಾಗಾಯಿತು? ನಮ್ಮವರು ಕಲಿಯ ಬೇಕಾದುದು ಇನ್ನೂ ಬಹಳ ಉಂಟು. ನಮ್ಮದು ಇನ್ನೂ ಕೂಪಕೂರ್ಮ ನ್ಯಾಯವೇ ಅಂದರೆ ಏನೆನ್ನುತ್ತಿ?"

ನಾನು 'ಹೌದು' ಎಂಬಂತೆ ತಲೆದೂಗಿದೆ. ತುಟಿಗಳಲ್ಲಿ ಎಳೆನಗು ಮಿನುಗಿ ಮಾಯವಾಯಿತು. ಅವನು ಹೀಗೆಯೇ ಎಂದಾದರೊಮ್ಮೆ ಕಾಣಸಿಗುತ್ತಿದ್ದ. ಅವನ ವಿಭಾಗವೇ ಬೇರೆ. ನನ್ನ ವಿಭಾಗವೇ ಬೇರೆ. ಅವನಿಂದ ಹೆಚ್ಚೇನೂ ನಿರೀಕ್ಷಿಸದಿದ್ದರೂ ನಮ್ಮವನೊಬ್ಬ ಇದ್ದಾನೆ ಎಂಬ ಭರವಸೆ ಮನಸ್ಸಿಗೆ. ಬಹಳ ದಿನಗಳಿಂದ ದೂರವಾಗಿದ್ದ ಬಾಂಧವ್ಯ ಹಿಂದಿನಂತಹ ಮಧುರ ಮೈತ್ರಿಯ ನ್ನೇನೂ ಗಳಿಸಲಿಲ್ಲವಾದರೂ ಅದೊಂದು 'ಕುಂದು' ಎಂದು ನಾನು ಭಾವಿಸಲಾರೆ.

* * * *

ಡೈರಿಯ ಆರನೆಯ ಪುಟ

ಹಗಲೆಲ್ಲಾ ಯೂನಿವರ್ಸಿಟಿಯಲ್ಲಿ ಕೆಲಸ ಮಾಡಿ ಕ್ಯಾಂಪಸ್ಸಿಗೆ ಹಿಂದಿರುಗಿದನಂತರ ವಯಸ್ಸು ಮೀರುವ ಮುನ್ನ ಒಳ್ಳೆಯ ಬಾಳಸಂಗಾತಿಯನ್ನು ಸಂಪಾದಿಸಿಕೊಳ್ಳುವುದು ಲೇಸು ಎಂಬ ಆತ್ಮನಿರ್ಣಯಕ್ಕೆ ಮನಗೊಡುತ್ತಿದ್ದೆ. ಒಮ್ಮೆ ಮಿಸಾಲಾಸಾಪುರ್ ಜಸವಂತಸಿಂಗ್ ಎಂಬ ಪ್ರೊಫೆಸರನ್ನು ನನಗೆ ಪರಿಚಯಿಸಿದಳು. ಅವನು ಆದೇ ತಾನೆ ಪಿ.ಹೆಚ್.ಡಿ. ಮುಗಿಸಿ ಪ್ರೊಫೆಸರ್ ಹುದ್ದೆಯನ್ನು ಅಲಂಕರಿಸಿದವನು. ಹೆಚ್ಚು ಕಡಿಮೆ ನನ್ನಷ್ಟೇ ವಯಸ್ಸು. ಲಕ್ಷಣವಂತ; ಆಚಾರ-ವ್ಯವಹಾರಗಳಲ್ಲಿ ಎಲ್ಲರ ಮೆಚ್ಚುಗೆ ಪಡೆದ ಗುಣಾಢ್ಯ.

ಅವನೊಂದಿಗೆ ಆರೇಳು ತಿಂಗಳು ನಿಕಟಸಂಪರ್ಕ ಹೊಂದಿ ಪರಸ್ಪರ ಅರಿತುಕೊಂಡನಂತರ ಅವನೊಂದಿಗೆ ಬಾಳುವೆ ಹೂಡಬಹುದು ಎಂಬ ಅಂತ್ಯ ತೀರ್ಮಾನಕ್ಕೆ ಬಂದಾಗ ನಿಜವಾಗಿಯೂ ನನ್ನ ಹೃದಯ ಅರಳಿ ಹೂವಾಯಿತು. ಅವನಿಗೂ ಅಷ್ಟೆ; ನನಗೂ ಸ್ವರ್ಗಕ್ಕೂ ಪರಿಮಳೆಯೇ 'ಮಧ್ಯ ಸೇತು' ಎಂಬಷ್ಟು ಮನಃಪೂರ್ತಿ ಸಮಾಧಾನ. ಆ ದೂರ ಪ್ರಾಂತ್ಯದ

ನಮ್ಮವರಿಲ್ಲದ ತಾಣದಲ್ಲಿ ಹೀಗೊಂದು ಶುಭಸಂಬಂಧ ಕೂಡಿಬಂದುದು ನನ್ನ ಸುದೈವ. ನಾನು ನಿಜಜೀವನಕ್ಕೆ ಸಜ್ಜಾಗುವುದರೊಂದಿಗೆ ಸುಂದರ ಕನಸುಗಳನ್ನು ಕಟ್ಟತೊಡಗಿದೆ. ಲೌಕಿಕ ವ್ಯಾಪಾರಕ್ಕೆ ಅನುಗುಣವಾಗಿ. ಶೀರ ಸರಳ ಸಮಾರಂಭಕ್ಕೆ ಉಭಯತ್ರರೂ ಒಪ್ಪಿದೆವು.

ಅದೇ ಕ್ಯಾಂಪಸ್ಸಿನಲ್ಲಿ ಎಲ್ಲರಿಗೂ ಹೊಂದಿದ ಬಿಡುವಿನ ವೇಳೆಯಲ್ಲಿ ನಮ್ಮ ಸಂಲಗ್ನದ ಏರ್ಪಾಡಾಯಿತು. ಎರಡೂ ಕಡೆಯ ಸನ್ಮಿತ್ರರಿಗೆ ಲಗ್ನ ಪತ್ರಿಕೆಗಳು ಮುಟ್ಟಿದುವು. ಇದರಲ್ಲೆಲ್ಲಾ ಮೀರಾನಾಯರ್ ವಹಿಸಿದ ಪಾತ್ರ ಬಹಳ ಮುಖ್ಯ. ನಮ್ಮ ಸ್ನೇಹಸಂಪತ್ತಿಗೆ ಅಮೃತವೆರೆದು ಶುಭಹಾರೈಸುವಲ್ಲಿ ಆಕೆಯೇ ಮುಂದೆ. ಅವಳ ಉತ್ಸಾಹ ಜಡವನ್ನೂ ಜಾಗ್ರತಗೊಳಿಸುತ್ತದೆ; ಅವಳ ಸ್ನೇಹ ಅಚೇತನವನ್ನೂ ಚೇತನಗೊಳಿಸುತ್ತದೆ.

* * * *

ಡೈರಿಯ ಎಳನೆಯ ಪುಟ

ಶುಭದಿನ ಬಳಿಸಾರಿ ಬಂತು. ಈ ದಿನ ಹತ್ತು ಗಂಟೆಗೆ ಶುಭಮುಹೂರ್ತ.

ಪ್ರಾತಃಸೂರ್ಯ ಉಜ್ವಲೋಜ್ವಲವಾದಂತೆ, ಪಕ್ಷಿಗಳ ಸುಪ್ರಭಾತ ಅತ್ಯಂತ ಸುಮಧುರವಾದಂತೆ ತಂಗಾಳಿಯು ತೀಟ ಇಮ್ಮಡಿಸಿದಂತೆ ವಿಶ್ವಜಗತ್ತೇ ಮಧುಮಯವಾಗಿ ತೋರಿತು. ನಾನು ಆನಂದಪುಳಕಿತಳಾದೆ.

ಟ್ರಿನಿಟಿ ಹಾಲ್ ತುಂಬಾ ದೊಡ್ಡದು. ಆಹ್ವಾನಿತರು ಅಲ್ಪ ಆದರೂ ಸಂಕೋಚವಿಲ್ಲ. ಮೇಜಿನ ಮಧ್ಯೆ ಮದುವೆಯ ಕೇಕ್ ಅಣಿಯಾಗಿತ್ತು. ಜೊತೆಗೆ ಇತರ ನಿಹಿಕಾರಗಳು. ಬಿಸ್ಕತ್ತು ಜಹ. ಹಣ್ಣು ಹೂವುಗಳು ಇಷ್ಟಿಷ್ಟು ಅತಿಥಿಗಳಿಗೆ ಆತಿಥೇಯರ ಆತಿಥ್ಯ.

ಅತಿಥಿಗಳು ಆಗಲೇ ಅಲ್ಲಿ ಕಲೆಯತೊಡಗಿದ್ದಾರೆ. ಹೆಂಗಳೆಯರು ರಂಗುರಂಗಿನ ಪೋಷಾಕಿನಲ್ಲಿ ಕಾಣಿಸಿಕೊಂಡರು. ಎಲ್ಲರನ್ನೂ ಆತ್ಮೀಯತೆಯಿಂದ ಬರಮಾಡಿಕೊಂಡಾಗ ನನ್ನ ಕೈಕುಲುಕಿ ಶುಭ ಹಾರೈಸಿ ಕೆನ್ನೆಗೆ ಹೂಮುತ್ತನೊತ್ತಿದರು. ಆ ಮುಹೂರ್ತದಲ್ಲಿ ನನ್ನ ಒಡಹುಟ್ಟಿಗಳು ಮತ್ತು

ಬಂಧುವರ್ಗದ ಸ್ಮರಣೆಯಿಂದ ಒಂದೆರಡು ಕ್ಷಣ ಮನೋದೇವತೆಗೆ ಆತ್ಮನಿವೇದನೆ ಮಾಡಿಕೊಂಡೆ.

"ಅರೆ! ಗಂಟೆ ಒಂಭತ್ತಾದರೂ ವರನ ಸುಳಿವೇ ಇಲ್ಲವಲ್ಲಾ, ಅವನೆಲ್ಲಿ?" ಎಂದಳು ಮೀರಾನಾಯರ್. ಕಣ್ಣುಗಳಲ್ಲಿ ಆಶ್ಚರ್ಯದ ಛಾಯೆ ಮಿನುಗಿ ಮಾಯವಾಯಿತು.

ನನಗೂ ಅದರ ನೆನಪು ಮೂಡಿದ್ದರೂ ಬಾಯಿ ಬಿಟ್ಟಿರಲಿಲ್ಲ ಅಷ್ಟೆ. ಕಾತರ ದೃಷ್ಟಿ ಬಾಗಿಲ ಕಡೆ ಹರಿಯಿತು. ಅತಿಥಿಗಳು ಆಗಮಿಸುತಿದ್ದಾರೆ. ಜಸವಂತ್ ಮಾತ್ರ ಕಾಣಿಸಲಿಲ್ಲ. ಇಷ್ಟರಲ್ಲೇ ಬರಬಹುದು ಎಂದುಕೊಂಡರೂ ಎದೆಯಾಳದಲ್ಲಿ ಕಳವಳದ ಮೊಳಕೆ ಒಡೆಯಿತು. ಅತಿಥಿಗಳೆಲ್ಲಾ ಮೇಜು ಕುರ್ಚಿಗಳನ್ನು ಆಕ್ರಮಿಸಿದರು. ನಗೆ ಮಾತುಗಳು ಹಾಸ್ಯದ ಚಟಾಕಿ ಹಾರಿಸುತ್ತಿದ್ದುವು. ಮಾಡು ಮುಟ್ಟುವಂತೆ ಧ್ವನಿ ಮೊಳಗಹತ್ತಿತು.

ಹೊತ್ತು ಮಿಂಚಿ ಶುಭಮುಹೂರ್ತ ಬಳಿಸಾರಿ ಬಂತು.

ಆದರೂ ವರನ ಸುಳಿವಿಲ್ಲ. ಜೊತೆಗೆ ಶಾಂತಿನಾಥನೂ ಇಲ್ಲ. ಪ್ರತೀಕ್ಷೆಯಲ್ಲಿ ಕಣ್ಮನಗಳು ದಣಿದುವು. ಅವರನ್ನು ಕರೆತರಲು ಕೆಲವರು ಓಡಿದರು. ತಾಸೊಂದು ಉರುಳಿತು. ಎಲ್ಲೆಲ್ಲಿ ಹುಡುಕಿದರೂ ಸಿಗದೆ ಅತ್ಯಂತ ನಿಸ್ಸಾಯಕ ಸ್ಥಿತಿಯಲ್ಲಿ ಸಂಜನಿಸಿದ ಕಂಬನಿಯನ್ನು ಕಣ್ಣಿನ ಕರಂಡದಲ್ಲೇ ತಡೆ ಹಿಡಿದು ಶಾಂತ ಸ್ವಭಾವದ ಮುಖವಾಡ ತೊಟ್ಟೆ. ಮೀರಾ ಒತ್ತಾಸೆಗಾಗಿ ನನ್ನನ್ನು ಬಿಟ್ಟು ಕದಲಲಿಲ್ಲ. ನಿಜವಾದ ಸಂಗಾತಿ ಬಳಿಯಿರುವಾಗ ಮತ್ತೇಕೆ ಚಿಂತೆ?

ಕರೆಯಲು ಹೋದ ಕೊನೆಯ ವ್ಯಕ್ತಿಯೂ ಹಿಂದಿರುಗಿದ ಮೇಲೆ ಗೆಳೆಯರು ಗುಂಪುಗುಂಪಾಗಿ ಮನಸ್ವೀ ವ್ಯಾಖ್ಯಾನ ಮಾಡಿದರು. ಕೆಲವರು ಅಂತರಂಗವಾಗಿ, ಇನ್ನು ಕೆಲವರು ಬಹಿರಂಗವಾಗಿ. ಅಂತೂ, ಕೊನೆಯ ಅಧ್ಯಾಯವಾಗಿ ಲಗ್ನರಹಿತ ಟೀ ಪಾರ್ಟಿ ನಡೆಯಿತು. ಮದುವೆಯ ಕೇಕನ್ನು ಮೀರಾ ಕತ್ತರಿಸಿ ಹಂಚಿದಳು. ನನಗಿಂತಲೂ ಅವಳಿಗಾದ ಮನೋವೇದನೆ ಪರಮಾತ್ಮನಿಗೆ ಸಂವೇದ್ಯ. ಎಲ್ಲಾ ಅತಿಥಿಗಳೂ ಖಿನ್ನಮುಖದಿಂದ ನನಗೆ ಅತೀವ ಅನುತಾಪವನ್ನು ವ್ಯಕ್ತಪಡಿಸಿ ಹೊರಟು ಹೋದರು.

ನಾನು ಎಲ್ಲರಿಗೂ ಒಂದೇ ಮಾತಿನಲ್ಲಿ ಉತ್ತರಿಸಿದ್ದು "ದೈವೇಚ್ಛೆ!"

* * * *

ಡೈರಿಯ ಎಂಟನೆಯ ಪುಟ

ಶಾಂತಿನಾಥ್ ! ಒಂದು ಕಾಲದಲ್ಲಿ ನೀನು ಎಷ್ಟು ಒಳ್ಳೆಯವನಿದ್ದೆ ? ಎಷ್ಟು ಸ್ನೇಹ ಕುಶಲಿ? ಈಗಣ ನಿನ್ನ ಗುಣವೇನು? ಈ ಪಾಶ್ಚಾತ್ಯ ಸಂಸ್ಕೃತಿಯ ಸಂಸರ್ಗವೋ ಅಥವಾ ಮತ್ತಾವುದೋ ನಿನ್ನ ತಲೆಯನ್ನು ಕೆಡಿಸಿರಬಹುದು. ಏನೇ ಇರಲಿ, ನಿನಗೆ ನಾನು ಹೇಳುವುದು ಇಷ್ಟೇ. ವಂಶೀಕವಾದ ಅಥವಾ ವೈಯಕ್ತಿಕವಾದ ಸೇಡನ್ನು ಈ ರೀತಿಯಲ್ಲಿ ತೀರಿಸಿಕೊಂಡದ್ದು ನಿನಗೆ ಸರಿಯೆನಿಸಿರಬಹುದು. ಪರಮಾತ್ಮ ಖಂಡಿತ ಇದನ್ನು ಮೆಚ್ಚಲಾರ.

ಈ ಸಂದರ್ಭದಲ್ಲಿ ಹಿರಿಯ ಸ್ರಷ್ಟಾರನ ನುಡಿಗಟ್ಟೊಂದು ನೆನಪಿನ ಚಾಕಟ್ಟಿನಲ್ಲಿ ಸುಸುಳಿ ಬಂದು ದೇಹದಾದ್ಯಂತ ನರನಾಡಿಗಳಲ್ಲಿ ಸಾಂತ್ವನದಿಂದ ಹರಿದಾಡುತ್ತಿದೆ. ಅದನ್ನಿಲ್ಲಿ ವಿಷದೀಕರಿಸುವುದು ಉಚಿತ.

When the one Great Scorer comes
to write against your name
He marks-not that you won or lost
But how you played the game

* * * *

ಡೈರಿಯ ಒಂಭತ್ತನೆಯ ಪುಟ

ಜಯವಂತ್‌ಸಿಂಗ್ ! ಹೆಣ್ಣಿಗೆ ಗಂಡಿನಾಶ್ರಯವಿಲ್ಲದೆಯೇ ಬದುಕು ಅಸಾಧ್ಯ ಎಂಬುದೊಂದು ಕ್ಷುಪ್ರ ಭಾವನೆ! ಅದನ್ನು ಎಂದೋ ಕಂಡುಕೊಂಡಿದ್ದರೂ, ನನ್ನ ಮನಃಸ್ಥೈರ್ಯದಿಂದ ಜೀವನವನ್ನು ಸತ್ಯ ಸುಂದರವಾಗಿ ನಡೆಸಿಕೊಂಡು ಬಂದಿದ್ದರೂ ಈಗಣ ಸಂದರ್ಭದಲ್ಲಿ ನಿನಗೆ ಮನಸೋತುದು ಖಂಡಿತ ನನ್ನ ತಪ್ಪು.

ಇರಲಿ, ನೀನು ಇಷ್ಟೊಂದು ನೀತಿಬಾಹಿರ–ಧರ್ಮಬಾಹಿರ ಎಂಬುದನ್ನು ನಾನು ಕಂಡುಕೊಳ್ಳದಿದ್ದುದಕ್ಕೆ ನನ್ನನ್ನು ನಾನು ಶಪಿಸುವೆನೇ ಹೊರತು ನಿನ್ನನ್ನಲ್ಲ. ಗಂಡು ಜಾತಿ ಎಂದು ಕೇವಲ ಗಂಡುಜಾತಿಯನ್ನೇ ಹಳಿಯುವ ದುರ್ಭಾವನೆಯೂ ಇಲ್ಲ. ನಾಸ್ತಿ ಆತ್ಮ ಸಮಾಬಲಂ.

ಇಗೋ! ನಿನಗೆ ಕೊನೆಯ ನಮಸ್ಕಾರ.

ಜಾರ್ಜ್ ಕಾರ್ನೆಗಲ್

★

Nobility carries its obligations

—Duc De Lewis

ಸಾಲ್ಟ್‌ಲೇಕ್ ನಗರಿಯ ಅದ್ಭುತ ಆವರಣದ ಭೂಮಿಯಲ್ಲಿ—
ಅತ್ಯದ್ಭುತ ಭೀಘಾಂ ಗಣಿಯ ಭಯಾನಕ ಮಹಾನ್ಯಾಸ....

ಪ್ರಪ್ರಥಮ ನೋಟಕ್ಕೆ ಎದೆ ಜಲ್ಲೆನಿಸಿ ರೋಮ ರೋಮವೂ ನಿಮಿರುವಂತಹ ಅಮೋಘ ಭಯಂಕರ ದೃಶ್ಯ. ಅದರ ಮಹಾನ್ಯಾಸ ವಿನ್ಯಾಸಗಳು ಅಪೂರ್ವ. ಅದ್ಭುತ ಆಳ-ಉದ್ದಗಲ ಪಕ್ಷಿನೋಟಕ್ಕೂ ಸಿಲುಕುವುದು ಕಷ್ಟವೇ. ಒಳಗಿಂದೊಳಗೇ ಹರಿವ ಹಾದಿಗಳು, ಅಂತರ್ಗುಹೆಗಳು, ಗಣಿಗಳು ಅಲ್ಲಿನ ಕಾರ್ಮಿಕ ವರ್ಗಕ್ಕೆ ಬಿನಾ ಮತ್ತಾರಿಗೂ ಅಷ್ಟು ಸುಪರಿಚಿತವಲ್ಲ. ಅಂಧಾಕಾರದ ಗಣಿಯಲ್ಲಿ ಹೊಮ್ಮಣ್ಣು ಬೆಳ್ಮಣ್ಣು ಕೆಮ್ಮಣ್ಣುಗಳ ಅಪಾರ

ಪಟ್ಟಿಪಟ್ಟಿಯಾಗಿ ದೃಗ್ಗೋಚರಿಸುವಾಗ ನಮ್ಮ ಅಂತರತರವೆಲ್ಲಾ ವರ್ಣಾಂತರವಾದರೆ ಆಶ್ಚರ್ಯವೂ ಅಲ್ಲ; ವಿಶೇಷವೂ ಅಲ್ಲ.

ಗಣಿಯ ಮಹಾದ್ವಾರಕ್ಕೆ ಸಮೀಪವಾಗಿಯೇ ಆಫೀಸು. ಸುತ್ತ ಮುತ್ತಣ ಕಿಟಕಿ ಬಾಗಿಲುಗಳನ್ನು ಮುಚ್ಚಿದ್ದರೂ ಒಳಗೆಲ್ಲಾ ಧೂಳಿನ ಆವಾಸ ಸ್ಥಾನ. ಗಣಿಯ ವಿಚಾರ ಸಾಹಿತ್ಯ ಕಪಾಟುಗಳಲ್ಲಿ ಮೇಜಿನ ಮೇಲೆ ತುಂಬಿರುವ ದೃಶ್ಯ ದೃಷ್ಟಿಗೆ ಬಂಡೆದ್ದು ಬೀಳುತ್ತದೆ. ಅಷ್ಟೊಂದು ಸಾಹಿತ್ಯದ ವಾರಾಶಿ.

ಅಲ್ಲಿನ ಮ್ಯಾನೇಜರ್ ಆಗಿದ್ದ ಪೀಟರ್ ಮೇಜಿನ ಮುಂದೆ ಕುಳಿತು ಕಾಗದ ಪತ್ರಗಳ ಮೇಲೆ ಗಮನ ಹರಿಸಿದ್ದ. ಮುಖದ ಮೇಲೆ ಬೆವರಿನ ಹನಿಗಳು ತುಂತುರು ತುಂತುರಾಗಿ ಮೂಡಿದ್ದರೂ ಒರಸಿಕೊಳ್ಳುವಷ್ಟು ವ್ಯವಧಾನ ಇರಲಿಲ್ಲವೇನೋ....ಬೆವರಿನ ಹನಿಯೊಂದು ಬರೆಯುತಿದ್ದ ಕಾಗದದ ಮೇಲೆ ತಟ್ಟನೆ ಬಿದ್ದಾಗ ಜೇಬಿನಿಂದ ಕರವಸ್ತ್ರವನ್ನು ತೆಗೆದು ಕಾಗದದ ಮೇಲಿನ ಹನಿಯನ್ನು ಒತ್ತಿ ತೆಗೆದ ಬಳಿಕ ಮುಖ, ತಲೆ, ಕತ್ತುಗಳನ್ನು ಒರಸಿಕೊಂಡ. ಕೆಂಪು ವಸ್ತ್ರ ಇನ್ನಷ್ಟು ಕೆಂಪಾದುದು ಸಹಜವೇ. ಸ್ವಲ್ಪಹೊತ್ತು ಆಲೋಚನೆಯಲ್ಲಿ ಉರುಳಿ ಹೋಯಿತು. ಕರೆಗಂಟೆಯನ್ನು ಎರಡು ಸಲ ಒತ್ತಿ ಕರೆ ನೀಡಿದೊಡನೆಯೇ ಆಫೀಸ್ ಬಾಯ್ ಒಳ ಬಂದು "ಎಸ್ ಸರ್!" ಎಂದ. ಆಜ್ಞಾಪಾಲಕನಾಗಿ.

"ಈಗಲೇ ಗಣಿಗೆ ಹೋಗಿ ಜಾರ್ಜ ಕಾರ್ಮೆಲ್ಲನನ್ನು ಬರಹೇಳು."

ಅವನು ಹೊರಹೋಗುತ್ತಲೂ ಕೊಂಡು ತರಬೇಕಾದ ಪರಿಕರಣಗಳ ಪಟ್ಟಿಯೊಂದನ್ನು ಮನನ ಮಾಡಿದ. ಅರ್ಧ ತಾಸು ಕಳೆಯುವುದರೊಳಗಾಗಿ ಜಾರ್ಜ ಕಾರ್ಮೆಲ್ ಬಾಗಿಲ ಬಳಿ ಕಟ ಕಟ ಸದ್ದು ಮಾಡಿ ಒಳ ಬಂದು "ಎಸ್ ಸರ್!" ಎಂದ, ನಯವಿನಯಗಳ ವಶೀಭೂತನಾಗಿ; ಮುಖಭಾವ ಅಪ್ಪಣೆಯನ್ನು ನಿರೀಕ್ಷಿಸುತಿತ್ತು.

ಅವನ ಕೆಂಪು ಮುಖ, ಕೆಂಪು ಕೂದಲು ಕೆಂಧೂಳಿನಿಂದ ಆವೃತವಾಗಿತ್ತು. ಜೇಬಿನಿಂದ ದೊಡ್ಡ ಕರವಸ್ತ್ರವನ್ನು ತೆಗೆದು ಮುಖ ತಲೆಯನ್ನು ಒರಸಿಕೊಳ್ಳುತ್ತಲೇ ಮ್ಯಾನೇಜರನ ಅಪ್ಪಣೆಯನ್ನು ನಿರೀಕ್ಷಿಸಿದ. ಮುಖ ಮೈಗಳಲ್ಲಿ ಎದ್ದು ಕಾಣುವಷ್ಟು ಆಯಾಸದಿಂದ ಬಳಲಿದ್ದ. ಗಣಿಯಲ್ಲಿ

ದುಡಿತ. ಕೆಂಧೂಳಿನ ಸ್ನಾನ. ಆಗಲೇ ಎಂಟು ತಾಸುಗಳ ಕೆಲಸ ಮುಗಿದು ಮನೆಗೆ ಹೋಗುವ ಸಮಯ. ಸೂರ್ಯ ಮುಳುಗಿ ಎಂದೋ ...ಮನೆಗೆ ಹೋಗುವ ಕೂಲಿಕಾರರ ಗಲಿಬಿಲಿ. ಮಾತಿನ ಮೊರೆತ. ವಾಹನಗಳ ಸದ್ದು. ಸೈರನ್ನಿನ ಕೂಗು ಎಲ್ಲವೂ ಕಲಸುಮೇಲೋಗರವಾದ ಸಂದರ್ಭ.

ಪೀಟರ್ ಪರಿಕರಣಗಳ ಪಟ್ಟಿಯೊಂದಿಗೆ ಐವತ್ತು ಸಾವಿರ ಡಾಲರ್ ನೋಟುಗಳ ಕಟ್ಟನ್ನು ಕೊಟ್ಟು,

"ಇದೋ ಇವು ಅಗತ್ಯವಾಗಿ ಬೇಕಾಗಿವೆ. ಸಾಲ್ಟ್‌ಲೇಕ್ ಸಿಟಿಯಲ್ಲಿ ಸ್ಟಾಕ್ ಇಲ್ಲವಂತೆ. ಟೆಲಿಫೋನ್ ಮಾಡಿ ಕೇಳಿದ್ದಾಯ್ತು. ನೀನು ಈಗಲೇ ಹೊರಟರೆ ರಾತ್ರಿಗೆ ಚಿಕಾಗೋ ತಲುಪುತ್ತಿ. ನಾಳೆ ಮಧ್ಯಾಹ್ನದೊಳಗೆ ವ್ಯಾಪಾರ ಮುಗಿಸಿದರೆ ನಾಳೆ ರಾತ್ರಿಯೊಳಗಾಗಿ ಹಿಂದಿರುಗುತ್ತಿ. ನಾನೂ ಹೊರಡುವ ಯೋಚನೆಯಿತ್ತು. ಯಾಕೋ ದೇಹಸ್ಥಿತಿ ಸರಿಯಿಲ್ಲ. ನೀನೇ ವ್ಯಾಪಾರ ನಿರ್ವಹಿಸಿದರೆ ತುಂಬ ಉಪಕಾರ..."

ಅವನು ಇನ್ನೂ ಏನೇನೋ ಹೇಳಿದ. ಅದಕ್ಕೆಲ್ಲಾ ಮುಖ್ಯ ಕಾರಣ ತನ್ನ ಮೇಲಿನ ಅತೀವ ನಂಬಿಕೆ. ಆ ನಂಬಿಕೆಯಿಂದಲೇ ಕೂಲಿಕಾರ ವೃತ್ತಿಯಿಂದ ಪರ್ಸನಲ್ ಸೆಕ್ರೆಟರಿಯವರೆಗೆ ಹಂತ ಹಂತವಾಗಿ ಏರಿ ಬಂದಿದ್ದ ಜಾನ್ ಕಾರ್ಮೆಲ್ ಒಡೆಯನ ವಿಶ್ವಾಸ-ನಂಬಿಕೆಗಳನ್ನು ಬದಿಗೊತ್ತುವುದು ಕಷ್ಟ. ಆಯಾಸವಿದ್ದರೂ ನಾಲಿಗೆ 'ಒಲ್ಲೆ' ಎನ್ನಲಿಲ್ಲ. ತನುಮನಗಳ ಅತೀವ ಬಳಲಿಕೆಯನ್ನು ತನ್ನಲ್ಲೇ ಹುಗಿದಿಟ್ಟು ಚಿಕಾಗೋ ನಗರದ ದೂರ ಪಯಣವನ್ನು ಮನದಲ್ಲೇ ಅಳೆದು 'ಹೇಗಪ್ಪಾ ನಿರ್ವಹಿಸಲಿ' ಎಂದುಕೊಳ್ಳುತ್ತಲೇ ಮುಗ್ಧ ದುಗ್ಧವಾಣಿಯಲ್ಲಿ 'ಆಗಲಿ' ಎಂದ. ಅಂತರಂಗಿಕವಾಗಿ ಜೀವ ತಳಮಳಿಸುತ್ತಲೇ ಇತ್ತು. ತನ್ನ ಹದಿಹರೆಯದಲ್ಲೇ ಗಣಿ ಕೆಲಸ ಹಿಡಿದವನು. ಅಂದಿಂದಿಗೂ ಶ್ರಮವನ್ನೇ ಪ್ರೀತಿಸಿದ ಕಟ್ಟಾ ಕರ್ಮಗಾರ. ಶರೀರಕ್ಕೆ ಮುಪ್ಪು ಅಡರುತಿದ್ದರೂ ಮುಗಿಯದ ಶ್ರಮ.

ಎರಡು ತಿಂಗಳಿಂದ ಮೂರು ದಿನಗಳ ರಜೆಗಾಗಿ ಕೇಳಿ ಸುಮ್ಮನಾಗಿದ್ದ. ಹಾಗೆ ರಜೆ ಸಿಕ್ಕಿದ್ದರೆ ಹಾಯಾಗಿ ಮಲಗಿಬಿಡಬಹುದು ಎಂಬಷ್ಟು ಆಯಾಸ ಮೈಯಲ್ಲಿ. ಮೇಲಾಗಿ, ಮನೆಗೆ ಹೋಗಿ ಮಡದಿಗೆ ಹೇಳಿಬರುವಷ್ಟು

ಸಮಯವೂ ಇಲ್ಲ, ಏನು ಮಾಡಲಿ? ಎಂಬ ನಾನಾ ಯೋಚನೆಗಳಲ್ಲಿ ತೊಳಲಾಡಿತು ಮನಸ್ಸು.

ಬೊಜ್ಜುಮೈಯಿನ ಗುಜ್ಜು ದೇಹದಲ್ಲಿ ರಕ್ತ ಸಂಚಾರ ಬಿಸಿ ಬಿಸಿಯಾಗಿ ಹರಿಯಿತು.

ಅಪರಾರ್ಥಿಯಲ್ಲಿ ಸೂರ್ಯ ಮುಳುಗಿದರೂ ಹೊಂಗಾಂತಿಯು ಹರವು.

ಹೊರಹೋಗುವ ಕೆಲಸಗಾರರ ಗಡಿಬಿಡಿ.

ಎಷ್ಟೋ ಮಂದಿ ಹೋಗಿದ್ದಾರೆ ಕೂಡ. ಎಲ್ಲರೂ ವಿಶ್ರಾಂತಿ ತೆಗೆದುಕೊಳ್ಳುವ ಸಮಯ. ಈಪ್ಪೊತ್ತು ವಿಶ್ರಾಂತಿಹೊಂದಿ ನಾಳೆ ಹೊರಟರೆ ಹೇಗೆ? ಪ್ರಶ್ನೆ ಎಷ್ಟಾಗಲೇ ಪೀಟರ್ ಬಾಯಿ ತೆರೆದ,

"ನಾಳೆ ಸಂಜೆ ನೀನು ಅಗತ್ಯವಾಗಿ ಇಲ್ಲಿರಬೇಕು, ಇದರಲ್ಲಿ ಯಾವ ವಸ್ತುವನ್ನೂ ಬಿಟ್ಟು ಬರಬೇಡ ಡೊನಾಲ್ಡ್ ಮೆಕಾರ್ಥಿ ಅಂಡ್ ಕಂಪನಿಯಲ್ಲಿ ಎಲ್ಲವೂ ಸಿಗಬಹುದು. ಈಗಲೇ ಹೊರಡು; ಆಯಿತೇ?"

....ಆಯಿತೇ?

ಪ್ರಶ್ನೆಯ ಕೊನೆಯ ತುಣುಕು ಕರ್ಣಪಟಲ ಹರಿಯುವಂತೆ ಸರ್ರನೆ ಒಳಹೊಕ್ಕಿತು.

"ನಿನಗೆ ಹೋಗಿಬರಲು ಅಡ್ಡಿಯಿಲ್ಲವಷ್ಟೆ?"

"ಅಡ್ಡಿಯಿಲ್ಲ, ಹೋಗಿ ಬರುವೆ."

ಆ ನುಡಿಯನ್ನು ಪ್ರಯತ್ನಪೂರ್ವಕವಾಗಿ ಹೊರಹಾಕಿ, ಹಣವನ್ನೂ ಪಟ್ಟಿಯನ್ನೂ ಬ್ಯಾಗಿನಲ್ಲಿಟ್ಟು ಭದ್ರಪಡಿಸಿಕೊಂಡ ಜಾರ್ಜ್ ಕಾರ್ವೆಲ್. ಮನೆಗೆ ಟೆಲಿಫೋನಿನ ಸಂಪರ್ಕವಿಲ್ಲದಿರುವುದರಿಂದ, ಮನೆಯ ಸಮೀಪದಲ್ಲಿ ವಾಸಿಸುವ ಇತರ ಆಳುಗಳ ಮೂಲಕ ಸುದ್ದಿಯನ್ನು ಕಳಿಸುವುದೊಂದೇ ದಾರಿ ಇನ್ನೂ ಸಂಜೆಯ ಊಟ ಮುಗಿಸಿರಲಿಲ್ಲ. ಅನೇಕರು ಕ್ಯಾಂಟೀನಿನಲ್ಲಿ ಉಣ್ಣುತ್ತಾರೆ. ಅಂದಿಂದಿಗೂ ಲಂಚ್‌ಬಾಕ್ಸ್ ತರುವುದು ಇವನ ವಾಡಿಕೆ. ಗಣಿಯ ವಿಶ್ರಾಂತ ಗೃಹದಲ್ಲಿ ಲಂಚ್‌ಬಾಕ್ಸ್ ಇಟ್ಟಿದ್ದ. ಅಲ್ಲಿಗೆ ಹೋಗಿ ಊಟ ಮುಗಿಸಿ ಹೊರಡಬೇಕು.

ಕಳೆದ ದಿನಗಳಲ್ಲಿ ಯಾವತ್ತೂ ಬಿಗಿ ಕೆಲಸವೇ. ಇನ್ನಾದರೂ ಸ್ವಲ್ಪಸ್ವಲ್ಪವಾಗಿ ಕೆಲಸವನ್ನು ಹಗುರ ಮಾಡಿಕೊಳ್ಳಬೇಕು ಎಂಬ ಯೋಚನೆ ಮನದಲ್ಲಿ.

ಆದಕ್ಕೆ ಅವಕಾಶ ದೊರೆಯದಿರಲು ಕಾರಣ ಪೀಟರ್ ತನ್ನಲ್ಲಿ ಇಟ್ಟ ದೃಢವಾದ ನಂಬಿಗೆ. ತಾನೇ ಅವನ ಬಲಗೈಯಾದುದರಿಂದ ಪ್ರತಿಯೊಂದರಲ್ಲೂ ಭುಜ ಕೊಡದೆ ವಿಧಿಯಿಲ್ಲ. ಆದರೂ ಸಹ, ಪೀಟರ್ ನನ್ನ ಕಷ್ಟವನ್ನು ಅರಿತು ಕೊಳ್ಳಬೇಕು.

ಹಾದಿಯಲ್ಲಿ ಕಲ್ಲುಮಣ್ಣುಗಳನ್ನು ಸಾಗಿಸುವ ಲಾರಿಗಳು ಬಾರಿಬಾರಿಗೂ ಎದುರಾಗುತ್ತಿವೆ. ಎಲ್ಲೆಡೆಯೂ ಬಿಲಿಯನ್‌ಗಳಷ್ಟು ಕಲ್ಲು ಮಣ್ಣಿನ ರಾಶಿ ರಾಶಿ. ಹಂತ ಹಂತಗಳಲ್ಲೂ ಅಂಕುಡೊಂಕಿನ ರಸ್ತೆ. ನೆಲ ಕೊರೆಯುವ ಪರಿಕರಣಗಳ ಜೋಡಣೆ. ಅಲ್ಲಲ್ಲಿ ಆಗಾಗ ನಡೆಯುವ ಭೂಕುಸಿತಗಳ ಕಲ್ಲು ಮಣ್ಣುಗಳ ರಾಶಿ. ವಿದ್ಯುತ್ ಷವೆಲ್‌ಗಳು ತಾಮ್ರದ ಅದಿರನ್ನು ತೆಗೆಯುವ ವಿಶೇಷ....ಅದಿದೊಂದು ಕಡೆ; ವೇಸ್ಟ್ ಇನ್ನೊಂದು ಕಡೆ: ಅವನ್ನು ಹೊತ್ತು ಲಾರಿಗಳಿಗೆ ತುಂಬುವವರ ಮಾತಿನ ಗದ್ದಲ. ಮಿಷನ್‌ಗಳ ಗದ್ದಲ. ಲಾರಿ-ಟ್ರಕ್‌ಗಳು ಓಡಾಡುವ ಗದ್ದಲ....ಕರ್ಣಪಟಲಗಳನ್ನು ತಾನೇತಾನಾಗಿ ಮುತ್ತುತ್ತವೆ.

ಜಾರ್ಜ್ ಕಾರ್ಮೆಲ್ ಮುಖ ಮೈಗಳಲ್ಲಿ ಬೆವರನ್ನು ಬಸಿಯುತ್ತ ಸಾಲು ಮೆಟ್ಟಿಲುಗಳನ್ನಿಳಿದು ರಸ್ತೆಯಲ್ಲಿದ್ದ ಟ್ರಕ್ಕನ್ನೇರಿ ವಿಶ್ರಾಂತಿ ಗೃಹದತ್ತ ನಡೆಸಿದ. ಅದು ಇನ್ನೂ ನೂರಾರು ಗಜಗಳಿರುವಾಗಲೇ ಭೂಕುಸಿತದಿಂದ ರಸ್ತೆ ಮುಚ್ಚಿ ಹೋಗಿತ್ತು. ಟ್ರಕ್ಕನ್ನು ಅಲ್ಲಿಯೇ ಬಿಟ್ಟು ಮುಂದಿನ ಹಾದಿಯನ್ನು ನಡೆಯದೆ ಗತ್ಯಂತರವಿಲ್ಲ. ಬ್ಯಾಗನ್ನು ತೆಗೆದುಕೊಂಡು ಟ್ರಕ್ಕನ್ನು ಅಲ್ಲಿಯೇ ಬಿಟ್ಟು ಭೂಕುಸಿತವನ್ನು ದಾಟಿ ಮುನ್ನಡೆದ. ಅಷ್ಟರಲ್ಲೇ ಇನ್ನೊಬ್ಬ ಕಾರ್ಮಿಕ ಆ ಟ್ರಕ್ಕನ್ನೇರಿ ಸ್ಟಾರ್ಟ್ ಮಾಡಿದ ಶಬ್ದವನ್ನು ಕೇಳಿ ಹಿಂದಿರುಗಿಕೂಗಿ ಹೇಳಿದ "ಏಯ್! ನಾನು ಈಗಲೇ ಚಿಕಾಗೋಗೆ ಹೋಗಬೇಕಾಗಿದೆ. ನೀನದನ್ನು ತೆಗೆದುಕೊಂಡು ಹೋಗಬೇಡ....!"

"ನಾನು ಈಗಲೇ ಹಿಂತಿರುಗಿ ಬರುವೆ."

ಅವನ ನುಡಿಯೇನೋ ಕಿವಿಗಳನ್ನು ಮುಟ್ಟಿತು. ಆದರೆ ಈಗಲೇ ಹಿಂದಿರುಗುತ್ತಾನೆ ಎಂಬ ಭರವಸೆ ಉಳಿಯಲಿಲ್ಲ ಮನದಲ್ಲಿ. ಅಂತಹ ಬಹಳಷ್ಟು ಟ್ರಕ್ಕುಗಳು ಗಣಿಯ ಹಲವೆಡೆಗಳಲ್ಲಿ ನಿಂತಿರುತ್ತವೆ. ಅವನ್ನು ಕಾರ್ಮಿಕರು ಅಗತ್ಯವಿದ್ದಾಗಲೆಲ್ಲ ಬಳಸುತ್ತಾರೆ. ಆ ಸಾವಿರಾರು ಕಾರ್ಮಿಕರಲ್ಲಿ ಯಾರು

ಯಾರು ಎಲ್ಲೆಲ್ಲಿ ಏತಕ್ಕಾಗಿ ಬಳಸುತ್ತಾರೋ ಹೇಳುವುದಾಗಲೀ ಊಹಿಸುವು ದಾಗಲೀ ಕಷ್ಟ. ಬಹುತೇಕವಾಗಿ ಪರಸ್ಪರ ಪರಿಚಯವೂ ಇರುವುದಿಲ್ಲ. ಪ್ರಪಂಚದಲ್ಲೇ ಅದ್ಭುತವಾದ ಬೀಘಾಂ ಗಣಿಯಲ್ಲಿ ಇಂತಹ ವಿಶೇಷಗಳಿಗೆ ಲೆಖ್ಖವೇ ಇಲ್ಲ. ಜನ–ಜನ. ಎಲ್ಲಿ ನೋಡಿದರೂ ಕೆಂಪು–ಕಪ್ಪು ಜನಾಂಗ.

ಜಾನ್‌ಕಾರ್ಮೆಲ್ ಮುಖಮಜ್ಜನ ಮಾಡಿ ಲಂಚ್‌ಬಾಕ್ಸ್ ತೆರೆದು ಬೆಂದ ಆಲೂಗಡ್ಡೆ–ಬ್ರೆಡ್, ಬಾತುಕೋಳಿಯ ಸಾರುಗಳ ಊಟ ಮುಗಿಸಿದ. ಅನಂತರ ಟ್ರಕ್ ಇದ್ದಲ್ಲಿಗೆ ಬಂದು ನೋಡಿದರೆ ಟ್ರಕ್ ಇಲ್ಲವೇ ಇಲ್ಲ. ಕಾರ್ಮಿ ಕರು ಹೋಗುವವರು ಹೋಗುತಿದ್ದಾರೆ; ಬರುವವರು ಬರುತಿದ್ದಾರೆ. ತನ್ನ ಮನೆಯ ಪರಿಸರದವರಾರೂ ಕಾಣಿಸಲಿಲ್ಲ ಮಡದಿಗೆ ಸುದ್ದಿ ಮುಟ್ಟಿಸಲು. ಸದಾ ರೋಗಿಷ್ಟೆಯಾದ ಮಡದಿ ಬಹಳ ಕಷ್ಟದಿಂದ ದುಡಿಯುತ್ತಾಳೆ. ಅವಳಿಗೊಂದು ಮಾತು ಹೇಳದೆ ಹೋಗುವುದೆಂತು ? ಅವಳು ನನಗಾಗಿ ದಾರಿ ನೋಡುತ್ತ ನಿದ್ದೆ ಮಾಡದೆ ಹೋದರೆ ? ಪಾಪ, ಮೋನಾ ! ಬಹಳ ಒಳ್ಳೆಯ ಸ್ತ್ರೀ.... ಸಾರಿಗೆ ಏನೆಲ್ಲ ಮಸಾಲೆ ಹಾಕಿದ್ದಾಳೋ, ಅದೆಷ್ಟು ರುಚಿಯಾಗಿತ್ತು ? ಆಕೆಯ ರಸಮತಿ, ಆಕೆಯ ರಸಪೂರ್ಣ ಹೃದಯ ಸಾವಿರಕ್ಕೊಬ್ಬರಿಗೂ ಲಭಿಸು ವುದು ಕಷ್ಟವೇ. ಅದನ್ನು ಮಕ್ಕಳು ಅರಿತುಕೊಳ್ಳಲಿಲ್ಲ. ಇದು ತುಂಬಾ ವಿಷಾದಕರ. ಸ್ವರ್ಗದಿಂದ ಸಿಡಿದುಬಿದ್ದ ಜೀವಕಣ ಮೊನಾ !

ಮನಸ್ಸು ಜೀವನಗತಿಯನ್ನು ನೋಡುತಿದ್ದರೆ ದೃಷ್ಟಿ ಟ್ರಕ್ಕನ್ನು ಎದುರು ನೋಡುತಿತ್ತು.

* * * *

ಶುಕ್ರವಾರ ಸಂಜೆ ಕ್ರಮವತ್ತಾಗಿ ಅಡರಿ ಬಂತು. ಮೋನಾ ಕೆಲಸ ಮುಗಿಸಿ ಮನೆಗೆ ಮರಳಿದಾಗ ತುಂಬಾ ದಣಿದಿದ್ದಳು. ಅವಳು ಹಿಂದೆ ಬೇಕರಿ ಯಲ್ಲಿ ಕೆಲಸ ಮಾಡುವಾಗ ರೊಟ್ಟಿಗಳನ್ನು ತರುತಿದ್ದುದರಿಂದ ಮಕ್ಕಳಿಗೆ ಅವ ಳನ್ನು ಎದುರು ನೋಡುವುದರಲ್ಲಿ ಬಹಳಷ್ಟು ಹರುಷ. ಈಚೆಗೆ ಆ ಕೆಲಸ ಬಹಳ ಕಠಿಣವೆಂದು ಬಿಟ್ಟುಕೊಟ್ಟ ಮೋನಾ ಅಂಗಡಿಯೊಂದರಲ್ಲಿ ಕೆಲಸ ಹಿಡಿದಿದ್ದಾಳೆ; ಲಘು ಕೆಲಸವಾದುದರಿಂದ ಪಗಾರವೂ ಕಡಿಮೆ. ಮಕ್ಕಳಿ ಗೀಗ ಅವಳ ಆಗಮನದಲ್ಲಿ ಆಸಕ್ತಿಯಿಲ್ಲ. ಜಾನ್ ಕಾರ್ಮೆಲ್ ಕಳೆದ ಶಿಂಗಳಷ್ಟೆ

ಪರ್ಸನಲ್ ಸೆಕ್ರೆಟರಿಯಾಗಿದ್ದ. ಅವನ ದುಡಿಮೆಯಿಂದ ಸಂಸಾರ ನಡೆದರೂ ಉಳಿತಾಯ ಮಾಡಲಾಗಲಿಲ್ಲ. ಉತ್ಪತ್ತಿಗನುಗುಣವಾದ ಖರ್ಚು. ಅಳೆತ್ತರಕ್ಕೆ ಬೆಳೆದ ಮಗ ಅತ್ತ ಶಾಲೆಗೂ ಹೋಗದೆ, ಇತ್ತ ಕೆಲಸವೂ ಮಾಡದೆ ಉಂಡಾಡಿಯಾಗಿದ್ದಾನೆ. ಲಿಲ್ಲಿ-ರೋಜಿಯರು ಶಾಲೆಗೆ ಹೋಗುತಿದ್ದರೂ ಓದುವುದು ಅಷ್ಟಕಷ್ಟೆ. ಹಿರಿಯ ಮಗಳು ಮರಿಯಾ ಜನ್ಮ ಎತ್ತಿದಾಗಲೇ ಮೋನಳ ದೇಹಕ್ಕೆ ರೋಗ ಅಂಟಿತು. ದಿನ ನಿತ್ಯ ಊಟ ಒಂದು ಪಾಲಾದರೆ ಔಷಧಿ ಒಂದು ಪಾಲು. ವೈದ್ಯರ ಬಿಲ್ಲು ತಲೆಕೆಡಿಸುತ್ತದೆ. ಮರಿಯಾ ಈಗ ತನ್ನ ಸಂಸಾರದಲ್ಲಿ ಶ್ರೀಮಂತೆ. ಆದರೇನು? ತಾಯಿ-ತಂದೆಯರಲ್ಲಿ ಕನಿಕರವಿಲ್ಲ. ಯಾವಾಗಲಾದರೊಮ್ಮೆ ಬೇಕರಿಯ ಮುಂದೆ ಹಾಯ್ದು ಬಂದರೆ ಒಂದು ರೊಟ್ಟಿ ತರುತ್ತಾಳೆ ಅಷ್ಟೆ. ಬಡತನದ ಬವಣೆಯಲ್ಲಿ-ರೋಗದ ಸಂಕಟದಲ್ಲಿ ಎಷ್ಟೆಷ್ಟು ಪಾಡು ಪಟ್ಟು ಮಕ್ಕಳನ್ನು ಸಲಹಿದಳೋ ಅದನ್ನು ದೇವರೇ ಬಲ್ಲ. ಸಧ್ಯ, ಕೈಕಾಲು ಬಲಿತ ಮಕ್ಕಳು ಊಟ ತಿಂಡಿಯ ಹೊತ್ತಿಗೆ ಮಾತ್ರ ಹಾಜರಿರುತ್ತಾರೆ. ಉಳಿದ ಕಾಲದಲ್ಲಿ ಇವಳೆಲ್ಲೋ ಮಕ್ಕಳೆಲ್ಲೋ.

ಮೋನಾ ಪತಿಯ ಪ್ರತೀಕ್ಷೆಯಲ್ಲಿ ಸ್ವಲ್ಪ ಹೊತ್ತು ಹೊಸ್ತಿಲ ಬಳಿ ನಿಂತು ನೋಡಿದಳು. ಹೊತ್ತು ಮೀರಿದರೂ ಅವನ ಸುಳಿವಿಲ್ಲ. ಕೇರಿಯ ಮಕ್ಕಳೆಲ್ಲಾ ಮುಂದಿನ ಖೇಲೀವನದಲ್ಲಿ ಮನಸ್ವೀ ಆಟವಾಡುತಿದ್ದಾರೆ. ಆ ಲಗ್ಗೆ-ಕೇಕೆ-ನಗು-ಕುಣಿತ ಇವುಗಳ ಮೋಜು ಗಗನವನ್ನು ಮುಟ್ಟುವಂತಿವೆ. ಮೋನಾ ಮತ್ತೊಮ್ಮೆ ಹಾದಿಯತ್ತ ನೋಡಿ ಒಳ ಬಂದು ಮಂಚದ ಮೇಲೆ ಅಡ್ಡಾಗುವುದರೊಳಗೆ ಬಾಗಿಲಲ್ಲಿ "ಮೋನಾ ಆಂಟಿ, ಮನೆಯಲ್ಲಿದ್ದೀಯಾ?" ಎಂಬ ಪ್ರಶ್ನೆ ಕೇಳಿ ಬಂತು.

ಅಲ್ಲಿಂದಲೇ ಕೇಳಿದಳು ಮೋನಾ "ಯಾರಪ್ಪಾ!"

"ಇದೋ ಲಂಚ್‌ಬಾಕ್ಸ್. ಅಂಕಲ್ ನಾಳೆ ರಾತ್ರಿ ಮನೆಗೆ ಬರುತ್ತಾನಂತೆ."

ಎಡ್ವರ್ಡ್ ಅದೇ ಕೇರಿಯ ಕೊನೆಯ ಮನೆಯ ನಿವಾಸಿ. ದುಡಿಯುವುದು ಛೀಫ಼ಾಂ ಗಣಿಯಲ್ಲಿ.

"ಆಗಲಪ್ಪಾ, ತುಂಬ ವಂದನೆಗಳು!"

ಶನಿವಾರ-ಭಾನುವಾರಗಳು ಕಳೆದರೂ ಜಾನ್‌ಕಾರ್ವೆಲ್ ಹಿಮ್ಮರಳ

ಲಿಲ್ಲ. ವಾರಾಂತ್ಯದಲ್ಲಿ ಬರುತಿದ್ದ ಸಂಬಳಕ್ಕೆ ಕಲ್ಲು ಬಿತ್ತು. ತನ್ನ ದುಡಿ ಮೆಯ ಹಣವೂ ಕರಗಿತು. ಹೊಟ್ಟೆಯಲ್ಲಿ ತಳಮಳ-ಮೈಯಲ್ಲಿ ನಿಶ್ಶಕ್ತಿ ಎರಡೂ ಕಾಡುತ್ತಿವೆ. ಮಕ್ಕಳಿಗೆ ಬುದ್ಧಿ ಕಡಿಮೆಯಾದರೂ ಹೊಟ್ಟೆಯೇನೂ ಕಡಿಮೆಯದಲ್ಲ. ನೆರೆಯ ಮನೆಗಳಲ್ಲಿ ತಂದೆಯರೊಂದಿಗೆ ಮಕ್ಕಳೂ ಕೆಲಸ ಮಾಡುತ್ತಿರುವುದರಿಂದ ಕೈತುಂಬ ಪಗಾರ-ಹೊಟ್ಟೆಯ ತುಂಬ ಉಣಿಸು.... ತನ್ನ ಭಾಗ್ಯ ಇಷ್ಟೆ, ದೈವ ನಿಷ್ಕರುಣಿ.

ಮೋನಾ ಮ್ಲಾನ ಮುಖಿಯಾದಳು. ಎದೆಯಾಳದಲ್ಲಿ ಉಸಿರು ಭಾರ ಭಾರವಾಗಿ ಹರಿದಾಡಿತು.

* * * *

ವಾರವೊಂದು ಉರುಳಿತು. ಪೀಟರ್ ದಿಗ್ಭ್ರಾಂತನಾಗಿ ಮುಂದಿನ ಕ್ರಮವನ್ನು ಕೈಕೊಂಡ.

ಚಿಕಾಗೋ ಮತ್ತು ಸಾಲ್ಟ್‌ಲೇಕ್ ಸಿಟಿಗಳನ್ನು ಜಾಲಾಡಿದಗೂ ಜಾನ್ ಕಾರ್ಮೆಲ್ ಕಂಡು ಬರಲಿಲ್ಲ. ಉಟಾಹ್ ಪ್ರಾಂತ್ಯದ ನಗರಗಳೂ ಹಳ್ಳಿಗಳೂ ಪರಿಶೋಧನೆಗೊಳಗಾದುವು. ಗುಪ್ತ ಪೋಲೀಸ್‌ದಳ, ಪತ್ತೆದಾರಿ ತಂಡ ತುರ್ತುಗತಿಯಲ್ಲಿ ಕಾರ್ಯೋನ್ಮುಖರಾದರು. ರೈಲು ನಿಲ್ದಾಣ, ಬಸ್ಸು ನಿಲ್ದಾಣ, ವಿಮಾನ ನಿಲ್ದಾಣಗಳನ್ನೂ ಪೋಲೀಸ್ ಪಹರಿ ಸುತ್ತುವರಿಯಿತು. ಹಗಲಿರುಳೂ ಒಂದೇ ರೀತಿಯ ಚಟುವಟಿಕೆಯ ಶೋಧನೆ.

ಮೋನಾಗೆ ಪತಿಯ ಚಿಂತೆ ಮಾತ್ರವಲ್ಲ ಬಡತನದ ಉತ್ಕಟ ಪರಿಸ್ಥಿತಿ ಯನ್ನೂ ಎದುರಿಸಬೇಕಾಯಿತು. ದಿನದಿನಕ್ಕೂ ಬವಣೆಯನ್ನು ತಾಳಲಾರದೆ ಮಗನನ್ನು ಕುರಿತು ಹೇಳಿದಳು "ಮಗನೆ! ಇನ್ನೂ ಎಷ್ಟು ಕಾಲ ಹೀಗೆ ನೀನು ಕಾಲಹರಣ ಮಾಡುತ್ತಿ ? ರೋಗಿಷ್ಟೆಯಾದ ನಾನು ಎಷ್ಟು ದುಡಿಯ ಬಲ್ಲೆ ? ನೀನು ಇದನ್ನೆಲ್ಲಾ ಅರಿತುಕೊಳ್ಳದಿದ್ದರೆ ಹೇಗೆ ?" ಒಡಲ ಸಂಕಟ ವೆಲ್ಲಾ ದನಿಯಲ್ಲಿ ಹರಿದು ಬಂತು.

"ನಾನು ಏನು ಮಾಡಬಲ್ಲೆ ?"

ಅಷ್ಟೇ ನಿರಾಸೆಯ ದನಿಯಲ್ಲಿ ಉತ್ತರಿಸಿದ ಜಾಕ್ ಕಾರ್ಮೆಲ್. ಮುಖ ಬಿಂಬ ಮ್ಲಾನವಾಯಿತು.

"ಅಪ್ಪಾ, ಮಗನೇ! ಹಾಗೆಂದರೆ ಹೇಗೆ? ನಡೆ, ನಾನೇ ನಿನ್ನನ್ನು ಪೀಟರ್ ಬಳಿಗೆ ಕರೆದೊಯ್ಯುವೆ. ನಿನ್ನ ತಂದೆಯ ಪರವಾಗಿ ನಿನಗೊಂದು ಕೂಲಿ ಕೆಲಸ ದೊರೆಯಲಾರದೇ? ಜಾನ್ ಮೊದಲು ಮಾಡಿದ್ದು ಕೂಲಿ ಕೆಲಸವೆ. ನೀನು ಅಷ್ಟೂ ಮಾಡಲಾರೆಯಾದರೆ ಯಾರು ದುಡಿಯಬೇಕು ಹೇಳು? ರೊಟ್ಟಿ ಯಾರಿಗಾದರೂ ಸುಮ್ಮನೆ ಬರುತ್ತದೆಯೇ?"

ಅತಿ ಸಂಕಟಭರಿತ ದೈನ್ಯವಾಣಿಯಲ್ಲಿ ಹೊರಬಿದ್ದ ಪ್ರಶ್ನೆ ಮನಃಕಲ್ಪದಲ್ಲಿ ಕೈಯಾಡಿಸಿತು. ಅವನು ಒಂದೆರಡು ಕ್ಷಣ ತಬ್ಬಿಬ್ಬಾದರೂ ತದನಂತರ ತನ್ನನ್ನು ತಾನು ಸುಧಾರಿಸಿಕೊಳ್ಳುತ್ತ ಅಂದ "ಆಗಲಿ, ಕೆಲವು ದಿನ ಮಾಡಿ ನೋಡುವೆ. ನೀನು ಪೀಟರ್‌ನೊಂದಿಗೆ ಮಾತಾಡು. ಅವನು ಒಪ್ಪಿದರೆ ಸರಿ."

ಮಗ ಅಷ್ಟು ಮಾತ್ರ ದಾರಿಗೆ ಬಂದುದು ಎಷ್ಟು ಸಮಾಧಾನ-ಸಂತಸಗಳನ್ನು ತಂದಿತೋ....ಅವಳು ಮಗನೊಂದಿಗೆ ಆ ಕೂಡಲೇ ಹೊರಟಳು. ಹಾದಿಯಲ್ಲಿ ಬಸ್ಸು, ಟ್ಯಾಕ್ಸಿಗಳು ಓಡಾಡುತ್ತವೆ. ಕಾಸು ಕೊಟ್ಟರೆ ಯಾರಾದರೂ ಕರೆದೊಯ್ಯುತ್ತಾರೆ. ಆದರೆ, ಆ ಕಾಸಿಗೇ ಕೊರತೆ ಈಗ. ರಣರಣಿಸುವ ಬಿಸಿಲಲ್ಲಿ ಹೊಟ್ಟೆಗಿಲ್ಲದೆ ದೇಹ ನಡೆಯಬೇಕಾದರೆ ತತ್ತರಿಸಿತು. ಮೋನಾ ಬಿಸಿಯುಸಿರು ಬಿಡುತ್ತಲೇ ಗಣಿಯ ಆಫೀಸನ್ನು ಮುಟ್ಟಿದಾಗ ಪೀಟರ್ ಒಳಗಡೆ ಇರಲಿಲ್ಲ. ಆಫೀಸ್ ಬಾಯ್ 'ಒಡೆಯ ಗಣಿಯ ಕಡೆ ಹೋಗಿದ್ದಾನೆ' ಎಂದ. ಅದೇ ಪೀಟರ್‌ನನ್ನು ಕಾಣಲೆಂದು ಬಂದಿದ್ದ ಹೊಸ ಸೆಕ್ರೆಟರಿ ಮೋನಳನ್ನು ಕಂಡುನುಡಿದ "ನಿನ್ನ ಗಂಡನ ಪತ್ತೆ ತರದೂದು ಈ ವರೆಗೆ ಸಾಧ್ಯವಾಗದುದು ವಿಷಾದಕರ."

ಮೋನಾ ಏನನ್ನೋ ಹೇಳಲು ಪ್ರಯತ್ನಿಸಿ ಸುಮ್ಮನಾದಳು. ತುಟಿಗಳು ಬಿರಿಯಲಿಲ್ಲ.

ಪೀಟರ್ ತನ್ನ ಕೆಲಸ ಮುಗಿಸಿ ಹಿಮ್ಮರಳಿದಾಗ ತಾಸೊಂದು ಉರುಳಿತ್ತು. ಸೆಕ್ರೆಟರಿಯನ್ನು ಕಂಡು "ನಿನ್ನ ಗಣಿಯಲ್ಲಿ ನೋಡುವ ಉದ್ದಿಶ್ಯವಿತ್ತು. ನೀನು ಇಲ್ಲಿ ಇದ್ದೀಯೋ?"

"ನಿನ್ನನ್ನು ನೋಡುವ ಸಲುವಾಗಿಯೆ ನಾನಿಲ್ಲಿ ಕಾದಿದ್ದೆ," ಎಂದ ಸೆಕ್ರೆಟರಿ.

"ಅನೇಕ ಕಡೆ ಭೂಕುಸಿತಗಳಾಗಿವೆ. ಅಲ್ಲಲ್ಲಿ ಹಾದಿ ಕಟ್ಟಿದೆ. ಹಿಂದಿನ

ರೂಕುಸಿತಗಳನ್ನೇ ಇನ್ನೂ ಎತ್ತಿಲ್ಲ. ಕೆಲಸ ನಿಧಾನವಾಗುತ್ತಿರುವುದು ತುಂಬಾ
ಸಾವಕಾಶ. ಏನೇ ಇರಲಿ, ಈ ವಾರದಲ್ಲಿ ಎಲ್ಲಾ ಸರಿಪಡಿಸಬೇಕು. ಒಂದೊಂದು
ಕಡೆಗೂ ತಂಡ ತಂಡವಾಗಿ ಜನ ಹೋಗಲಿ.

"ಆಗಲಿ, ಒಡೆಯಾ !"

ಪೀಟರ್ ಒಳ ಬಂದ.

* * * *

ನೋನಾ ಪೀಟರ್‌ನಿಗೆ ಮಧ್ಯಾಹ್ನದ ವಂದನೆಯನ್ನರ್ಪಿಸಿ, ತನ್ನ ಮಗನ
ಪರಿಚಯ ಮಾಡಿಸಿ "ನಮಗೀಗ ಹೊಟ್ಟೆಗೆ ಹಿಟ್ಟಿಲ್ಲದೆ ಸಾಯುವ ಪ್ರಸಂಗ
ಬಂದಿದೆ. ವಾರವಾರವೂ ಬರುತ್ತಿದ್ದ ಕೂಲಿ ಹಣ ಒಮ್ಮೆಗೇ ನಿಂತು
ಹೋಯ್ತು. ಹಸಿವನ್ನು ತಾಳಲಾರದ ಮಕ್ಕಳು ಶಾಲೆಗೆ ಹೋಗದೆ ಮನೆಯಲ್ಲಿ
ಮಲಗಿ ಬಿಟ್ಟಿವೆ. ಏನಾದರೂ ಮಾಡಿ ನಮಗೆ ಉಪಕಾರ ಮಾಡು."

"ಅಯ್ಯೋ, ದೇವರೇ ! ಐವತ್ತು ಸಾವಿರ ಡಾಲರ್ ! ಅದೇನು ಸಾಮಾ
ನ್ಯವೊತ್ತವೆ? ಅಶೀವ ಚಿಂತೆ ನನಗೆ ಹತ್ತಿರುವಾಗ ಇನ್ನು ಉಪಕಾರ ಮಾಡು
ವುದು ಎಲ್ಲಿಂದ ?"

ಅವಳು ಕಂಬನಿ ಮಿಡಿವ ಗದ್ಗದವಾಣಿಯಲ್ಲಿ ನುಡಿದಳು "ಅಯ್ಯಾ,
ಪೀಟರ್ ! ಮೂರು ದಿನಗಳಿಂದ ನಾವು ಒಂದು ಹೊತ್ತು ರೊಟ್ಟಿಯಲ್ಲಿ ಜೀವ
ಹಿಡಿದಿದ್ದೇವೆ. ಮುಂದೆ...."

ಮಾತು ಮುಗಿಯುವುದರೊಳಗಾಗಿ ಪೀಟರ್ ನಡುವೆ ಬಾಯಿ ಹಾಕಿದ
"ಓಹ್ ! ನನಗೂ ಇದು ತುಂಬಾ ಕಷ್ಟದ ವಿಷಯ. ಐವತ್ತು ಸಾವಿರ
ಡಾಲರ್ !"

"ನೀನು ಜಾರ್ಜನನ್ನು ಕಳುಹಿಸಬಾರದಿತ್ತು. ಯಾರು ಕೊಸಿ ಮಾಡಿ
ಹಣ ಕಸಿದುಕೊಂಡರೋ" ಎಂದು ಅತ್ತು ಗೋಳಾಡಿದಳು ನೋನಾ. ಕಣ್ಣು
ಗಳಲ್ಲಿ ಕಂಬನಿಯು ಕೋಡಿ ಹರಿದು ಹೋಯಿತು.

"ನಿನಗೆ ಇಷ್ಟು ದೊಡ್ಡ ಮಗನಿದ್ದಾನೆಯೇ ?"

"ಹೌದು. ಚೆಂದದ ಹುಡುಗ ಎಂದು ಬಾಲ್ಯದಲ್ಲಿ ಮುದ್ದು ಮಾಡಿ
ದ್ದುಂಟು. ಅವನು ಅಂದಿಗೇ ಹಾದಿ ತಪ್ಪಿದ. ಅತ್ತ ಶಾಲೆಗೂ ಹೋಗಲಿಲ್ಲ;

ಇತ್ತ ಕೆಲಸ ಮಾಡಲೂ ಇಲ್ಲ. ಈಗ ಹೊಟ್ಟೆಗೆ ಸಾಲುವುದಿಲ್ಲವಾದ್ದರಿಂದ ಕೆಲಸ ಮಾಡಲು ಒಪ್ಪಿದಾನೆ." ಎಂದ ಅವಳು ಮುಖವನ್ನು ಕರವಸ್ತ್ರದಿಂದ ಊಡಿ ಕೊಂಡು ಪುನಃ "ನಮಗೆ ಸಮಯೋಚಿತವಾಗಿ ಏನಾದರೂ ಸಹಾಯ ಮಾಡ ಬಲ್ಲಿಯಾದರೆ...."ಎನ್ನುತ್ತ ಉಗುಳು ನುಂಗಿ ಸುಮ್ಮನಾದಳು.

"ಸ್ವಲ್ಪ ಕಾಲ ಹೇಗಾದರೂ ತಾಳಿಕೊ. ಅಷ್ಟೊಂದು ಹಣ ಕೈಬಿಟ್ಟಿರು ವುದರಿಂದ ನಿನಗೆ ಪರಿಹಾರ ಕೊಡಲು ಸಾಧ್ಯವೇ? ನೀನೇ ಯೋಚಿಸಿ ನೋಡು."

ಎದೆಯಾಳದಲ್ಲಿ ಮೂಡಿದ ಉತ್ತಾಪ ಜೀವ ನಾಡಿಯನ್ನು ಜೋರಾಗಿ ಮಿಡಿಸಿತು. ಬತ್ತಿದ ಕಣ್ಣುಗಳಲ್ಲಿ ಹರಿದ ಕಂಬನಿಯನ್ನು ಒರಸಿಕೊಳ್ಳುತ್ತ "ತಂದೆಯ ಸ್ಥಾನಕ್ಕೆ ಇವನನ್ನು ತೆಗೆದುಕೊಳ್ಳುವ್ರು....."

"ತಂದೆಯ ಸ್ಥಾನಕ್ಕೆ ಈಗಲೇ ಎಲ್ಲಿ? ಸಧ್ಯಕ್ಕೆ ದಿನಗೂಲಿಯಾಗಿ ತೆಗೆದು ಕೊಳ್ಳಬಲ್ಲೆ. ಅವನ ದಕ್ಷತೆಯನ್ನು ನೋಡಿದನಂತರ ಮುಂದಿನ ಕ್ರಮ."

"ನಾಳೆಯಿಂದ ಕಳುಹಿಸಲೇ?"

"ಆಗಬಹುದು"

"ಜಾರ್ಜ-ನನ್ನು ಪತ್ತೆ ಮಾಡುವಂತೆ ಒಳ್ಳೆ ಪತ್ತೇದಾರಿ ಕಂಪನಿಗೆ ವಹಿಸಿ ಕೊಡಿ. ಜಾರ್ಜ ಜೀವಂತ ಸಿಕ್ಕಿದರೆ ಮಕ್ಕಳಿಗೆ ದಿಕ್ಕಾಗುತ್ತದೆ. ನಾನು ನಿತ್ಯ ರೋಗಿ, ಹೆಚ್ಚು ಶ್ರಮವಹಿಸಿ ಕೆಲಸ ಮಾಡಲಾರೆ."

ಅತೀ ದೀನಾದೀನಳಾಗಿ ಬೇಡಿಕೊಂಡು ಆತನಿಗೆ ವಂದನೆಯನ್ನರ್ಪಿಸಿ ದಳು ಮೋನಾ.

* * * *

ಜಾಕ್ ಕಾರ್ನೆಲ್ ಬಲೂ ದಡ್ಡ. ಸ್ವಪ್ನಾವಸ್ಥೆಯ ಮಾಯೆಯೋ, ಅಥವಾ ಬುದ್ಧಿ ಮಾಂದ್ಯವೋ ಅಥವಾ ಮಂಕು ಮಾಯೆಯೋ ಅಥವಾ ಇನ್ನಾವುದೋ ಮುಸುಗಿತ್ತು ಆವನನ್ನು. ಎಲ್ಲಾದರೂ ಕುಳಿತೋ, ನಿಂತೋ, ಆಟವಾಡಿಯೋ ಕಾಲಹರಣ ಮಾಡಿ ತಂದೆ ತಾಯಿಯರಿಂದ ಎಷ್ಟೋ ಬಾರಿ ದಂಡನೆಗೊಳಗಾಗಿದ್ದ. ಆದರೂ, ಆತನ ವರ್ತನೆ ವ್ಯತ್ಯಸ್ತವಾಗಲಿಲ್ಲ. ಕೇರಿಯ ಮಕ್ಕಳಿಗೆಲ್ಲಾ ಆವನೊಂದು ವಿಚಿತ್ರ ಪಶು. ಅಂತಲೇ ಅವರಿಂದ ಗೇಲಿಗೊಳಗಾಗುತ್ತಿದ್ದರೂ ಗಮನಿಸುವವನಲ್ಲ. ತಂದೆಯೊಂದಿಗೆ ಕೆಲವೊಮ್ಮೆ ಗಣಿಗೆ

ಹೋಗಿದ್ದ....ಅಲ್ಲಿಯ ಉದ್ಯಮಗಳ, ಅಲ್ಲಿಯ ಕೆಲಸ, ಅಲ್ಲಿಯ ಸಮಸ್ಯೆ, ಅಲ್ಲಿಯ ವ್ಯವಹಾರ ಎಲ್ಲವನ್ನೂ ಸ್ವಂತ ಕಣ್ಣುಗಳಿಂದ ನೋಡಿದ್ದ. ಅದರ ಸಂಕಷ್ಟ ವೇನೆಂಬುದು ಗೊತ್ತು. ಹೊಟ್ಟೆಗೆ ಹಿಟ್ಟೇ ಇಲ್ಲದಿರುವಾಗ ಮಾಡುವುದೇನು? ಕೆಲವು ದಿನಗಳಾದರೂ ಅಲ್ಲಿ ಕೆಲಸ ಮಾಡಿ ನೋಡೋಣವೆಂಬ ಯೋಚನೆಗೆ ಶರಣಾದ ಅಷ್ಟೆ.

ಬೆಳಿಗ್ಗೆ ಓಟ್ಸ್ ಗಂಜಿಯನ್ನು ಕುಡಿದು ತಾಯಿಯ ಕಡೆಗೆ ನೋಡುತ್ತ ಅಂದ "ನೀನು ಒಂದು ರೊಟ್ಟಿಯನ್ನಾದರೂ ಕೊಡದಿದ್ದರೆ ನಾನೇನು ಕೆಲಸ ಮಾಡಬಲ್ಲೆ? ಗಣಿಯಲ್ಲಿ ಅಗೆಯುವುದು ಸಾಮಾನ್ಯವೆ? ನಿನ್ನ ಗಂಜಿ ನನ್ನ ಹಾದಿಯ ನಡಿಗೆಗೂ ಸಾಲುವುದಿಲ್ಲ."

ದನಿಯಲ್ಲಿ ಸಂಕಟ–ದುಃಖ–ಕಳವಳಗಳ ಸಮ್ಮಿಶ್ರಣ ಕೋಡಿಯಾಗಿ ಹರಿಯಿತು. ತಾಯಿ ಒಂದೆರಡು ಗಳಿಗೆ ತನ್ನಲ್ಲೇ ಯೋಚಿಸಿ ಅತೀವ ಚಿಂತೆ ಗೊಳಗಾಗಿ ಅಂದಳು "ಈ ದಿನವಂತೂ ನಾನು ಕೆಲಸ ಮಾಡಲಾರದಷ್ಟು ಬಳ ಲಿರುವೆ. ನಿನ್ನ ತಂಗಿಯರಿಗೇನು ಕೊಡಲಿ? ಹೇಗೆ ಈ ಜೀವ ಹಿಡಿಯಲಿ? ನೀನೇ ಯೋಚಿಸಿ ನೋಡು. ಪರಿಸ್ಥಿತಿ ಹೀಗಿರುವಾಗ ನೀನು ರೊಟ್ಟಿ ಬೇಡಿದರೆ ಎಲ್ಲಿಂದ ತರಲಿ?"

ಅವನು ತಾಯಿಯ ಮಾತಿಗೆ ಪ್ರತಿ ನುಡಿಯಲಾರದೆ ಜೋಲು ಮುಖ ಹಾಕಿಕೊಂಡ. ಅವಳು ಸ್ವಲ್ಪ ಚಿಂತಿಸಿ "ನೆರೆಮನೆಯಿಂದ ಒಂದು ರೊಟ್ಟಿ ಯನ್ನು ಬೇಡಿ ತರುವೆ. ನಿನಗೆ ಪಗಾರ ಬಂದನಂತರ ಅದನ್ನು ಹಿಂದಿರುಗಿಸ ಬೇಕು" ಎನ್ನುತ್ತ ಹೊರಹೋಗಿ, ಸ್ವಲ್ಪಹೊತ್ತಿನ ನಂತರ ರೊಟ್ಟಿಯೊಡನೆ ಹಿಂತಿರುಗಿದಳು. ಅವನ ಕೈಗೆ ಅರ್ಧರೊಟ್ಟಿಯನ್ನು ನೀಡಿ "ಹೋಗಿ ಬಾ ಮಗನೇ! ಕೆಲಸವನ್ನು ಶ್ರದ್ಧೆಯಿಂದ ಮಾಡು ಇಲ್ಲವಾದರೆ ಪೀಟರ್ ಒಪ್ಪಲಾರ." ಎಂದಳು ಮೋನಾ ಒಡಲ ಸಂಕಟವನ್ನು ತೋಡಿಕೊಳ್ಳುವಂತೆ.

ಅವನು ಪೂರ್ತಿ ರೊಟ್ಟಿಯನ್ನು ಬಯಸಿದ್ದರೂ ಮೂರು ನಾಲ್ಕು ದಿನ ಗಳಿಂದ ಯಾರೂ ಹೊಟ್ಟೆ ತುಂಬ ಊಟ ಮಾಡಿಲ್ಲವೆಂಬುದು ಮನವರಿಕೆ ಯಾಗಿ ಸುಮ್ಮನಾದ. ಕಣ್ಣುಗಳಲ್ಲಿ ಆಸೆಯ ಛಾಯೆ ಸುಳಿಸುಳಿದಳಿಯಿತು. ಮರುಮಾತಿಲ್ಲದೆ ಹೊರಬಿದ್ದು ಧೀಘಾಂ ಗಣಿಗಭಿಮುಖನಾಗಿ ನಡೆದ. ಹಾದಿ ಯನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿ ಗಣಿಯನ್ನು ಸೇರಿದಾಗ ಕಾರ್ಮಿಕರು ಕೆಲಸ

ಆರಂಭಿಸಿದ್ದರು. ಇವನು ಹೊತ್ತಾಗಿ ಬಂದುದಕ್ಕೂ ಸ್ವಭಾವಜನ್ಯವಾದ ಸೋಮಾರಿತನಕ್ಕೂ ಕಾಕತಾಳೀಯ ನ್ಯಾಯವಾಯಿತು. ಜನ ಚಪ್ಪಾಳೆ ತಟ್ಟಿ ಕೇಕೆ ಹಾಕಿ ನಗುತ್ತ ಲೇವಡಿ ಎಬ್ಬಿಸಿದರು. ಜಾಕ್ ಕಾರ್ಮೆಲ್ ಪ್ರಯತ್ನ ಪೂರ್ವಕವಾಗಿ ಮುಗುಳು ನಕ್ಕರೂ ಲಜ್ಜೆ ಅನುತಾಪಗಳಿಂದ ಜರ್ಜರಿತನಾದ. ಕೂಲಿಯೊಬ್ಬ ಪಿಕಾಸಿಯನ್ನು ಅವನ ಕಡೆಗೆಸೆದು "ಲೇ ಉಂಡಾಡಿ ಮನುಷ್ಯ! ಇಗೋ ಪಿಕಾಸಿ! ಹುಟ್ಟಿನಿಂದ ಮೈ ಬೆಳೆಸಿದ್ದಿ! ಅಗೆ, ಶಕ್ತಿ ಎಷ್ಟಿದೆ ನೋಡೋಣ!"

ಎಲ್ಲರೂ ಪುನಃ ನಗೆಯ ಗುಲ್ಲೆಬ್ಬಿಸಿದರು.

ಜಾಕ್ ಕಾರ್ಮೆಲ್ಲನ ತಲೆಗೂದಲು ಟಗರಿನ ಕೂದಲಿನಂತೆ ಗುಂಗುರು ಗುಂಗುರು. ಅದನ್ನು ಬಾಚುವ ಅವಶ್ಯಕತೆಯೂ ಬರುವುದಿಲ್ಲ. ಅಗೆಯುವಾಗ ಹಾರಿದ ಕೆಂಧೂಳೆಲ್ಲ ತಲೆಯಲ್ಲಿ ಸ್ವಚ್ಛಂದವಾಗಿ ಮನೆಮಾಡಿದರೂ ಕೆಂಗೂದಲಿನ ಹಂವಿನಲ್ಲಿ ಕಾಣಿಸುವಂತಿರಲಿಲ್ಲ. ಅವನ ಟೋಪಿಯಿಲ್ಲದ ತಲೆಯನ್ನು ನೋಡಿದ ಕೆಲವು ಕಿಡಿಗೇಡಿಗಳು ಬೇಕಾಗಿಯೇ ಮಣ್ಣೆರಚುತ್ತ "ಕರ್ಲಿಗೋಟ್! ಏನು ಅಗೆಯುತ್ತೀಯೋ? ನಿನ್ನಪ್ಪ ಮಾಡಿದ ಕೆಲಸದಲ್ಲಿ ಅರ್ಧವನ್ನೂ ನೀನು ಮಾಡಲಾರೆ! ಅವನು ಕಳವು ಮಾಡಿದ ಐವತ್ತು ಸಾವಿರ ಡಾಲರ್ ತೀರುವ ತನಕ ಇಲ್ಲಿ ಗೇಯಬೇಕು! ಹೀಗೆ ಕೆಲಸ ಮಾಡಿದರೆ ನೀನು ಸಾಯುವತನಕವೂ ತೀರಿಸಲಾರೆ. ಅಸಲು-ಬಡ್ಡಿ ಕೂಡಿ ಬ್ರಹ್ಮಾಂಡವಾಗುತ್ತದೆ!"

ಜಾಕ್ ತಲೆಯೆತ್ತದೆ ಅಗೆಯುತ್ತಲೇ ಇದ್ದ. ಒಡಲಾಳದಲ್ಲಿ ಕಸಿವಿಸಿ-ತಳಮಳ.

* * * *

ಆ ಬೃಹತ್ ಗಣಿಯೊಳಗೆ ಇಳಿದರೆ ಮೇಲೆ ಹತ್ತಿ ಬರುವಾಗ ಏದುಸಿರು ಹತ್ತಿ ಬೆವರು ಹುಚ್ಚೆದ್ದು ಸುರಿಯುತ್ತದೆ. ಕಾರ್ಮಿಕರಿಗೆ ಮೇಲೆ ಬರಲು ವಾಹನ ಸೌಕರ್ಯವಿದ್ದರೂ ಅವನನ್ನು ಬೇಕೆಂದೇ ಹಿಂದೆ ಬಿಟ್ಟು "ನಿನ್ನ ಕೆಲಸ ಅರ್ಧವೂ ಮುಗಿದಿಲ್ಲ ಮುಗಿಸಿ ಬಾ" ಎಂದು ಕೂಗಿ ಹೇಳಿ ಹೊರಟ ಇತರ ಕಾರ್ಮಿಕರನ್ನು ವ್ಯಗ್ರಭಾವದಿಂದ ದಿಟ್ಟಿಸಿನೋಡಿದ ಜಾಕ್.

"ಕರ್ಲಿಗೋಟ್! ಏನು ನೋಡುತ್ತೀಯೋ ಮೊದಲು ಅಗೆದು ಕೆಲಸ ಮುಗಿಸು!"

"ರೊಟ್ಟಿ-ಬೆಣ್ಣೆ. ಕುರಿಕೊಬ್ಬು ತಿಂದು ಕೊಬ್ಬಿದ ಮೈ! ಇನ್ನಾದರೂ ಕರಗಲಿ!

"Hear! Hear!!"

ಎಲ್ಲಿಂದಲೋ ಒಗೆದ ವಾಗ್ಬಾಣಗಳು ಕರ್ಣಪಟಲಗಳನ್ನು ಅಪ್ಪಳಿಸಿದಾಗ ಜಾಕ್ ಕಾರ್ವೆಲ್ ಕಾರ್ಯನಿರತನಾದ. ಕಾರ್ಮಿಕರನ್ನು ಹೊತ್ತ ವ್ಯಾನುಗಳು, ಲಾರಿಗಳು ಅಗಾಧವಾದ ಕೆಂಧೂಳನ್ನು ಹಾರಿಸುತ್ತ ಹೊರಟು ಹೋದುವು. ಹಿಂದಿನಿಂದ ನಿಟ್ಟಿಸುತಿದ್ದ ನಯನದ್ವಯಗಳು ನಿರಾಸೆಯ ಛಾಯೆಯನ್ನು ತುಂಬಿಕೊಂಡುವು.

ಜಾಕ್ ಪಿಕಾಸಿಯನ್ನು ಬಿಟ್ಟು ಕೈ ಹಸ್ತಗಳನ್ನು ನೋಡಿಕೊಂಡ. ಕೆಂಪು ಹಸ್ತಗಳು ಇನ್ನಷ್ಟು ಕೆಂಪಾಗಿ ಬೊಬ್ಬೆಗಳೆದ್ದಿದ್ದುವು. ಕೈ ಉರಿ, ಹೊಟ್ಟೆ ಹಸಿವು ಜೋರಿ. ಮೂಳೆಮೂಳೆಗಳೂ ಹುಚ್ಚೆದ್ದು ನೋಯುತ್ತಿವೆ. ತನ್ನ ಭಾಗಕ್ಕೆ ಇನ್ನೂ ಒಂದು ದಿಬ್ಬವನ್ನು ಅಗೆಯುವುದು ಉಳಿದಿತ್ತು. ಸ್ವಲ್ಪ ಸುಧಾರಿಸಿಕೊಂಡನಂತರ ಆ ದಿಬ್ಬವನ್ನು ಅಗೆದು ಕೆಡವಿ ಪಿಕಾಸಿಯನ್ನು ಬಿಟ್ಟಾಗ ಕೈ ಬೊಬ್ಬೆಗಳಲ್ಲಿ ನೀರು ಬಸಿಯಿತು. ನೋವಾಗಿ, ಅಳುವೂ ಒತ್ತರಿಸಿ ಬಂತು. ಆದರೆ ಸಂತೈಸುವವರಾರು? ಹಸ್ತವನ್ನು ಬಿಗಿಹಿಡಿದು ಗಣಿಯ ಎತ್ತರವನ್ನು ಹತ್ತಲಾರದೆ ಹತ್ತಿ ಮೇಲೆ ಬಂದಾಗ ಬಳಲಿ ಬೆಂಡಾಗಿ ನಿಡುಸಿರು ಬಿಡುತ್ತ ನೆಲದ ಮೇಲೆ ಬಿದ್ದುಕೊಂಡ. ಗಂಟಲಾರಿದೆ, ನೀರು ಕುಡಿಯುವ ಆತುರ ಆದರೂ, ಸ್ವಲ್ಪ ಹೊತ್ತು ಸುಧಾರಿಸಿಕೊಳ್ಳದೆ ಗತ್ಯಂತರವಿಲ್ಲ.

ಅನಂತರ ಎದ್ದು ಹೊಟ್ಟೆತುಂಬ ನೀರು ಕುಡಿದು ಕೈಕಾಲು ತೊಳೆದು ಮುಖಮಜ್ಜನ ಮಾಡಿ ಗೃಹಾಭಿಮುಖವಾಗಿ ನಡೆದ. ಮೈಯಲ್ಲಿ ಉತ್ಸಾಹವಾಗಲೀ, ಕಾಲುಗಳಲ್ಲಿ ಬಲವಾಗಲೀ ಇರಲಿಲ್ಲ. ಸೂರ್ಯ ಪಶ್ಚಿಮದಂಚಿಗೆ ಇಳಿಯುತ್ತಿದ್ದುದರಿಂದ ವಾತಾವರಣ ತಂಪು ತಳೆಯುತಿತ್ತು. ಒಡಲ ಹಸಿವನ್ನು ತಾಳಲಾರದೆ ದಾಪುಗಾಲು ಹಾಕಿಕೊಂಡೇ ಮನೆ ಮುಟ್ಟಿದ. ತಾಯಿ ಒಲೆಯ ಮೇಲೆ ಓಟ್ಸ್ ಗಂಜಿಯನ್ನೂ ತಟ್ಟೆಯಲ್ಲಿ ಹಲವಾರು ಬ್ರೆಡ್ ತುಣುಕನ್ನೂ ಇಟ್ಟುಕೊಂಡು ಒಲೆಯ ಬಳಿ ಕುಳಿತುಕೊಂಡಿದ್ದಳು. ಮಗನನ್ನು ಕಾಣು

ತ್ತಲೂ "ಮಗೂ! ಬಹಳ ಪ್ರಯಾಸವಾಯಿತೇ?" ಎಂದಳು, ಪ್ರೀತಿ ಕರುಣೆ ಗಳಿಂದ.

ಜಾಕ್ ಎರಡೂ ಹಸ್ತಗಳನ್ನು ಮುಂದೆ ಹಿಡಿದು ಅಳುಪಸಿಯಲ್ಲಿ ಅಂದ "ಅಯ್ಯೋ, ಸಾಕುಸಾಕಾಯಿತು. ನನ್ನನ್ನು ಎಲ್ಲರೂ ತೀರಾ ಕೀಳಾಗಿ ಕಾಣುತ್ತಾರೆ. ಗಣಿಯಿಂದ ಮೇಲಕ್ಕೆ ಬರಲು ವಾಹನ ಸೌಕರ್ಯವನ್ನೂ ನೀಡಲಿಲ್ಲ. ನಡೆದೂ ನಡೆದೂ ಸೋತು ಹೋದೆ."

ಮಾತು ಮುಗಿಯುವುದರೊಳಗಾಗಿ ಕಣ್ಣುಗಳು ಹಸಿತುವು.

"ಕಾಲಾನುಕಾಲದಿಂದಲೂ ಸೋಮಾರಿಯಾಗಿ ಕಾಲಹರಣ ಮಾಡಿ ಎಲ್ಲರ ಕಣ್ಣಿಗೂ ಮೊದಲೇ ಕೀಳಾಗಿದ್ದಿ. ಸ್ವಲ್ಪ ದಿನ ಕಷ್ಟ. ಅನಂತರ ಸರಿಹೋಗುತ್ತೆ ಸುಮ್ಮನಿರು" ಎಂದು ಸಂತೈಸಿದಳು ತಾಯಿ.

ಲಿಲ್ಲಿ–ರೋಜಿಯರಿಬ್ಬರೂ ಬೆಂಚಿನ ಮೇಲೆ ಕುಳಿತು ಕಿಸಕ್ಕನೆ ನಕ್ಕರು.

* * * * *

ಮರಿಯಾ ಬಂದಾಗ ಮಕ್ಕಳಿಗೆ ರೊಟ್ಟಿಯನ್ನು ಹಂಚುವುದರಲ್ಲಿದ್ದಳು ತಾಯಿ. ಜಾಕ್ ಮೊದಲು ನೋಡಿದ್ದು ಅವಳ ಕೈಕಡೆಗೆ. ಬರಿಗೈ ಕಂಡಾಗ ಮನಸ್ಸು ಮುದುಡಿತು. ಇದ್ದ ರೊಟ್ಟಿಯಲ್ಲಿ ಅವಳಿಗೂ ಹಂಚಿಕೆಯಾಗಬೇಕು ಎನಿಸಿದಾಗ ಒಡಲುರಿಯಿಂದ ಮುಖ ಮುದುಡಿತು. ಬಾಯಿಬಿಟ್ಟು ಏನೂ ಹೇಳಲಿಲ್ಲ. ಅವಳೊಂದು ರೊಟ್ಟಿ ತಂದಿದ್ದರೆ ಏನು ನಷ್ಟವಾಗುತಿತ್ತೋ ಎಂದುಕೊಳ್ಳುತ್ತಲೇ ಗಂಜಿಯನ್ನು ನೆಕ್ಕತೊಡಗಿದ.

"ಅಪ್ಪನ ಸುಳಿವು ಸಿಕ್ಕಿತೇ ಹೇಗೆ?" ಕೇಳಿದಳು ಮರಿಯಾ.

"ಇಲ್ಲವೇ ಇಲ್ಲ. ಜನ ಹೇಳುವುದು ಹಣದೊಂದಿಗೆ ಪರಾರಿಯಾಗಿದ್ದಾನೆ ಎಂತಲೇ. ಎಲ್ಲರೂ ಅದೇ ಕೀಳು ಭಾವನೆಯಿಂದ ನನ್ನನ್ನು ಲೇವಡಿ ಮಾಡುವುದರಿಂದ ನನಗೆ ಅಲ್ಲಿ ಕೆಲಸ ಮಾಡುವುದೇ ಕಷ್ಟವಾಗಿದೆ. ಅಪ್ಪ ಖಂಡಿತ ಅಂತಹ ಕೆಟ್ಟ ಕೆಲಸ ಮಾಡಿರಲಾರ. ಇದೊಂದು ಬಿಡಿಸಲಾರದ ಸಮಸ್ಯೆಯಾಗಿದೆ."

ಜಾಕ್ ತಲೆಯೆತ್ತದೆ ಉತ್ತರಿಸಿದ ರೀತಿಯನ್ನು ಗಮನಿಸಿ ನಿಟ್ಟುಸಿರನ್ನು ಬಿಟ್ಟು, "ದೇವರೇ ಕಾಪಾಡಬೇಕು" ಎಂದಳು ಮರಿಯಾ.

ಅವನು ಎದ್ದು ಹೋಗಿ ಕೈತೊಳೆದು ತಲೆಗೂದಲಿನಲ್ಲಿ ಮನೆ ಮಾಡಿದ್ದ

ೂಳನ್ನು ಕೊಡವಿ ಹರಕು ಟವಲ್ಲಿನಿಂದ ಉಜ್ಜಿ ಉಜ್ಜಿ ತೆಗೆದು, ಬಟ್ಟೆಯನ್ನು ೀರಿನಲ್ಲಿ ಅದ್ದಿ ತೊಳೆದು ಹಿಂಡಿ ಹಾಕಿದ.

"ಅದಕ್ಕಿಂತ ತಲೆಗೆ ಸ್ನಾನ ಮಾಡಬಹುದಿತ್ತು."

"ಸೋಪೂ ಇಲ್ಲ; ನೀರೂ ಸಾಲದು."

ಸಂಕಟ-ಬೇಸರಗಳಿಂದ ಹೊರಬಿದ್ದ ನುಡಿಯನ್ನು ಕೇಳಿ ಮರಿಯಾ ುಮ್ಮನಾದಳು.

ಮೋನಾ ಲಂಚ್‌ಬಾಕ್ಸಿಗೆ ಅರ್ಧ ರೊಟ್ಟಿಯನ್ನು ತುಂಬಿ, ಮರಿಯಾಳಿ ೊಂದಿಷ್ಟು ನೀಡಿ ತನಗಾಗಿ ಎರಡು ತುಂಡುಗಳನ್ನು ಉಳಿಸಿಕೊಂಡಳು. ಾಕ್ ಕಾರ್ನೆಲ್ ಅದನ್ನು ಹಸಿದ ಕಣ್ಣುಗಳಿಂದ ನೋಡಿದ. ಅದೂ ತನಗೆ ಕ್ಕಿದ್ದರೆ ಅರೆಹೊಟ್ಟೆಯಾದರೂ ತುಂಬುತಿತ್ತು; ತಾನು ತುಂಬಾ ಕಷ್ಟಕರ ಾದ ಕೆಲಸ ಮಾಡುವವ ಎನಿಸದಿರಲಿಲ್ಲ. ಲಿಲ್ಲಿ-ರೋಜಿಯರು ಕೈನೆಕ್ಕುತ್ತ ನ್ನಿಷ್ಟು ಓಟ್ಸ್ ಗಂಜಿಗಾಗಿ ಕಾತರದಿಂದ ನೋಡುತಿದ್ದುದನ್ನು ಕಂಡ ುರಿಯಾ ಪಾತ್ರೆಯ ತಳದಲ್ಲಿ ಮೆತ್ತಿ ಉಳಿದಿದ್ದ ಗಂಜಿಯನ್ನು ಬಳಿದು ತಂಗಿ ುರ ತಟ್ಟೆಗೆ ಹಾಕಿದುದನ್ನು ಜಾಕ್ ನೋಡಿದ. ಇನ್ನುಳಿದುದು ತಾಯಿಯ ಾಲು ಮಾತ್ರ. ಅವಳ ಕಡೆ ಅತ್ಯಂತ ಆಶಾಲೋಲುಪ್ತಿಯಿಂದ ನೋಡುತ್ತ ನ್ನ ರೊಟ್ಟಿಯನ್ನು ನನಗೆ ಕೊಟ್ಟು ಉಪಕಾರ ಮಾಡು. ನಾನು ಅರೆ ೊಟ್ಟೆಯಲ್ಲಿ ಕೆಲಸ ಮಾಡಲಾರೆ. ಮನೆಯಲ್ಲಿ ನೀನು ಹೇಗಾದರೂ ಕಾಲ ಾಪನೆ ಮಾಡಬಹುದು. ಕೂಲಿಯಾದ ನನ್ನ ಸಂಕಷ್ಟವನ್ನು ದಯವಿಟ್ಟು ರ್ಥಮಾಡಿಕೊ. ನೀನು ಕೊಟ್ಟ ಆಹಾರ ನನಗೆ ಹಾದಿ ನಡೆಯಲೂ ಾಲದು ..." ಗೋಗರೆದ ಜಾಕ್ ಕಾರ್ನೆಲ್.

ಮೋನಾ ತನ್ನ ಪಾಲಿನ ರೊಟ್ಟಿಯನ್ನು ಅವನ ತಟ್ಟೆಗೆ ಹಾಕುವುದರಲ್ಲಿ ಯೋಚಿಸಲಿಲ್ಲ. ಅವನು ಗವಗವನೆ ತಿಂದು ಗಣಿಯ ಕಡೆ ಹೊರಟ. ೋನಾ ನಿಸ್ಸಾಯಕತೆಯಿಂದ ನೋಡಿದಳು.

* * * *

ವ್ಯಾನ್‌ಗಳೂ ಲಾರಿಗಳೂ ಬಿರುಸಿನಿಂದ ಓಡಾಡುತ್ತಿವೆ. ಕೆಲಸವು

ತ್ವರಿತಗತಿಯಲ್ಲಿ ನಡೆಯುತ್ತಿದೆ. ಹೊರಬಿದ್ದ ಆದಿರೂ ಕಲ್ಲುಮಣ್ಣುಗಳ
ವಾಹನಗಳ ಮೂಲಕ ಹೊರಹೋಗುತ್ತಿವೆ. ಮಾತಿನ ಮರ್ಮರ, ವಾಹ
ಗಳ ಸದ್ದು, ಯಂತ್ರಗಳ ಸದ್ದು, ಹಾರೆ-ಪಿಕಾಸಿಗಳ ಸದ್ದು ಅವ್ಯಾಹತವಾ
ಕರ್ಣದೇಶಗಳನ್ನು ತುಂಬುತ್ತಿವೆ. ಮೇಸ್ತ್ರಿಗಳೂ, ಕಂಟ್ರಾಕ್ಟ್‌ದಾರ
ಅತ್ತಿತ್ತ ಓಡಾಡುತಿದ್ದಾರೆ. ಗಣಿಯ ತುಂಬೆಲ್ಲಾ ಜನ....ಜನ. ಎಲ್ಲಿ ನೋ
ದರೂ ಜನವೇ ಜನ.

ಸಹ ಕೆಲಸಗಾರರು ಹಿಂದಿನಂತೆಯೇ ಕೀಟಲೆಗಾರಂಭಿಸಿದರು "ಲೇ ಕ
ಗೋಟ್! ನೀನು ಅರ್ಧಗಂಟೆ ಹಿಂದಾಗಿ ಬರುತ್ತಿ, ನಿನ್ನಂತಹ ಮೂ
ಭೀಘಾಂ ಗಣಿಯಲ್ಲಿ ಕೆಲಸ ಮಾಡುವುದು ಸಾಧ್ಯವೇನೋ?....ಹಿಹ್ಹಿಹ್ಹಿ

"ಉಟಾಹ್ ಪ್ರಾಂತ್ಯದ ನಗರಗಳಲ್ಲಿ ಮಾತ್ರವಲ್ಲ; ಸಾಲ್ಟ್‌ಲೇಕ್
ಕಲ್ಲು ಕಟ್ಟಿಕೊಂಡು ಮುಳುಗಿದರೂ ಜಾನ್ ಕಾರ್ವೆಲ್ಲನನ್ನು ಹಿಡಿದು ತಂ
ತರುತ್ತಾರೆ. ವಾಷಿಂಗ್‌ಟನ್, ನ್ಯೂಯಾರ್ಕ್ ಎಲ್ಲೇ ಹುದುಗಿದ್ದರೂ ಬಿಡು
ದಿಲ್ಲ ಬಿಡು! ಅವನು ಸುಮ್ಮನೇ ಹೋಗಿಲ್ಲ; ಹೆಂಡತಿ ಮುದುಕಿ, ಮಗ ದ
ಇವರಿಗೆ ನಾನಾದರೂ ಏಕೆ ದುಡಿದು ಹಾಕಲಿ ಎಂಬ ತೀರ್ಮಾನಕ್ಕೆ ಬಂ
ಹಣದೊಂದಿಗೆ ಪರಾರಿಯಾಗಿದ್ದಾನೆ! ಇಷ್ಟರೊಳಗಾಗಲೇ ಹೊಸ ಹೆಂ
ಪಡೆದುಕೊಂಡು ಮಜ ಮಾಡುತ್ತಿರುತ್ತಾನೆ! ವ್ಹಾರೆವ್ಹಾ! ಏನು ಮಜ

ಯಾರೋ ಅಂದ ಮಾತಿಗೆ ಎಲ್ಲರೂ "ಹ್ಹೋ" ಎಂದು ಕೈ ಚಪ್
ತಟ್ಟಿ ನಕ್ಕರು.

"ಅಷ್ಟೇ ಅಲ್ಲ, ಬ್ರಾಂಡಿ, ವಿಸ್ಕಿ, ಚಿಕನ್, ಪೋರ್ಕ್! ಇನ್ನೂ ಏನ
ಬೇಕು?"

ಜಾಕ್‌ಗೆ ಒಬ್ಬೊಬ್ಬರನ್ನೂ ಚೆಚ್ಚಿ ಬಿಡಲೇ ಎಂಬಷ್ಟು ರೋಷ . ಆ
ನೂರಾರು ಮಂದಿ, ಇವನೊಬ್ಬ. ಒಮ್ಮೆ ಕೆಲಸ ಬಿಟ್ಟು ಹೋಗಿ ಬಿ
ಎಂಬ ಯೋಚನೆ....ಆದರೆ ಕಡುಬಡುತನದ ಮೂರ್ತರೂಪ,
ಮುತ್ತಲೂ ಹಲ್ಕಿರಿದು ಅಣಕಿಸುತ್ತದೆ. ಬೃಹದ್ ಜಗತ್ತಿನ ಕಟು
ಮುಂದೆ ತನ್ನ ಹೋರಾಟ ಎತ್ತ? ಛಿಕ್!

ಜಾಕ್ ಪಿಕಾಸಿಯನ್ನು ಕೈಕೊಂಡು ಜೋರಾಗಿ ಅಗೆಯತೊಡಗಿದಾ
ಪೀಟರ್ ಉಸ್ತುವಾರಿಗಾಗಿ ಅಲ್ಲಿಗೆ ಬಂದ. ಜೊತೆಯಲ್ಲಿ ಇನ್ನೊಬ್ಬ ಕಂಟ

ಾರನೂ ಇದ್ದ. ಜಾಕ್ ಕಾರ್ವೆಲ್ ಒಮ್ಮೆ ಅತ್ತ ಮೌನಗತಿಯಲ್ಲಿ ನೋಡಿ
ನ್ನ ಕೆಲಸವನ್ನು ಮುಂದುವರಿಸಿದ. ಅದೊಂದು ಇತ್ತೀಚೆಗೆ ಭೂಕುಸಿತ
ಂದುಂಟಾದ ದಿಬ್ಬ. ಅವನೊಂದಿಗೆ ಇನ್ನೂ ನ ಲ್ವಾರು ಮಂದಿ ಕಾರ್ಮಿಕರು
ದೇ ಮಣ್ಣನ್ನು ಅಗೆದು ಲಾರಿಗಳಿಗೆ ತುಂಬುತಿದ್ದರು. ಪೀಟರ್ ಎದುರಿಗಿ
ದ್ದರಿಂದ ತೆಗಳಿಕೆ ಅಷ್ಟಕ್ಕೆ ನಿಂತರೂ ವ್ಯಂಗ್ಯ ನೋಟ, ಕುಹಕ ನಗೆಗಳ
ಬಾಣಗಳು ಸದ್ದಿಲ್ಲದೆ ಹಾರುತ್ತಿದ್ದವು. ಜಾಕ್ ಕಾರ್ವೆಲ್ ತಲೆಬಾಗಿ
ಗೆಯುತ್ತಲೇ ಇದ್ದ. ಧೂಳೀಧೂಸರಿತವಾದ ತಲೆ ಮೈಗಳಲ್ಲಿ ಬೆವರಿನ
ಜ್ಜನವಾಗುತಿತ್ತು. ತನ್ನ ತಂದೆ ಎಷ್ಟೆಷ್ಟು ಪರಿಯಲ್ಲಿ ಈ ಕಷ್ಟವನ್ನು
ನುಭವಿಸಿದ್ದಾನೋ ಎಂಬ ನೆನವರಿಕೆಯಲ್ಲೇ ಪಿಕಾಸಿಯನ್ನು ಎತ್ತಿ ಜೋರಾಗಿ
ಗೆದಾಗ ಚರ್ಮದ ಭಾಗ್ಯೊಂದು ಪಿಕಾಸಿಗೆ ಸಿಕ್ಕಿ ಮಣ್ಣಿನ ರಾಶಿಯಿಂದ ಪುಟ
ಗೆದು ಹೊರಬಿತ್ತು !

"ಹಾ ! ಏನದು ನೋಡು !"

ಪೀಟರ್ ಒಂದು ಹೆಜ್ಜೆ ಮುಂದಿಟ್ಟು ಆಶ್ಚರ್ಯ ವಿಸ್ಮೃತ ನಯನಗಳಿಂದ
ೋಡಿದ.

ಮಣ್ಣನ್ನು ಇನ್ನಷ್ಟು ಅಗೆದಾಗ ನಜ್ಜುಗುಜ್ಜಾದ ಜರ್ಜ್ ಕಾರ್ವೆಲ್ಲನ
ಾರ್ಥಿವ ಶರೀರ ದೃಷ್ಟಿಗೆ ಬಿತ್ತು ! ಜಾಕ್ ಕಾರ್ವೆಲ್ ಅದನ್ನು ಬಿಗಿದಪ್ಪಿ
ಅಪ್ಪಾ!" ಎಂದ ಗದ್ಗದಿತ ಕಂಠನಾಗಿ.

ಆ ಚೈತ್ರ್ಯಾಕ್ಷಿಗಳು

ಸದ್ಭಿಸ್ತು ಲೀಲಯಾ ಪ್ರೋಕ್ತಂ ಶಿಲಾಲಿಖಿತಮಕ್ಷರಂ ।
ಅಸದ್ಭಿಃ ಶಪಥೇ ನೋಕ್ತಂ ಜಲೇಲಿಖಿತಮಕ್ಷರಂ ॥

ಈ ಊರಿಗೆ ವರ್ಗವಾದಾಗ ನನಗೆ ನಿಜಕ್ಕೂ ತೀರಾ ಬೇಸರ–ಸಿರುತ
ಇನ್ನೂ ಏನೇನೋ.... ಹೇಳಿಕೊಳ್ಳಲಾರದಷ್ಟು ಕಿಸಿಸಿಗೆ–ಮುಜುಗರ.

ಆದರೂ, ಕರ್ತವ್ಯಚ್ಯುತನಾಗಲು ಇಷ್ಟಪಡದೆ ಇಲ್ಲಿಗೆ ಬಂದು ನಿನ್ನೆ
ಛಾರ್ಜ ತೆಗೆದುಕೊಂಡೆ. ನಾನು ಯಾವತ್ತೂ ಹೊತ್ತಿಗೆ ಮುಂಚೆ
ವಾಯುವಿಹಾರಾರ್ಥ ತಿರುಗಾಡಿ ಬರುವುದು ವಾಡಿಕೆ. ನಿನ್ನೆಯಷ್ಟೆ ಬಂದ
ನಾಳೆ–ನಾಡಿದ್ದು ಹೊರಟರಾಯ್ತು ಎಂಬ ಭಾವ ಮನದಲ್ಲಿ. ಮುಂಜಾವಿ
ಏಳುವ ರೂಢಿಯಿಂದ ಹಾಸಿಗೆಯಲ್ಲಿ ಮಲಗಿರಲಾಗಲಿಲ್ಲ ಎದ್ದು ಹೊರಹೊ

ಪ್ರಾತಃಕಾಲವೂ ಹಿತಕರ; ವಾತಾವರಣವೂ ಹಿತಕರ; ವಿವಿಧ ಪ
ರಾಗಾಲಾಪವಂತೂ ಸುರಮ್ಯ. ಅಂದಮೇಲೆ ಕಂಡರಿಯದ ಹಾದಿಯಲ್ಲಿ

ದೇಶವೇಯದಿದ್ದರೂ ಕಾಲುಗಳು ಸರಾಗವಾಗಿ ನಡೆದುವು. ಮುಂದೆ ದೂರ ಲ್ಲಿ ಭವ್ಯದೇವಾಲಯದ ಗೋಪುರ. ಇಲ್ಲಿಂದ ಅಲ್ಲಿಯವರೆಗೂ ಬಯಲು ,ದೇಶ. ಅಲ್ಲಲ್ಲಿ ಕೆಲವು ಗಿಡಗೆಂಟೆಗಳು, ಹೆಮ್ಮರಗಳು ವಿನಾ ಮನೆ ಮಠ ಳೇನೂ ಕಂಡು ಬರಲಿಲ್ಲ. ನಿರ್ಜನ ಪ್ರದೇಶವಾದುದರಿಂದ ಬಲು ದೂರ ಡೆಯುವ ಇಚ್ಛೆ ಮೂಡಿತು ಮನದಲ್ಲಿ. ದೇವಾಲಯದವರೆಗೂ ಹಾದಿ ಾಗಿದುದೇ ತಿಳಿಯಲಿಲ್ಲ. ದೇವಾಲಯದ ಸನಿಹದಲ್ಲೇ ನಾಲ್ಕೂ ಕಡೆ ಕಲ್ಲಿನ ೋಪಾನಗಳಿರುವ ಸುಂದರ ಪುಷ್ಕರಣಿ. ಮತ್ಸ್ಯ ಸಮೂಹ ಮೆಟ್ಟಿಲಿನ ಂಚಿನಲ್ಲೇ ಸುಳಿಯುತ್ತಿದೆ. ಯಾರೋ ಅವುಗಳಿಗೆ ಪುರಿ ಚೆಲ್ಲಿದಾಗ ತೀರದ ುೇಲೆ ಚೆಲ್ಲಿದ್ದ ಸ್ವಲ್ಪ ಕಾಳುಗಳು ದೃಷ್ಟಿಗೆ ಬಿದ್ದುವು. ಅದನ್ನು ಹೆಕ್ಕಿ ನೀರಿ ೆದೆ. ಆ ಕೆಲವೇ ಕಾಳುಗಳಿಗೆ ಬಂಡೆದ್ದು ಬಂದ ಮೀನುಗಳನ್ನು ನೋಡಿ ರುಳು ಕರುಣೆಯಿಂದ ಮಿಡಿಯಿತು.

ಅಲ್ಲಿಂದ ಮುಂದೆ ಸಣ್ಣ-ದೊಡ್ಡ ಮನೆಗಳಿಂದ ಕೂಡಿದ ಸಾಮಾನ್ಯ ೂರು. ಗ್ರಾಮ್ಯಜೀವನಕ್ಕೆ ಹೊಂದಿಕೊಂಡ ನಾಗರಿಕತೆ. ಅಗಲೇ ಚಟು ಟಿಕೆ ನಡೆಸುತ್ತಿದ್ದ ಗ್ರಾಮೀಣ ಮಂದಿ ಅಲ್ಲಲ್ಲಿ ಕಂಡು ಬಂದರು.

ಹಿಂದಿನಿಂದ ಲರಕ್ ಲರಕ್ ಪಾದ ಸಪ್ಪಳ ಕೇಳಿ ಬಂತು. ಸುಮ್ಮನೆ ಹಜವಾಗಿ ಸದ್ದು ಬಂದತ್ತ ದೃಷ್ಟಿ ಹೊರಳಿಸಿದರೆ ಸುಂದರ ತರುಣನೊಬ್ಬ ಬಾಲಿಸಿ ಬರುತಿದ್ದುದು ಕಂಡು ಬಂತು. ಅವನು ಕೆಲವೇ ಕ್ಷಣಗಳಲ್ಲಿ ಸನಿ ೈತಂದು ವಿನಮ್ರತೆಯಿಂದ ಕರಗಳನ್ನು ಜೋಡಿಸಿ "ನಮಸ್ಕಾರ ಡಾಕ್ಟರ್!" ದ. ತುಟಿಗಳಲ್ಲಿ ಸ್ವಾಗತದ ಕುರುಹಾದ ಮುಗುಳು ನಗೆ ಅರಳಿತು.

ನಾನು ಪ್ರತಿ ವಂದಿಸಿದೆ "ನಮಸ್ಕಾರ"!

ನೀವು ಈ ಊರಿಗೆ ಹೊಸಬರು. ಇನ್ನು ಹೊಸದಾಗಿ ನಮ್ಮ ಪರಿಚಯ ಗಬೇಕು. ನನ್ನ ಹೆಸರು ಮಹೇಶ. ನಾನು ಮೈಸೂರು ಯೂನಿವರ್ಸಿಟಿಯ ವೀಧರ. ಪಿ.ಹೆಚ್.ಡಿ. ಮಾಡಿ ಅಲ್ಲೇ ಕೆಲಸ ಮಾಡುತ್ತಿರುವೆ ಎಂದ ಾಗತ ತರುಣ.

"ಓ! ತುಂಬಾ ಸಂತೋಷ!" ನಾನು ಹಾರ್ದಿಕವಾಗಿ ಕೈಕುಲುಕಿದೆ

"ನಾನು ಇದೇ ಊರಿನವ. ನಿಮಗೆ ನಮ್ಮ ಊರಿನ ಹೊಂದಿಕೆ .."

ಮಾತು ಅಷ್ಟಕ್ಕೆ ತುಂಡುಗಡಿಯಿತು. ಏನೋ ಒಂದು ಬಗೆಯಲ್ಲಿ ಅರ್ಥ ಗರ್ಭಿತವಾಗಿ ಸುಮ್ಮನಾದ.

"ಕಾಲಕ್ರಮೇಣ ಹೊಂದಿಕೆ ಆಗಲೇಬೇಕು; ಆಗುತ್ತೆ ಬಿಡಿ" ಲೋಕಾಭಿ ರಾಮವಾಗಿ ನುಡಿದೆ ನಾನು.

"ಇಲ್ಲಿ ಪ್ರಕೃತಿದೇವಿ ವರದಹಸ್ತಗಳಿಂದ ಸಕಲ ಸೌಭಾಗ್ಯವನ್ನು ನೀಡಿ ನಮ್ಮನ್ನು ಪೂರ್ಣ ಮನಸ್ಸಿನಿಂದ ಆಶೀರ್ವದಿಸಿದ್ದಾಳೆ. ಪ್ರಕೃತಿದತ್ತವಾದ ಎಲ್ಲವನ್ನೂ ಜನ ಉಪಯೋಗಿಸಿಕೊಳ್ಳಬಲ್ಲರಾದರೆ ಸುಖ-ಸಂತೋಷಗಳಿಗೆ ಖಂಡಿತ ಕೊರತೆ ಇಲ್ಲ. ವಿದ್ಯಾದಾರಿದ್ರ್ಯ-ಜ್ಞಾನದಾರಿದ್ರ್ಯಗಳಿಂದ ಪ್ರಗತಿ ತೀರಾ ಕುಂಠಿತ, ಅದೇ ವ್ಯಸನ."

"ಕಾಲ ಪಕ್ವವಾಗಬೇಕು."

"ಅಂದರೆ ಯಾವ ತಲೆಮಾರಿಗೊ" ....ಅಲ್ಲಿಯತನಕ ನಮ್ಮ ಕತೆ ?

"ನಿಮ್ಮಂತಹ ವಿದ್ಯಾವಂತರು ಸುಧಾರಣೆಗಾಗಿ ಪ್ರಯತ್ನಿಸಬೇಕು."

"ನಮ್ಮ ಮಾತಿಗೆ ಬೆಲೆಯಿದ್ದರೆ...." ಮುಂದೇನೋ ಹೇಳಬಯಸಿದ್ದರೂ ಮಾತು ಹೊರಡದೆ ತರುಣ ಉಗುಳು ನುಂಗಿದ. ಮುಖಬಿಂಬ ಮ್ಲಾನ ವಾಯಿತು.

ನಾನು ಆತನ ಮನದಲ್ಲಿನ ಕಹಿಭಾವನೆಯನ್ನು ಮನದಲ್ಲೇ ಮೆಲಕು ಹಾಕಿದೆ. ಭಾರತದಾದ್ಯಂತ ಇಂತಹ ಪರಿಸ್ಥಿತಿ ಇದ್ದದ್ದೆ. ಸಿಹಿ-ಕಹಿಗಳನ್ನು ಪ್ರತಿಯೊಬ್ಬರೂ ಉಣ್ಣಲೇಬೇಕು ; ಅದು ಅನಿವಾರ್ಯ.

ಇಬ್ಬರೂ ಒಂದುಗೂಡಿ ಹೆಜ್ಜೆ ಹಾಕಿದೆವು. ಹಾದಿ ಬಲು ದೂರ ಸಾಗಿತು.

"ಮನುಷ್ಯರಾಗಿ ಹುಟ್ಟಿ ಮಾನವೀಯತೆ ಇಲ್ಲದೆ ಹೋದರೆ ಕಷ್ಟ."

ಅವನು ಒಡಲ ಸಂಕಟವನ್ನು ತೋಡಿಕೊಂಡ.

"ಇಲ್ಲಿ ಸ್ಕೂಲು-ಕಾಲೇಜುಗಳಿಲ್ಲವೇ ?"

"ಇವೆ...ಎಲ್ಲವೂ ಇವೆ. ಕಲಿತರೂ ಜೀರ್ಣಿಸಿಕೊಳ್ಳುವವರು ವಿರಳ. ಮುಖ್ಯವಾಗಿ ಬುದ್ಧಿಯೇ ಇಲ್ಲ. ಪರಸ್ಪರ ದ್ವೇಷ ಹೊಡೆದಾಟ ಕಟ್ಟಿಟ್ಟಬುತ್ತಿ. ಅದೇ ಮನಸ್ಸಿಗೆ ಬೇಸರ-ಜುಗುಪ್ಸೆ."

ಹೀಗೆಯೇ ಮುಂದುವರಿಯಿತು ಸಂಭಾಷಣೆ.

ಮಹೇಶ ನನ್ನೊಡನೆ ಆಸ್ಪತ್ರೆಯವರೆಗೂ ಹಿಂದಿರುಗಿ ಬಂದು ವಾಯು
ಹಾರವನ್ನು ಕೊನೆಗಾಣಿಸಿದ.

ಅವನು ಉತ್ತಮ ವಾಗ್ಮಿಯೂ ಹೌದು. ನಯ-ವಿನಯಗಳ ಅಭಿ
ವ್ಯಕ್ತಿಯೂ ಹೌದು. ಆ ಅಪರಿಚಿತವಾದ ಊರಿನಲ್ಲಿ ಆತನ ಪರಿಚಯವಾ
ದುದು ನನಗೆ ಎಷ್ಟೋ ಸಮಾಧಾನ.

* * * *

ಊರಿನಲ್ಲೆಲ್ಲಾ ಡಿಂಗೂ ಜ್ವರದ ಪಿಡುಗು ಭಯಂಕರವಾಗಿ ವ್ಯಾಪಿಸಿತು.
ನ್ನಗೆ ಇನಿತೂ ಬಿಡುವು ದೊರೆಯದಷ್ಟು ಕೆಲಸ. ಆಸ್ಪತ್ರೆಯಲ್ಲಲ್ಲದೆ ಮನೆ
ಮನೆಗಳಿಗೂ ಹೋಗಿ ಬರುವ ಸಂಕಷ್ಟವೂ ಅಂಟಿತು. ಅಪರಾತ್ರಿಯ ಕರೆ
ಗಳಿಗೂ ಕೊರತೆಯಿರಲಿಲ್ಲ. ಊಟ-ನಿದ್ರೆಗಳಿಗೆ ಸಮಯ ಒದಗಿಸಿಕೊಳ್ಳು
ವುದು ಕಷ್ಟ. ಊರು ಸಣ್ಣದೇನೂ ಅಲ್ಲ. ದಿನವೂ ಹತ್ತಾರು ಮೈಲಿಯ
ಡಿಗೆ ಮತ್ತು ಚಿಕಿತ್ಸೆ ಈ ಆಸ್ಪತ್ರೆಯಲ್ಲಿದ್ದ ಇನ್ನೊಬ್ಬ ಸಹಾಯಕ ವೈದ್ಯ
ರ್ಗವಾಗಿ ಎಂದೋ ......ಸಧ್ಯ, ನಾನೊಬ್ಬನೇ ವೈದ್ಯ. ಸರಕಾರಕ್ಕೆ ನನ್ನ
ಂದರೆಯನ್ನು ನಿವೇದಿಸಿ ಇನ್ನೊಬ್ಬ ಸಹಾಯಕ ವೈದ್ಯನನ್ನು ಕಳುಹಿಸಿ
ಡಬೇಕೆಂದು ತೀರಾ ಆಗ್ರಹಪೂರ್ವಕವಾಗಿ ಬರೆದುಕೊಂಡೆ. ಆ ಕಿವುಡು
ರಕಾರ ವೈದ್ಯರನ್ನು ಕಳುಹಿಸುವುದಿರಲಿ, ಉತ್ತರಿಸುವ ತೊಂದರೆಯನ್ನೂ
ಗೆದುಕೊಳ್ಳಲಿಲ್ಲ. ನಿರಾಸೆ ಹೃದಯ ತಂತುಗಳನ್ನು ಸುಡುತ್ತಿದ್ದರೂ ಅತೀವ
ರ್ಯಭಾರ ಭುಜದ ಮೇಲೆ.

ಕ್ರಮಕ್ರಮೇಣ ಊರೊಳಗೆ ವಿಷಮಶೀತ ಜ್ವರವೂ ಕಾಣಿಸಿಕೊಳ್ಳ
ಡಗಿತು. ನೈರ್ಮಲ್ಯ ಕಾಣದ ಊರು. ಅಜ್ಞಾನಿಗಳಾದ ಜನ. ಅಂದಮೇಲೆ
ಳುವುದೇನು? ಈಗ ಇದ್ದದ್ದೂ ಹೆಚ್ಚು ಕೆಲಸ. ರೋಗ ನಿರೋಧಕ
ಚ್ಚುಮದ್ದು ಕೊಡುವುದೊಂದಾದರೆ ರೋಗನಿವಾರಕ ಚಿಕಿತ್ಸೆ ಇನ್ನೊಂದು.
ಎಡೆಯಿಲ್ಲದ ವ್ಯವಹಾರದಲ್ಲಿ ನಾನು ಬಳಲಿ ಬೆಂಡಾದೆ.

ಬೆಳಗಿನ ಒಂಭತ್ತರ ಸಮಯ. ಒಳಹೊರಗೆ ರೋಗಿಗಳು ತುಂಬಿ
ಗಿದ್ದಾರೆ.

ಬರೆಯುತ್ತಿದ್ದ ಚೀಟಿಯನ್ನು ಪೂರ್ತಿಗೊಳಿಸುವ ಮುನ್ನ ಮಾದಕದನಿಯೊಂದು ಕಿವಿಯನ್ನು ಮೃದುವಾಗಿ ಮುಟ್ಟಿತು–"ಡಾಕ್ಟರೇ!"

ಒಂದೆರಡು ಗಳಿಗೆಯಲ್ಲಿ ಚೀಟಿಯನ್ನು ಬರೆದು ಮುಗಿಸಿ ತಲೆಯೆತ್ತಿ ನೋಡಿದೆ. ತುಂಬಿದ ಜನಸಂದಣಿಯನ್ನು ದಾಟಿ ಸಮಿಪಕ್ಕೆ ಬಂದಿದ್ದಾಳೆ ಹದಿಹರೆಯದ ಹುಡುಗಿ. ಆ ದುಂಡು ಮುಖಬಿಂಬದಲ್ಲಿ ಅರಳಿದ ಸುಂದರ ಚೈತ್ರಾಕ್ಷಿಗಳು!

ಅಹಾ! ಭಗವಂತನ ಸೃಷ್ಟಿ ಎಷ್ಟು ಅಮೋಘ! ಅವು ಯಾವುದೋ ವಿಶಿಷ್ಟ ಸಂದರ್ಭಕ್ಕಾಗಿ ಹೇಳಿ ಮಾಡಿಸಿದಂತಹ ಉಜ್ವಲ ಕಾಂತಿಯ ಹರವಾದ ಕಣ್ಣುಗಳು! ಒಂದು ಗಳಿಗೆ ಅವುಗಳಿಂದ ದೃಷ್ಟಿಯನ್ನು ಕೀಳಲಾಗಲಿಲ್ಲ. ಆ ಮುಹೂರ್ತದಲ್ಲಿ ನಾನು ನಿಜವಾಗಿಯೂ ಮೈಮರೆತೆ.

"ಡಾಕ್ಟರೇ! ಮನೆಯಲ್ಲಿ ಎಲ್ಲರೂ ಜ್ವರದಿಂದ ಮಲಗಿದ್ದಾರೆ. ನಿಮ್ಮನ್ನು ಮನೆಗೆ ಬಂದು ನೋಡಿ ಹೋಗಲು ಕೇಳಿಕೊಂಡಿದ್ದಾರೆ ಅಪ್ಪ!"

"ಯಾರ ಮನೆ? ಯಾರ ಮಗಳು ನೀನು?"

"ದೇವಾಲಯದ ಬಲಪಕ್ಕದ್ದೆ ನಮ್ಮ ಮನೆ. ನಾನು ಭೀಮಣ್ಣನ ಮಗಳು!"

"ಈಗ ಸಾಧ್ಯವಾಗದು ಮಗೂ! ಕೆಲಸ ಮುಗಿದನಂತರ ಬರುವೆ."

"ಮೈ ಸೀದುಹೋಗುವಷ್ಟು ಜ್ವರ ಬಂದಿದೆ ಅಪ್ಪನಿಗೆ! ಅಣ್ಣಂದಿರಿಗೂ ಜ್ವರ! ತುಂಬಾ ಭಯವಾಗುತ್ತೆ ಡಾಕ್ಟರೇ!" ಅಮಾಯಕ ದನಿಯಲ್ಲಿ ದೈನ್ಯತೆಯ ಝರಿ ಹರಿದು ಬಂದಾಗ ಆ ಸುಂದರ ಕಣ್ಣುಗಳಲ್ಲಿ ಭಾವುಕತೆಯ ಛಾಯೆ ಇಣಿಕಿಣಿಕಿ ಮಾಯವಾಯಿತು.

"ಮಧ್ಯಾಹ್ನ ಬಂದು ನೋಡುವೆ."

"ಬೇಗ..." ಮುಂದೆ ಮಾತು ಹೊರಡದೆ ತುಟಿಕಚ್ಚಿದಳು ಹುಡುಗಿ.

"ಆಗಲಮ್ಮಾ, ಆಗಲಿ."

ಅವಳು ಕೊನೆಯ ನೋಟ ಬೀರಿದಾಗ ನಿಜವಾಗಿಯೂ ಆ ಮಿಂಚುಗಣ್ಣಿನ ಹೊಳಪಿನಲ್ಲಿ ಎಂತಹ ಸತ್ಯ ಸೌಂದರ್ಯವಿತ್ತು? ಬಹುಶಃ ನಾನು ಇದುವರೆವಿಗೂ ಇಂತಹ ಸುಂದರ ಕಣ್ಣುಗಳನ್ನು ನೋಡಿಯೇ ಇರಲಿಲ್ಲ. ಅಂತರಂಗಿಕವಾಗಿ ಎಷ್ಟು ಅಪರೂಪದ ಕಣ್ಣುಗಳು ಎಂದುಕೊಂಡೆ. ಯಾರಾದರೂ

ಶುಕವಿಗಳು ಪ್ರತ್ಯಕ್ಷವಾಗಿ ಗಮನಿಸಿದ್ದ ಪಕ್ಷದಲ್ಲಿ ಎಂತಹ ಕಾವ್ಯಮಯ ರ್ಣನೆ ಹೊರಬೀಳುತಿತ್ತೋ ಏನೋ……

ಅವಳು ಹಿಂದಿರುಗುವ ವೇಳೆಗೆ ತಲೆಬಾಗಿಲಲ್ಲಿ ಮಹೇಶ ಎದುರಾದ. ಂದೇ ಬಾರಿಗೆ ಇಬ್ಬರ ಮುಖಗಳೂ ಮಂದಾರ ಪುಷ್ಪದಂತೆ ಅರಳಿ ಪ್ರಸನ್ನ ಾದುವು.

“ನೀನೇಕೆ ಬಂದೆ ? ಮನೆಯಲ್ಲಿ ಇನ್ನಾರೂ ಇಲ್ಲವೇ ?” ಅಚ್ಚರಿಯಿಂದ ುಬ್ಬೇರಿಸಿ ಕೇಳಿದ ಮಹೇಶ.

“ಎಲ್ಲರಿಗೂ ಜ್ವರ !”

“ಡಾಕ್ಟರಿಗೆ ಹೇಳಿದ್ದೀಯಾ ಲಲೀ ?”

“ಹ್ಞೂ …” ಪ್ರಸನ್ನಮಯಿಯಾಗಿ ನುಡಿದಳು ಅವಳು. ಆಗ….ಆಗ, ಮುಹೂರ್ತದಲ್ಲಿ ಆನಂದವನ್ನು ಪರಮಾನಂದಗೊಳಿಸುವಂತಹ ಅಪೂರ್ವ ನ್ನಿವೇಶವನ್ನು ನಾನು ಕಂಡೆ.

ಅವಳು ಮಿಂಚಿನಂತಹ ಕುಡಿ ನೋಟ ಬೀರಿ ಹೊರಟಳು.

ಮಹೇಶ್ ಅಂತರತರವೆಲ್ಲಾ ಹಚ್ಚ ಹಸುರಾಗಿ ಉಕ್ಕೇರಿ ಬಂದಂತೆ ಹಸ ುಖಿಯಾಗಿ ಅಂದ.

“ನಿನ್ನೆಯಿಂದ ನನಗೂ ಜ್ವರ ಸಾರ್ ! ಮೈಕೈ ನೋವು, ತಲೆ ೋವು….”

“ಓ ನಿಮಗೂ ಅಂಟಿತೆ ಈ ಪಿಡುಗು ?”

“ಹೌದು, ಡಾಕ್ಟರ್ ! ಅಂಟುರೋಗ ಅಂದ ಮೇಲೆ….”

ಮಹೇಶನಿಗೂ ಔಷಧಿಯನ್ನು ಕೊಟ್ಟೆ.

ಹೊರರೋಗಿಗಳ ಚಿಕಿತ್ಸೆ ಮುಗಿಸುವಾಗ ಮಧ್ಯಾಹ್ನ ಮೂರುಗಂಟೆ.

* * * *

ಅವಳೆಂದಂತೆ ದೇವಸ್ಥಾನದ ಮಗ್ಗುಲಿಗೇ ಭೀಮಣ್ಣನ ಮನೆ.

ಹುರಿ ಮೀಸೆಯ ಹಿರಿಯ ಕಟ್ಟಾಳುಗಳು ಜ್ವರದ ಕಾವಿನಿಂದ ಬೇಯುತಿ ದ್ದರು. ಹಳೆಯ ಕಾಲದ ಮನೆ. ಗಾಳಿ ಬೆಳಕುಗಳಿಗೆ ತೀವ್ರ ಅಭಾವ. ತ್ತಂಕೆಯಲ್ಲಿದ್ದ ಸ್ತ್ರೀಯರು ಅಲ್ಲಲ್ಲೇ ಕಣ್ಮರೆಯಾದರು. ರೋಗಿಗಳಿಗೆ ಸೂಜಿ

ಮದ್ದು ಕೊಡುವಾಗ ಸಹಾಯಕಳಾಗಿ ಓಡಾಡುತಿದ್ದುದು ಆ ಸಿಡುಗಣ್ಣಿನ ಹುಡುಗಿ ಒಬ್ಬಳೇ. ಔಷಧಿ–ಪಥ್ಯ ಪಾನಾದಿಗಳನ್ನು ಕುರಿತು ತಿಳಿಯ ಹೇಳಿದೆ. ಏನೋ ಒಂದು ರೀತಿಯಲ್ಲಿ 'ಹ್ಞೂ' ಗುಟ್ಟಿದಳು, ಲಲಿತ.

"ಮತ್ತೆ ಬರುವಿರಾ ಡಾಕ್ಟರ್ ?" ಕೇಳಿದ ಭೀಮಣ್ಣ.

" ಮೂರು ದಿನ ಈ ಔಷಧಿ ತೆಗೆದುಕೊಳ್ಳಿ. ನೋಡೋಣ, ಅಷ್ಟರಲ್ಲೇ ಗುಣವಾಗಬಹುದು." ನಾನು ಹೊರಟೆ. ಆ ಸುಂದರ ಚುರುಕು ನೋಟ ಬೀಳ್ಕೊಟ್ಟಿತು.

ದೈವ ಸೃಷ್ಟಿಯ ವಿಜಯ ಘೋಷಣೆ !

ಅಲ್ಲಿಂದ ಹಿಮ್ಮರಳುವಾಗ ಇನ್ನೂ ಕೆಲವು ಕಡೆಗಳಲ್ಲಿ ರೋಗಿಗಳನ್ನು ನೋಡಿದ ನಂತರ ಮನೆ ಸೇರಿದೆ. ಸ್ವಲ್ಪಹೊತ್ತು ಉರುಳಿರಲಿಕ್ಕಿಲ್ಲ. ಬಾಗಿಲಲ್ಲಿ ಕಟ ಕಟ ಸದ್ದು !

ಕಟ. ಕಟ. ಕಟ. ಕಟ.

ಒಮ್ಮೆಗೇ ಜುಗುಪ್ಸೆಯಿಂದ ಮನಸ್ಸು ಮುದುಡಿತು.

ಏಳಲಾರದೇ ಎದ್ದು ಕದ ತೆರೆದೆ. ಮಹೇಶ ಇಬ್ಬರು ಗಾಯಾಳುಗಳ ಸಮೇತ ಕಾದಿದ್ದ. ಮುಖ ಬಿಂಬ ಬಾಡಿ ತುಂತುರು ತುಂತುರಾಗಿ ಸ್ವೇದ ಬಿಂದುಗಳು ಮೂಡಿದ್ದುವು. ಆತ್ಮವಿಸ್ಮೃತನಂತೆ–ಭ್ರಮಿತನಂತೆ ಕಂಡುಬಂದ.

"ಏನಪ್ಪಾ, ಇದು ಹೇಗಾಯಿತು ?

ಅವನು ಹೇಳಲಾರದೇ ಹೇಳಿದ "ಡಾಕ್ಟರ್ ! ಭೀಮಣ್ಣನ ಮಕ್ಕಳು ಗದ್ದೆಗೆ ನುಗ್ಗಿ ಹಿಗ್ಗಾಮುಗ್ಗಾ ಹೊಡೆದು ಬಡಿದು ಪ್ರಾಣಹಿಂಸೆ ನಡೆಸಿದ ರೀತಿ ಇದು. ಎರಡು ವರ್ಷಗಳಿಂದ ಇದೇ ಗೋಳು ನೋಡಿ. ನಾವು ಅವರ ಒಕ್ಕಲಾಗಿ ಭೂಮಿಯಲ್ಲಿ ಇಪ್ಪತ್ತು ವರ್ಷಗಳಿಂದ ದುಡಿದು ಅವರಿಗೆ ಗೇಣಿ ಕೊಟ್ಟವರು. ಇತ್ತೀಚಿನ ಕಾಯಿದೆಯಿಂದ ಜಮೀನು ನಮ್ಮ ಪಾಲಾದುದೇ ದ್ವೇಷಾಸೂಯೆಗೆ ಕಾರಣ. ಈ ರಾಣಾರಂಪ ಸಾಕಾಗಿದೆ...ಇದು ತೀರಾ ದುರದೃಷ್ಟಕರ. ಹೇಳಿಕೊಳ್ಳಲು ನಾಚಿಕೆಯಾಗುತ್ತೆ." ಅತ್ಯಂತ ವಿಜಾತೀಯವಾದ ದನಿಯಲ್ಲಿ ಕಳಕಳಿಯಿಂದ ಹೇಳಿಕೊಂಡ ಮಹೇಶ.

"ಅರೆ ! ಆಗಲೇ ಇಬ್ಬರೂ ಹಾಸಿಗೆ ಹಿಡಿದು ಮಲಗಿದ್ದರು ! ಔಷಧಿ ಕೊಟ್ಟು ಬಂದಿದ್ದೆ. ಈಗಾಗಲೇ ದೊಂಬಿ !"

"ಮಹಾ ಧೂರ್ತರು ! ಈ ಕಾಹಿಲೆ ಅವರನ್ನೇನು ಮಾಡೀತು"

ನಮ್ಮವರು ಭೂಮಿಗಿಳಿಯುವುದೇ ಕಷ್ಟ. ನಾನು ಕಳೆದ ತಿಂಗಳು ಮೈಸೂರಿಗೆ ಹೊರಡಬೇಕಿತ್ತು. ಈ ಹಗರಣದಿಂದಾಗಿ ಉಳಿದೆ. ಇವರಿಗೆ ಕಟ್ಟಬೇಕಾದ ಪರಿಹಾರಧನವನ್ನು ಆಗಲೇ ಸರಕಾರಕ್ಕೆ ಕಟ್ಟಲಾಗಿದೆ. ಆದರೂ ಜಿದ್ದು ಬಿಡುವವರಲ್ಲ. ದ್ವೇಷ ಸಾಧನೆಯಲ್ಲಿ ನಿಸ್ಸೀಮರು!"

"ತುಂಬಾ ವಿಷಾದಕರ."

"ಇದುವರೆಗೆ ಕುಳಿತು ಉಂಡವರು, ಈಗ ಹೊಲದಲ್ಲಿ ಮೈಬಾಗಿ ದುಡಿಯುವುದು ಕಷ್ಟ....ಆದರಿಂದಾಗಿಯೇ ರೋಷ–ಜಿದ್ದು."

ಗಾಯಾಳುಗಳ ಚಿಕಿತ್ಸೆ ಕೈಕೊಂಡೆ. ಮುಖ ತಲೆ ಬೆನ್ನುಗಳ ಗಾಯಗಳಲ್ಲಿ ನೆತ್ತರು ಜಿನುಗುತಿತ್ತು. ಚಿಕಿತ್ಸೆ ಮುಗಿಸಿ ಕೇಳಿದೆ "ಇದು ನಡೆದುದು ಯಾವಾಗ?"

"ಇದೀಗಷ್ಟೆ ...ಗದ್ದೆಯಿಂದ ಹೀಗೆಯೇ ಕರೆತಂದೆ"

ಅವನು ಕೃತಜ್ಞತಾ ಪೂರ್ವಕವಾಗಿ ವಂದನೆಯನ್ನರ್ಪಿಸಿ ಹೊರಟ.

*   *   *   *

ಇತ್ತೀಚಿನ ದಿನಗಳಲ್ಲಿ ರೋಗದ ಪಿಡುಗು ಸ್ವಲ್ಪ ಹತೋಟಿಗೆ ಬಂದುದರಿಂದ ನನ್ನ ಕೈಗಳಿಗೆ ಸ್ವಲ್ಪ ಬಿಡುವು. ದಿನವೂ ಬೆಳಿಗ್ಗೆ ವಾಯು ವಿಹಾರಾರ್ಥ ತಿರುಗಾಡಲು ಹೋಗುವಾಗ ಮಹೇಶನೂ ಕೂಡಿಕೊಳ್ಳುತಿದ್ದ. ಅವನ ಸಹಕೂಟದಿಂದ ಊರಿನ ವಿದ್ಯಮಾನಗಳು ತಿಳಿಯುತಿದ್ದುವು. ನಮ್ಮ ನಮ್ಮ ಸ್ನೇಹ ಬಂಧವೂ ಬಲಿಯ ತೊಡಗಿತು.

ಈ ದಿನ ಮಹೇಶ "ನಾನು ನಾಲ್ಕಾರು ದಿನಗಳಲ್ಲಿ ಮೈಸೂರಿಗೆ ಹೊರಡುವ ಯೋಜನೆಯಲ್ಲಿರುವೆ. ಪುನಃ ನಮ್ಮ ನಮ್ಮ ಭೇಟಿ ಇನ್ನಾವಾಗಲೋ ..." ಎಂದ

"ಓ ಹಾಗೋ ..."

"ಹೌದು."

"ಬೇಸಿಗೆ ರಜೆ ಕಳೆಯಿತು. ಇನ್ನೇನು ಸಧ್ಯ ರಜೆ ಸಿಗುವಂತಿಲ್ಲ ಅಲ್ಲವೇ?"

"ರಜೆ ಸಿಗದು. ತಿಂಗಳ ಕೊನೆಯಲ್ಲಿ ಒಂದೆರಡು ದಿನಗಳ ಬಿಡುವು ಮಾಡಿಕೊಂಡರೆ ಬಂದು ಹೋಗಬಹುದು ಅಷ್ಟೆ."

"ಇನ್ನೂ ನಾಲ್ಕಾರು ದಿನ ಇರುತ್ತೀರಷ್ಟೆ?"

"ಇಲ್ಲ....ಇಂದು ಅಕ್ಕನ ಮನೆಗೆ ಹೊರಡುವೆ. ಇಲ್ಲಿಂದ ಮೂವತ್ತು ಮೈಲಿ ದೂರದಲ್ಲಿರುವ ರಾಯಪುರದಲ್ಲಿದ್ದಾಳೆ. ಅಲ್ಲಿ ಮೂರು-ನಾಲ್ಕು ದಿನ ಕಳೆದು ಬಂದರೆ ಇಲ್ಲಿ ಪೆಟ್ಟಿಗೆ ಕಟ್ಟಿ ಹೊರಡುವುದಷ್ಟೆ...."

"ನಿಮ್ಮ ಸಹಕೂಟ ನನಗೆ ಹಿತವೆನಿಸುತಿತ್ತು."

"ನನಗೂ ಈ ಕೊರತೆ ಕರುಳು ಮಿಡಿಸುತ್ತದೆ."

ಇಬ್ಬರ ಮುಖದಲ್ಲೂ ಮುಗುಳು ನಗೆ ಮೂಡಿತು. ಸ್ವಲ್ಪ ದೂರ ಮೌನಗತಿಯಲ್ಲಿ ಸಾಗಿತು ಹಾದಿ. ಅನಂತರ ಅವನೇ ಮೌನ ಮುರಿದ "ಡಾಕ್ಟರ್! ಇನ್ನೊಂದು ಮಾತು....ನಾವು ಭೀಮಣ್ಣನವರಲ್ಲಿ ಸಖ್ಯಭಾವದಿಂದಿದ್ದಾಗ ನಾನು ಅವರಲ್ಲಿಗೆ ಆಗಾಗ ಹೋಗಿ ಬರುತಿದ್ದುದುಂಟು. ಆಗಿನಿಂದಲೂ ಅವರ ಮಗಳು ಲಲಿತಳಿಗೂ ನನಗೂ ಎಲ್ಲಿಲ್ಲದ ಸ್ನೇಹ. ಇಬ್ಬರಿಗೂ ದಂಪತಿಗಳಾಗುವ ಇಚ್ಛೆ. ಈಗಿನ ಸಂದರ್ಭದಲ್ಲಿ ಇದು ಸಾಧ್ಯವಾಗದ ಮಾತು. ನಮಗಿದು ತುಂಬಾ ಸಂಕಟಪ್ರದ. ಅವಳು ತಾಳಲಾಗದ ದುಃಖಕ್ಕೀಡಾಗಿದ್ದಾಳೆ. ಮುಂದೆ ಇದು ಯಾವ ರೂಪ ತಳೆಯುತ್ತೊ ತಿಳಿಯದು. ದೇವರೇ ದಾರಿ ತೋರಬೇಕು.

"ಸಧ್ಯ, ಈ ವಿಚಾರ ನಿಮ್ಮ ನಿಮ್ಮ ಸ್ನೇಹಬಂಧಕ್ಕೆ ಸುಗಮದಾರಿ. ನಾಲ್ಕಾರು ಮಂದಿ ಕೂಡಿ ಆಗ ಮಾಡಿಸಿದರೆ ಒಳ್ಳೆಯದು."

ಅವನು ಅತ್ಯಂತ ಖಿನ್ನ ಮುಖಿಯಾಗಿ ಗೋಣು ಆಡಿಸುತ್ತ "ಯಾರ ಮಾತಿಗೂ ಮಣಿಯುವವರಲ್ಲ ಭೀಮಣ್ಣ" ಎಂದ, ದನಿ ದುಃಖಗದ್ಗದವಾಗಿತ್ತು.

ಹಾಗಾದರೆ ...ನಾನೇಕೆ ಈ ವಿಚಾರದಲ್ಲಿ ಪ್ರವೇಶಿಸಬಾರದು ಎಂಬ ವಿಚಾರ ತಲೆಯನ್ನು ಹೊಕ್ಕಿದುದರಿಂದ ಅಲ್ಲಿಗೇ ಸುಮ್ಮನಾದೆ.

"ಅವಳಿಗೆ ಇಂದಿಗೆ ಹದಿನೆಂಟು ತುಂಬುತ್ತದೆ. ನಾನು ರಾಯಪುರಕ್ಕೆ ಹೋದನಂತರ ಅವಳು ನನ್ನನ್ನು ಮದುವೆಯಾಗುವುದಾಗಿ ಘೋಷಿಸುತ್ತಾಳೆ. ಅವರೊಪ್ಪದಿದ್ದರೆ ಮನೆ ಬಿಟ್ಟು ಹೊರಡಲು ಸಿದ್ಧ! ಇದು ನಮ್ಮ ನಮ್ಮ ನಿರ್ಧಾರ!"

"ಹಾಗೋ ..." ಎಂದು ಸ್ವಲ್ಪ ಯೋಚಿಸಿ ನಾನೆಂದೆ "ಅದು ಸುಲಭ ಾರ್ಗ."

"ಅದು ಹೊರತು ಅನ್ಯ ಮಾರ್ಗವಿಲ್ಲ." ಶೀರಾ ವಿಷಣ್ಣಭಾವದಿಂದ ಡಿದ ಮಹೇಶ. ಒಣಗಿ ಶುಷ್ಕವಾದ ತುಟಿಗಳನ್ನು ನಾಲಿಗೆಯಿಂದ ಒರಿಸಿ ಾಂಡು ಪುನಃ ಅಂದ "ಭಗವಂತನ ಕೃಪೆಯಿಂದ ಕೈಗೂಡಿ ಬರಬೇಕು ಅಷ್ಟೆ."

"I wish you best of luck!"

ಅತ್ಯಂತ ಹಾರ್ದಿಕವಾಗಿ ನಾನು ಕೈಕುಲುಕಿದೆ.

"Thank you doctor!"

* * * *

ಲಲಿತ ಒಳ ಹೆಜ್ಜೆಯಿಟ್ಟಳು. ಕಂದಿ ಕುಂದಿ ಬಾಡಿ ವಿವರ್ಣವಾದ ುಖಬಿಂಬ. ಮಿಂಚುಗಣ್ಣುಗಳಲ್ಲಿ ಅತೀವ ಶೋಕ ಛಾಯೆ. ನಡೆಯಲಾರದೇ ಡೆಯುವ ಹೆಜ್ಜೆಗಳು. ಮನಃಪ್ರಾಣಗಳ ತೀವ್ರ ತುಡಿತ. ನಾನು ಅವಳನ್ನು ಂಡ ಗಳಿಗೆಯಲ್ಲೇ ಅವಳ ಸಂಕಷ್ಟವೇನೆಂಬುದನ್ನು ಅರಿತುಕೊಂಡೆ. ಚಿಗರಿ ುಂತಹ ಹುಡುಗಿಯ ಸ್ಥಿತಿಗತಿ ಚಿಂತಾಜನಕವಾದುದು ಮನವನ್ನು ಶೂಲ ಂತೆ ಇರಿಯಿತು.

"ಏನಮ್ಮಾ, ಏಕೆ ಹೀಗಿದ್ದಿ ?"

"ಕೈ ಗಾಯವಾಗಿತ್ತು. ತುಂಬಾ ನೋವು. ಮದ್ದಿಗಾಗಿ ಬಂದೆ."

ಮನಸ್ಸು ನೋವಿನ ಆಗರವಾಗಿಯೂ ತೋರಿಕೊಳ್ಳಲಿಚ್ಛಿಸದೆ ಸಹಜ ಂಬಂತೆ ನುಡಿದುದನ್ನು ನಾನು ಸೂಕ್ಷ್ಮವಾಗಿ ಗಮನಿಸಿದೆ. ಅವಳು ಲಗೈಯನ್ನು ಮುಂದೆ ಮಾಡಿದಳು. ಮುಂಗೈ ಮೇಲೆ ಒಂದೂವರೆ ಇಂಚಿ ಷ್ಟು ಕಡಿದ ಗಾಯ!

ಆ ಗಾಯವನ್ನು ಪರೀಕ್ಷಿಸಿ ಕೇಳಿದೆ "ಇದು ಹೇಗಾಯಿತು ?"

ಹುಡುಗಿ ಏನೋ ಹೇಳಲು ತೊಡಲಿ ಸುಮ್ಮನಾದಳು. ಅಂತರಂಗದ ೀವ್ರ ಮುಖಬಿಂಬದಲ್ಲಿ ಮೂಡಿ ಮಾಯವಾಯಿತು.

"ನೀನು ಎಡಚಳೇ !"

"ಅಲ್ಲ" ಮೆಲ್ಲನೆ ತಲೆಯಾಡಿಸಿದಳು ಹುಡುಗಿ, ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳುತ್ತ.

"ಹಾಗಾದರೆ ಬಲಗೈಗೆ ಪೆಟ್ಟು ಬೀಳಲು ಕಾರಣ ?"

ಅವಳು ಒಂದೆರಡು ಗಳಿಗೆ ಮನದಲ್ಲೇ ಯೋಚಿಸಿ ಒಂದು ಕಲ್ಪನೆಯ ಕತೆ ಕಟ್ಟಿ ಸಹಜವಾದ ದನಿಯಲ್ಲಿ ಬಿತ್ತರಿಸಿದಳು.

"ಮನೆಯಲ್ಲಿ ಮೇಗಳ ಹಲಗೆಯ ಮೇಲೆ ಕತ್ತಿಯಿತ್ತು. ಸಾಮಾನು ತೆಗೆಯಲು ಕೈ ಹಾಕಿದಾಗ ಅದು ಕೆಳಗೆ ಬಿತ್ತು."

"ಅದು ಕಾಲಿನ ಮೇಲೆ ಬೀಳಬೇಕಿತ್ತು. ಕೈಗೆ ಬಿದ್ದುದು ಹೇಗೆ?"

"ಕೆಳಗೆ ಬೀಳುವುದನ್ನು ತಡೆ ಹಿಡಿಯಲು ಕೈ ಅಡ್ಡ ಹಿಡಿದುದು ತಪ್ಪಾಯಿತು."

ಕಥೆ ಸೃಷ್ಟಿಸುವುದರಲ್ಲಿಯೂ ಆಕೆ ತೋರಿದ ಜಾಣ್ಮೆಯನ್ನು ಮನದಲ್ಲೇ ಮೆಚ್ಚಿ ಕೇಳಿದೆ,

"ಗಾಯ ನೋಡಿದರೆ ಆಕಸ್ಮಿಕ ಎನಿಸುವುದಿಲ್ಲ. ನಿಜ ಹೇಳು, ಹೇಗೆ ಪೆಟ್ಟಾಯಿತು ?"

"ಹೋಗಲಿ, ಬಿಡಿ. ಏನೋ ಗ್ರಹಚಾರ ಕೆಟ್ಟಿತ್ತು. ಆಗಬೇಕಾದುದು ಆಯ್ತು.

ಅವಳನ್ನು ಒಳಕೋಣೆಗೆ ಕರೆದೊಯ್ದು ಗಾಯಕ್ಕೆ ಹೊಲಿಗೆ ಹಾಕುವ ಮುನ್ನ ಕೇಳಿದೆ.

"ಇದು ನಿನ್ನೆ ಮೊನ್ನೆ ಆದ ಗಾಯ. ಈವರೆಗೆ ಏಕೆ ಸುಮ್ಮನಿದ್ದೆ ?"

"ಬರಲಿಕ್ಕಾಗಲಿಲ್ಲ. ವಿಪರೀತ ತಲೆ ನೋವಿತ್ತು, ಮಲಗಿ ಬಿಟ್ಟೆ."

ಆ ಸುಂದರ ಕಣ್ಣುಗಳಲ್ಲಿ ಬೇಡ ಬೇಡವೆಂದರೂ ಇಣುಕುತ್ತಿದ್ದ ದುಃಖ ಸಂಕಟದ ಛಾಯೆಯನ್ನು ಕಂಡು ನನ್ನ ಕರುಳು ಚುರು ಚುರು ಎಂದಿತು.

ಕೈಗೆ ಹೊಲಿಗೆ ಹಾಕಿ ಬ್ಯಾಂಡೇಜು ಬಿಗಿದ ನಂತರ ಅವಳು ಕೇಳಿದಳು,

"ನೋವಿಗೆ ಹಚ್ಚುವ ಮುಲಾಮು ಬೇಕಾಗಿದೆ." ದನಿ ಬಾವಿ ಆಳದಿಂದ ಹೊರಬಿದ್ದಂತೆ ಹರಿದು ಬಂತು. ನುಡಿಯಲಾರದೆ ನುಡಿಯುವಾಗ ಗಂಟಲು ಕಟ್ಟಿತು.

"ಏಕೆ, ಇನ್ನೂ ಬೇರೆ ಕಡೆ ಪೆಟ್ಟಾಗಿದೆಯೇ ?"

ಆಗ ಆ ಕಣ್ಣುಗಳಲ್ಲಿ ಮಿಸುಗಿದ ನೋವಿನ ಛಾಯೆ ನನ್ನ ಎದೆಯಾಳ ಕ್ಕಲ್ಲಿ ಸಂಕಟದ ಝರಿ ಹರಿದಾಡಿಸಿತು.

"ಹೌದು...." ಒಣಗಿದ ತುಟಿಗಳನ್ನು ನಾಲಿಗೆಯಿಂದ ಸವರಿಕೊಂಡು ಮದ್ದು ಕೊಟ್ಟರೆ ನಾನು ಮನೆಯಲ್ಲಿಯೇ ಹಚ್ಚಿಕೊಳ್ಳುವೆ," ಎಂದಳು ಮೆಲು ದನಿಯಲ್ಲಿ.

"ಪೆಟ್ಟಾದ ಭಾಗ ತೋರಿಸು. ನಾನು ನೋಡದೆ ಔಷಧ ಕೊಡಲಾರೆ."

ಅವಳು ಸಂಕೋಚಿಸುತ್ತಲೇ ಕಾಲು ತೊಡೆಗಳಲ್ಲಿ ಮೂಡಿದ ಹಸರು ಗಟ್ಟಿದ ಬಾಸುಂಡೆಗಳನ್ನು ತೋರಲಾರದೆ ತೋರಿದಳು. ಒಡನೆ ಮಹೇಶನ ವಿಚಾರಧಾರೆ ತಲೆಯಲ್ಲಿ ಸುಳಿದಳಿಯಿತು. ಕುಸುಮ ಕೋಮಲೆಗೆ ಎಂತಹ ಉಗ್ರ ಶಿಕ್ಷೆ? ಧೂರ್ತರು ......ಪಿಶಾಚಿಗಳು.......ಅಧಮಾಧಮರು! ಇನ್ನೂ ಏನೇನೋ ಶಬ್ದಕೋಟಿ ಮನಃಪಥದಲ್ಲಿ ಹಾದು ಹೋದುವು. ಅಬೋಧ ಬಾಲೆಗಾಗಿ ಮನಸ್ಸು ಮರ್ಮರ ಮರುಗಿತು. ನಾನು ಬಾಯಿ ಬಿಡುವುದರೊಳ ಗಾಗಿ ಅವಳು ಆತುರ-ಕಾತುರಗಳಿಂದ "ದಯವಿಟ್ಟು ಬೇಗನೆ ಕೊಡಿ; ಹೋಗ ಬೇಕು" ಎಂದಳು. ಮಿಂಚುಗಣ್ಣಿನ ನೋಟ ನನ್ನ ಅಂತರಾಳವನ್ನು ಈಟಿ ಯಂತೆ ಇರಿಯಿತು ಬಾಸುಂಡೆಗಳಿಗೂ ಮದ್ದು ಬಳಿದು ಹೇಳಿದೆ.

"ನೀನು ಈ ವರೆಗೆ ಸುಮ್ಮನಿದ್ದುದು ತಪ್ಪು, ಗಾಯ ನಂಜಾಗುಬಹುದು."

"ಹಾಗೆಯೇ ಗುಣವಾಗಬಹುದು ಎಂದುಕೊಂಡೆ. ನೋವು ದಿನದಿನಕ್ಕೂ ಹೆಚ್ಚುತ್ತಲಿದ್ದುದರಿಂದ ಬರಬೇಕಾಯ್ತು ಬಂದೆ. ಒಡಲ ಸಂಕಟವೆಲ್ಲಾ ಮುಖಮುದ್ರೆಯಲ್ಲಿ ದಪ್ಪ ದಪ್ಪ ಅಕ್ಷರಗಳಲ್ಲಿ ಮುದ್ರಿತವಾಯಿತು. ಒಣಗುತಿದ್ದ ತುಟಿಗಳನ್ನು ಬಾರಿ ಬಾರಿಗೂ ನಾಲಿಗೆ ಒರಿಸುತಿತ್ತು.

ನಂಜುಹಾರಿ ಇಂಜಕ್ಷನ್ ಮತ್ತು ಶಮನಕಾರಿ ಮಾತ್ರೆಗಳನ್ನು ಕೊಟ್ಟೆ. ಮಾತ್ರೆಯನ್ನು ಇಲ್ಲೇ ನುಂಗಿ ನೀರು ಕುಡಿದು "ನಮಸ್ಕಾರ ಡಾಕ್ಟರೇ! ತುಂಬ ಉಪಕಾರವಾಯ್ತು!"

ಆ ತಕ್ಷಣ ಹುಡುಗಿ ಹೊರಟೇ ಬಿಟ್ಟಳು.

ನನ್ನ ಒಡಲಬಳ್ಳಿ ಬಿಸಿಲಟ್ಟಿದ ಮಂಜಿನಂತೆ ಕರಗಿ ದ್ರವೀಭೂತ ವಾಯಿತು.

"ಮಗೂ! ನಿನಗೆ ನನ್ನಿಂದೇನಾದರೂ ಸಹಾಯಬೇಕೆ?"

ಹೊಸ್ತಿಲು ದಾಟಿದ್ದ ಅವಳು ಹಿಂತಿರುಗಿ ನೋಡಿದಳು. ಮುಖ ಕಣ್ಣು ಗಳಲ್ಲಿ ಭಾವವಿಭಾವದ ತೇಜ ಫಳಕ್ಕನೆ ಸುಳಿದು ಮಾಯವಾಯಿತು. ತಾನು ಬಂದು ಹೋದುದು ಗೋಪ್ಯ ಎಂಬುದು ರೋಮ ರೋಮಗಳಲ್ಲೂ ಸ್ಫುರಿಸು ತಿದ್ದುದನ್ನು ಗಮನಿಸಿದೆ.

"ತುಂಬಾ ವಂದನೆಗಳು!"

ನೋವು ತುಂಬಿದ ಹೆಜ್ಜೆಗಳನ್ನು ಮುಂದಿಡುವುದು ಕಷ್ಟವಾದರೂ ನಿಲ್ಲದೆ ಹೋಗಿ ಬಿಟ್ಟಳು! ಆ ಘೋರ ಪ್ರಸಂಗಾವಧಾನದಿಂದ ಹೃದಯ ಕಲ್ಲು ಹೊತ್ತಷ್ಟು ಭಾರ. ಚಿತ್ತಭಿತ್ತಿಯಲ್ಲಿ ಮಹೇಶ ಸುಳಿದಳಿದ. ಹಿಂದೂಸ್ಥಾನ ಎಂದೆಂದಿಗೂ ಹೆಂಗಳೆಯರ ಶೃಂಖಲೆಗಳನ್ನು ಕಳಚುವುದಿಲ್ಲ! ಅಂತರಂಗ ಕೂಗಿ ಹೇಳಿತು. ಪುನಃ ಅದೆ ನುಡಿಗಟ್ಟು ಕರ್ಣಪಟಲಗಳ ಮೇಲೆ ಮೊರೆ ಯಿತು.

ನಾನು ನಿಟ್ಟುಸಿರು ಬಿಟ್ಟೆ. ನಿಸ್ಸಾಯಕತೆ ಮನಃಪ್ರಾಣಗಳನ್ನು ಹೆಡೆ ಮುರಿಗಟ್ಟಿತು.

* * * *

ಕೈಗಳು ಕಾರ್ಯಶೀಲವಾಗಿದ್ದರೂ ದಿನವೆಲ್ಲಾ ಅವಳ ದುರ್ಭರ ಸ್ಥಿತಿ ಗಾಗಿ ಮರುಗುತಿತ್ತು ಮನಸ್ಸು. ಬಹುಶಃ ಹೊಡೆದು-ಕಡಿದು ಶಿಕ್ಷೆ ನೀಡಿದ ಭೀಮಣ್ಣ ಅವಳಿಗೆ ಸರ್ಪಕಾವಲು ಹಾಕಿದ್ದಿರಬಹುದು. ಇಂದು ಹೇಗೋ ಕಣ್ಣು ತಪ್ಪಿಸಿಕೊಂಡು ಬಂದು ಚಿಕಿತ್ಸೆ ಪಡೆದಿದ್ದಾಳೆ. ಮಹೇಶನೊಟ್ಟಿಗೆ ಪಯಣಿಸಲಾದರೂ ಸಾಕಷ್ಟು ಶಕ್ತಿ ಬೇಕಲ್ಲ, ಅದರಿಂದಾಗಿಯೇ ಇಲ್ಲಿಯವರೆಗೆ ಬರುವ ಧೈರ್ಯ.....

ಈ ಧೂರ್ತರ ಕೈಯಿಂದ ಪಾರಾಗಲು ಭಗವಂತ ಸಹಾಯ ಮಾಡಲಿ ಎಂದು ಹೃತ್ಪೂರ್ವಕವಾಗಿ ಹಾರೈಸಿತು ಎದೆಯ ಹಕ್ಕಿ.

ಈಗ ಡಾಕ್ಟರಾಗಿ ನನ್ನ ಪಾತ್ರ? ಪೋಲೀಸರಿಗೆ ದೂರು ಕೊಡಲೇ? ಅವಳು ಏನೊಂದೂ ಹೇಳಿಕೊಳ್ಳದಿರುವಾಗ ದೂರು ಕೊಡುವುದು ಹೇಗೆ? ಸಾಧಕ-ಬಾಧಕಗಳು ಏನಿವೆಯೋ. ಮಹೇಶ ರಾಯಪುರದಲ್ಲಿ. ಇವಳು ಈ ಗಂಡಾಂತರದಲ್ಲಿ! ರಾಯಪುರದ ವಿಳಾಸ ತಿಳಿದಿದ್ದರೆ ಟೆಲಿಗ್ರಾಂ ಕೊಡಬಹು

ತ್ತು ; ಈಗ ಏನೂ ಮಾಡುವಂತಿಲ್ಲ....ಮಹೇಶ ನಿಜವಾಗಿಯೂ ಅವಳಿಗೆ ಕ್ತ ವರ. ಅದನ್ನು ತಿಳಿದುಕೊಳ್ಳಲಾರದ ಜನ ಹುಡುಗಿಯನ್ನು ದಂಡಿಸಿ ರೆ. ಆಕೆ ಎಷ್ಟೆಂದರೂ ಹೆಣ್ಣು....ಅಬಲೆ. ಹೇಗೆ ಇದರ ಪರಿಹಾರ? ಹೇಶ ಇಂದು ಊರಿಗೆ ಮರಳಿದರೆ ನಾಳೆ ಬೆಳಿಗ್ಗೆ ವಾಯು ವಿಹಾರದಲ್ಲಿ ಯೋ ಸಿಕ್ಕುತ್ತಾನೆ. ವಿಷಯ ತಿಳಿದು ಅವನು ಏನು ಕ್ರಮ ಕೈಕೊಳ್ಳ ನೋ, ಕೈಕೊಳ್ಳಲಿ. ಅವನಿಂದು ಹಿಮ್ಮರಳದಿದ್ದರೆ ನಾಳೆ ಪೋಲೀಸಿಗೆ ರು ಕೊಡುವುದು ಒಳ್ಳೆಯದು ಎಂಬ ಅಂತ್ಯ ತೀರ್ಮಾನಕ್ಕೆ ಬಂದೆ.

ಹಗಲು ಉರುಳಿತು. ಸಂಜೆ ಆಡರುತ್ತಿದೆ.

ಕೆಲಸ ಮುಗಿದಿತ್ತು. ವರಾಂಡದ ಮೇಜಿನ ಮೇಲಿದ್ದ ಪತ್ರಿಕೆ ಮತ್ತು ಸಿಕಗಳನ್ನು ತೆಗೆದುಕೊಂಡು ಪುಟಪುಟಗಳನ್ನು ತಿರುವಿ ಹಾಕಿದರೂ ನಸ್ಸು ವಿಷಯಗ್ರಹಣೆ ಮಾಡದು. ಮನದ ತುಂಬೆಲ್ಲಾ ಅದೇ ಚಿಂತೆ; ೇ ಯೋಚನೆ; ಅದೇ ಸ್ವಚ್ಛಸಾತ್ವಿಕ ಭಾವದ ಕಗ್ಗೊಲೆ!

ಅಹೋ ಭಾವ! ಅಹೋ ಧ್ವನಿ! ಅಹೋ ಪಥ!

ಕೃಷ್ಣಪಕ್ಷದ ಕಾಳರಾತ್ರಿ. ನಕ್ಷತ್ರ ಖಚಿತವಾದ ನೀಲಾಕಾಶ.

ನಿಶ್ಶಬ್ದ ಗತಿಯಲ್ಲಿ ಅದೆಷ್ಟು ಹೊತ್ತು ಉರುಳಿತೊ. ಅದರ ಪರಿವೆಯೇ ಲ್ಲಿ. ಜವಾನ ಮುಂಬಾಗಿಲು ಮುಚ್ಚಲು ಬಂದಾಗ ಇತ್ತ ಗಮನ. ದ್ದು ಹೋಗಿ ಹಾಸಿಗೆ ಸೇರಿದೆ. ಗಡಿಯಾರ ಒಂದೇ ಸಮನೆ ಉರುಳುತ್ತಿದೆ. ಟಾಕ್ ಟಿಕ್ ಟಾಕ್.

ಮಧ್ಯರಾತ್ರಿ. ನಿಶ್ಶಬ್ದ. ನೀರವ.

ಸ್ವಚ್ಛ ನಿರ್ಮಲವಾದ ಸೊಳ್ಳೆಪರದೆಯಿಂದ ಸುತ್ತುವರಿದ ಸೆಜ್ಜೆ. ದ್ದಿಕೆಯನ್ನು ಮೈಮೇಲೆ ಎಳೆದುಕೊಂಡು ಸ್ವಿಚ್ ಅದುಮಿ ದೀಪ ನಂದಿ . ಕಗ್ಗತ್ತಲೆಯ ತೆರೆಯನ್ನು ನಿಟ್ಟಿಸಲಾರದೆ ಕಣ್ಣುಗಳು ಮುಚ್ಚಿ ಂಡುವು. ಸ್ವಲ್ಪಹೊತ್ತು ಕಳೆದನಂತರ ಕಣ್ಣುಗಳಿಗೆ ಜೋಂಪು ಹತ್ತಿತು.

ಕನಸಿನ ಮಾಯಾಲೋಕದಲ್ಲಿ ಲಲಿತ ಒಳಬಂದಿದ್ದಾಳೆ, ಬಿರುಗಾಳಿ ಬಂದಂತೆ! ಮುಖಬಿಂಬದಲ್ಲಿ ಪ್ರೇತಕಳೆ....ಜ್ಯೋತಿರ್ಲಿಂಗಗಳಂತಿದ್ದ ಯನದ್ವಯಗಳು? ಹಾ! ಏನೆಂದು ಬಣ್ಣಿಸಲಿ? ನಿಷ್ಕ್ರಿಯತೆ? ಅಲ್ಲ,

ಅಲ್ಲವೇ ಅಲ್ಲ! ಪ್ರಕ್ರಿಯತೆ? ಊಹೂ, ಖಂಡಿತವಾಗಿಯೂ ಅಲ್ಲ. ಮತ್ತೇನು? ಆಕೀ ದೀನಾದೀನತೆ ಎಂದರೆ ಸಲ್ಲುವುದೇನೋ....ಆದರೂ ಅದನ್ನು ದೃಢೀಕರಿಸಲಾರೆ. .

"ಏನು ಲಲ್ಲೀ? ಈ ಹೊತ್ತಿನಲ್ಲಿ ಏಕೆ ಬಂದೆ?" ನಾನು ಹ್ಹೌಹಾರಿದೆ.

"ನೀವು ಕರ್ತವ್ಯಚ್ಯುತರಾಗಬಾರದು! ಇದು ನನ್ನ ಕೋರಿಕೆ ಅಥವಾ ಆದೇಶ ಏನಾದರೂ ಅಂದುಕೊಳ್ಳಿ!"

ಎಂತಹ ದೃಢ ಕಂಠ!

ಆ ಕ್ಷಣ ನಾನು ಬೆವತುಹೋದೆ. ನನ್ನ ಅಂತರತರವೆಲ್ಲವೂ ವಿವರ್ಣವಾಯಿತು. ನಾನು ಒದ್ದಾಡಿ ಹೊದ್ದಿಕೆಯನ್ನು ಕಿತ್ತುಹಾಕಿದೆ. ಆ ಸ್ತ್ರೀಮೂರ್ತಿ ಕತ್ತಲತೆರೆಯಲ್ಲಿ ಕರಗಿ ಎಂದೋ.

ಕಟ. ಕಟ. ಕಟ. ಕಟ.

"..............."

ಕಟ. ಕಟ. ಕಟ. ಕಟ.

ಸ್ವಲ್ಪ ಹೊತ್ತಿನೊಳಗಾಗಿ ಮುಂಬಾಗಿಲನ್ನು ತೆರೆದ ಸದ್ದು ಕೇಳಿಸಿತು. ಜವಾನ ಹೊರಹೋಗಿ ಬಂದವರಾರೆಂದು ತಿಳಿದುಕೊಂಡನಂತರ ಒಳ ಬಂದು ವರದಿ ಮಾಡಿದ—"ಸ್ವಾಮಿ ನಿಮಗಾಗಿ ಜನ ಬಂದು ಕಾದಿದ್ದಾರೆ!"

ನನಗೆ ಉತ್ತರಿಸುವುದಕ್ಕಿಂತ ಜುಗುಪ್ಸೆ ಮೂಡಿತು. ಇನ್ನೂ ನಸುಕು ಹರಿಯಲಿಲ್ಲ, ಆಗಲೇ ಜನ! ಒಂದೆರಡು ಗಳಿಗೆ ಯೋಚಿಸಿ ನುಡಿದೆ "ಹೋಗಿ ವಿಚಾರಿಸು, ಏನು ಸಮಾಚಾರ!"

ಅವನು ಹೊರ ಹೋಗಿ ಅವರೊಂದಿಗೆ ವಿಚಾರ ವಿನಿಮಯ ಮಾಡಿಕೊಂಡನಂತರ ಬಂದು ಹೇಳಿದ,

"ಹುಡುಗಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿದ್ದಾಳಂತೆ! ಈಗಲೇ ಪೋಸ್ಟ್‌ಮಾರ್ಟಂ ಮಾಡಿಕೊಡಬೇಕಂತೆ!"

"ಛಿ! ಎಂತಹ ರೂಕ್ಷ ಜನ ಇವರು! ಈ ಮುಂಜಾನೆಯಲ್ಲಿ ನಾನು ಏಳುವುದರೊಳಗಾಗಿ ಪೋಸ್ಟ್‌ಮಾರ್ಟಂ-ಗೆ ಅವಸರ. ಹುಡುಗಿ ಸತ್ತದ್ದು ಲೆಕ್ಕವಿಲ್ಲ -- ಅಂತ್ಯಕ್ರಿಯೆ ಮುಖ್ಯ...! ಒಡನೆ ಸ್ವಪ್ನಸುಂದರಿ. ಬಹುಶಃ ಅವಳೇ ಇರಬಹುದೇ? ಆ ಪ್ರಶ್ನೆ ಏಳುತ್ತಲೂ ದೇಹದಾದ್ಯಂತ ರೋಕ-

ಕೋಪಗಳ ಝುರಿ ಚಿಲ್ಲನೆ ಹರಿದಾಡಿತು. ಒಂದೆರಡು ಗಳಿಗೆ ನಿಧಾನಿಸಿ
ಂದೆ "ಅವರಿಗೆ ಎಂಟು ಗಂಟೆಯನಂತರ ಬರಲು ಹೇಳು."

"ಅವರು ಶವ ತಂದಿದ್ದಾರೆ."

"ಆಸ್ಪತ್ರೆಯಲ್ಲಿಡಲು ಹೇಳು."

ಜವಾನ ಹೊರಹೋದ. ಅವರೊಂದಿಗೆ ನಡೆಸಿದ ಮಾತುಕತೆ ಸ್ಪಷ್ಟ
ವಾಗಿ ಕಿವಿಗೆ ಬೀಳುತಿತ್ತು. ಅವರು ಒಪ್ಪುವಂತೆ ತೋರಲಿಲ್ಲ. ಒಂದೇ
ಸಮನೆ ಹಲವಾರು ದನಿಗಳು ಅಂಗಲಾಚುತ್ತಿವೆ. ಜವಾನ ನನ್ನ ಪರವಾಗಿ
ವಾದಿಸುತಿದ್ದಾನೆ. ಆದರೂ, ಅವರು ಜಗ್ಗುವಂತಿಲ್ಲ. ಮುಂಬಾಗಿಲ ಬಳಿ
ಸಾಶಿನ ಮೊರೆತ–ಅಳು–ಗೋಳು ಇತ್ಯಾದಿ ಮೇಳೈಸಿದ್ದುವು.

ನನ್ನ ಮನಸ್ಸು ಕೋಪ–ಜುಗುಪ್ಸೆಗಳ ಒಕ್ಕೂಟವಾಗಿ ನರಳಿತು.
ಹೊದಿಕೆಯನ್ನು ಸರಿಸಿ ಎದ್ದು ಹೊರಬಂದೆ. ಜನರ ಗುಂಪಿನಲ್ಲಿ ಮುಂಡಾಸು
ದಾರಿ ಭೀಮಣ್ಣ ಮತ್ತು ಸಂಗಡಿಗರು, ಕುಟುಂಬಿಗರು ಮತ್ತು ನೆರೆಹೊರೆ
ಯವರು ಎಲ್ಲರಿದ್ದಾರೆ. ಆ ಕ್ಷಣವೇ ವಿಷಯವೇನೆಂಬುದು ಅರ್ಥವಾಗಿ ಕೋಪ
ಜ್ವಾಲೆ ಭುಗಿಲೆದ್ದಿತು ಮನದಲ್ಲಿ.

"ಏನ್ರೀ ಈ ಮುಂಜಾನೆಯಲ್ಲಿ ಗಲಾಟೆ?"

ಭೀಮಣ್ಣ ಕೈಮುಗಿದುಕೊಂಡು "ಸ್ವಾಮಿ! ಗಲಾಟೆಯಲ್ಲ, ಪ್ರಾಣ
ಸಂಕಟ! ಮಗಳು ಕೈಕೊಟ್ಟಿದ್ದಾಳೆ. ಶವಸಂಸ್ಕಾರ ಮಾಡದೆ ಕೇರಿಯ ಜನ
ನೀರು ಮುಟ್ಟುವುದಿಲ್ಲ. ಕೈ ಮುಗಿಯುವೆ, ದಯವಿಟ್ಟು ಉಪಕಾರ ಮಾಡಿ!"

"ಈಗ ಸಾಧ್ಯವಿಲ್ಲ. ಎಂಟು ಗಂಟೆಯ ನಂತರ ಬನ್ನಿ."

"ಸ್ವಾಮಿ ಇದು ಆತ್ಮಹತ್ಯೆ! ಸುದ್ದಿ ಪೋಲೀಸಿನವರಿಗೆ ಮುಟ್ಟಿದರೆ ರಾದ್ಧಾಂ
ತವಾಗುತ್ತದೆ. ಅಷ್ಟಕ್ಕೆ ಅವಕಾಶವಾಗದಂತೆ ದಯವಿಟ್ಟು ಉಪಕರಿಸಿರಿ."

ಆ ಮುಹೂರ್ತದಲ್ಲಿ ನನ್ನ ಭಾವನೆಗಳು ಬಂಡೆದ್ದು ರೋಮರೋಮಗಳೂ
ನಿಮಿರಿದುವು. ಕೋಪ-ಕ್ಲೇಷ ಅನುತಾಪಗಳಿಂದ ಹೃದಯ ಕುಂಡಲಿ ಜರ್ಜರಿತ
ವಾಯಿತು. ಆದರೂ ಚಿತ್ತ ಪ್ರವೃತ್ತಿ ಉದ್ವೇಗಗೊಳ್ಳದಿದ್ದುದು ನನ್ನ ಪುಣ್ಯ.

* * * *

ಲಲಿತೆಗೆ ನಿಜವಾಗಿಯೂ ಆಯುಸ್ಸು ತೀರಿತ್ತೆ? ಆಯುಸ್ಸು ತೀರದೆ ಸಾವು

ಸನ್ನಿಹಿತವೇ ?! ಆಯುಸ್ಸು ತೀರದಿದ್ದರೆ ಹೇಗಾದರೂ ಈ ಗಂಡಾಂತರದಿಂದ ಪಾರಾಗುತ್ತಿರಲಿಲ್ಲವೇ ???

ಅದು ನನ್ನ ಮುಂದಿನ ಪ್ರಶ್ನೆ. ನಾನು ನಿನ್ನೆ ಪೋಲೀಸಿಗೆ ದೂರು ಕೊಟ್ಟಿದ್ದರೆ ಆಕೆ ಉಳಿಯುತ್ತಿದ್ದಳು. ದೇವರು ನನಗೇಕೆ ಮನಸ್ಸು ಕೊಡಲಿಲ್ಲ? ನಾನೇಕೆ ಹಿಂಜರಿದೆ? ಇದನ್ನೆಲ್ಲಾ ಸೂಕ್ಷ್ಮವಾಗಿ ಅವಲೋಕಿಸಿದರೆ ಕಂಡು ಬರುವ ಮೊತ್ತ ವಿಧಿ ಉತ್ತೇಜನ ನೀಡಲಿಲ್ಲ ಎಂಬುದೇ. ಎಷ್ಟು ಯೋಚಿಸಿದರೂ ಮತ್ತಾವ ಕಾರಣವೂ ಹೊಳೆಯಲಿಲ್ಲ. ಅಲ್ಲಿಂದಲ್ಲೇ ಪದಚಾರಣ ಮಾಡುತ್ತ ಶತಪಥ ತಿರುಗಿದೆ. ವಾಯುಸೇವನೆಗಾಗಿ ಹೊರಗೆ ತಲೆ ಹಾಕಲಿಲ್ಲ; ಹಾಕು ವಂತೆಯೂ ಇರಲಿಲ್ಲ. ನಾನು ಅವಳನ್ನು ಕುರಿತು "ಮಗೂ! ನನ್ನಿಂದೇನಾ ದರೂ ಸಹಾಯಬೇಕೆ?" ಎಂದು ಕೇಳಿದಾಗಲೂ ಅವಳು "ತುಂಬಾ ವಂದನೆಗಳು!" ಎನ್ನಬೇಕೆ? ಇದಕ್ಕೇ ಅಲ್ಲವೇ 'ವಿಧಿ' ಎನ್ನುವುದು.

ವಿಷಯ ದುಂಬಿಯಂತೆ ಮನವನ್ನು ಕೊರೆಯುತಿತ್ತು. ಕಾಲುಗಳು ಯಥಾ ಪ್ರಕಾರ ಶತಪಥ....ಶತಪಥ....ತಿರುಗುತ್ತಲೇ ಇದ್ದುವು ಶತಪಥ ...ಶತಪಥ....

ಹೆತ್ತಮಗಳನ್ನು ಕೊಲ್ಲಲು ಹೇಗೆ ಮನಸ್ಸು ಬಂತು ? ಹಾ, ಕ್ರೂರತನದ ಪರಾಕಾಷ್ಠೆ ! ಬುದ್ಧಿಹೀನ ವ್ಯವಹಾರ. ಛೀ! ಛೀ! ಅವಳು ಯಾವ ಯಾವ ಸದುದ್ದೇಶವನ್ನು ಹೊಂದಿದ್ದಳೋ.... ಈ ಸುಂದರ ಜಗತ್ತಿನಲ್ಲಿ ಭವಿಷ್ಯದ ರೂಪುರೇಷೆಯನ್ನು ಯಾವ ಯಾವ ರೀತಿಯಲ್ಲಿ ಹೆಣೆದುಕೊಂಡಿದ್ದಳೋ ಅದೆಲ್ಲಾ ಮಣ್ಣುಪಾಲಾಯ್ತು. ಹೆತ್ತವನೇ ಕೊಲೆ ಮಾಡಿದರೆ ಇನ್ನು ರಕ್ಷಿಸು ವವರಾರು ? ಹಾ, ಘೋರ ಅಪರಾಧ !

ಹೊತ್ತು ಎಂಟರ ಸಂಖ್ಯೆಯನ್ನು ಮುಟ್ಟಿತು. ನಾನು ಆಸ್ಪತ್ರೆಗೆ ಹೋಗಲಾರದೇ ಹೋದೆ. ಶವ ಮೇಜಿನ ಮೇಲಿತ್ತು. ಒಳಗಡೆ ಇದ್ದ ಜನರೆಲ್ಲಾ ಹೊರಹೋದರು ಪೋಸ್ಟ್‌ಮಾರ್ಟಂ-ಗೆ ಕೈ ಹಚ್ಚಿದೆ. ಒಡಲಲ್ಲಿ ರಾತ್ರಿಯ ಆಹಾರವಿರಲಿಲ್ಲ. ಮೈಕೈಯಲ್ಲಿ ಇನ್ನೂ ಕೆಲವಾರು ಹೊಸ ಬಾಸುಂಡೆಗಳು ! ಕೊರಳಲ್ಲಿ ಅಮುಕಿ ಹಿಸುಕಿದ ಗುರುತು !

ನನ್ನ ಅಂತರಂತರವೆಲ್ಲಾ ಒಮ್ಮೆಗೇ ವಿವರ್ಣವಾಯಿತು.

ಭೀಮಣ್ಣ ನನ್ನು ಒಳಬರ ಮಾಡಿಕೊಂಡು ಹೇಳಿದೆ - "ಇದು ಕಗ್ಗೊಲೆ ! ಕೈಯ್ಯಾರೆ ಕೊಂದು ಆತ್ಮಹತ್ಯೆ ಎನ್ನುತ್ತಿದ್ದೀರಿ !"

"ಸ್ವಾಮಿ ಮೆಲ್ಲಗೆ ಮಾತಾಡಿ! ಹೊರಗಡೆ ಬಹಳ ಮಂದಿ ಇದ್ದಾರೆ! ನಾನು ಅವಳಿಗೆ ಗದರಿಸಿದ್ದು ಹೊಡೆದಿದ್ದು ನಿಜ. ಅವಳು ಅಷ್ಟಕ್ಕೇ.... ಏನೋ ನುಂಗಿದಳು!"

"ಕತ್ತು ಹಿಸುಕಿದ್ದೀರಿ!"

"ಇರಲಿ, ಸ್ವಾಮಿ! ಏನೋ ಆದುದು ಆಗಿ ಹೋಯಿತು! ಮುಂದೇನು ಮಾಡಬೇಕು ಹೇಳಿ! ಕೈಮುಗಿದು ಕೇಳಿಕೊಳ್ಳುವೆ. ನಮ್ಮ ಮರ್ಯಾದೆ ಉಳಿಸಿರಿ."

"ಸಾಧ್ಯವೇ ಇಲ್ಲ! ಹೆತ್ತ ಮಗಳನ್ನು ಕೊಲ್ಲುವಾಗ ಎಲ್ಲಿ ಹೋಗಿತ್ತು ಮರ್ಯಾದೆ? ಕೊಲ್ಲಲು ಹೇಗೆ ಕೈ ಬಂತು?"

"ಅವಳು....ಅವಳು ನಮ್ಮ ವೈರಿಯ ಮಗನನ್ನು ಮದುವೆಯಾಗುವ ಹಠ ಹಿಡಿದಳು. ಎಷ್ಟು ಹೇಳಿದರೂ ಕೇಳಲಿಲ್ಲ. ನನಗೆ ಇಬ್ಬರು ಹಿರಿಯ ಹೆಣ್ಣು ಮಕ್ಕಳಿದ್ದಾರೆ. ಇವಳನ್ನು ಆ ಮಹೇಶನಿಗೆ ಕೊಟ್ಟರೆ ಅವರಿಗೆ ಮದುವೆ ಮಾಡುವ ವಿಚಾರವನ್ನು ಮರೆತು ಬಿಡಬೇಕು! ಸ್ವಾಮಿ! ನಮಗೆ ಬೇರೆ ದಾರಿಯೇ ಇರಲಿಲ್ಲ. ಹುಡುಗಿಗೆ ಪರಾಪರ ಚಿಂತೆ ಬೇಡವೇ? ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಎಲ್ಲರೂ ಅನುಭವಿಸಬೇಕು. ಬಿಡಿ, ಆಗಬಾರದುದು ಆಗಿ ಹೋಗಿದೆ. ಇನ್ನು ಮಾತಾಡಿ ಪ್ರಯೋಜನವಿಲ್ಲ. ಈಗಲೇ ಐದು ಸಾವಿರ ರೂಪಾಯಿಗಳನ್ನು ತಂದು ಎಣಿಸಿಬಿಡುವೆ. ದಯುವಿಟ್ಟು ಇದು ಆತ್ಮಹತ್ಯೆ ಎಂದು ಬರೆದುಕೊಟ್ಟು ಉಪಕಾರ ಮಾಡಿರಿ!"

ನಾನು ಶುದ್ಧಾಂಗವಾಗಿ ನಿರಾಕರಿಸಿ ರೋಷರುದ್ಧನಾಗಿ ಹೇಳಿದೆ "ಇನ್ನೊಂದು ಸಲ ಈ ಮಾತೆತ್ತೀರಿ ಜೋಕೆ!"

"ಸ್ವಾಮಿ....!"

"No, No....ತೊಲಗಿ ಇಲ್ಲಿಂದ!"

ನನ್ನ ನೋಟ ಶವದ ಮುಖದತ್ತ ಹರಿಯಿತು. ಅರೆತೆರೆದ ಬಾಯಿ. ಬಿರಿಬಿರಿ ಬಿಟ್ಟ ನಿಡುಗಣ್ಣುಗಳು!

ಹಾ! ಆ ನೋಟದಲ್ಲಿ ಯಾವ ಸಂವೇದನೆ ಇತ್ತೊ, ಊಹಿಸಲಾರದೇ ಹೋದೆ.

ಕಾಳಿಂದಿ

ಅರ್ಥಮನರ್ಥಂ....

"ಅಮ್ಮಾ....! ಅಮ್ಮಾ....!"

ಅತೀವ ಆರ್ತತೆ–ಭಯ–ಕಳವಳಗಳ ವಶೀಭೂತನಾಗಿ ಪ್ರಾಣವೇ ಬಾಯ್ಗೆ ಬಂದಂತೆ ಉಚ್ಚ ಸ್ವರದಲ್ಲಿ ಕೂಗಿದ ಮಾಧು. ಓಡಿ ಬಂದ ಭರಕ್ಕೆ ಏದುಸಿರು ಬಿಡುತಿದ್ದಾನೆ! ಮುಖಬಿಂಬ ವಿವರ್ಣವಾಗಿದೆ! ಯಾವುದೋ ಭಯಂಕರ ಸುದ್ದಿ ನುಗ್ಗಿ ಬರುತ್ತಿದೆ ಎಂಬುದಕ್ಕೆ ಅವನ ಸ್ಥಿತಿಗತಿ ಸಾಕ್ಷಿ!

ಕಾಳಿಂದಿ ಒಳಗಿದ್ದಳೇನೋ ಆರ್ತಕರೆ ಕರ್ಣದೇಶವನ್ನು ಮುಟ್ಟಲಿಲ್ಲ.

"ಅಮ್ಮಾ....! ಅಮ್ಮಾ....!" ಪುನಃ ಜೋರಾಗಿ ಕೂಗಿದ ಮಾಧು.

ಆ ದನಿಯ ಅಬ್ಬರಕ್ಕೆ ಬೆಚ್ಚಿ, ಹಿಡಿದಿದ್ದ ಕೆಲಸವನ್ನು ಅಷ್ಟಕ್ಕೇ ಬಿಟ್ಟು, ಧಾವಿಸಿ ಹೊರಬಂದಳು ಕಾಳಿಂದಿ. ಪ್ರಪ್ರಥಮ ನೋಟಕ್ಕೆ ಅವನಲ್ಲಿ ಕಂಡು ಬಂದ ಭಯ ಭೀತಿಯು ಗಾವರ ಎದೆಯಾಳಕ್ಕೆ ಈಟಿಯಂತೆ ಇರಿಯಿತು. ತಟ್ಟನೆ ಮುಖಭಾವದಲ್ಲಿ ಕಾತರತೆ ಸೂಸಿ ಕೇಳಿದಳು,

"ಏನು ಮಾಧು ? ಏನಾಯ್ತು ? ಏಕಿಷ್ಟು ಗಾವರ ?"

"ಅಮ್ಮಾ ! ರೈಲ್ವೆ ಗ್ಯಾಂಗ್ ಆಳು–ವೀರಯ್ಯ ಯಜಮಾನರಿಗೆ ರೇಜಿಂದ ಎದುರು ನಿಂತಿದ್ದಾನೆ ! ಅಯ್ಯೋ, ಇಷ್ಟರೊಳಗೆ ಏನಾಗಿದೆಯೋ....!"

ಕಾಳಿಂದಿ ಒಂದೆರಡು ಕ್ಷಣ ಗರಬಡಿದವಳಂತೆ ನಿಶ್ಚಲ ಭಂಗಿಯಲ್ಲಿ ಯೋಚಿಸಿ "ನೀನು ಅವರನ್ನು ಬಿಟ್ಟು ಬರಬಾರದಿತ್ತು ! ಏಕೆ ಬಂದೆ ?"

"ಅವನು ಭರ್ಜರಿ ಆಳು ! ಬಂಡೆದ್ದಿದ್ದಾನೆ ! ನನ್ನಿಂದೇನಾದೀತು ? ಅದಕ್ಕೇ ಪಾಸಣ್ಣನನ್ನು ಕರೆದುಕೊಂಡು ಹೋಗೋಣವೆಂದು ಓಡಿಬಂದೆ."

"ಅಯ್ಯೋ, ದೇವರೇ !" ಎಂದ ಕಾಳಿಂದಿ ಪಾಸಣ್ಣನನ್ನು ಕೂಗಿ ಕರೆದು ಈಗಲೇ ಇಬ್ಬರೂ ಹೋಗಿ, ರೌಡಿ ಏನಾದರೂ ಮಾಡಿದರೇನು ಗತಿ ?" ಎಂದಳು ಕಾತರಯುಕ್ತ ವಾಣಿಯಲ್ಲಿ.

ಭಯ ಭೀತಿಯ ಗಾವರ ಪ್ರಾಣಕುಂಡಲಿನಿಯನ್ನು ತುಂಬಿ ದೇಹದಾದ್ಯಂತ ಕಂಪನದ ಅಲೆ ಹರಿದಾಡತೊಡಗಿತು. ಯಾವುದೋ ಅಜ್ಞಾತ ಹಸ್ತ ಹೃದಯದ್ರವ್ಯವನ್ನು ಹಿಸುಕಿತು ಮನಃಪ್ರಾಣಗಳು ತತ್ತರಿಸುವಂತೆ. ಒಮ್ಮೆಲೇ ಹಲವಾರು ದೇವರುಗಳನ್ನು ನೆನೆದು ಯಾವ ಆಪತ್ತೂ ಬಾರದಿರಲೆಂದು ಮೊರೆಯಿಟ್ಟಳು ಕಾಳಿಂದಿ. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯತೊಡಗಿತು.

* * * *

ಕಾಫೀ ತೋಟದ ಪಚ್ಚವಾರ್ಧಿ ಮೆಲುಮೆಲ್ಲನೆ ಮರ್ಮರಿಸುತ್ತಿದೆ ತಂಗಾಳಿಯುಲಿತದಿಂದ. ಹಸುರು......ಹಸುರು ಎಲ್ಲಿಯುವರೆಗೂ ಹಸುರೇ ಹಸುರು. ನೋಡುವ ಕಣ್ಣುಗಳು ಹಸುರುಗಟ್ಟುವಂತಹ ಹಚ್ಚ ಹಸುರು. ಗಗನಚುಂಬೀ ವೃಕ್ಷಸ್ತೋಮ: ಕೆಳಗಡೆ ಕಾಫಿ ಗಿಡಗಳ ದಟ್ಟ ಹರವು.

ಆಳುಗಳಿಬ್ಬರೂ ತೋಟದ ಕಾಲುಹಾದಿಯಲ್ಲಿ ದೌಡಾಯಿಸುತ್ತಲೇ ಓಡಿದರು. ದಪ. ದಪ. ದಪ. ದಪ. ಹೆಜ್ಜೆಗಳ ಸದ್ದು ನಿಶ್ಶಬ್ದ ಶಾಂತಿಯ ಅಲೆಯಮೇಲೆ ಸುತ್ತಿಗೆಯ ಪೆಟ್ಟಿನಂತೆ ಬೀಳುತ್ತಿದೆ. ಅವರು ಇನ್ನಷ್ಟು ಹೊತ್ತಿನೊಳಗಾಗಿ ಹತ್ತನೇ ನಂಬರಿನ ಅಂಕಣವನ್ನು ಮುಟ್ಟಿದರೆ ಯಾರಿದ್ದಾರೆ ಅಲ್ಲಿ? ಮಾಧು ಗರಬಡಿದವನಂತೆ ನಿಂತು ಸುತ್ತಲೂ ಕಣ್ಣಾಡಿಸಿದ. ಎಲ್ಲಿಯೂ ಯಜಮಾನನ ಸುಳಿವಾಗಲೀ ವೀರಯ್ಯನ ಸುಳಿವಾಗಲೀ ಕಂಡು

ಬರಲಿಲ್ಲ. ವಿಷಯ ಒಗಟಾಗಿ ತೋರಿತು. ಎಲ್ಲೆಡೆಯೂ ಹರಿದಾಡಿದ ಕಣ್ಣಾಲಿಗಳು ನಿರಾಸೆಯಿಂದ ಹಿಂದಿರುಗಿದುವು.

"ಎಲ್ಲಿದ್ದರು ? ನೀನೇನಾದರೂ ಜಾಡು ತಪ್ಪಿದೆಯಾ ?" ಎಂದ ದಾಸಣ್ಣ; ಆಶ್ಚರ್ಯದಿಂದ.

"ಜಾಡು ತಪ್ಪುವುದು ಹೇಗೆ? ಅವರಿದ್ದುದು ಇಲ್ಲೇ. ಇಷ್ಟು ಬೇಗನೆ ಎಲ್ಲಿ ಹೋದರು ? ಅದೇ ಆಶ್ಚರ್ಯ !" ಸುತ್ತಮುತ್ತ ನಿಟ್ಟಿಸಿದ ಮಾಧು.

"ನಾನು ಆಗಲೇ ರೈಲ್ವೆಗ್ಯಾಂಗ್ ಆಳುಗಳನ್ನು ಕೆಲಸಕ್ಕೆ ಸೇರಿಸಿಕೊಳ್ಳ ಬೇಡಿ ಎಂದು ಯಜಮಾನರಿಗೆ ಹೇಳಿದ್ದೆ ಮಾಧು. ಈ ಜನ ಒಂದೆಡೆ ಇರುವ ವರಲ್ಲ ; ರೀತಿ-ನೀತಿ ಒಂದೂ ಇಲ್ಲ. ಯಜಮಾನರು ಎಲ್ಲರನ್ನೂ ನಂಬುತ್ತಾರೆ ಅದೇ ತಪ್ಪು."

"ಅದಿರಲಿ, ಇವರೀಗ ಎಲ್ಲಿ ಹೋದರು ? ಏನು ಕತೆ ?"

"ಯಜಮಾನರು ಸದಾ ಒಂದು ಮಿತಿಯೊಳಗೇ ಇರುವ ವ್ಯಕ್ತಿ. ಹೆಚ್ಚಿನ ಗದ್ದಲಕ್ಕೆ ಅವಕಾಶ ಕೊಡದೇ ಕಳುಹಿಸಿರಬಹುದು ಬಿಡು."

"ಹಾಗಾದರೆ ಸ್ವಾಮಿಯವರೆಲ್ಲಿ ?"

"ಬಹುಶಃ ತೋಟದ ಒಳಾಂತರಕ್ಕೆ ಸುತ್ತಾಡಲು ಹೋಗಿರಬಹುದು" ಸ್ವಲ್ಪ ಯೋಚಿಸಿ ಪುನಃ ಕೇಳಿದ "ವೀರಯ್ಯ ಏತಕ್ಕಾಗಿ ಎದುರು ಬಿದ್ದ ? ಕಾರಣವೇನು ?"

"ಕೆಲಸವಾಗಲಿಲ್ಲ ಎಂದರು ಸ್ವಾಮಿ. ಅದೇ ಮಾತಿಗೆ ಮಾತು ಬೆಳೆ ಯಿತು."

ಹತಾಶ ಮನದಿಂದ ಸ್ವಲ್ಪಹೊತ್ತು ನಿಶ್ಶಬ್ದಗಳಿಯಲ್ಲಿ ಉರುಳಿತು.

ಮಾಧು ಬಾಯಿಗೆ ಬೆರಳಿಟ್ಟು ಜೋರಾಗಿ ಶಿಳ್ಳೆಹಾಕಿ "ಅಯ್ಯಾ ಎಲ್ಲಿ ದ್ದೀರಾ ?" ಎಂದು ಉಚ್ಚಸ್ವರದಲ್ಲಿ ಕೂಗಿ ಕರೆದ. ತೋಟದೊಳಗೆಲ್ಲಾದರೂ ಕೂಗಳತೆಯಲ್ಲಿರಬಹುದು ಎಂಬ ನಂಬುಗೆಯಿಂದ. ಕಣ್ಕಿವಿಗಳು ನಿಮಿರಿದುವು.

ದೂರದ ಬೆಟ್ಟ ಮರುದನಿ ಕೊಟ್ಟಿತು "ಅಯ್ಯಾ, ಎಲ್ಲಿದ್ದೀರಾ ?"

ಇಬ್ಬರೂ ಸದ್ದಿಲ್ಲದೆ ಆಲೈಸಿದರು. ಎಲ್ಲಿಂದಲೂ ಯಾವ ಸದ್ದೂ ಹೊರಡಲಿಲ್ಲ. ಮಾಧು ಪುನಃ ಪುನಃ ಕೂಗು ಹಾಕಿದ. ಉತ್ತರ ಇಲ್ಲವೇ ಇಲ್ಲ. ಪಕ್ಷಿಗಳ ಸಂಧ್ಯಾರಾಗ, ಎಲೆಗಳ ಮರ್ಮರ ಶ್ರುತಿ ವಿನಾ ಮತ್ತಾವ

ಸಪ್ಪಳ ಇಲ್ಲ. ಎಲ್ಲಿಂದ ಎಲ್ಲಿಯವರೆಗೂ ಸರ್ವಶಾಂತಿಯ ಅಪರಾವತಾರ ವಿಸ್ತೀರ್ಣದಲ್ಲಿ. ಢಡ ಢಡ ಮಿಡಿಯುವ ಹೃದಯದ ಮಿಡಿತವನ್ನು ಬಿಟ್ಟರೆ ನೀರವ-ನಿಶ್ಶಬ್ದ.

*   *   *   *

ಹೊತ್ತು ಉರುಳಿತು; ಕತ್ತಲು ಕವಿಯುತ್ತಿದೆ. ಸಾಯಂ ಸಮಯದ ಸೊಂಪು....ತಂಗಾಳಿಯ ತಂಪು....ಒಗ್ಗೂಡಿದರೂ ಚಿದಾಕಾಶದಲ್ಲಿ ಕಳವಳ-ಅಶಾಂತಿ.

ತೋಟಕ್ಕೆ ಹೋದ ರಾಮಚಂದ್ರನ ಸುಳಿವಿಲ್ಲ.

ಮಾಧು ತಂದ ಸುದ್ದಿಗೂ ಮಗ ಮನೆಗೆ ಮರಳದಿದ್ದುದಕ್ಕೂ ತಾಳಿಯಾಗಿ ಕಳವಳಜನಿತ ಚಿತ್ತದಿಂದ ಸೊಸೆಯನ್ನು ಕುರಿತು ಕೇಳಿದಳು ಸ್ವಾಮಿನಿ "ಕತ್ತಲು ಕವಿಯಿತು. ರಾಮು ತೋಟದಿಂದ ಇನ್ನೂ ಬರಲಿಲ್ಲವಲ್ಲಾ ಕಾಳಿಂದೀ? ಏನು ಮಾಡೋಣ?" ದನಿ ವಿಜಾತೀಯವಾಗಿತ್ತು.

"ನನಗೂ ಅದೇ ಚಿಂತೆ ಅಮ್ಮಾ! ಮಾಧು ಬೇರೆ...." ಮಾತು ಅಷ್ಟಕ್ಕೇ ನಿಂತಿತು. ಏನೋ ಹೇಳಲು ಪ್ರಯತ್ನಿಸಿ ಸುಮ್ಮನಾದಳು ಕಾಳಿಂದಿ. ಭಯ-ಕಳವಳಗಳಿಂದ ಮುಖಬಿಂಬ ವಿವರ್ಣವಾಯಿತು. ಭಾರವಾದ ಹೃದಯವನ್ನು ಹೊರಲಾರದೇ ತತ್ತರಿಸಿತು ಜೀವ.

ಇಬ್ಬರೂ ಚಿಂತಾಕ್ರಾಂತರಾಗಿ ಹಾದಿಯ ಕಡೆ ನೋಟವನ್ನು ಚೆಲ್ಲಿಕೊಟ್ಟರು. ಕತ್ತಲು ದಟ್ಟೈಸಿದರೂ ರಾಮಚಂದ್ರ ಹಿಮ್ಮರಳಲಿಲ್ಲ. ಕೆಲವು ಆಳುಗಳಿಗೆ ಕೈಲಾಂದ್ರ ಮತ್ತು ಟಾರ್ಚ್‌ಗಳನ್ನು ಕೊಟ್ಟು ತೋಟದಲ್ಲೆಲ್ಲಾ ನೋಡಿ ಬರಲು ಕಳುಹಿಸಿದರು. ಮನೆಯ ನಾಯಿಗಳೂ ಪತ್ತೆ ತರದೂದಿಗಾಗಿ ಆಳುಗಳನ್ನು ಹಿಂಬಾಲಿಸಿದುವು. ಅವರು ತೋಟದ ಹಾದಿ ಹಾದಿಗಳಲ್ಲಿ ಸುತ್ತಾಡಿ ಕೂಗಿ ಕರೆದು, ಎಲ್ಲಿಯೂ ಸುಳಿವು ಸಿಕ್ಕದೆ ನಿರಾಶರಾಗಿ ಬಹಳ ಹೊತ್ತಿನಮೇಲೆ ಹಿಂದಿರುಗಿದಾಗ ಹೆಂಗಳೆಯರ ಕಣ್ಣುಗಳಲ್ಲಿ ಕಂಬನಿಯ ಕೋಡಿ ಹರಿಯಿತು. ಮರುದಿನ ಇಡೀ ಊರು. ತೋಟದ ಪರಿಸರ ಎಲ್ಲೆಲ್ಲಿ ಹುಡುಕಾಡಿದರೂ ಒಡೆಯನ ಸುಳಿವಿಲ್ಲ. ವೀರಯ್ಯನೂ ಪತ್ತೆಯಿಲ್ಲ. ದೂರು ಪೋಲಿಸರತನಕ

ಹೋಯಿತು. ಕೆಲವು ದಿನಗಳ ಬಳಿಕ ಪೋಲಿಸರ ಕೈಗೆ ವಿರಯ್ಯ ಚಿತ್ರಾಪುರ ದಲ್ಲಿ ಸಿಕ್ಕಿಬಿದ್ದರೂ ರಾಮಚಂದ್ರನ ವಿಚಾರ ಕಂಡವರಿಲ್ಲ.

* * * *

ಪೋಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರು ವೀರಯ್ಯನನ್ನು ಪ್ರಶ್ನಿಸಿದರು "ಆದಿನ ರಾಮಚಂದ್ರರಿಗೂ ನಿನಗೂ ಏನೇನು ಗಲಾಟೆಯಾಯಿತು ಹೇಳು ?"

"ಅವರು ವಿನಾಕಾರಣ ರೇಗಿದರು ಅದಕ್ಕೇ...."

"ಅದಕ್ಕೇನು ಮಾಡಿದೆ ಹೇಳು ಅವರೆಲ್ಲಿದ್ದಾರೆ ?" ದನಿ ಮಾಡುಮುಟ್ಟು ವಂತೆ ಮೊಳಗಿತು.

"ಅವರಿಗೆ ನಾನೇನು ಮಾಡಲಿಲ್ಲ....ಅವರೆಲ್ಲಿದ್ದಾರೋ ತಿಳಿಯದು."

"ನೀನು ನಿಜ ಹೇಳಿದರೆ ಸರಿ; ಇಲ್ಲವಾದರೆ ಸರಿಯಾದ ಛಡಿ ಏಟು ಬೀಳುತ್ತೆ !"

ಅವರ ಕೋಪೋದ್ದೀಪ್ತವಾದ ಮುಖಬಿಂಬವನ್ನು ನೋಡಿ ವೀರಯ್ಯ ಗಡಗಡ ನಡುಗಿದ.

"ಹೇಳು, ಹೇಳುತ್ತೀಯೋ ಇಲ್ಲವೋ ?"

"ಅವರಿಗೆ ಎರಡೇಟು ಕೊಟ್ಟದ್ದು ನಿಜ...ಅಷ್ಟು ಹೊರತು ಇನ್ನೇನೂ ಮಾಡಿಲ್ಲ; ದಯವಿಟ್ಟು ಕ್ಷಮಿಸಿ. ನಿಮಗೆ ಅಡ್ಡಬಿದ್ದು ಹೇಳುವೆ. ಇನ್ನೇನೂ ಮಾಡಿಲ್ಲ ಸ್ವಾಮಿ !"

ಕೆಲವು ಛಡಿ ಏಟುಗಳು ರೊಯ್ಯನೆ ಬಿದ್ದುವು.

"ಅಯ್ಯಯ್ಯೋ ! ನಾನು ಹೊಡೆದದ್ದು ಹೌದು. ಎರಡೇಟು ಮಾತ್ರ ಸ್ವಾಮಿ ! ಇನ್ನೇನೂ ಮಾಡಿಲ್ಲ !" ಚೀರು ದನಿ ಮಾಡು ಮುಟ್ಟಿತು.

ಇನ್ನೂ ನಾಲ್ಕು ಏಟುಗಳು ಬೀಳುತ್ತಲೂ ನೆಲಕ್ಕೆ ಆತುಬಿದ್ದು ಬೋರಿಟ್ಟು ಅಳುತ್ತ ಕೇಳಿಕೊಂಡ "ಕೊಲ್ಲಬೇಡಿ ಸ್ವಾಮಿ ! ನಿಮ್ಮ ಕಾಲಿಗೆ ಬೀಳುವೆ !!"

* * * *

ಕಾಳಿಂದಿಗೆ ಪತಿ ಕಾಣೆಯಾದುದು ಆಕಾಶವೇ ತಲೆಯಮೇಲೆ ಕಳಚಿ

ಇದ್ದಷ್ಟು ದುಃಖ-ಸಂಕಟ-ಭಯಗಳ ಗಾವರ. ಅಂದಿನಿಂದಲೂ ಸ್ವಾಮಿನಿ ಪುತ್ರಶೋಕದಿಂದ ಅನ್ನ ನೀರು ಸರಿಯಾಗಿ ತೆಗೆದುಕೊಳ್ಳುತ್ತಿಲ್ಲ. ತಾನೂ ಹದೆಗೆಟ್ಟರೆ ಗತಿ ಮುಗಿದಂತೆಯೇ ಎಂಬುದು ಆತ್ಮಗತ. ಮೇಲಾಗಿ, ತೋಟ ಗಾರಿಕೆಯ ಭಾರವೂ ಹೆಗಲೇರಿತು. ಇದುವರೆಗೆ ಎಲೆಮರೆಯಕಾಯಾಗಿ ಬದುಕಿದ ಜೀವ ಒಮ್ಮೆಲೇ ತತ್ತರಿಸಿತು ಕಾರ್ಯಭಾರ ಮತ್ತು ಜೀವನ ಭಾರ ಗಳಿಂದ.

ದಿನಗಳ ಗಾಲಿ ಯಥಾ ಪ್ರಕಾರ ಉರುಳಿತು, ಯಾರ ಭಂಗ ಬವಣೆ ಗಳನ್ನೂ ಲೆಕ್ಕಿಸದೆ. ಚಾಂದ್ರಮಾನಗಳು ತಿಂಗಳಮಾನಗಳು ಒಂದರ ಮೇಲೊಂದು ಗತಿಸಿದುವು.

ಕಾರ್ಯಭಾರದ ಒತ್ತಡದಿಂದ ದುಃಖಭಾರ ಕಡಿಮೆಯಾಗುವುದು ಸಹಜ. ಆದರೇನು? ವಿಷಯ ಗೂಢಾತಿಗೂಢ. ಕೇಸು ಕೋರ್ಟಿನ ಕಟ ಕಟೆಯೇರಿತು. ಪೋಲೀಸರ ಅಥಿತಿಯಾಗಿದ್ದ ವೀರಯ್ಯ ಜೇಲಿನ ಅತಿಥಿಯಾದ. ಆದರೂ ರಾಮಚಂದ್ರನ ಸುಳಿವಿಲ್ಲ.

ಇಂದು ಹೊತ್ತಿಳಿಯುವ ಮುಂಚೆಯೇ ಗೋಪಾಲಕ ದನಕರುಗಳನ್ನು ಬಿಲ್ಲುಗಾವಲಿಂದ ಹೊಡೆದುಕೊಂಡು ಬಂದುದು ಸ್ವಲ್ಪ ಅಚ್ಚರಿ ಮೂಡಿಸಿತು ಕಾಳಿಂದಿಗೆ. ಅವನು ಕೊಟ್ಟಿಗೆಯಿಂದ ಹೊರಬರುತ್ತಲೂ ಕೇಳಿದಳು "ಇದೇನು ರಂಗಾ? ಇಷ್ಟು ಬೇಗನೆ ಬಂದೆ?"

ರಂಗ ಸ್ವಲ್ಪ ಚಡಪಡಿಸಿ ಹೇಳಲಾರದೇ ಹೇಳುವಂತೆ ಬಾಯ್ದೆರೆದ "ಅಪ್ಪ ಎಲ್ಲಿದ್ದಾರೆ? ಅವರಿಗೆ ಏನೋ ಹೇಳಬೇಕಾಗಿತ್ತು...."

ಅಷ್ಟರಲ್ಲೇ ತುಟಿಗಳು ಒಣಗಿ ಬಂದು ನಾಲಿಗೆಯಿಂದ ಒರಸಿಕೊಳ್ಳುತ್ತ ಅತ್ತಿತ್ತ ನೋಡಿದ. ಕಣ್ಣುಗಳಲ್ಲಿ ಭಯದ ಛಾಯೆ ಇಣುಕಿಣುಕಿ ಮಾಯ ವಾಯಿತು. ಮನಸ್ಸಿಗೆ ಏನೇನೋ ಮುಜುಗರ....ಹೇಳಲೋ ಬೇಡವೋ ಎಂಬ ದುಸ್ಥೈ ಬೇರೆ. ಒಣಗಿದ ತುಟಿಗಳನ್ನು ನಾಲಿಗೆ ಸವರಿತು.

"ಅಪ್ಪ ಮಲಗಿದ್ದಾರೆ. ಏನು ಹೇಳು, ಅವರು ಎದ್ದ ಮೇಲೆ ನಾನೇ ಹೇಳುವೆ."

ಆವನ ಸ್ಥಿತಿಗತಿ ಅವಳಿಗೂ ಗಂಟಲಾರಿಸಿತು. ಉತ್ತರವನ್ನು ಕಾತರತೆ ಯಿಂದ ನಿರೀಕ್ಷಿಸಿದಳು.

"ದೊಡ್ಡ ಕೆರೆ ಅಂಗಣದಲ್ಲಿ ಯಾರದೋ ಹೆಣ ಹೂಳಿರುವ ಗುರುತಿದೆ.... ಆದರೆ, ಅದೇಕೋ ಇತರರಿಗೆ ತಿಳಿಯದಂತೆ ಹುಲ್ಲಿನ ಜೊಂಡು ಸರಿಯಾಗಿ ಮುಚ್ಚಿ ಮರೆಮಾಚಿದ್ದಾರೆ! ಈ ಪರಿಸರದಲ್ಲಿ ಇತ್ತೀಚೆಗೆ ಯಾರೂ ತೀರಿಕೊಂಡ ಸುದ್ದಿ ಕೇಳಿ ಬಂದಿಲ್ಲ. ನಿಮಗೇನಾದರೂ ಗೊತ್ತೆ ?"

ಒಮ್ಮೆಲೇ ಕಣ್ಣು ಮುಂದಿನ ವಸ್ತುಗಳೆಲ್ಲಾ ಗಿರಗಿರ ಸುತ್ತಿದುವು. ಚಿತ್ತ ಭಿತ್ತಿಯಲ್ಲಿ ರಾಮಚಂದ್ರ ಚಿತ್ರವತ್ತಾಗಿ ಮೂಡಿನಿಂತ. ಒಡಲಾಳದಲ್ಲಿ ಕಂಬನಿಯ ಕಟ್ಟೆ ತಾನೇ ತಾನಾಗಿ ಬಿರಿಯಿತು. ಆ ಕ್ಷಣ ವೈಮರವಟ್ಟಂತೆ ಸ್ತಂಭೀಭೂತಳಾದಳು ಕಾಳಿಂದಿ. ದುಃಖದ ಕೋಡಿ ನರನಾಡಿಗಳಲ್ಲಿ ದೇಹದಾದ್ಯಂತ ಪ್ರವಹಿಸತೊಡಗಿ ಕಣ್ಣುಗಳಿಗೆ ಕತ್ತಲೆ ಕವಿಯಿತು.

ತೋಟದ ಪಚ್ಚೆವಾರ್ಧಿಯಲ್ಲಿ--ಪಕ್ಷಿಗೊರಳ ಇನಿದನಿಯಲ್ಲಿ ಈಗೀಗ ಹೊಮ್ಮುವುದು ಅನುತಾಪವೇ....

* * * *

ಸುದ್ದಿ ಊರಲ್ಲೆಲ್ಲಾ ಹಬ್ಬಿತು. ಪೋಲೀಸರು ಬಂದು ಶರಪಂಚರ ಮುಂದೆ ಶವವನ್ನು ಹೊರತೆಗೆದರು. ಮಾಂಸ ಕೊಳೆತುದರಿಂದ ಅಸ್ಥಿಪಂಜರ ಮಾತ್ರ ವೈದ್ಯ ಪರೀಕ್ಷೆಗೆ ಹೋಯಿತು.

ಜನ....ಜನ, ಊರಿನ ಜನರೆಲ್ಲಾ ಬಂದು ತಮ್ಮತಮ್ಮ ಅನುತಾಪ ವ್ಯಕ್ತ ಪಡಿಸುತ್ತ ಅದೇ ಸುದ್ದಿಯನ್ನು ಎತ್ತಿ ಮಾತಾಡಿ ಹೆಂಗಳೆಯರ ಕಣ್ಣಿನಲ್ಲಿ ಮತ್ತಷ್ಟು ಕಂಬನಿಯ ಕೋಡಿ ಹರಿಸಿ ಹೋದರು. ಸ್ವಾಮಿನಿ ಶೋಕಭಾರದಿಂದ ಅಕಾಲ ವೃದ್ಧಾಪ್ಯಕ್ಕೆ ಪದಾರ್ಪಣೆ ಮಾಡಿದಳು. ಕಾಳಿಂದಿ ವಿಧವಾವ್ರತ ಹಿಡಿದರೂ ಜೀವನ ಭಾರದಿಂದ ಮುಕ್ತಳಾಗುವ ಸಂಭವವಿಲ್ಲ.

ಇಂದು, ದಿನ ಪತ್ರಿಕೆ ಬಂದಾಗ ಬೆಳಿಗ್ಗೆ ಒಂಭತ್ತು ಗಂಟೆಯ ಸಮಯ. ಒಳಗಣ ಕೆಲಸ ಮುಗಿದಿದ್ದುದರಿಂದ ಓದಲು ಬಿಡುವು ದೊರಕಿತು. ವರಾಂಡದಲ್ಲಿ ಕುಳಿತು ಪತ್ರಿಕಾವಲೋಕನದಲ್ಲಿ ಮನನಿಟ್ಟಳು ಕಾಳಿಂದಿ. ಮುಖಪುಟವನ್ನು ಓದಿ ಒಳಪುಟವನ್ನು ತಿರುವಿಹಾಕಿದಾಗ ಕೋರ್ಟ್ ಕಾರ್ಯಕಲಾಪಗಳಲ್ಲಿ ವೀರಯ್ಯನ ವಿಚಾರಣೆಯ ವರದಿ ಪ್ರಕಟವಾಗಿತ್ತು. ಅವನು ಪೋಲೀಸರ ಆತಿಥ್ಯದಲ್ಲಿ ತಾನು ಹಣ್ಣುಗಾಯಿ ನೀರುಗಾಯಿಯಾದುದನ್ನು ಅತ್ಯಂತ ಸಂಕಟ

ಪ್ರದವಾಗಿ ಬಣ್ಣಿಸುತ್ತ ಕಣ್ಣೀರಿನ ಕೋಡಿಯನ್ನೇ ಹರಿಸಿದ್ದ. ಕೋರ್ಟಿನಲ್ಲಿ ವಕೀಲರು ಅವನನ್ನು ನಾನಾವಿಧವಾಗಿ ಪ್ರಶ್ನಿಸಿದ್ದಾರೆ. ಅದಕ್ಕೆ ಉತ್ತರವಾಗಿ ಅವನು ಯಜಮಾನರಿಗೆ ಅಂದು ಎರಡೇಟು ಹೊಡೆದಿದ್ದು ನಿಜ. ಅದಕ್ಕಿಂತ ಹೆಚ್ಚಿನದೇನೂ ತಿಳಿಯದು. ನಾನವರನ್ನು ಕೊಲೆ ಮಾಡಲೂ ಇಲ್ಲ; ಹೂಳಲೂ ಇಲ್ಲ; ಎಂದು ಖಡಾಖಡಿಯಾಗಿ ವಿನಂತಿಸಿಕೊಂಡು ಅಡ್ಡಬಿದ್ದು ಕ್ಷಮಾಪಣೆ ಬೇಡಿದ್ದ.

ಕಾಳಿಂದಿಯ ಎದೆಯಾಳದಿಂದ ನೀಳವಾದ ನಿಟ್ಟುಸಿರೊಂದು ಹೊರ ಬಿತ್ತು. ಒಡಲಾಳದಲ್ಲಿ ಏನೋ ಒಂದು ಬಗೆಯ ಕಸಿವಿಸಿ. ಇನ್ನೇನೋ ಒಂದು ಬಗೆಯ ಸಂಕಟ. ಮತ್ತೇನೋ ಒಂದು ಬಗೆಯ ಕಿಸಿಸಿಗೆ. ಅವನು ಕೊಲೆಗಾರ ಹೌದೋ ಅಲ್ಲವೋ ದೇವರಿಗೇ ಗೊತ್ತು. ತೆರೆಮರೆಯ ಹಿಂದೆ ಏನೆಲ್ಲಾ ನಡೆದಿದೆಯೋ ಬಲ್ಲವರಾರು? ಪ್ರತ್ಯಕ್ಷ ಸಾಕ್ಷಿಗಳಾರೂ ಇಲ್ಲ. ಅಂದ ಮೇಲೆ ಮನುಷ್ಯನ ನಿಷ್ಠುರ ನ್ಯಾಯಸ್ಥಾನದಲ್ಲಿ ಎಲ್ಲಿಯ ರೀತಿ-ನೀತಿ? ಇಂತಹ ಜೀವನಮರಂತ ನಾಟಕಗಳಿಗೆ ಎಂದಾದರೂ ಕೊನೆಯುಂಟೇ? ಕೋರ್ಟುಕಛೇರಿಗಳು ಇಲ್ಲದ ಕಾಲದಲ್ಲಿ, ಶಾಲಾಕಾಲೇಜುಗಳು ತಲೆಯೆತ್ತದ ಕಾಲದಲ್ಲಿ ಎಷ್ಟೋ ಜೀವನ ಶಾಂತಿ ಇರುತಿತ್ತು. ಸ್ವಾತಂತ್ರ್ಯನಂತರ ನ್ಯಾಯ ನೀತಿಗಳಿಗೆ ಬೆಲೆಯೇ ಇಲ್ಲ. ಬಾಳು-ಬದುಕು ಅತಂತ್ರ, ಶಾಂತಿ ಅಡವಿ ಪಾಲು, ಸತ್ಯ-ಧರ್ಮಗಳು ಮೂಲೆಗುಂಪು. ಸ್ವಾತಂತ್ರ್ಯ ಪೂರ್ವದ ಆಶೋತ್ತರಗಳು ಕ್ರೌರ್ಯಕ್ಕೆ ಬಲಿ. ಇವನ್ನೆಲ್ಲಾ ವಿಶ್ಲೇಷಿಸಿದರೆ ಸತ್ಯ-ಧರ್ಮ -ಶಾಂತಿಗಳಿಗೆ ಇನ್ನೆಂದಾದರೂ ಗರಿಮೂಡಿ ರೆಕ್ಕೆ ಬಲಿಯುತ್ತದೆ ಎಂಬುದು ಕನಸಿನ ಮಾತು. ಜನಕೋಟಿ ಅನ್ಯಾಯ-ಅನೀತಿ-ಹಿಂಸೆಗಳಿಗೆ ಒಗ್ಗಿ ಹೋಗಿ ದೆಯೋ ಎನಿಸುವಷ್ಟು ಆಶ್ಚರ್ಯದ ವಿಷಯ. ಪ್ರಸ್ತುತ ಪರಿಸ್ಥಿತಿಯಲ್ಲಿ ಕೋರ್ಟು ಕಛೇರಿಗಳ ವ್ಯವಹಾರ ಕೂರ್ಮಗತಿಯಲ್ಲಿರುವುದರಿಂದ ಕ್ರೌರ್ಯ-ದೌರ್ಜನ್ಯ ಗಳಿಗೆ ಇನ್ನಷ್ಟು ಇಂಬು ಮುಂದೆಯೂ ಇದೇ ರೀತಿ-ನೀತಿ ಮುಂದುವರಿದರೆ ಪರಿಣಾಮವನ್ನು ಊಹಿಸುವುದು ಕಷ್ಟವೇ.

ಪತಿ-ರಾಮಚಂದ್ರ ಯಾವತ್ತೂ ಇತಿಮಿತಿಯೊಳಗಿರುತಿದ್ದ ವ್ಯಕ್ತಿ. ಯಾರಿಗೂ ಅನ್ಯಾಯ ಮಾಡಿದವರಲ್ಲ. ದೈವ ಶಕ್ತಿಯೇ ಅವರಿಗೆ ಆಪತ್ಕಾಲ ದಲ್ಲಿ ಸಹಾಯ ಮಾಡಬಹುದಿತ್ತು. ಸತ್ಯ-ಧರ್ಮ-ಶಾಂತಿಗಳು ಅಡವಿ

ಪಾಲಾದುದರಿಂದ ಸತ್ಯಸಂಧತೆ ಕ್ರೌರ್ಯಕ್ಕೆ ಒಳಗಾಯಿತು. ಅಂದಮೇಲೆ ಇದಕ್ಕೆಂದಾದರೂ ಪರಿಹಾರವುಂಟೇ? ಧರ್ಮರಕ್ಷಣೆಯಾದ ದೈವ ಶಕ್ತಿ ಹಗಲು ನಿದ್ದೆ ಮಾಡುತ್ತಿರಬಹುದೇ? ಅದೇ ಅರ್ಥವಾಗುತ್ತಿಲ್ಲ.

ಪತ್ರಿಕಾವಲೋಕನವನ್ನು ಬದಿಗೊತ್ತಿ ವಿಚಾರತತ್ಪರಳಾದಳು ಕಾಳಿಂದಿ.

* * * *

ಸ್ವಾಮಿನಿ ಈಗೀಗ ಪುತ್ರಶೋಕದಿಂದ ಬಹಳಷ್ಟು ಬಿಡುಗಡೆ ಹೊಂದಿದ್ದು, ಗದ್ದೆತೋಟಗಳಲ್ಲಿ ಓಡಾಡುತ್ತ ಆವರಿವರ ಬಾಯಿಯಲ್ಲಿ ಮಗನ ಕೊಲೆಯ ವಿಷಯ ಬಣ್ಣಬಣ್ಣವಾಗಿ ವರ್ಣಿತವಾಗುವುದನ್ನು ಕಿವಿ ತುಂಬ ಕೇಳಿದ್ದಾಳೆ. ಬಹುತೇಕವಾಗಿ ಎಲ್ಲರೂ ವೀರಯ್ಯನೇ ಕೊಲೆಗಾರನೆಂದು ಸಮರ್ಥಿಸುತ್ತ ಅವನಿಗೆ ಗಲ್ಲಾಗಲೇಬೇಕೆಂದು ಪ್ರತಿಪಾದಿಸುವುದನ್ನು ಒಪ್ಪಿಕೊಳ್ಳುತ್ತಾಳೆ ಕೂಡ. ಕೊಲೆಗೆ ಕೊಲೆಯೇ ಸರಿಯಾದ ಶಿಕ್ಷೆಯೆಂಬುದು ಅವಳ ಅಭಿಮತ.

ಮಾಧು ಕೋರ್ಟಿನಲ್ಲಿ ಸಾಕ್ಷಿ ಹೇಳುವಾಗ ಒಂದು ಹೆಜ್ಜೆ ಮುಂದೆ ಹೋಗಿ ವೀರಯ್ಯ ಯಜಮಾನರನ್ನು ಬಡಿಯುತಿದ್ದುದನ್ನು ತಾನು ಕಣ್ಣಾರೆ ಕಂಡಿರುವುದಾಗಿ ಹೇಳಿದ್ದಾನೆ. ಅದು ವಕೀಲರ ತರಬಿಯತ್ತೋ ಅಥವಾ ಅವನ ಆತ್ಮ ಪ್ರೇರಣೆಯೋ ದೇವರಿಗೇ ಗೊತ್ತು. ಮೊಕದ್ದಮೆ ಸರಕಾರದ ಕೈವಶವಾಗಿರುವುದರಿಂದ ಇನ್ನು ಅಲ್ಲಿ ತಮ್ಮ ಪಾತ್ರವೇನೂ ಇಲ್ಲ ಎಂಬುದು ಮನೋಗತ. ಮಾಧುವಿನ ಸಾಕ್ಷ್ಯದಲ್ಲಿ ಸಂಪೂರ್ಣ ಸಮಾಧಾನ: ಕೇಸು ತೀರ್ಮಾನವಾಗಿ ಎಂದಿಗೆ ತೀರ್ಪು ಹೊರಬೀಳುತ್ತದೋ ಎಂದು ಕಾದಿರುತ್ತದೆ ಚಿತ್ತಪ್ರವೃತ್ತಿ. ಆಗಿಂದಾಗ್ಗೆ ತಮ್ಮವರು ನಗರದ ಕಡೆ ಹೋದಾಗ ಅಥವಾ ವಕೀಲರು ಈಕಡೆ ಬಂದಾಗ ಮೊಕದ್ದಮೆ ವಿಚಾರವನ್ನು ತಿಳಿದುಕೊಳ್ಳುವುದರಲ್ಲಿ ವೈಯಲ್ಲಾ ಮನಸ್ಸಾಗುತ್ತಾಳೆ ಸ್ವಾಮಿನಿ. ಅದರಿಂದ ಪ್ರಯೋಜನವಿಲ್ಲವಾದರೂ ಕುತೂಹಲ ಅಷ್ಟೆ.

ತಿಂಗಳ ಮಾನಗಳು ಸರಾಗವಾಗಿ ಉರುಳಿ ವರ್ಷಮಾನಗಳು ಕಳೆದುವು.

ಇತಿಮಧ್ಯೆ, ನಗರದಿಂದ ವಕೀಲ ಆಗಮಿಸಿದ. ಟೀಕುಟಾಕಾದ ಮೋಜಿನ ಉಡುಪು: ಮುಖಭಾವದಲ್ಲಿ ಹರ್ಷಸೂಚಕವಾದ ಕಿರುನಗೆ: ಭಾವಾತ್ಮಕ

ಶ್ರದ್ಧೆ ಕಣ್ಣುಗಳಲ್ಲಿ. ಮೆಟ್ಟಿಲೇರಿ ಪಟ ಪಟ ನಡಿಗೆಯಲ್ಲಿ ಒಳಬರುತ್ತಲೂ ಉಭಯಕುಶಲೋಪರಿ ಸಾಂಪ್ರದಾಯಿಕವಾಗಿ ನಡೆಯಿತು. ಅನಂತರ ಅವನೆಂದ,

"ನಾವು ಹೊಡೆದಾಡಿದ್ದು ಸಾರ್ಥಕವಾಯಿತು. ಮೊಕದ್ದಮೆ ಇಷ್ಟು ಪ್ರಬಲವಾಗುವುದೆಂಬ ನಂಬಿಕೆಯಿರಲಿಲ್ಲ. ಅಂತೂ ದೇವರು ದೊಡ್ಡವನು!"

"ಏನು? ಏನಾಯಿತು?"

"ವೀರಯ್ಯನಿಗೆ ಗಲ್ಲಾಗುವ ಸಂಭವವುಂಟು". ಸಂತುಷ್ಟಭಾವದಿಂದ ನುಡಿ ಹೊರಬಿತ್ತು.

"ಅಂದರೆ, ಅವನೇ ಕೊಲೆ ಮಾಡಿದ್ದು ಖಚಿತ ಎಂದಂತಾಯಿತು?" ಕೇಳಿದಳು ಕಾಳಿಂದಿ.

"ಹಾಗೆಂದೇ ಹೇಳುತ್ತಿದೆ ಪ್ರಾಸಿಕ್ಯೂಶನ್."

"ಅದಕ್ಕೆ ಸರಿಯಾದ ಪುರಾವೆ ಏನು?"

"ಅಸ್ಥಿಪಂಜರ ಗಂಡಸಿನದು. ರಾಮಚಂದ್ರನ ದೇಹಕ್ಕೆ ಸರಿಸಾಟಿಯಾದ ಉದ್ದಳತೆಯಿದೆ. ಆ ಸಮಯದಲ್ಲಿ ನಿಮ್ಮ ಕಡೆ ಬೇರಾರೂ ಮೃತಪಟ್ಟಿಲ್ಲವಾದ್ದರಿಂದ ಸಮರ್ಥನೆ ದೊರಕಿದೆ ಎನ್ನಬಹುದು. ಅಂತೂ, ವೀರಯ್ಯನಲ್ಲದೆ ಕೊಲೆಗಾರ ಬೇರಾರೂ ಅಲ್ಲ ಎಂಬುದು ಗಂಭೀರ ಸತ್ಯ."

"ನನಗೆ ಈಗಲೂ ಸ್ವಲ್ಪ ಅನುಮಾನವೇ" ಸಂಶಯ ವ್ಯಕ್ತಪಡಿಸಿದಳು ಕಾಳಿಂದಿ. ಪುನಃ "ಅವನೊಬ್ಬನಿಂದ ಹೇಗೆ ಅಷ್ಟು ಮಸಲತ್ತು ಸಾಧ್ಯವಾಯಿತು? ಅದೇ ಅರ್ಥವಾಗದ ವಿಷಯ." ಎಂದಳು ಮತ್ತೆ ವಿಚಾರವನ್ನು ತನ್ನಲ್ಲೇ ತರ್ಕಿಸಿ.

"ಬೇರೆ ಯಾರಾದರೂ ಕೂಡಿದ್ದಿರಬಹುದು; ಒಗ್ಗಟ್ಟು ಏನು ಬೇಕಾದರೂ ಸಾಧಿಸುತ್ತದೆ!"

"ನನಗೆ ಗಲ್ಲು ಎಂಬ ಶಬ್ದ ಕೇಳುವುದೇ ವ್ಯಸನ. ಯಾವ ಕೇಡಿಗೇ ಆಗಲೀ ಗಲ್ಲು ಶಿಕ್ಷೆ ಮಾಡಿ ಪ್ರಾಣಹರಣ ಮಾಡುವುದಕ್ಕಿಂತ ಆಜೀವಪರ್ಯಂತ ಶಿಕ್ಷೆ ವಿಧಿಸಿ ಕೈತುಂಬ ಕೆಲಸ ಪಡೆಯುವುದು ಲೇಸು. ಸತ್ತುಹೋದರೆ ಏನು ಕಲಿತ ಹಾಗಾಯಿತು? ಇದ್ದು ದೇಹ ಸವೆಸಿ ಬುದ್ಧಿ ಕಲಿಯಬೇಕು. ಏನನ್ನುತ್ತೀರಿ?"

"ಇದು ನಿಮ್ಮ ಅಭಿಪ್ರಾಯದ ಮಾತು." ನಕ್ಕುಬಿಟ್ಟ ವಕೀಲ.

* * * *

ಪ್ರಾತಃಕಾಲಿನ ಶೀತಲ ಶಾಂತ ವಾತಾವರಣ...

ಬಾಲರವಿ ಬಾಂದಳದಲ್ಲಿ ಮುಗಿಲು ದಿಣ್ಣೆಯನ್ನೇರಿದ್ದಾನೆ.

ಕರ್ಣಾನಂದಕರವಾಗಿ ಹೊಮ್ಮುವ ಪಕ್ಷಿಗೊರಳ ಸುಪ್ರಭಾತವನ್ನು ಆಲೈಸುತ್ತ ಕಣದಲ್ಲಿ ಕಾಫೀ ಬೀಜವನ್ನು ಹಸನು ಮಾಡುವ ಕೆಲಸಗಾರರ ಉಸ್ತುವಾರಿಯಲ್ಲಿದ್ದಾಳೆ ಸ್ವಾಮಿನಿ. ಆಳುಗಳು ನಗೆಚಾಟಿಕೆಯ ಮಾತುಗಳನ್ನಾಡುತ್ತ ಹಾಸ್ಯದ ಚಟಾಕಿ ಹಾರಿಸಿ, ನಗೆಯ ಗುಲ್ಲೆಬ್ಬಿಸಿದರೆ ಕಿವಿ ಗಡಚಿಕ್ಕುವಷ್ಟು ಮೊರೆತ ಮೊಳಗುತ್ತದೆ. ಹಳೆಹಳೆಯ ಅನುಭವಗಳನ್ನು ಮೆಲಕು ಹಾಕಿ, ಮರೆತ ಘಟನೆಗಳಿಗೆ ಪ್ರತಿಮಾರೂಪ ಕೊಟ್ಟು ಜೀವನ ಸತ್ಯವನ್ನು ಎತ್ತಿಹಿಡಿಯುವ ಚಟುವಟಿಕೆ ಮತ್ತು ಮಾತಿನ ಮೋಜುಗಳ ವೈಖರಿಯು ಒಮ್ಮತ-ಒಮ್ಮತಗಳನ್ನು ಪ್ರತಿಪಾದಿಸುತ್ತದೆ ನಾವು ಯಾವುದೇ ಮಾನದಂಡದಿಂದ ಅಳೆದರೂ.

ಆ ಚಟುವಟಿಕೆ ಸರಸ ಸಲ್ಲಾಪ ಹೊತ್ತನ್ನು ಸರಾಗವಾಗಿ ಉರುಳಿತು.

ಇನ್ನಷ್ಟು ಹೊತ್ತಿನೊಳಗಾಗಿ ಅಲ್ಲಿ ವೃದ್ಧ ಸ್ತ್ರೀಯೊಬ್ಬಳು ಕಾಣಿಸಿಕೊಂಡಳು. ಶೀರ್ಣದೀರ್ಣವಾದ ಮುಖಬಿಂಬದಲ್ಲಿ ಆಳಕ್ಕಿಳಿದ ಕಣ್ಣಾಲಿಗಳು; ರವಿಕೆ ಇಲ್ಲದ ಮೈ; ಅಸ್ತವ್ಯಸ್ತವಾಗಿ ಬಳಸಿ ಸುತ್ತಿದ ಸೀರೆ; ಪ್ರತಿಯೊಂದು ಅಂಗಾಂಗಗಳಲ್ಲೂ ಎದ್ದು ಕಾಣುವ ಬಡತನ; ಪ್ರಪ್ರಥಮ ನೋಟಕ್ಕೇ ಮನಸ್ಸು ಬಿಸಿಲಟ್ಟಿದ ಮಂಜಿನಂತೆ ಕರಗಿ ದ್ರವೀಭೂತವಾಗುವಂತಹ ಕರುಣಾಯಿತ ಚಿತ್ತಾರ.

ಆಕೆ ತೀರ ಸನಿಹಕ್ಕೆ ಬಂದು ಕೈಮುಗಿದು ದೈನ್ಯಾತಿದೈನ್ಯತೆಯಿಂದ "ತಾಯೀ! ನನ್ನ ಮಗನನ್ನು ಪೋಲೀಸರು ಎಳೆದುಕೊಂಡು ಹೋಗಿ ಎರಡು ವರ್ಷವಾಗುತ್ತಾ ಬಂತು; ನನಗೆ ಬೇರೆ ಯಾರೂ ಗತಿಯಿಲ್ಲ. ಹೆತ್ತ ಆರೇಳು ಮಕ್ಕಳಲ್ಲಿ ಉಳಿದವನು ಇವನೊಬ್ಬನೇ. ಈವರೆಗೆ ದುಡಿದು ತಿನ್ನುತ್ತಿದ್ದೆ. ಈಚೆಗೆ ದುಃಖಭಾರದಿಂದ ಶಕ್ತಿ ಕುಗ್ಗಿ ಹೋಗಿದೆ. ಇನ್ನಾದರೂ ಅವನನ್ನು ಬಿಡಿಸಿಕೊಟ್ಟರೆ ಈ ಬಡಜೀವ ಬದುಕುತ್ತದೆ; ದಯವಿಟ್ಟು ಉಪಕಾರ ಮಾಡಿ

ಾಯಿ. ಮಗನನ್ನು ನೋಡಲು ನನ್ನ ಜೀವ ಹಾತೊರೆಯುತ್ತದೆ. ತಾಳ
ಾರೆ, ಬಾಳಲಾರೆ; ಮಗನ ಬಿಡುಗಡೆಯಾಗದೆ ಸಾವು ಬರುವುದಿಲ್ಲ ಕೂಡ.
ನ್ನ ಸ್ಥಿತಿಗತಿಗಾದರೂ ದಯಮಾಡಿ ಮರುಕ ತೋರಿರಿ... "

ಮುದುಕಿ ಅಳುತ್ತಳುತ್ತಲೇ ಬಿನ್ನೈಸಿಕೊಂಡಳು. ದುಃಖದಗ್ಧವಾದ
ನಿ ಬಾವಿಯಾಳದಿಂದ ಹೊರಬಿದ್ದಂತೆ ಹೊರಬಿತ್ತು. ಮುದುಡಿದ ಕದಪುಗಳ
ಮೇಲೆ ಕಣ್ಣೀರು ಧಾರೆಧಾರೆಯಾಗಿಳಿಯಿತು.

"ಅವಳು ವೀರಯ್ಯನ ತಾಯಿ" ಕೆಲಸಗಾರ ಪರಿಚಯಿಸಿದ.

ಅದೇ ವೇಳೆಗೆ ಕಾಳಿಂದಿ ಹೊರ ಬಂದಳು.

"ಅವಳ ಕೇಳಿಕೆ ಕೇಳಿದೆಯಾ ಕಾಳಿಂದಿ?"

ಅತ್ತೆಯ ಮಾತಿಗೆ ಏನು ಹೇಳಬೇಕೋ ತಿಳಿಯಲಿಲ್ಲ ಕಾಳಿಂದಿಗೆ.
ವಳು ಗುರುತಿಸಿದ್ದು ಆ ಬಡತಾಯಿಯ ಅತ್ಯಂತ ಶೀರ್ಣಿತ ಸ್ಥಿತಿಗತಿ ಮಾತ್ರ.
ಡಿದು ತಿನ್ನಲಾರದೇ ಸೋತು ಬಳಲಿ ಬೆಂಡಾದ ಕರುಣಾಜನಕ ಚಿತ್ರ
ದಯಕರಂಡವನ್ನು ಕಾಣದ ಕೈಗಳಿಂದ ಹಿಸುಕಿತು. ಸ್ವಲ್ಪ ಯೋಚಿಸಿ
ಡಿದಳು "ಈಗ ಮೊಕದ್ದಮೆ ಇರುವುದು ಸರಕಾರದ ಕೈಯಲ್ಲಿ. ನಾವೇನೂ
ಾಡುವಂತಿಲ್ಲ. ಪಾಪ, ಈಕೆ ನಿರಪರಾಧಿ...." ಎಂದು ಇನ್ನೂ ಏನೋ
ೇಳಲು ತೊಡಗಿ ಸುಮ್ಮನಾದಳು. ಮುಂದೆ ಮಾತು ಹೊರಡಲಿಲ್ಲ.

ವೃದ್ಧೆ ಅವಳ ಮಾತನ್ನು ನಿರ್ಲಕ್ಷಿಸಿ ತಿರಸ್ಕಾರದಿಂದ ನುಡಿದಳು "ನನ್ನ
ಗನನ್ನು ಕೊಂದ ನಿನ್ನ ಮಗ ಇನ್ನೂ ಬದುಕಿದ್ದಾನಲ್ಲ ಅದು ಸಾಲದೇ?
ನನ ಬಿಡುಗಡೆ ಮಾಡಿಸಲು ಇಲ್ಲಿಯ ತನಕ ನೀನು ಲಜ್ಜೆಯಿಲ್ಲದೆ ಬಂದುದೇ
ಶೇಷ!"

"ಅಮ್ಮಾ! ಇವಳು ನಿರಪರಾಧಿ. ಅಲ್ಲದೆ ಬಡವಿ-ಅನಾಥೆ-ವೃದ್ಧೆ. ಹೀಗಿ
ವಾಗ ಯಾರ ಸಹಾಯ ಬೇಡಿಯಾಳು? ಹೇಗೂ ನಾವು ವೀರಯ್ಯನನ್ನು
ಡಿಸಲಾರೆವು; ಮತ್ತೇಕೆ ಚುಚ್ಚು ಮಾತು?" ನುಡಿಯಲಾರದೇ ನುಡಿದಳು
ಾಳಿಂದಿ.

ಸ್ವಾಮಿನಿ ಕೆಕ್ಕರಿಸಿ ನೋಡಿ ಸುಮ್ಮನಾದಳು. ಚಿತ್ತ ಮಗನ ಸುತ್ತ
ುತ್ತ ಸುಳಿಸುಳಿದಾಡಿತು, ಒಡಲ ಸಂಕಟವನ್ನು ಉಕ್ಕೇರಿಸುವಂತೆ.

]

ಕಾಳಿಂದಿ ಗತಕಾಲಕ್ಕೆ ಮನವನ್ನು ಹರಿಯಬಿಟ್ಟಳು. ಪಳೆಯ ಸಭ್ಯತೆ ಮತ್ತು ಸಾತ್ವಿಕತೆಗಳು ಜೀವನವನ್ನು ಹಂತಹಂತವಾಗಿ ಮೇಲೇರಿಸತೊಡಗಿದಾಗಲೇ ಹೇಗೆ ಅಸಭ್ಯತೆಯ ಕತ್ತರಿಗೆ ಸಿಕ್ಕಿ ಹತವಾಯಿತು ಎಂಬುದು ಚಲನ ಚಿತ್ರದಂತೆ ಭತ್ತಭಿತ್ತಿಯ ಮೇಲೆ ಸುಳಿಸುಳಿದಳಿಯಿತು. ನನ್ನ ದುರದೃಷ್ಟಕ್ಕೆ ಯಾರಮೇಲಾದರೂ ಪ್ರತೀಕಾರ ಮಾಡಬೇಕು ಅನಿಸುವುದೇ ಇಲ್ಲ. ಎಲ್ಲಕ್ಕೂ 'ಕರ್ತ' ಎಂಬವನಿರುವಾಗ ನಾವೇಕೆ ಹೊಣೆಗಾರರಾಗಬೇಕು? ಎನ್ನುತ್ತದೆ ಅಂತರಾತ್ಮ.

*   *   *   *

ನ್ಯಾಯಾಲಯದ ಕಟಕಟೆಯಲ್ಲಿ ಅಪರಾಧಿಸ್ಥಾನಿಯಾಗಿ ನಿಂತಿದ್ದಾನೆ ವೀರಯ್ಯ. ದೇಹದಾದ್ಯಂತ ಕಂಪನದ ಅಲೆ ಹರಿದಾಡುತ್ತಿದ್ದರೂ ಎರಡೂ ಕೈಗಳನ್ನು ಜೋಡಿಸಿಕೊಂಡು ದೈನ್ಯಾತಿದೈನ್ಯತೆಯಿಂದ ಹೇಳತೊಡಗಿದ "ಸ್ವಾಮೀ! ದೇವರೇ!! ನಾನು ಎಲ್ಲಾ ದೇವರುಗಳ ಮೇಲೆ ಆಣೆ ಇಟ್ಟು ಹೇಳುವೆ. ಪೋಲಿಸರು ನಿರಪರಾಧಿಯಾದ ನನ್ನ ಮೇಲೆ ಸುಳ್ಳು ಆರೋಪ ಮಾಡಿದ್ದಾರೆ–ಅದು ಕೊಲೆಯ ಘೋರ ಆರೋಪ! ವಕೀಲರನ್ನು ನೇಮಿಸಿಕೊಳ್ಳುವುದು ನನಗೆ ತಿಳಿಯದು. ಅವರೆಲ್ಲಿದ್ದಾರೋ, ಅವರಿಗೆ ಎಷ್ಟು ದುಡ್ಡು ಕೊಡಬೇಕೋ ಅದೊಂದೂ ಗೊತ್ತಿಲ್ಲ. ನಾನೊಬ್ಬ ಬಡಕೂಲಿ, ನನ್ನ ಬಳಿ ಚಕ್ಕಾಸೂ ಇಲ್ಲ. ಕೆಲಸ ಸಿಕ್ಕಿದ ದಿನ ದುಡಿದು ಊಟ ಮಾಡುವುದು; ಇಲ್ಲದ ದಿನ ಉಪವಾಸವಿರುವುದು ನನ್ನ ದಿನಚರಿ. ರೈಲ್ವೆ ಗ್ಯಾಂಗ್ ಆಳು ಆಗಿದ್ದು ಊರೂರು ಸುತ್ತುವುದರಿಂದ ವಾಸಕ್ಕೊಂದು ಗುಡಿಸಲೂ ಇಲ್ಲ. ಮೈಮೇಲೊಂದು ದುಪ್ಪಟಿ ಮಾತ್ರ ಇಟ್ಟುಕೊಂಡಿದ್ದೆ. ದುಷ್ಟ ಪೋಲೀಸರು ಅದನ್ನೂ ಕಿತ್ತುಕೊಂಡರು! ಜೇಲಿಗೆ ಬಿಟ್ಟಿದ ನಂತರ ಜೇಲಿನ ಅಧಿಕಾರಿಗಳು ಮೈಮೇಲಿದ್ದ ಬಟ್ಟೆಯನ್ನು ಕಳಚಿಕೊಂಡರು! ಹಿಂಸೆ ... ಪ್ರಾಣಹಿಂಸೆ ಸ್ವಾಮೀ!

"ನಾನು ಒಡೆಯರನ್ನು ಕೊಲ್ಲಲೂ ಇಲ್ಲ; ಹೂಳಲೂ ಇಲ್ಲ. ಅವರಿಗೆ ಎರಡೇಟು ಹೊಡೆದದ್ದು ನಿಜ. ಆ ಪಾಪದ ಪರಿಣಾಮ ಎರಡು ವರ್ಷ ಪ್ರಾಣಿ ಜೇಲುವಾಸ ಕಂಡಿದ್ದುಂಟು. ಪೋಲೀಸರ ಆಥಿತ್ಯದಲ್ಲಿ ಮೈಮೂಳೆಮೂಳೆಯೂ ನಜ್ಜುಗುಜ್ಜಾಗಿವೆ. ಇನ್ನಾದರೂ ನನ್ನನ್ನು ದಯವಿಟ್ಟು ಬಿಟ್ಟು ಬಿಡಿ ನನಗೆ

ಮುದುಕಿಯಾದ ತಾಯಿ ಇದ್ದಾಳೆ. ಅವಳಿಗೆ ನಾನೊಬ್ಬನೇ ಮಗ. ಇಳಿವಯಸ್ಸಿನಲ್ಲಿ ಮಡಿದು ಹಾಕುವವರಿಲ್ಲ. ಈ ಮಧ್ಯೆ ಎಷ್ಟೋ ಬಾರಿ ಜೇಲಿನ ಬಾಗಿಲಿಗೆ ಬಂದು ದಿನವೆಲ್ಲಾ ಕಾದರೂ ನಮ್ಮ ಸಂದರ್ಶಕ್ಕೆ ಜೇಲಿನ ಅಧಿಕಾರಿಗಳು ಸಮ್ಮತಿ ನೀಡಲಿಲ್ಲ. ಅವಳು ಅಳುತ್ತಳುತ್ತಲೇ ಹಿಂದಿರುಗಿದ್ದು ನನಗೆ ಕರುಳು ಕೊಯ್ದಷ್ಟು ಸಂಕಟ. ಈ ಅಧಿಕಾರೀ ಜನಕ್ಕೆ ಮುದುಕಿ ನಿರಪರಾಧಿ-ಅನಾಥೆ ಎಂಬ ಕನಿಕರ ಎಳ್ಳಷ್ಟೂ ಇಲ್ಲವಲ್ಲ, ಸ್ವಾಮೀ! ಎಲ್ಲೆಲ್ಲೂ ಧೂರ್ತ ಜನವೇ ಕಾಣಿಸುತ್ತಿದೆ. ನನಗೆ ಕರುಣೆ ತೋರುವವರಾರು? ಆದರೂ, ಕೈಮುಗಿದು ಅಡ್ಡಬಿದ್ದು ಕೇಳಿಕೊಳ್ಳುವೆ. ನನ್ನ ತಾಯಿಗಾಗಿಯಾದರೂ ನನ್ನನ್ನು ಬಿಡುಗಡೆ ಮಾಡಿರಿ. ಇಷ್ಟು ದಿನ ಜೇಲು ಬಾಗಿಲು ಕಾದು ಸಾಕಾದ ಮುದುಕಿ ಈದಿನ ಇಲ್ಲಿಗೂ ಬಂದು ಬಾಗಿಲು ಕಾಯುತ್ತಿದ್ದಾಳೆ. ಈಗಲೋ ಆಗಲೋ ಸಾಯುವ ಅವಳಿಗಾದರೂ ಕರುಣೆ ತೋರಿದರೆ ತುಂಬಾ ಉಪಕಾರ. ಪ್ರಭೋ....ದಯಮಾಡಿ ...”

ಮುಗಿದ ಕೈ ಇಳಿಸದೆ ಗೋಳಾಡಿ ಅತ್ತು ಬೇಡಿಕೊಂಡ ವೀರಯ್ಯ. ಎರಡೂ ಕಣ್ಣುಗಳಲ್ಲಿ ಗಂಗೆಯಮುನೆಯರು ಹರಿದರು. ಗೋಳು ದನಿ ಮಾಡು ಮುಟ್ಟುವಂತೆ ಹೊಮ್ಮಿತು.

ದೂರದಲ್ಲಿ ಗೋಡೆಯ ಬದಿ ಕಣ್ಣೀರು ಸುರಿಸುತ್ತ ನಿಂತ ತಾಯಿಯನ್ನು “ಅಪ್ಪಾ! ಅಪ್ಪಾ!” ಎಂದು ಕೂಗಿ ಕರೆದು, ಅವಳು ನಾಲ್ಕು ಹೆಜ್ಜೆ ಮುಂದು ಸರಿಯುತ್ತಲೂ ಅವಳಿಗೆಂದ “ಬುದ್ಧಿಯವರಿಗೆ ಅಡ್ಡಬಿದ್ದು ಕೇಳಿಕೋ. ನಿನಗಾದರೂ ಕರುಣೆ ತೋರಬಹುದು ಬುದ್ಧಿಯವರು.”

ಆಕೆ ಅಡ್ಡಬಿದ್ದು ಅಳತೊಡಗುತ್ತಲೂ ಅಪರಾಧಿ ಅಂದ “ನನ್ನ ಪರವಾದ ಸಾಕ್ಷಿ ಇವಳೊಬ್ಬಳೇ ಸ್ವಾಮೀ....! ಇವಳನ್ನೇ ಕೇಳಿ ನೋಡಿ.”

ಆ ಮಾತಿಗೆ ತಲೆಯೆತ್ತಿ ಉಟ್ಟ ಬಟ್ಟೆಯಿಂದ ಕಣ್ಣುಗಳನ್ನು ತೀಡಿಕೊಂಡು ನುಡಿದಳು,

“ಸ್ವಾಮೀ! ಬುದ್ಧಿಯವರೇ! ನನ್ನ ಮಗ ತಪ್ಪು ಮಾಡಿದರೂ ಕೊಲೆ ಮಾಡುವಂತಹ ಹೀನಾತ್ಮನಲ್ಲ. ದಯವಿಟ್ಟು ನನ್ನ ಮಾತನ್ನು ನಂಬಿ. ಅದೇ ದಿನ ನಮ್ಮೂರವ ಬಂದಿದ್ದ. ಅವನೊಂದಿಗೆ ಮಗ ಚಿತ್ತಾಪುರಕ್ಕೆ ಹೋಗಿದ್ದು ನಿಜ. ನಾನು ಸುಳ್ಳು ಹೇಳಿದ್ದರೆ ನನ್ನ ನಾಲಿಗೆ ಈಗಿಂದೀಗಲೇ ಬಿದ್ದು ಹೋಗಲಿ!

ದೇವರ ಮೇಲೆ ಆಣೆಯಿಟ್ಟು ಹೇಳುವೆ ನನ್ನ ಮಗ ಖಂಡಿತ ಕೊಲೆ ಮಾಡಿಲ್ಲ. ಅವನು ಮನೆಗೆ ಬಂದವನೇ ಬುದ್ಧಿಯುವರಿಗೆ ಹೊಡೆದು ತಪ್ಪು ಮಾಡಿಬಿಟ್ಟೆ ಎಂದು ಕೈ ಹೊಸಕಿ ದುಃಖದಿಂದ ಹೇಳಿದ್ದ. ಅಷ್ಟು ಮಾತ್ರ ಹ್ಾದು ಸ್ವಾಮಿ....!" ಎಂದು ಬೋರಾಡಿ ಅತ್ತಳು.

ಯಾರೋ ಬಂದು ಅವಳನ್ನು ಅಲ್ಲಿಂದ ಕರೆದೊಯ್ದರು.

* * * *

ಜಗ್ಗೂ ಅನಿರೀಕ್ಷಿತವಾಗಿ ಆಗಮಿಸಿದ. ಬೇಸಿಗೆಯ ರಣಬಿಸಿಲು ರಣರಣಿಸಿದಾಗ ನಗರ ನಿವಾಸಿಗಳು ತೋಟಗಳ ತಂಪು ಹವೆಯನ್ನು ಬಯಸು ವುದು ಸಹಜ. ಜಗದೀಶ್ ರಾಮಚಂದ್ರನ ಸೋದರಳಿಯ. ನ್ಯಾಯಶಾಸ್ತ್ರ ಕೋವಿದನಾಗಿ ವಕೀಲಿ ವೃತ್ತಿ ಹಿಡಿದವ. ಅವನನ್ನು ಆತ್ಮೀಯತೆಯಿಂದ ಸ್ವಾಗತಿಸಿ ಕುಶಲ ಪ್ರಶ್ನೆ ಮಾಡಿದಳು ಕಾಳಿಂದಿ. ಯಜಮಾನಿಗೆ ಮೊಮ್ಮಗ ನನ್ನು ನೋಡುತ್ತಲೂ ಆನಂದವಾಯಿತು.

"ಹೇಗಿದ್ದೀರಿ ಅವ್ವಾ?" ಕೇಳಿದ ಜಗ್ಗೂ; ವಿನಮ್ರತೆಯಿಂದ.

"ಮಗನೇ ಬದುಕು ಅನಿವಾರ್ಯ; ಬದುಕುತಿದ್ದೇವೆ....!"

"ಅದೇಕಷ್ಟು ನಿರಾಸೆ? ಪ್ರಾಣಕ್ಕೆ ತುಂಬಾ ಬೆಲೆಯಿದೆ; ಬದುಕಿದ್ದರೆ ಏನಾದರೂ ಮಾಡಬಹುದು."

"ನಮಗೆ ಪ್ರಾಣ ಇದ್ದರಲ್ಲವೇ ಹೋಗುವುದು ಮಗೂ? ಸ್ತ್ರೀ ಜನ್ಮಕ್ಕೆ ಸಮುದ್ರದಲ್ಲಿ ಮುಳುಗಿದರೂ ಸಾವಿಲ್ಲ, ಬಿಡು" ನಿರಾಶಾವಾಣಿಯಲ್ಲಿ ಹೊರ ಬಿತ್ತು ನುಡಿ. ಸ್ವಲ್ಪ ತಡೆದು ಪುನಃ "ನೋಡು ಈ ಜನ್ಮ ಎಷ್ಟು ಕಷ್ಟನಷ್ಟ ಗಳನ್ನು ಅನುಭವಿಸಿ ಬದುಕುಳಿದಿದೆ? ಸಾವು ಬರಬೇಕಾದರೆ ನೇಣು ಗಂಬಕ್ಕೆ ಬಿಗಿಯಬೇಕೇನೋ...." ಅಸಾಯಕತೆಯ ಪ್ರೇರಕವಾಗಿ ಹೊರಬಿತ್ತು ನುಡಿ.

"ಕಷ್ಟನಷ್ಟ ಯಾರಿಗಿಲ್ಲ? ಏನಿದ್ದರೂ ಅನುಭವಿಸಬೇಕು. ನಿಮಗೇಕೆ ನೇಣುಗಂಬ? ವೀರಯ್ಯನ ವಿರುದ್ಧ ಸಾಕ್ಷ್ಯಗಳು ಸ್ಥಿರೀಕರಿಸಿವೆ.. ಅವನಿಗೆ ನೇಣಾಗುವ ಸಂಭವ ಉಂಟು. ಅದು ಆಗಬೇಕಾದದ್ದೇ!" ತುಟಿಕಚ್ಚಿದ ಜಗ್ಗೂ; ತಿರಸ್ಕಾರಭಾವ ಮುಖದಲ್ಲಿ ಒಡೆದು ಮೂಡಿತು.

"ನಾನದನ್ನು ನಿರೀಕ್ಷಿಸಿದ್ದೆ ಕೂಡ" ಎಂದಳು ಸ್ವಾಮಿನಿ; ಬಿಸಿಯುಸಿರು ಹೊರಬಿತ್ತು.

ಅವರಿಬ್ಬರ ಮಾತುಕತೆಗಳು ಕರ್ಣದೇಶದಮೇಲೆ ಬಿದ್ದುವು. ಕೆಲವು ಕ್ಷಣ ಯೋಚನೆಗೊಳಗಾದಳು ಕಾಳಿಂದಿ....ತನ್ನ ಸೌಭಾಗ್ಯ ಕಳೆದು ಹೋದುದು ಈತನ ಕಾರಣದಿಂದಲೇ. ನನಗೂ ಒಡಲೆಲ್ಲಾ ಸಂಕಟ. ಆದರೆ, ಅದೇ ಕಾರಣದಿಂದಾಗಿ ಅಪರಾಧಿಯನ್ನು ಕೊಲ್ಲಬೇಕು ಅನಿಸುವುದೇ ಇಲ್ಲ. ನಮ್ಮ ಜೀವನದಲ್ಲಿ ಏನೇನು ಆಗಬೇಕೋ ಅದು ಆಗಿಯೇ ತೀರುತ್ತೆ. ಅಂದಮೇಲೆ....?

"ಏಕೆ ಸುಮ್ಮನಾದಿರಲ್ಲ?"

"ಏನಿಲ್ಲ...." ಅಷ್ಟಕ್ಕೆ ಉಗುಳು ನುಂಗಿದಳು ಕಾಳಿಂದಿ. ಸ್ವಲ್ಪ ನಿಧಾನಿಸಿ ಪುನಃ "ಬೇರೆ ವಿಚಾರ ಏನೇ ಇರಲಿ, ಗಲ್ಲು ಎಂದರೇನೇ ಬೇಸರ"

"ಗಲ್ಲು ಶಿಕ್ಷೆಯಲ್ಲಿ ಪರ-ವಿರೋಧ ಯಾವತ್ತೂ ಇದ್ದದ್ದೇ. ಒಂದಾನೊಂದು ಕಾಲದಲ್ಲಿ ಬ್ರಿಟನ್ನಿನಂತಹ ಪ್ರಭುದ್ಧ ದೇಶದಲ್ಲಿ ಮರಣದಂಡನೆ ಎಂಬುದು ರಜಾದಿನದ ಮೋಜಿನಂತಹ ವಿಚಾರ; ಅಂದರೆ ಬಹಿರಂಗ ಶಿಕ್ಷೆ. ಜನ ನೋಡಲು ಕಿಕ್ಕಿರಿ ನೆರೆಯುತ್ತಿದ್ದರು ಅದರ ಪ್ರಭಾವದಿಂದ ಭಾರತದಲ್ಲೂ ಸಹ ಬಹಿರಂಗ ಶಿಕ್ಷೆ ಜಾರಿಗೆ ಬಂತು. ಪ್ರಪಂಚದಲ್ಲಿ ಅಂದಿಂದಿಗೂ ಬಹಳಷ್ಟು ಬದಲಾವಣೆಗಳಾಗಿವೆ. 'ನ್ಯಾಯದಾನ' ಎಂಬ ಭಾವನೆ ಕೂಡ ವಿಪರೀತ ಬದಲಾವಣೆ ಕಂಡಿದೆ. ವಿಶ್ವದ ಸುಮಾರು ಎಪ್ಪತ್ತು ರಾಷ್ಟ್ರಗಳಲ್ಲಿ ಮರಣ ದಂಡನೆಯನ್ನು ಕೈಬಿಡಲಾಗಿದೆ. ಈ ಮಹತ್ತರ ಕಾರ್ಯ ನಿರ್ವಹಿಸಲು ವಿಶ್ವ ಸಂಸ್ಥೆ ತೆಗೆದುಕೊಂಡ ಆಸ್ಥೆ ತುಂಬಾ ಗಣನೀಯ. ಮರಣದಂಡನೆ ಕುರಿತು ಬ್ರಿಟನ್ನಿನ 'ರಾಯಲ್ ಆಯೋಗ' ವ್ಯಾಪಕವಾದ ಅಧ್ಯಯನ ಮಾಡಿ ವಿಷಯವನ್ನು ಸಾರ್ವಜನಿಕರ ಮುಂದೆ ತರಲು ಮಹತ್ತರ ಪಾತ್ರ ವಹಿಸಿತು. ಆದರೇನು? ಶ್ರೀಲಂಕಾದಲ್ಲಿ ಮರಣದಂಡನೆಯನ್ನು ರದ್ದು ಮಾಡಿದ ಪ್ರಧಾನಿ ಬಂಢಾರನಾಯಕ ಅವರೇ ಕೊಲೆಯಾದರು. ಅನಂತರ ಅದನ್ನು ಪುನಃ ಅಲ್ಲಿ ಜಾರಿಗೆ ತರಲಾಯಿತು. ಬ್ರಿಟನ್ ೧೯೬೫ರಲ್ಲಿ ಮರಣದಂಡನೆ ರದ್ದು ಮಾಡಿತು. ಅಮೆರಿಕ ಕೂಡ ರದ್ದು ಮಾಡುವ ಸಾಹಸ ಮಾಡಿದ್ದರೂ ಪುನಃ ಜಾರಿಗೆ ತಂದಿತು. ಹೀಗಿದೆ ಇದರ ಕತೆ. ಮರಣದಂಡನೆಯಿಂದ ಜನ ಬುದ್ಧಿ ಕಲಿತರು

ಎನ್ನುವಂತಿಲ್ಲ ನಿಜ. ಆದರೂ, ಕೊಲೆಗಾರರನ್ನು ಬಿಟ್ಟರೆ ಮುಂದೆಯೂ ಕೊಲೆ ಮಾಡಲು ಹಿಂಜರಿಯುವುದಿಲ್ಲ ಎಂಬುದು ಸತ್ಯ."

"ನೀನು ನ್ಯಾಯ ಶಾಸ್ತ್ರಕೋವಿದ. ದಿನೇ ದಿನೇ ಎಲ್ಲೆಡೆಯೂ ಘೋರ ಅಪರಾಧಗಳು ಹೆಚ್ಚುತ್ತಿರುವುದನ್ನೂ ಬಲ್ಲೆ. ನಿನ್ನ ಬುದ್ಧಿಗೆ ಮರಣದಂಡನೆ ಇರುವುದು ಸೂಕ್ತ ಎನಿಸಿದರೆ ಆಶ್ಚರ್ಯವಿಲ್ಲ. ಕೊಲೆಗಾರರನ್ನು ಕೊಲ್ಲುವುದೇ ಸರಿ ಎಂಬುದು ಬಹುಮತ. ಆದರೂ, ಜಗತ್ತಿನಲ್ಲಿ ಸಜ್ಜನರಿಗೆ ಹೇಗೋ ಹಾಗೆ ಕ್ರೂರಿಗಳಿಗೆ–ಪಾಪಿಗಳಿಗೆ ಬದುಕುವ ಹಕ್ಕು ಇದೆ. ನಾವು ಹೇಗೆ ಜೀವ ಕೊಡಲಾರೆವೋ ಹಾಗೆಯೇ ಜೀವ ಕಸಿಯಲೂ ಬಾರದು: ಎಂಬುದು ನನ್ನ ಅಭಿಪ್ರಾಯ."

ಜಗ್ಗೂ ಪಕ್ಕನೆ ನುಡಿದ "ಅದಕ್ಕೇ ನೀವು ನ್ಯಾಯಾಧೀಶ ಅಥವಾ ನ್ಯಾಯವಾದಿ ಆಗಲಿಲ್ಲ!"

ಎಲ್ಲರ ಮುಖದಲ್ಲೂ ಎಳೆನಗೆ ಮೂಡಿ ಮಾಯವಾಯಿತು.

* * * *

ದುರ್ಗಂಧಪೂರಿತವಾದ ಆ ಕೊಠಡಿಯ ತುಂಬೆಲ್ಲಾ ತಿಗಣೆಗಳು. ಹಾಸಲು ಒಂದು ಚಾಪೆಯೂ ಇಲ್ಲ. ಒರಟು ಕಲ್ಲುಚಪ್ಪಡಿಯೇ ಪಲ್ಲಂಕ. ಕಠಿಣ ಕಾಯಕ, ದಿನಕ್ಕೆರಡು ಬಾರಿ ಕೂಳು. ಕಳೆದೆರಡು ವರ್ಷಗಳಿಂದ ಅವನ ಜೀವನಯಾತ್ರೆ ನಡೆದು ಬಂದುದು ಒಂದೇ ರೀತಿಯಲ್ಲಿ.

ವೃದ್ಧೆ ಮಗನನ್ನು ಎದೆಗಾಂತು ತಬ್ಬಿ ಮುದ್ದಿಟ್ಟು ತೊಡೆಯ ಮೇಲೆ ತಲೆಯಿರಿಸಿಕೊಂಡಳು. ಬತ್ತಿದ ಕಣ್ಣುಗಳಿಂದ ಸುರಿದ ಕಂಬನಿ ಅವನ ಮುಖದ ಮೇಲೆ ಪಟಪಟನೆ ಬಿದ್ದುವು. ಇಬ್ಬರೂ ಬಹಳ ಹೊತ್ತು ಅತ್ತು ಗೋಳಾಡಿದರು.

"ನಾನು ಕೊಲೆ ಮಾಡಿ, ಗಲ್ಲಿಗೆ ಹಾಕಿದ್ದಿದ್ದರೆ ದುಃಖವಿರಲಿಲ್ಲ. ನನ್ನನ್ನು ಅನ್ಯಾಯವಾಗಿ ಗಲ್ಲಿಗೇರಿಸುತ್ತಿರುವುದೇ ತೀರದ ದುಃಖ."

"ಬಡವನ ಸಿಟ್ಟು ದವಡೆಗೆ ಮೂಲ ಕಣಪ್ಪಾ! ದೊಡ್ಡವರು ಮಾಡಿದ್ದು ಯಾರು ಕೇಳುತ್ತಾರೆ? ನಮ್ಮಂತಹವರಿಗೆ ನೇಣುಗಂಬ...."

ಇಬ್ಬರೂ ಅಳುತ್ತಳುತ್ತಲೇ ಕಷ್ಟಸುಖಗಳನ್ನು ತೋಡಿಕೊಂಡರು.

ದುಃಖ-ಸಂಕಟ-ಕ್ಲೇಶ-ವಿಯೋಗಗಳ ಪರಿತಾಪದಿಂದ ಗಡಗಡ ನಡುಗುವ ತನುಮನಗಳು. ನೆತ್ತರು ಅಲ್ಲಲ್ಲೇ ಹೆಪ್ಪುಗಟ್ಟಿದಂತೆ ಸಿಡಿಯುವ ನರನಾಡಿಗಳು, ಈಗಲೀಗ ಬಿರಿಯುವಂತೆ ವ್ಯಾಪ್ತಿಗೆ ಮೀರಿ ಮಿಡಿಯುವ ಹೃದಯಗಳನ್ನು ಗಮನಿಸಿದರೆ ಪ್ರಾಣ ಈಗಲೀಗ ಚಿಮ್ಮುತ್ತದೆ ಎನಿಸುವಷ್ಟು ಹಿಂಸ್ರಕ. ಆದರೆ ಆ ಪ್ರಾಣ ಚಿಮ್ಮಬೇಕಲ್ಲ? ಅದಕ್ಕೂ ನಮ್ಮ ಮೇಲೆ ಕರುಣೆಯಿಲ್ಲ....

ಅಂತರಂಗಿಕ ತುಮುಲ ಮತ್ತು ಮಾನಸಿಕ ಕ್ಷೋಭೆಗಳಿಂದ ಮಾತು ಮೂಕವಾಯಿತು. ಶೋಕತಪ್ತ ಹೃದಯಗಳು ಸದ್ದಿಲ್ಲದೆ ಮಿಡಿದುವು. ಹೊತ್ತು ನಿರಾತಂಕವಾಗಿ ಉರುಳಿ ಹೊಸ್ತಿಲ ಬಳಿಯಿದ್ದ ಚೆಂಬಿಸಿಲಿನ ಹರವು ಹಿಂಜರಿಯಿತು.

ಜೇಲಿನ ಜವಾನರಿಬ್ಬರು ಒಳಬಂದು, ಅವಳಿಗೆ ಮಗನನ್ನು ನೋಡಲು ಕೊಟ್ಟ ಅವಧಿ ಮುಗಿಯಿತೆಂದು ಹೇಳಿ ಹೊರಕರೆದೊಯ್ಯಲು ಮುಂದಾದರು.

"ಇದು ನಮ್ಮ ನಮ್ಮ ಕೊನೆಯ ಭೇಟಿ, ನಮ್ಮನ್ನು ನಿರ್ಬಂಧಿಸಬೇಡಿ ಅಣ್ಣಗಳಿರಾ!"

ಆ ಗೋಳಿನ ಕರೆ ಗಾಳಿಯಲೆಯಲ್ಲಿ ತೇಲಿಹೋಯಿತು. ಕೈಮುಗಿದು ಕಾಡಿಬೇಡಿದರೂ ಕೇಳುವವರಿಲ್ಲ. ಜೇಲಿನ ಬಾಗಿಲನ್ನು ಬಿಗಿ ಹಿಡಿದುಕೊಂಡು ಗೋಳಾಡಿ ಅಳತೊಡಗಿದಳು ಮುದುಕಿ. ವೀರಯ್ಯನೂ ಅವಳನ್ನು ತಬ್ಬಿ ...ತ್ತ. ಆ ಕರುಣಾಜನಕ ದೃಶ್ಯ ಕರುಳನ್ನು ಕತ್ತರಿಸುವಂತಿದ್ದರೂ ಸ್ವಲ್ಪವೂ ...ಕ್ಷಿಸದ ಜವಾನರು ಅವಳನ್ನು ಯಮದೂತರಂತೆ ಎಳೆದುಕೊಂಡು ಹೋದರು. ...ವಳು ಜೇಲಿನ ಹೊರಗಡೆ ಇರುವುದಾಗಿ ಬೇಡಿಕೊಂಡರೂ ಬಡಿದೆ ಹೊರ ಸಾಗಿಸಿದರು ಅಲ್ಲಿ ಕಾದಿದ್ದ ಜೇಲಿನ ಪೋಲೀಸರು.

ಮರುದಿನ ಬೆಳಗಿನ ಝಾವ ವೀರಯ್ಯನನ್ನು ನೇಣುಗಂಬಕ್ಕೆ ಏರಿಸಿ ...ರ್ಘ ಅಧ್ಯಾಯವನ್ನು ಕೊನೆಗಾಣಿಸಿದರು. ಬಹಶಾಯಿ ಶವದರ್ಶನಕ್ಕೆ ...ಕಮುದರಿಂದ ಶವಸಂಸ್ಕಾರದ ಭಾರವನ್ನು ಜೇಲಿನ ಸಿಬ್ಬಂದಿಯೇ ಹೊತ್ತಿತು.

* * * * *

ಋತುಮಾನಗಳು ಉರುಳಿದುವು. ಮಾಮರಗಳು ಚಿಗುರಿ ಪೀತವರ್ಣ ...ಳಿದುವು.

ಬಡತಾಯಿ ಭಿಕ್ಷಾಟನೆಯಿಂದ ಕಾಲಯಾಪನೆ ಮಾಡಿದರೂ ತುತ್ತು ತುತ್ತಿಗೂ ಕಣ್ಣೀರಿನ ಕೋಡಿ ಹರಿಯುವುದು ತಪ್ಪಲಿಲ್ಲ. ಒಂದಿನ ವೀರಯ್ಯನ ಸಹಪಾಟಿಗಳೊಂದಿಗೆ ಕಳೆದರೆ ಇನ್ನೊಂದಿನ ಇನ್ನೆಲ್ಲೋ....ನೆಲೆಯಿಲ್ಲ ; ಊಟ ವಸತಿಯಿಲ್ಲ ; ತನ್ನವರಿಲ್ಲ ; ಭಿಕ್ಷೆಯೇ ಜೀವಾಧಾರ.

ಕಾಳಿಂದಿ ಹೆದ್ದಾರಿಯ ಬಳಿಯಲ್ಲಿದ್ದ ಶಿವಾಲಯಕ್ಕೆ ಹೋದಾಗ ಅಂಗಣದ ಜಗಲಿಯಂಚಿನಲ್ಲಿ ಕುಳಿತಿದ್ದ ವೃದ್ಧೆಯನ್ನು ಕಂಡಳು. ತೀವ್ರ ಬಡತನದ ಪ್ರತೀಕವೇ ಆಗಿದ್ದ ಅವಳನ್ನು ಎಲ್ಲೋ ನೋಡಿದಂತಿದೆ ಎನಿಸಿತು ಮನಸ್ಸಿಗೆ. ಒಮ್ಮೆ ವೀರಯ್ಯನ ತಾಯಿ ಇರಬಹುದು ಎನಿಸಿದರೂ ಇನ್ನೊಮ್ಮೆ ಅಲ್ಲವೇನೋ ಎಂಬ ಅನುಮಾನ. ಆದರೂ, ಅಂತರಂಗದಲ್ಲಿ ಕಾರುಣ್ಯದ್ರವ್ಯ ಚಡಪಡಿಸಿತು.

"ನೀನು ಯಾರು ಅಜ್ಜೀ ?"

"ನಾನು...." ವೃದ್ಧೆ ಅಲ್ಲಿಗೇ ಸುಮ್ಮನಾದಳು. ನೆಟ್ಟನೋಟ ಅವಳನ್ನೇ ನಿಟ್ಟಿಸಿತು.

"ನಿನ್ನನ್ನೇ ಕೇಳಿದ್ದು."

"ನೀವು ಒಡೆಯರ ಮನೆ ಅಮ್ಮಣ್ಣಿ ಅಲ್ಲವೇ ?"

"ಹೌದು....ಈಗ ಹೇಳು ನೀನು ಯಾರು ?"

"ನಾನು ವೀರಯ್ಯನ ತಾಯಿ" ಹಾಗೆಂದು ಹೇಳಿಕೊಳ್ಳುವುದರಲ್ಲಿ ಅವಳಿಗಿದ್ದ ಆಸ್ಥೆ ಅಂತರಂಗವನ್ನು ಮುಟ್ಟಿತು. ಒಂದೆರಡು ಗಳಿಗೆ ಏನೆನ್ನಬೇಕೋ ತಿಳಿಯಲಿಲ್ಲ. ತನಗರಿಯದಂತೆಯೇ 'ಅಯ್ಯೋ, ಪಾಪ' ಎಂದಿತು ಮನಸ್ಸು.

"ನೀನು ನಮ್ಮ........" ಮಾತು ಮುಗಿಯುವುದರೊಳಗಾಗಿ ಟ್ಯಾಕ್ಸಿಯೊಂದು ಸರ್ರನೆ ಬಂದು ನಿಂತಿತು. ಯಾರಿರಬಹುದೆಂದು ತಟ್ಟನೆ ತಿರುಗಿ ನೋಡಿದಳು ಕಾಳಿಂದಿ. ಅದರೊಳಗಿದ್ದ ವ್ಯಕ್ತಿ ಇಳಿದು ಬಳಿಗೆ ಬಂದ. ನೋಡಿದರೆ ಎಂತಹ ಆಶ್ಚರ್ಯ? ತನ್ನ ಹೃದಯೇಶ್ವರನಾದ ರಾಮಚಂದ್ರ ! ತಕ್ಷಣ ಭಯಾಶ್ಚರ್ಯಗಳಿಂದ ಹೃದಯವೇ ಬಾಯ್ಗೆ ಬಂದಂತೆ ಉಡುಗಿ ಅವನ ಕೊರಳಿಗೆ ತೆಕ್ಕೆ ಬಿದ್ದಳು ಕಾಳಿಂದಿ.

ಹಿಂದಿನಿಂದ ನಿಟ್ಟಿಸಿ ನೋಡಿದ ಶೀರ್ಣಿತ ನಯನದ್ವಯಗಳಲ್ಲಿ ಯಾವ ಸಂವೇದನೆಯಿತ್ತೋ....?

ಕಮಲ್ ಕಿರಣ್

ಯೋ ಧ್ರುವಾಣಿ ಪರಿತ್ಯಜ್ಯ ಅಧ್ರುವಂ ಪರೀಷೇವತೆ ।
ಧ್ರುವಾಣಿ ತಸ್ಯ ನಶ್ಯಂತಿ ಅಧ್ರುವಂ ನಷ್ಟ ಮೇವ ಚ ॥

ಕಮಲ್‌ಕಿರಣ್ ಐ.ಪಿ.ಎಸ್. ಹುದ್ದೆ ಅಲಂಕರಿಸಿದ.

ಆನಂದ-ಹೆಮ್ಮೆಗಳ ಆಗರವಾದ ಹೃದಯ ಈಗಲೀಗ ಬಿರಿಯುವಷ್ಟು ಉಬ್ಬರ; ಪುಟಿಪುಟಿಯುವ ಹುರುಪು; ಉತ್ಸಾಹಪೂರ್ಣ ಚೇತನ. ಅಂದ ಮೇಲೆ ಕೇಳಬೇಕೆ? ತನಗೂ ಸ್ವರ್ಗಕ್ಕೂ ಅಧಿಕಾರವೇ ಸೇತು.

ಸುತ್ತಮುತ್ತ ಓಡಾಡುವ ಸಮವಸ್ತ್ರಧಾರೀ ಪೋಲೀಸರು. ಓಡಾಡಲು ಜೀಪು-ಕಾರುಗಳ ಸೌಕರ್ಯ. ವಾಸಕ್ಕೆ ವಸತಿ; ಜೀವನೋಚಿತವಾದ ಸಕಲವೂ ಲಭ್ಯ.

ಮೇಜಿನ ಮೇಲಿನ ಟೆಲಿಫೋನನ್ನು ಕೈಗೆತ್ತಿಕೊಂಡು ರಂಜಿನಿಗೆ ಕರೆ ನೀಡಿದ.

"ಹಲ್ಲೋ! ಡಾಕ್ಟರಾಣಿ!"

"ಹಲ್ಲೋ! ಹೇಗಿದ್ದಿ ಕಮಲ್?"

"Fine! ಈಗಷ್ಟೆ ಛಾರ್ಜ್ ತೆಗೆದುಕೊಂಡೆ."

"Congratulations!"

"ಥ್ಯಾಂಕ್ಯೂ! ರಂಜನೀ! ಈ ದಿನ ಸಂಜೆ ಎಲ್ಲಾದರೂ ಸುತ್ತಾಡಿ ಬರೋಣವೇ?"

"ನೀನೊಮ್ಮೆ ಬಂದು ನೋಡು ಅನಂತರ ನಿರ್ಧಾರ."

"ಓ. ಕೆ.!"

ಕಮಲ್‌ಕಿರಣ್ ಸಂತುಷ್ಟನಾದ. ತಮ್ಮ ಮುಂದಿನ ಜೀವನ ಯಾವ ರೀತಿ ರೂಪಿತಗೊಳ್ಳಬೇಕು....ಯಾವ ಯಾವ ವಸ್ತುಗಳನ್ನು ಕೊಳ್ಳಬೇಕು. ಆಳುಗಳ ಹೊಂದಾಣಿಕೆ. ಇಂತಹ ಕೊನೆಯಿಲ್ಲದ ವಿಚಾರಗಳು ತಲೆಯಲ್ಲಿ.

ಕೆಲಸ ಸಾಗಿತು. ಹುರುಪಿನಿಂದ ಮಾಡತೊಡಗಿದ. ಸಾಯಂಕಾಲಕ್ಕೆ ಅನಿರೀಕ್ಷಿತವಾಗಿ ಮೀಟಿಂಗ್ ಬಿದ್ದುದರಿಂದ ರಂಜನಿಯನ್ನು ನೋಡಲಾಗಲಿಲ್ಲ. ಟೆಲಿಫೋನಿನ ಸಂಪರ್ಕವೂ ದೊರೆಯಲಿಲ್ಲ.

* * * *

ದರೋಡೆಯ ಸಂಬಂಧವಾದ ತುರ್ತು ಕಾರ್ಯಾರ್ಥ ಮದರಾಸಿಗೆ ಹೊರಡುವ ಪ್ರಸಂಗ ಬಿತ್ತು.

ಆಗಲೂ ರಂಜನಿಯನ್ನು ಸಂಪರ್ಕಿಸಲಾಗಲಿಲ್ಲ. ಇಡೀ ಮೂರು ದಿನ ಮದರಾಸಿನಲ್ಲಿ ಶೋಧಕಾರ್ಯದಲ್ಲಿ ನಿರತನಾಗಿ ಹಿಂದಿರುಗಿದಾಗ ಹನ್ನೊಂದರ ರಾತ್ರಿ.

ಬೆಳಿಗ್ಗೆ ಎದ್ದವನೇ ರಂಜನಿಯ ಮನೆಗೆ ಧಾವಿಸಿದ. ರಂಜನಿ ಆದೇ ತಾನೇ ಪ್ರತ್ಯಗ್ನ ಸ್ನಾನ ಮಾಡಿದ್ದಾಳೆ. ಅಲಕರಾಶಿಯ ತುದಿಯಲ್ಲಿ ನೀರಹನಿಗಳು ಉದುರುತ್ತಿವೆ. ಕೈಯಲ್ಲಿ ಟವಲು...ಸ್ವಚ್ಛ ಶುಭ್ರ ಕಾಂತಿಯ ಬಿಳಿಯ ಸೀರೆ. ಕಿರುನಗು ಮುಖ. ನುಣ್ಗದಪುಗಳ ಮೇಲೆ ರಂಗಿನ ಛಾಯೆ! ಆನಂದಿತ ಅರಳು ಗಣ್ಣುಗಳು.

ಪ್ರಪ್ರಥಮ ನೋಟಕ್ಕೇ ಬಿಗಿದಪ್ಪುವ ಮಹದಾಸೆ-ಪ್ರೀತಿವಿಶ್ವಾಸ.

ಒಮ್ಮೆಗೇ ಮುಖಬಿಂಬ ಅರಳಿ ಹೂವಾಯಿತು: ರಂಜಿನಿಯೂ ಆನಂದ ಪೂರ್ಣ ಹೃದಯದಿಂದ ಸ್ವಾಗತಿಸಿದಳು.

"ಓ, ಕಮಲ್! ಆ ದಿನ ಬರುವೆ ಎಂದವನು ಈ ದಿನ ಬರುತಿದ್ದಿ?"

"ಹೌದು. ಮೈ ಡಾರ್ಲಿಂಗ್! ಅಂದೇ ಬರಬೇಕಾಗಿತ್ತು. ತುರ್ತು ಕೆಲಸ ಬಿತ್ತು. ಮದರಾಸಿಗೆ ಹೋಗಿ ಬಂದೆ. ನನ್ನ ಜೀವವೆಲ್ಲಾ ನಿನ್ನ ಬಳಿಯೇ ಸುಳಿದಾಡುತಿತ್ತು ಏನು ಮಾಡಲಿ ಹೇಳು?"

ಅವಳ ಎರಡೂ ಭುಜಗಳನ್ನು ಅದುಮಿ ಹಿಡಿದುಕೊಂಡು ತಲೆಯನ್ನು ಅವಳ ತಲೆಗೆ ಮೃದುವಾಗಿ ಗಟ್ಟಿಸಿದ. ಕಣ್ಣು-ಮುಖಗಳಲ್ಲಿ ಪ್ರೇಮಭಾವ ಉಕ್ಕಿ ಹರಿಯಿತು. ಅವಳು ಅವನಿಂದ ಬಿಡುಗಡೆ ಹೊಂದಿ "ಕುಳಿತುಕೊ. ಕಮಲ್....! ನಿಂತೇಯಿದ್ದೀಯಲ್ಲ?"

ಇಬ್ಬರೂ ಸೋಫಗಳಲ್ಲಿ ಮೈಚೆಲ್ಲಿದರು.

"ನೀನು ಎಷ್ಟೆಂದರೂ ಪೋಲೀಸ್ ಆಫೀಸರು. ನಾನು ಡಾಕ್ಟರು. ಮುಂದೆ ಎತ್ತು ಏರಿಗೆಳೆದು ಕೋಣ ನೀರಿಗೆಳೆಯುವಂತಾದರೆ...ಎಂಬ ಪ್ರಶ್ನೆ ನನ್ನನ್ನು ಕಾಡುತ್ತಲೇ ಇರುತ್ತದೆ. ನಾನಿನ್ನೂ ಯಾವ ನಿರ್ಧಾರಕ್ಕೂ ಬರಲಾಗಿಲ್ಲ. ನಿನಗೇನೆನಿಸುತ್ತೆ ಹೇಳು?"

"ನಾನು ಆ ಬಗ್ಗೆ ಯೋಚಿಸಿಯೇ ಇಲ್ಲ. ನನಗೆ ಮುಖ್ಯವಾಗಿ ನೀನು ಬೇಕು."

"ಏಕಮುಖ ತೀರ್ಮಾನ ತಪ್ಪು ಹೆಜ್ಜೆ ಇಡಿಸುತ್ತದೆ. ಆದ್ದರಿಂದ ಈಗಲೇ ತೀರ್ಮಾನಿಸುವುದು ಒಳ್ಳೆಯದು. ಅವಸರ ಬೇಡವೇ ಬೇಡ"

"ಇಬ್ಬರಲ್ಲೂ ಒಳ್ಳೆಯ ರಾಗಾತ್ಮಕ ಸಂಬಂಧ ಇರುವುದು ಸತ್ಯ. ಅದನ್ನು ಒಪ್ಪುವೆ...."

"ಮತ್ತೇಕೆ ಹೀಗೆ? ತೀರ ಅವಸರ....ದುಡುಕು."

"ಅಂದರೆ....?"

"ನಮ್ಮ ಜೀವನ ಮಹಲಿಗೆ ಈಗಲೇ ಸಮರ್ಪಕ ರೀತಿಯಲ್ಲಿ ಅಡಿಗಲ್ಲನ್ನು ಇಡುವುದು ಲೇಸು. ನನ್ನ ಬಗ್ಗೆ ಹೇಳುವುದಾದರೆ ನಾನು ಕೆಲಸ ಮಾಡಲೇ ಬೇಕು."

"ಮಾಡಬಹುದು...." ದನಿಯಲ್ಲಿ ಒತ್ತಾಸೆಪೂರ್ವಕವಾದ ಹುರುಪು ಮೂಡಲಿಲ್ಲ.

ಶೈತ್ಯ ಶೀತಲ ಸ್ವರದಲ್ಲಿ ಬಿತ್ತರಿಸಿದಳು ಅವಳು "ನೀನು ಹೇಗೋ ನಾನೂ ಹಾಗೆಯೇ."

"ಅಂದರೆ....?"

"ನಿನಗೆ ಹೇಗೆ ವೃತ್ತಿಯಲ್ಲಿ ಆಸ್ತೆಯೋ ಹಾಗೆಯೇ ನನಗೂ ಕೂಡ."

"ಅದಕ್ಕೆ ಅಡ್ಡಿಯಿಲ್ಲ."

ಆ ಮುಹೂರ್ತದಲ್ಲಿ ಅವಳ ಕಣ್ಣುಗಳಲ್ಲಿ ಮಿಂಚಿದ ಬೆಳಕು ಅವರ್ಣನೀಯ.

* * * *

ಇಬ್ಬರೂ ಸಂತೋಷಪೂರ್ವಕವಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು

ಪೋಲೀಸ್ ಕ್ವಾಟರ್ಸ್-ನಲ್ಲಿ ಸುಖಸಂಸಾರ.

ಕಮಲ್‌ಕಿರಣ್ ತನ್ನ ಪ್ರಾಧಿಕಾರವನ್ನು ಸೂಚಿಸಿದ ನಾಮಫಲಕವನ್ನು ಬಾಗಿಲಲ್ಲಿ ತೂಗುಹಾಕಿದ. ಅದರ ತಳಭಾಗದಲ್ಲಿ ತನ್ನ ಹೆಸರನ್ನೂ ಹಚ್ಚಿದಳು ರಂಜಿನಿ.

ಆ ವಸತಿಗೃಹ ಜನವಿರಳವಾದ ತಾಣದಲ್ಲಿ ನೆಲೆಗೊಂಡಿರುವುದರಿಂದ ತನ್ನ ಪ್ರ್ಯಾಕ್ಟೀಸಿಗೆ ತುಂಬ ಅನಾನುಕೂಲ ಎಂಬುದು ಆತ್ಮಗತ. ಆದರೂ ನಿರುತ್ಸಾಹ ತೋರಲಿಲ್ಲ ರಂಜಿನಿ. ಮುಂದಿನ ಜಗಲಿಗೆ ಲಗತ್ತಾಗಿದ್ದ ಕೊಠಡಿಯಲ್ಲಿ ತನ್ನ ಆಫೀಸನ್ನು ತೆರೆದು ಬೇಕುಬೇಕಾದ ಔಷಧಿ-ಪರಿಕರಣಗಳನ್ನು ಜೋಡಿಸಿಕೊಂಡಳು. ಸಣ್ಣ ಕ್ಲಿನಿಕ್ ಹುಟ್ಟಿಕೊಂಡಿತು.

ಬಲಪಕ್ಕಕ್ಕೂ ಒಂದು ಕೊಠಡಿಯಿರುವುದರಿಂದ ಕಮಲ್‌ಕಿರಣ್ ಉಪಯೋಗಕ್ಕೂ ಅನುಕೂಲ.

ಆದರೆ ...ಅವನದನ್ನು ತನ್ನ 'ಹೋಂ ಆಫೀಸ್' ಆಗಿ ಮಾರ್ಪಡಿಸಲಿಲ್ಲ. ಅದರಲ್ಲಿ ಕುರ್ಚಿ ಮೇಜುಗಳೂ ಇದ್ದುವು. ಉದ್ಯೋಗ ವಿನಿಮಯಕ್ಕಾಗಿ ಯಾರಾದರೂ ಬಂದರೆ ಅಲ್ಲಿಯೇ ಕೂಡಿಸಿ ಮಾತಾಡುತಿದ್ದ. ಅಂತಹ

ಪ್ರಸಂಗಗಳು ತುಂಬಾ ಅಪರೂಪವೇ. ಅವನು ಕಛೇರಿಗೆ ಹೋಗುವುದರಿಂದ ಕಾರ್ಯಕಲಾಪ ಅಲ್ಲೇ.

ರಂಜಿನಿಗೆ ಎಲ್ಲೋ ಕೆಲವು ಮಂದಿ ರೋಗಿಗಳು ಬಂದು ಹೋಗುತಿದ್ದದು ಏನೇನೂ ಸಾಲದು ಎನಿಸಿತು. ಪ್ರಚಾರ ಹೇಗೆ ಮಾಡಬೇಕು ಎಂಬುದು ಬಗೆಹರಿಯಲಾರದ ಪ್ರಶ್ನೆ.

ಚಾಂದ್ರಮಾನಗಳು ಎಷ್ಟೋ ಉರುಳಿಹೋದುವು. ಸಾಕಷ್ಟು ಕಾಲಮಾನ ಕಳೆದರೂ ಪ್ರಾಕ್ಟೀಸ್ ವೃದ್ಧಿಗೊಳ್ಳಲಿಲ್ಲ. ರಂಜನಿ ಸಮೀಪದ ಪ್ರೈವೇಟ್ ಆಸ್ಪತ್ರೆಯಲ್ಲಿ ಕೆಲಸ ಹಿಡಿದು ಬೆಳಿಗ್ಗೆ-ಸಾಯಂಕಾಲ ಮನೆಯಲ್ಲಿ ಕೆಲಸ ಶುರು ಮಾಡಿದಳು. ಮೈಯಲ್ಲಿ ಹುರುಪು ಮೂಡಿತು.

ಕಮಲ್‌ಕಿರಣ್ ವಿರೋಧಿಸಲಿಲ್ಲವಾದರೂ ಸಾಯಂ ಕೂಟಕ್ಕೆ ಮಡದಿಯ ಅಗತ್ಯವನ್ನು ಬಹಳವಾಗಿ ಬಯಸಿದ.

* * * *

ಇಂದು, ಮದುವೆಯ ಐದನೇ ವರ್ಷದ ವಾರ್ಷಿಕೋತ್ಸವ.

ಇಬ್ಬರ ಗೆಳೆಯರ ಬಳಗ ಒಗ್ಗೂಡಿ ಸೇರಿತು. ಮನೆಯಲ್ಲೇ ಸಂತೋಷ ಕೂಟ. ಅನೇಕರ ಕೈಯಲ್ಲಿ ಹೂಹಾರ ಮತ್ತು ಪುಷ್ಪಗುಚ್ಛ....

ರಂಜಿನಿ ಮನೆಯನ್ನು ಅಂದವಾಗಿ ಅಲಂಕರಿಸಿದ್ದಾಳೆ. ಅತಿಥಿಗಳ ಸ್ವಾಗತಕ್ಕೆ ಇಬ್ಬರೂ ಒಗ್ಗೂಡಿ ನಿಂತರು. ಗೆಳೆಯರ ತಂಡ ಅಲ್ಲಿಂದಲೇ 'ಹಲ್ಲೊ !' ಎನುತ್ತಲೇ ಆಗಮಿಸಿತು.

ಧ್ವನಿ ಮತ್ತು ಪ್ರತಿಧ್ವನಿಗಳು ಮಧುರಮನೋಹರವಾಗಿ ಮೊಳಗಿ ಝೇಂಕರಿಸಿತು. ಮಾಡು ಮುಟ್ಟುವಂತಹ ನಗೆ ಮಾತುಗಳ ಲೋಲುಪ್ತಿ. ಎಲ್ಲರೂ ಆತ್ಮೀಯ ಹಸ್ತಲಾಘವ ನೀಡಿ ಶುಭ ಹಾರೈಸಿದರು.

"ಹೀಗೆಯೇ ನೀವಿಬ್ಬರೂ ಸುಖ ಸಂತೋಷದಿಂದ ನೂರ್ಕಾಲ ಬಾಳಿ !" ಎಂದು.

"ಆಗಾಗ ನಾವು ಹೀಗೆಯೇ ಒಂದೊಂದು ಕಡೆ ಸಂತೋಷ ಕೂಟ ಮಾಡುವುದು ಒಳ್ಳೆಯದು."

"ಆಗಲಿ....ಮುಂದಿನ ವಾರ ಯಾರು ಅತಿಥೇಯರು ?"

"ನಾನೇ !" ಎಂದಳು ರಂಜನಿ ಕೈಯೆತ್ತಿ !

"ಅದೇಕೆ ? ಈ ವಾರ ನಿಮ್ಮಲ್ಲೇ ಆಗಿದೆಯಲ್ಲಾ ?"

"ಇದು ನಮ್ಮ ವಿವಾಹ ಸಂಬಂಧ. ಮುಂದಿನ ವಾರದಿಂದ ಆರಂಭ ವಾಗುವುದು ಸಾಮಾಜಿಕ ಸಂತೋಷಕೂಟ. ನೀನು ಏನು ಹೇಳುತ್ತಿ ಕಮಲ್ ?"

ಮಡದಿಯ ಪ್ರಶ್ನೆಗೆ ನಗುಮುಖದಿಂದ ಉತ್ತರಿಸಿದ "ಓ ಆಗಬಹುದು !"

"ಮುಂದಿನ ಯಾವ ವಾರ ?"

"ಭಾನುವಾರ ಸಂಜೆ ಇದೇ ಐದು ಮೂವತ್ತಕ್ಕೆ ಆಗಬಹುದೇ ?"

"ಥಾಂಕ್ಯೂ ರಂಜನಿ !"

ಅನೇಕ ದನಿಗಳು ಮೊಳಗಿದುವು.

"ನೀವೆಲ್ಲರೂ ಅಂದು ಊರಲ್ಲಿರುತ್ತೀರಷ್ಟೆ ?"

"ಭಾನುವಾರವಲ್ಲವೇ ? ಓ ಅದಕ್ಕೆ ಅಡ್ಡಿಯಿಲ್ಲ !"

ಬಹುತೇಕ ಧ್ವನಿಗಳು ಜೊಂಬಲಿಸಿದುವು.

ಅನಂತರ ಉಪಹಾರ ಮತ್ತು ಚಹ-ಕಾಫಿ ಇತ್ಯಾದಿ. ದಂಪತಿಗಳಿಬ್ಬರೂ ಒಮ್ಮನದಿಂದ ಅತಿಥಿಗಳನ್ನು ಹಾರ್ದಿಕವಾಗಿ ಉಪಚರಿಸಿದರು. ಚಹವನ್ನು ಹೀರುತ್ತ ರಾಮರಾವ್ ನುಡಿದ "ಮುಂದಿನ ನಿಮ್ಮ ವಿವಾಹ ವಾರ್ಷಿಕೋತ್ಸವ ದಲ್ಲಿ ನಿಮಗೆ ಒಂದು ಮುದ್ದು ಮಗು ದೊರಂದಿರಬೇಕೆಂದು ನನ್ನ ಅಭಿಲಾಷೆ. ದೇವರು ನಿಮಗೆ ಆ ಸೌಭಾಗ್ಯವನ್ನು ದಯಪಾಲಿಸಲಿ." ಎಂದು ಶುಭ ಹಾರೈಸಿದ.

ಆ ಮಾತಿಗೆ ಎಲ್ಲಾ ಧ್ವನಿಗಳೂ ಒಕ್ಕೊರಲಿಂದ "ಹೌದು ! ಇದನ್ನು ಡಾಕ್ಟರ್ ಮೊದಲು ಮನಗಾಣಬೇಕು !"

ಕಮಲ್‌ಕಿರಣ್ ನಗುಮುಖದಿಂದ ಸ್ವಾಗತಿಸಿ ನುಡಿದ "ನಿಜ....ನಿಜ ! ನನಗೂ ಅದರ ಅಗತ್ಯ ಬಹಳವಿದೆ ! ಆದರೆ, ಉದ್ಯೋಗಸ್ಥ ಡಾಕ್ಟರ್ ಬೇಕೆಂದೇ ತಡೆಹಿಡಿದಿರಬಹುದು ಎನಿಸುತ್ತೆ ನನಗೆ !"

"ನಿಜವಾಗಿ ?"

"ಇಲ್ಲ....ಕಮಲ್‌ನ ಊಹೆ ಅಷ್ಟೆ."

ಸುಮ್ಮನೆ ಸಹಜವಾದ ದನಿಯಲ್ಲಿ ನಿರಾಕರಿಸಿದಳು ರಂಜನಿ.

* * * *

ಕಮಲ್‌ಕಿರಣ್ ಉಪಹಾರ ಮೆಲ್ಲುತ್ತ "ನೀನು ಆಸ್ಪತ್ರೆಯಲ್ಲಿ ಮಾಡುವ ಕೆಲಸ ಸಾಕು. ಮನೆ ಹತ್ತಿರ ಅವರಿವರು ಸೇರುವುದು ನನಗೆ ಹಿಡಿಸದು. ಅಲ್ಲದೆ ನೀನು ಮೂರು ಹೊತ್ತೂ ಅವರನ್ನೇ ಹಚ್ಚಿಕೊಂಡರೆ ನನ್ನ ಗತಿಯೇನು ?"

"ಕಮಲ್ ! ನೀನು ವಾರಕ್ಕೆ ನಾಲ್ಕೈದು ಸಂಜೆ ಮನೆಗೆ ಬರುವುದೇ ಇಲ್ಲವಲ್ಲಾ ? ಕೆಲವೊಮ್ಮೆ ಪ್ರವಾಸ–ಮೀಟಿಂಗ್....ಹೀಗೆ ಏನೇನೋ ಕಾರ್ಯಕ್ರಮ. ಇನ್ನು ಒಂದೆರಡು ದಿನಗಳಿಗಾಗಿ ಈ ಬಡಜನರ ಸೇವೆಯೇಕೆ ಬಿಡಲಿ? ನೀನು ನಿತ್ಯ ಸಂಜೆ ತಪ್ಪದೆ ಮನೆಗೆ ಬರುವೆಯಾದರೆ ನಾನು ಮನ ಆಫೀಸು ಮುಚ್ಚಿಬಿಡುವೆ."

"ನನಗೆ ಸಿಗುವ ಒಂದೆರಡು ದಿನಗಳ ಸಂಜೆಯನ್ನೂ ನೀನು ಹಾಳುಡುವುದು ಸರಿಯಲ್ಲ. ಯೋಚಿಸಿ ನೋಡು ರಂಜನಿ!"

"ಇಲ್ಲಿ ಕೇಳು ! ನಿನ್ನ ಎರಡು ದಿನಗಳ ಮನರಂಜನೆಗಾಗಿ ನಾನು ಆಫೀಸನ್ನು ಮುಚ್ಚಿದರೆ ಇನ್ನು ಐದು ದಿನಗಳ ಸಂಜೆಯನ್ನು ನಾನು ಹೇಗೆ ಕಳೆಯಲಿ? ಅಲ್ಲದೆ ಈ ಪರಿಸರದಲ್ಲಿರುವವರೆಲ್ಲಾ ದೀನ ದುಃಖಿಗಳೇ! ಪ್ರೈವೇಟ್ ಆಸ್ಪತ್ರೆಗೆ ಬರುವವರೆಲ್ಲಾ ಶ್ರೀಮಂತರು ಎಂಬುದನ್ನು ಮರೆಯಬಾರದು."

ಕಮಲ್‌ಕಿರಣ್ ಒಂದೆರಡು ಗಳಿಗೆ ಮನದಲ್ಲೇ ವಿಷಯವನ್ನು ತರ್ಕಿಸಿದ. ಅವಳ ಮಾತಿನ ಹುರುಳು ಅಂತರಾಳವನ್ನು ಮುಟ್ಟಿತು. ಹೃದಯವನ್ನು ಕಾಣದ ಕೈಗಳು ಮೆಲುಮೆಲ್ಲನೆ ಹಿಸುಕುತ್ತಿವೆ. ಏನು ಮಾಡುವುದು? ಎಂಬ ಪ್ರಶ್ನೆ ಮನದಲ್ಲಿ ನಿಮಿರಿ ನಿಂತಿತು. ಕಮಲ್‌ಕಿರಣ್ ಚಿಂತಾಮಗ್ನನಾಗಿ ಕಾರು ಹತ್ತಿದ. ಅವಳೂ ಹೊರಟಳು. ಒಂದೇ ಒಂದು ಫರ್ಲಾಂಗ್ ದೂರದ ಆಸ್ಪತ್ರೆಯಲ್ಲಿ ಅವಳನ್ನು ಬಿಟ್ಟು ಹೋದ ತನ್ನ ಆಫೀಸಿಗೆ. ರಂಜನಿ ಅಲ್ಲಿ ಯಥೋಚಿತವಾಗಿ ತನ್ನ ಕಾರ್ಯಾರಂಭ ಮಾಡಿದಳು.

ಅಲ್ಲಿ ದಿನವೂ ಹಲವಾರು ಪುಣ್ಯಜೀವಿಗಳು ಈ ಪಾಪಪೂರಿತ ಜಗತ್ತಿಗೆ

ಆಳುತ್ತಳುತ್ತಲೇ ಆಗಮಿಸುತ್ತವೆ. ಅವುಗಳನ್ನು ಸ್ವಾಗತಿಸುವುದರೊಂದಿಗೆ ಅವುಗಳ ಶುಶ್ರೂಷೆಯನ್ನೂ ಮಾಡುವುದು ದಿನಚರಿ. ಆ ಕಾರ್ಯಭಾರದಲ್ಲಿ ಹೊತ್ತು ಉರುಳಿದುದೇ ತಿಳಿಯುವುದಿಲ್ಲ. ವಿಶ್ರಾಂತಿ ಸಿಗುವುದೂ ಕಷ್ಟ. ಆ ಕೆಲಸ–ಆ ಶುಶ್ರೂಷೆ ಹಿತವೇ.

* * * *

ಇಂದು ಭಾನುವಾರ. ಅತಿಥೇಯಳಾದ ರಂಜನಿ ಉಪಹಾರ–ಚಹ ಮುಂತಾದ ಸಿಹಿ–ಕಾರಗಳನ್ನು ಮೇಜಿನ ತುಂಬ ಅಣಿಗೊಳಿಸಿ ಅತಿಥಿಗಳನ್ನು ಮಾತ್ರವಲ್ಲದೆ ಕಮಲ್‌ಕಿರಣನನ್ನೂ ಪ್ರತೀಕ್ಷಿಸುತಿದ್ದಾಳೆ.

ಢಣ್. ಢಣ್. ಢಣ್. ಢಣ್. ಢಣ್.

ಗಂಟೆ ಐದು ಬಾರಿ ಬಾರಿಸಿತು. ಕಮಲ್‌ಕಿರಣ್ ನಾಲ್ಕುವರೆಯೊಳಗಾಗಿ ಹಿಂದಿರುಗುವುದಾಗಿ ಹೇಳಿದ್ದ. ಬಾರಿ ಬಾರಿಗೂ ಬಾಗಿಲ ಕಡೆ ಕಣ್ಣಾಲಿಗಳನ್ನು ನೆಟ್ಟು ಸೋಲು ಅನುಭವಿಸಿದ್ದಾಯ್ತು.

ಟ್ರಿಣ್ ಟ್ರಿಣ್ ಟ್ರಿಣ್ ಟ್ರಿಣ್ !

ಟೆಲಿಫೋನಿನ ಕರೆ !

ರಂಜನಿ ಎದ್ದುಹೋಗಿ "ಹಲ್ಲೋ !" ಎಂದಳು.

"ಸ್ಸಾರಿ ರಂಜನಿ !!" ಆಕಡೆಯಿಂದ ಕಮಲ್‌ಕಿರಣ್ ಧ್ವನಿ.

"ಇನ್ನು ಬರುತ್ತೀಯಷ್ಟೆ ?"

"ಅದೂ ಕೂಡಾ ಆಗುತ್ತಿಲ್ಲ ರಂಜನಿ ! ನಾನೀಗಲೇ ಕೋಲಾರಕ್ಕೆ ಹೋಗಿ ಸಾಧ್ಯವಾದರೆ ರಾತ್ರಿ ಬರುವೆ. ತಪ್ಪಿದರೆ ಬೆಳಿಗ್ಗೆ ಬರುವೆ. ಅತಿಥಿಗಳಿಗೂ ನಾನು ಕ್ಷಮೆ ಕೇಳಿದ್ದೇನೆಂದು ಹೇಳು."

"............"

"ರಂಜನೀ ! ಈ ಸಲ ಕ್ಷಮಿಸಿಬಿಡು."

ಅಲ್ಲಿಗೆ ಟೆಲಿಫೋನ್ ಸಂಪರ್ಕ ತುಂಡುಗಡಿಯಿತು. ರಂಜನಿ ಬೇಸರದಿಂದ ಹಿಂದಿರುಗಿದಾಗಲೇ ಅತಿಥಿಗಳು ಬಾಗಿಲಲ್ಲಿ ಕಾಣಿಸಿಕೊಳ್ಳತೊಡಗಿದರು. ರಂಜನಿ ಎಲ್ಲರನ್ನೂ ಆತ್ಮೀಯತೆಯಿಂದ ಸ್ವಾಗತಿಸಿದರೂ ಪಾರ್ಟಿ ಸಪ್ಪೆ–ಬರೀ ಸಪ್ಪೆ !

"ನಮ್ಮಿಂದ ನಿನಗೆ ತೊಂದರೆ ಆಯಿತು ಅಷ್ಟೆ."

"ಪರವಾಯಿಲ್ಲ ಬಿಡಿ. ಪೋಲೀಸ್ ಖಾತೆ ಅಂದರೆ ಇನ್ನೇನು? ಇದು ಯಾವಾಗಲೂ ಇದ್ದದ್ದೇ."

ಪ್ರಾಸಂಗಿಕವಾಗಿ ಹಾಗೆಂದರೂ ಎಲ್ಲೋ ಪರಿತ್ಯಕ್ತ ಸಂತಾಪ ತಲೆಯನ್ನು ಆವರಿಸಿದಷ್ಟು ಮುಜುಗರ. ನಗುಮುಖದ ಮುಖವಾಡ ಧರಿಸಿ ಅತಿಥಿಗಳನ್ನು ಸ್ವಾಗತಿಸಿ ಆಧರಿಸಿದಳು. ಅತಿಥಿಗಳಿಗೂ ಅಷ್ಟೆ....ಸಂಕೋಚ.

"ಮುಂದಿನ ವಾರ ನಮ್ಮ ಮನೆಯಲ್ಲಿ" ಎಂದಳು ವೈದೇಹಿ.

ರಂಜನಿ ಒಡನೆಯೇ ಅಂದಳು "ಬೇಡಮ್ಮಾ! ಇಂತಹದೇ ಪ್ರಸಂಗ ಬರಬಹುದು. ಇದೆಲ್ಲಾ ಏಕೆ? ಎಂದಾದರೂ ಅಗತ್ಯ ಬಿದ್ದಾಗ ಎಲ್ಲರೂ ಬಂದೇ ಬರುತ್ತಾರೆ. ಈ ಸರಳ ಸಮಾರಂಭಗಳಲ್ಲಿ ಕುಂದುಕೊರತೆ ಬಂದೇ ಬರುತ್ತದೆ."

ಎಲ್ಲರ ಮುಖಬಿಂಬದಲ್ಲೂ ಜಾಹೀರಾತಿಗೆ ಬಿರಿಯುವಂತಹ ಕೃತಕ ಮುಗುಳು ನಗೆಯಲೆ ಹರಿದಾಡಿತು.

* * * *

ಬೆಳಗಾವಿಗೆ ವರ್ಗವಾದ ಪ್ರಯುಕ್ತ ಸಾಮಾನು ಕಟ್ಟುವ ಗಡಿಬಿಡಿ.

ರಂಜನಿಗೆ ಅಲ್ಲಿ ನನ್ನ ಉದ್ಯೋಗಕ್ಕೆ ಸರಿಯಾದ ಸ್ಥಳ ಸಿಕ್ಕುವುದೋ ಇಲ್ಲವೋ ಎಂಬ ಅನುಮಾನ. ಐದು ತಿಂಗಳ ಗರ್ಭಿಣಿ ಬೇರೆ. ಆರೋಗ್ಯವೂ ಅಷ್ಟು ಚೆನ್ನಾಗಿಲ್ಲ. ವಾಂತಿ ಶುರುವಾದುದು ನಿಂತೇ ಇರಲಿಲ್ಲ. ಔಷಧಿ ಪಥ್ಯ ನಡೆಯುತಿದ್ದರೂ ದೇಹಸ್ಥಿತಿ ಸುಧಾರಿಸಲಿಲ್ಲ. ಇಂಥ ಸಂದರ್ಭದಲ್ಲಿ ವರ್ಗವಾದುದು ಅಡಚಣೆ. ಆದರೂ ವಿಧಿಯಿಲ್ಲ. ಸಾಮಾನು ಕಟ್ಟುವುದು ಜೋಡಿಸುವುದು ತನ್ನದಲ್ಲವಾದರೂ ಉಸ್ತುವಾರಿ ತನ್ನದೇ. ವಾಯುಯಾನ ಕಟ್ಟೆಕಡೆಗೆ.

ಅವಳ ಎಲ್ಲಾ ರೀತಿಯ ಶ್ರಮದಲ್ಲೂ ಕಮಲ್ ಕಿರಣ್ ನೆರವು ನೀಡುತಿದ್ದುದು ದಿಟ. ಅಲ್ಲಿಯ ವ್ಯವಸ್ಥೆಗೂ ಅಸಿಸ್ಟೆಂಟ್‌ಗಳು ಟೊಂಕ ಕಟ್ಟಿ ನಿಲ್ಲುತಿದ್ದರು. ಹೆಚ್ಚಿನ ಪರಿಶ್ರಮವಿಲ್ಲದೆಯೇ ಹೊಸ ಮನೆ ರೂಪಿತಗೊಂಡರೂ ದೈಹಿಕ ಬವಣೆ ಇದ್ದೇ ಇತ್ತು. ವಾರದಲ್ಲಿ ಮೂರು ನಾಲ್ಕು ದಿನಗಳು

ಕಮಲ್ ಕಿರಣ್ ಊರಿಂದ ಹೊರಗೆ. ಬೆಂಗಳೂರಿನಲ್ಲಿದ್ದಾಗ ಕುಟುಂಬ ವರ್ಗ-ಗೆಳೆಯವರ್ಗ ಬೇಕಾದಷ್ಟು ಇದ್ದುದರಿಂದ ಎಲ್ಲಾ ರೀತಿಯಿಂದಲೂ ಕ್ಷಿಪ್ರ ಸಹಾಯ ಒದಗುತಿದ್ದುದು ದಿಟ. ಅಲ್ಲಿ ಹೊಸ ಪರಿಚಯ ಆಗಬೇಕು.

ಎರಡು ಮೂರು ದಿನ ಮನೆಯಿಂದ ಅಲುಗಲಾಗಲಿಲ್ಲ. ನಂತರ ತಾನೇ ಆಸ್ಪತ್ರೆಗೆ ಹೋಗಿ ಅಲ್ಲಿಯ ಡಾಕ್ಟರುಗಳ ಪರಿಚಯ ಪಡೆದುಕೊಂಡಳು ರಂಜಿನಿ. ಚಿಕಿತ್ಸೆಗೂ ನಿರಾಳವಾದ ದಾರಿ.

ಇಂದು ಕಮಲ್‌ಕಿರಣ್ ಮನೆಗೆ ಬಂದಾಗ ಬಳಲಿದ್ದ.

"ರಂಜಿನೀ ! ನೀನು ಸೊರಗುತಿದ್ದಿ. ಡಾಕ್ಟರಾಗಿ ನಿನ್ನನ್ನು ನೀನು ನೋಡುತ್ತಿಲ್ಲವೇ? ಏಕೆ ಉದಾಸೀನವೇ ? ಅಥವಾ ಚಿಕಿತ್ಸೆ ಮೈಗೆ ಹಿಡಿಯುತ್ತಿಲ್ಲವೇ ?"

"ಬಹುಶಃ ಆರು ತಿಂಗಳು ತುಂಬಿದ ಮೇಲೆ ಆರೋಗ್ಯ ಸುಧಾರಿಸಬಹುದು."

"ಟಾನಿಕ್ ತಪ್ಪದೆ ತೆಗೆದುಕೊಳ್ಳುತಿದ್ದೀಯಷ್ಟೆ ?"

"ಹೌದು ಕಮಲ್ !"

"ಬಾ ಇಲ್ಲಿ ಕುಳಿತುಕೊ. ನಿನ್ನನ್ನು ನೋಡಿದರೆ ನನ್ನ ಒಡಲೆಲ್ಲಾ ಸಂಕಟ. ನೀನು ಯಾರಿಂದ ಚಿಕಿತ್ಸೆ ಕೈಕೊಂಡರೂ ನಿನ್ನ ಸ್ವಂತಿಕೆಯನ್ನು ಬಿಟ್ಟುಕೊಡಬೇಡ. ನೀನು ಬೇಗನೆ ಸುಧಾರಿಸಿಕೊಂಡರೆ ಸಾಕಾಗಿದೆ."

"ನಿನಗೇಕಷ್ಟು ಕಳಕಳಿ ? ನೋಡೋಣ, ನಿಧಾನವಾಗಿ ಚೇತರಿಸಿಕೊಳ್ಳಬಹುದು. ಈಗ ನಾನು ಆರೋಗ್ಯವಾಗಿಯೇ ಇರುವೆ."

"ಅಷ್ಟಾದರೆ ಸಾಕು. ಆದರೂ ತೂಕ ಕಳೆದುಕೊಂಡಿದ್ದಿ."

"ಪರವಾಯಿಲ್ಲ....ನೋಡೋಣ."

* * * *

ಕಮಲ್ ಕಿರಣ್ ಸಾಮಿಪ್ಯ-ಸಂಸರ್ಗ ಬಾಲ್ಯದಿಂದ ಅನುಭವಿಸಿಕೊಂಡು ಬಂದ ಸ್ನೇಹಾನುರಾಗದ ಫಲ ... ಆ ಸ್ನೇಹಾನುಬಂಧ ದಿನದಿನಕ್ಕೂ ಚಿಗುರುವುದು ಸಹಜ.

ಕಮಲ್‌ಕಿರಣ್ ಯಾವತ್ತೂ ಕಾರ್ಯನಿರ್ವಹಣೆಯಲ್ಲಿ ಮುಳುಗಿರುವ

ವನೇ. ಈಗೀಗ ವಾರಕ್ಕೆ ಒಂದೆರಡು ದಿನ ಊರಿನಲ್ಲಿದ್ದರೆ ಹೆಚ್ಚು. ದಿನದಿನಕ್ಕೂ ಮಧ್ಯ ಮಾದಕಗಳ ಚಟವೂ ಅಂಟಿಕೊಳ್ಳುತ್ತಿರುವುದು ವೇದ್ಯ. ಮೊದಲೇ ಸಿಗರೇಟಿನ ಭಕ್ತ. ಈ ಎಲ್ಲವೂ ಮನಶ್ಶಾಂತಿಗೆ ಕಿಚ್ಚು ಹಚ್ಚುತ್ತವೆ. ತಾನೀಗ ಗರ್ಭಿಣಿಯಿದ್ದು ಆರೋಗ್ಯ ಕ್ಷೀಣಿಸಿರುವುದೊಂದೇ ಅಲ್ಲ. ತನ್ನನ್ನು ರಮಿಸು ವುದಕ್ಕಾಗಲೀ, ಸಾಂತ್ವನಗೈಯ್ಯುವುದಕ್ಕಾಗಲೀ ಆತ ಊರಲ್ಲೇ ಇಲ್ಲದಿರು ವುದು ಕಡು ಸಂಕಟ. ಕ್ವಾರ್ಟರ್ಸ್ ದೊಡ್ಡದೇ. ಮನೆಯ ಒಳ-ಹೊರಗೆ ಓಡಾಡಿದರೆ ಅದೇ ಸಮೃದ್ಧ ವಾಯುವಿಹಾರ. ಆದರೆ ಏಕಾಂತ ಜೀವನ ...?

ಇನ್ನು ಮೂರು ನಾಲ್ಕು ತಿಂಗಳಿಗಾಗಿ ಅಲ್ಲಿ ಕೆಲಸ ಹೊಂಚಿಕೊಳ್ಳು ವಂತೆಯೂ ಇಲ್ಲ. ಹೆರಿಗೆಯಾದನಂತರವೇ ಮುಂದಿನ ಜೀವನ ನಿರ್ಣಯ.... ತಾನು ಕಲಿತ ವಿದ್ಯೆ ಮುದುಡಬಾರದು. ನಾನು ಬದುಕಿರುವಷ್ಟು ಕಾಲ ಅಲ್ಲ, ಅಲ್ಲವೇ ಅಲ್ಲ. ಮಾನಸಿಕ-ದೈಹಿಕ-ಆತ್ಮಿಕ ಶಕ್ತಿಗಳು ಕುಂದಿಲ್ಲದಂತೆ ಕೆಲಸ ನಿರ್ವಹಿಸುವವರೆಗೆ ನಾನು ಮಾನವ ಸೇವೆ–ದೀನದಲಿತರ ಸೇವೆ ಮಾಡಲೇಬೇಕು. ಅದು ಹೊರತು ಬಾಳು ನೀರಸ. ಜೀವನ ಸತ್ಯಂ ಪರಿಶೋಧನಂ....

ಹೃದಯಪಕ್ಷಿ–ಮಾನಸಪಕ್ಷಿಗಳು ಒಂದಾಗಿ ರಾಗವಿರಾಗಗಳಲ್ಲಿ ಹಾಡು ತಿದ್ದರೆ ಶತಪಥ ತುಳಿಯುವ ಹೆಜ್ಜೆಗಳು ಅಲ್ಲಲ್ಲೇ ನಿಂತುಬಿಡುವುದುಂಟು ಮರೆತುಹೋದಂತೆ....ಅನಂತರ ತನಗೆ ತಾನೇ ಎಚ್ಚತ್ತುಕೊಳ್ಳುತ್ತಾಳೆ ರಂಜಿನಿ. ಮುಖ್ಯವಾಗಿ ಆತನ ಕಾಕಿಯ ಕವಚದೊಳಗೆ ಹೃದಯವೇ ಇಲ್ಲ ಎನ್ನುತ್ತದೆ ಮನಸ್ಸು.

ಇಂದು, ಮಧ್ಯಾಹ್ನವೇ ಮನೆಗೆ ಮರಳಿದ ಕಮಲ್ ಕಿರಣ್.

ಕೆಂಪು ಮುಖ ಇನ್ನಷ್ಟು ಕೆಂಪು ಕೆಂಪು ತಳೆದಿತ್ತು. ಬರಬರುತ್ತಲೇ ಅಂದ,

"ರಂಜಿನೀ ! ನನಗಿಂದು ವಿಪರೀತ ಜ್ವರ ತಾಳಲಾರೆ...."

ಶೂಜು ಬಟ್ಟೆಬರೆ ಎಲ್ಲಾ ಅಲ್ಲಿಂದಲ್ಲೇ ಒಗೆದು ಹೋಗಿ ಹಾಸಿಗೆ ಸೇರಿದ. ಜ್ವರ ಬೇಯುತಿತ್ತು. ರಂಜಿನಿ ತಾನೇ ಚಿಕಿತ್ಸೆ ಆರಂಭಿಸಿದಳು. ಅವನು ಮೊದಲಿಂದಲೂ ಹೀಗೆಯೇ ಸಣ್ಣ ಜ್ವರವನ್ನೂ ತಾಳಲಾರ. ಹಾ....ಹೂ ... ಎನ್ನುತ್ತ ಗದ್ದಲ ಎಬ್ಬಿಸುವವನೇ. ನರಳುವಿಕೆ ನಿಲ್ಲಬೇಕಾದರೆ ಜ್ವರದಿಂದ

ಮುಕ್ತನಾದರೆ ಮಾತ್ರ. ಡ್ರಿಂಕ್ಸ್ ತೆಗೆದುಕೊಳ್ಳಕೂಡದೆಂದು ಸಾರಿ ಹೇಳಿದರೂ ಕೇಳುವವನಲ್ಲ.

ಮೂರು ದಿನಗಳನಂತರ ಜ್ವರ ಬಿಟ್ಟಿತು.

"ರಂಜಿನೀ ಸ್ನಾನ ಮಾಡದೆ ಮೂರು ದಿನ ಆಯಿತು. ಮೈಕೈ ಭಾರ. ಈ ದಿನ ಸ್ನಾನ ಮಾಡುವೆ."

"ಈ ದಿನ ಬೇಡ ಕಮಲ್....ಹವೆ ಕೂಡ ತಂಡಿಯಿಂದ ಕೂಡಿದೆ."

"ಸಾಧ್ಯವೇ ಇಲ್ಲ....ಬಿಸಿಬಿಸಿ ನಾಲ್ಕೇ ತಂಬಿಗೆ ನೀರು...."

ಅವನು ಕೆಲವೇ ನಿಮಿಷಗಳಲ್ಲಿ ಸ್ನಾನ ಮಾಡಿ ಬಂದು ಮುಸುಗಿಟ್ಟು ಮಲಗಿದ. ಅವನಿಗೆ ಜ್ವರ ಮರುಕಳಿಸದಿದ್ದರೂ ಅವನ ಸಾಮಿಪ್ಯದಿಂದಲೋ ಏನೋ ಅವಳಿಗೂ ಜ್ವರ ಅಂಟಿತು. ತಾನೇ ಮಾತ್ರೆ ಔಷಧಿ ತೆಗೆದುಕೊಂಡರೂ ಜ್ವರ ನಿಲ್ಲಲಿಲ್ಲ. ಕೊನೆಗೆ ಆಸ್ಪತ್ರೆಯಿಂದ ವೈದ್ಯರನ್ನು ಕರೆಸಿ ಚಿಕಿತ್ಸೆ ಪಡೆದುಕೊಂಡನಂತರ ಜ್ವರವಿಳಿಯಿತು. ನಾಲ್ಕಾರು ದಿನಗಳ ಜ್ವರ ಸುಸ್ತು ಮಾಡಿತು. ಕಮಲ್ ಎಂದಿನಂತೆ ಕರ್ತವ್ಯಕ್ಕೆ ಶರಣಾದುದರಿಂದ ರಂಜಿನಿ ಪುನಃ ಏಕಾಂಗಿ. ಮೈಯಲ್ಲಿ ನಿತ್ರಾಣ. ಮಾನಸಿಕ ಅಶಾಂತಿ. ಕಮಲ್ ಕಿರಣ್ ತನ್ನ ವಿಶ್ರಾಂತಿಗೋಸುಗ ಮನೆಯಲ್ಲುಳಿದಿದ್ದನೇ ಹೊರತು ತನ್ನ ಕ್ಷೇಮ ನಿರ್ವಹಣೆಗಲ್ಲ. ಆಗಾಗ ಬಂದು ಬಳಿಯಲ್ಲಿ ಕೂಡುವ. ಮಾತುಕತೆಗಳೂ ನಡೆಯುತ್ತಿದ್ದುವು. ಆದರೆ, ಅದರಲ್ಲಿ ರಾಗರಸವೇ ಇಲ್ಲ. ಬರೀ ಸಪ್ಪೆ ಸಪ್ಪೆ.

ಅವಳದು ಸ್ವತಂತ್ರ ಪ್ರವೃತ್ತಿ ಎಂಬ ದುರ್ಭಾವನೆ ಅಂತರ್ಯದಲ್ಲಿ ಲಾಸ್ಯವಾಡುತ್ತಲೇ ಇರುತ್ತದೆ. ಆರ್ಥಿಕವಾಗಿ ವೈಯ್ಯಕ್ತಿಕವಾಗಿ ಅವಳೆಂದಾದರೂ ತನ್ನಂಕೆಯಲ್ಲಿರುವುದು ಸಾಧ್ಯವೇ? ಎಂಬ ಪ್ರಶ್ನೆ ತಾನೇ ತಾನಾಗಿ ಕೂರ್ಮುಳ್ಳಿನಂತೆ ಚುಚ್ಚಿ ಚುಚ್ಚಿ ಮನವನ್ನು ಘಾಸಿ ಪಡಿಸುತ್ತದೆ.

ಅವನು ಸದಾ ಅಂತರ್ಮುಖಿಯಾಗಿ ವಿಷಯವನ್ನು ಮೆಲುಕು ಹಾಕುತ್ತಾನೆ.

ಆತನ ಗಂಭೀರ ಚಿಂತನೆ, ಗಂಭೀರ ವರ್ತನೆ ಇವಳಿಗೂ ಮನವನ್ನು ಗಾಣಕ್ಕೆ ಕೊಟ್ಟಂತೆ ಹಿಂಡುತ್ತದೆ. ಯಾಕೋ....ಈಚೀಚೆಗೆ ಜೀವನವೇ ಸಪ್ಪೆ. ಇದಕ್ಕೆ ಯಾವ ರೀತಿಯಲ್ಲಿ ಹೊಸ ರೂಪು ಕೊಡಲಿ? ಎಂಬುದು

ಕೊನೆಗಾಣದ ಪ್ರಶ್ನೆ. ಹೃದಯುರಂಗವನ್ನು ತತ್ತಳ ತುಳಿಯುವ ಭಾವ ತರಂಗಿಣಿಯು ರುದ್ರಲಾಸ್ಯದಿಂದ ಹೃದಯು ಈಗಲೀಗ ಬಿರಿಯುವುದೋ ಎನಿಸು ವಷ್ಟು ಆತಂಕ.

ರಂಜಿನಿ ತನ್ನನ್ನು ತಾನೇ ಹತೋಟಿಯಲ್ಲಿಟ್ಟುಕೊಳ್ಳುತ್ತ ದಿನಚರಿಯಲ್ಲಿ ತೊಡಗುವಳು.

*   *   *   *

ರಂಜಿನಿಗೆ ದಿನ ತುಂಬಿ ನೋವು ಆರಂಭವಾದಾಗ ಮಧ್ಯರಾತ್ರಿ. ಅವಳ ತಂದೆ ತಾಯಿಯರು ಬಂದು ಆಗಲೇ ಒಂದುವಾರ ಕಳೆದಿತ್ತು. ಕಮಲ್ ಕಿರಣ್ ಅವಳನ್ನೂ ಅತ್ತೆಯನ್ನೂ ಕರೆದೊಯ್ದು ಆಸ್ಪತ್ರೆಗೆ ಬಿಟ್ಟು ಬಂದ. ಬೆಳಿಗ್ಗೆ ಮಾವನೊಂದಿಗೆ ಹೋದಾಗ ಹೆರಿಗೆಯಾಗಿರಲಿಲ್ಲ. ಹೆರಿಗೆಯಾದೊಡನೆ ತಿಳಿಸಿ ಎಂದು ಕಛೇರಿಗೆ ಹೊರಟ. ಅವಳಿಗೆ ನಾರ್ಮಲ್ ಹೆರಿಗೆಯಾಗಲಿದ್ದುದ ರಿಂದ ಶಸ್ತ್ರ ಪ್ರಯೋಗ ನಡೆಯಲಿಲ್ಲ. ಶರೀರ ದುರ್ಬಲವಾಗಿದ್ದುದರಿಂದ ಸ್ವಲ್ಪ ಆತಂಕ. ಡಾಕ್ಟರು ಕಾದೇ ಇದ್ದರು.

ಕಮಲ್ ಕಿರಣ ಆಸ್ಪತ್ರೆಗೆ ಟೆಲಿಫೋನ್ ಕರೆ ನೀಡಿದ್ದ.

ರಂಜಿನಿಯ ತಂದೆ ಫೋನೆತ್ತಿ "ಹಲೋ!" ಎಂದ.

"ನಾನು ಆಸ್ಪತ್ರೆಗೆ ಬರೋಣವೆಂದುಕೊಂಡಿದ್ದೆ, ಆಗಲಿಲ್ಲ. ಹೆರಿಗೆ ಯಾಯಿತೇ? ಹೇಗಿದ್ದಾಳೆ ರಂಜಿನಿ?"

"ಇನ್ನೂ ಹೆರಿಗೆಯಾಗಿಲ್ಲ. ನೋವಿನಲ್ಲಿದ್ದಾಳೆ."

"ಏನೂ ಭಯವಿಲ್ಲ ತಾನೇ?"

"ಇಲ್ಲ........"

ಟೆಲಿಫೋನಿನ ಸಂಪರ್ಕ ತುಂಡುಗಡಿಯಿತು.

ಮಧ್ಯಾಹ್ನ ಎರಡು ಗಂಟೆಯ ಸಮಯದಲ್ಲಿ ಪುನಃ ಕಮಲ್ ಕಿರಣ್ ಟೆಲಿಫೋನಿನ ಕರೆ ನೀಡಿದ.

"ಇಲ್ಲಪ್ಪಾ, ಇನ್ನೂ ಹೆರಿಗೆಯಾಗಲಿಲ್ಲ, ಈಗ ಆಗಬಹುದು ಎನ್ನುತ್ತಾರೆ ಡಾಕ್ಟರು."

"ನಾನೀಗ ಅರ್ಜೆಂಟಾಗಿ ಕಲಕತ್ತಾಕೆ ಹೋಗಬೇಕಾಗಿದೆ. ಎರಡು ಮೂರು ದಿನಗಳಲ್ಲಿ ಹಿಂದಿರುಗುವೆ. ರಂಜಿನಿಗೆ ಹೇಳಿ ಬಿಡಿ."

ರಂಜಿನಿಗೆ ಹೆರಿಗೆಯಾದಾಗ ಮಧ್ಯಾಹ್ನ ಮೂರು ಗಂಟೆ. ಮುದ್ದು ಮುದ್ದಾದ ಹೆಣ್ಣುಮಗು. ರಂಜಿನಿಗೆ ಮಗುವನ್ನು ನೋಡಿ ತನ್ನ ಶ್ರಮ ಸಾರ್ಥಕವಾಯಿತು ಎನಿಸಿತು. ಮೂರನೆಯ ದಿನವೇ ಮನೆಗೆ ಮರಳಿದಳು. ತಂದೆ ತಾಯಿಯರಿಗೆ ಅಳಿಯ ಒಂದು ಗಂಟೆ ಇದ್ದು ಹೊರಡಬಾರದಿತ್ತೇ ಎಂಬ ಯೋಚನೆ ಮನಸ್ಸಿಗೆ. ಅದೇ ಯೋಚನೆ ಮಗಳಿಗೂ ಕೂಡ. ಅವರವರ ಮನಃಪ್ರಾಣಗಳು ಒಳಗಿಂದೊಳಗೇ ನರಳಿದರೂ ನೋವು ಬಹಿರಂಗಗೊಳ್ಳಲಿಲ್ಲ. ರಂಜಿನಿಯ ಮನೋರಾಜ್ಯದಲ್ಲಿ ಅಶಾಂತಿ-ಕ್ಲೇಶ-ಜುಗುಪ್ಸೆ ಇನ್ನೂ ಏನೇನೋ........ ತನ್ನನ್ನು ತಾನೇ ಸಂತೈಸಿಕೊಳ್ಳುತ್ತ ಮಗುವಿನ ಲಾಲನೆಯಲ್ಲಿ ತೊಡಗಿದಳು.

ಮರುದಿನ ಕಮಲ್ ಕಿರಣ್ ಆಗಮಿಸಿದ.

ಅವನು ನೇರವಾಗಿ ಒಳ ಬರುತ್ತಲೂ 'ಕೈ ಕಾಲು ತೊಳೆಯದೆ ಒಳ ಬರಬೇಡ!' ಎಂದಳು ರಂಜಿನಿ.

"ಓ ಈ ನಿಬಂಧನೆ ಬೇರೆ!"

ಅವನು ಸೀರು ಮನೆಗೆ ಹೊರಟ. ಹಿಂದಿನಿಂದ ಬೀಳ್ಕೊಟ ನಯನದ್ವಯಗಳಲ್ಲಿ ಕುಪಿತ ಉತ್ಕ್ರಾಂತಿಯ ಕಿಡಿಗಳು ಜ್ವಲಿಸಿದುವು. ಒಂದೆರಡು ಗಳಿಗೆಯೊಳಗಾಗಿ ಸಹನೆ-ಶಾಂತಿಗಳೇ ಮೈವೆತ್ತು ಬಂದಂತೆ ಶಾಂತಿ-ಸಮಾಧಾನಗಳ ಗಣಿಯಾದಳು ಅವಳು.

ಕಮಲ್ ಕಿರಣ್ ಮುಖವನ್ನು ಟವಲ್ಲಿನಿಂದ ಒರಸಿಕೊಳ್ಳುತ್ತಲೇ ಒಳ ಬಂದ. ಕೆಂಪು ಕೆಂಪು ಮುಖ ಇನ್ನೂ ಕೆಂಪು ತಳೆದಷ್ಟು ಕೆಂಪು. ಸುಖ ನಿದ್ರಿತ ಮಗುವನ್ನು ನೋಡುತ್ತ "ಎಷ್ಟು ಚೆನ್ನಾದ ಮಗು? ಹಾರ್ಟೀ ಕಾಂಗ್ರಾಟ್ಸ್! ನೀನು ಬಲೂ ಸುಂದರ ಮಗುವನ್ನು ಕೊಟ್ಟಿದ್ದಿ!" ಎಂದು ಅವಳಿಗೆ ಹಸ್ತಲಾಘವ ನೀಡಿ ಹಣೆಗೆ ಹೂ ಮುತ್ತನ್ನೊತ್ತಿದ.

ಅವಳು ಮಾತಾಡದೆ ಮೌನಧಾರಣೆ ಮಾಡಿದಳು.

* * * *

ರಂಜಿನಿ ಬೆಳಗಾವಿಯಲ್ಲಿದ್ದದು. ಎರಡುವಾರ ಮಾತ್ರ. ಕಮಲ್‌ಕಿರಣ್ ಎಂದಿನಂತೆಯೇ. ಹೆಚ್ಚಾಗಿ ಪ್ರವಾಸ. ಒಂದೆರಡು ದಿನ ಸಾಯಂಕಾಲ ಮನೆಗೆ ಬರುತಿದ್ದರೂ ಪಾನಮತ್ತನಾಗಿರುತಿದ್ದ. ಬೆಳಿಗ್ಗೆ ಎದ್ದಮೇಲೆ ಮಗುವಿನ ಮೇಲೆ ಆಸೆ. ಎತ್ತಿ ಮುದ್ದಾಡಿ ಕಛೇರಿಯ ದಾರಿ ಹಿಡಿಯುತಿದ್ದ.

ರಂಜಿನಿ ಬೆಂಗಳೂರಿಗೆ ಬಂದ ಮೇಲೆ ಮನೆಯ ಮಗ್ಗುಲಿಗಿದ್ದ ಖಾಲಿ ಸೈಟನ್ನು ಕೊಂಡು ಆಸ್ಪತ್ರೆಗೆ ಆಗತ್ಯವಾದ ಪ್ಲಾನ್ ಬರೆಸಿ ಮನೆ ಕಟ್ಟಿಸಲು ಕೆಲಸ ಹಿಡಿಸಿದಳು.

ಕಮಲ್‌ಕಿರಣ್ ಒಮ್ಮೆ ಟೆಲಿಫೋನ್ ಮಾಡಿ "ಯಾವಾಗ ಬರುತ್ತೀ?" ಎಂದ.

"ಈಗ ಸಧ್ಯಕ್ಕೆ ಸಾಧ್ಯವಿಲ್ಲ. ಮಗು ಬೆಳೆಯಬೇಕು."

"ನನಗಿಲ್ಲಿ ತುಂಬಾ ಬೇಸರ ರಂಜಿನೀ!"

"ನಿಮ್ಮಲ್ಲಿ ಗೆಳೆಯರಿಗೇನು ಕಮ್ಮಿ? ಹೇಗಾದರೂ ನೀನು ಕಾಲಹರಣ ಮಾಡಬಹುದು."

"ಯಾವಾಗ ಬರುತ್ತಿ?"

"ಇನ್ನೂ ಎರಡು ಮೂರು ತಿಂಗಳಂತೂ ಸಾಧ್ಯವಿಲ್ಲ."

ಅವನು ಕೋಪದಿಂದ ಟೆಲಿಫೋನ್ ಕುಕ್ಕಿದ.

ಅನಂತರ ಅವನೊಮ್ಮೆ ಬೆಂಗಳೂರಿಗೆ ಬಂದಿದ್ದರೂ ಮನೆಗೆ ಬರದೇ ಹೋದುದು ತಿಳಿಯಿತು. ರಂಜಿನಿಯ ಮನಸ್ಸು ಮುಗಿಲೆತ್ತರಕೆ ಏರಿತು. ಪತ್ರ ವ್ಯವಹಾರಗಳೂ ನಿಂತು ಹೋದುವು ಅವನು ದೆಹಲಿಗೆ ವರ್ಗವಾದುದು ಪತ್ರಿಕೆಗಳ ಮುಖೇನ ತಿಳಿಯಿತು. ಮಗುವಿನ ಪಾಲನೆಯೊಂದಿಗೆ ತಂದೆಯ ಕಾಹಿಲೆಯ ಭಾರವೂ ಹೆಗಲೇರಿತು. ತಂದೆಯು ಆಗಾಗ ಚೇತರಿಸಿಕೊಳ್ಳುತಿದ್ದರೂ ಮತ್ತೆಮತ್ತೆ ಪುನಃಪುನಃ ಮರುಕಳಿಸುತಿತ್ತು ಮರಣ ಸಂಕಟ.

"ಮಗಳೇ! ನಿನಗೆ ಕಮಲ್ ಕಿರಣ್ ಮೇಲೆ ಪ್ರೇಮ ಇಲ್ಲವೆಂಬುದು ನನ್ನ ಗಮನಕ್ಕೆ ಬಂದಿದೆ. ಹೀಗೆ ಸಣ್ಣ ಸಣ್ಣ ಕಾರಣಕ್ಕಾಗಿ ಮನಸ್ತಾಪ ಮಾಡಿಕೊಂಡರೆ ಕೊನೆಗಾಲದಲ್ಲಿ ಒಬ್ಬರಿಗೊಬ್ಬರ ಗತಿ ತಪ್ಪಿ ಹೋಗುತ್ತದೆ. ಇದನ್ನು ನೀನು ಯೋಚಿಸಲಾರೆ ಎಂಬುದೇನೂ ಇಲ್ಲ. ಹೇಗಾದರೂ ಒಬ್ಬರಿಗೊಬ್ಬರು ಅನುಸರಿಸಿಕೊಂಡು ಹೋಗುವುದೇ ಒಳ್ಳೆಯದು."

ನರಳು ದನಿಯಲ್ಲಿ ಹೊರ ಬಿದ್ದ ಉಪದೇಶಕ್ಕೆ 'ಹೂಂ' ಎಂದಳು ರಂಜಿನಿ.

"ಈ ಸಾಯುವ ಮುದುಕ ಏನೋ ಹೇಳುತ್ತಾನೆಂದು ಉದಾಸೀನ ಮಾಡಬೇಡ.... ನೀನೇ ಬಹಳವಾಗಿ ಯೋಚಿಸಿನೋಡು !"

"ಆಗಲಿ ಅಪ್ಪಾ....!"

ಬಳಿಯಲ್ಲಿದ್ದ ತಾಯಿಯ ಕಣ್ಣುಗಳು ತೊಯ್ದುವು. ಅವಳು ತುದಿ ಬೆರಳಿನಿಂದ ಹನಿಗಳನ್ನು ಸೆರೆಹಿಡಿದು ನೆಲಕ್ಕೆ ಸಿಡಿದು ಕಣ್ಣುಗಳನ್ನು ಸೆರಗಿನಿಂದ ಒರಿಸಿಕೊಂಡಳು.

ರಂಜನಿ ಬಾಲ್ಯದಿಂದಲೂ ಅವನೊಡನಾಡಿ ಗಳಿಸಿದ ಮಧುರ ಸ್ನೇಹ ವನ್ನು ಜ್ಞಾಪಿಸಿಕೊಂಡಳು. ಅಕ್ಕಪಕ್ಕದ ಮನೆಯ ಮಕ್ಕಳಾದ ಇಬ್ಬರಿಗೂ ಸ್ನೇಹಾನುರಾಗ-ಆತ್ಮೀಯ ಸಂಸರ್ಗ ಲಭಿಸಿದ್ದು ವಿಧಿವತ್ತಾಗಿ. ಈಗದರ ಹಿಂಜರಿಕೆಯೂ ವಿಧಿವತ್ತಾಗಿಯೇ....ನಡೆದಿದೆ. ಮುಂದಿನ ಒಳಿತು-ಕೆಡಕು ಸಹ ವಿಧಿವತ್ತಾಗಿಯೇ ನಡೆಯಲಿ. ಎಂದುಕೊಂಡಾಗಲೇ ಗೋಡೆಯ ಮೇಲಿನ ಹಲ್ಲಿ ನುಡಿಯಿತು ಲೊಚ. ಲೊಚ. ಲೊಚ. ಲೊಚ.

ಅರೇ! ಎಂತಹ ಕಠೋರ ಸತ್ಯ!

*   *   *   *

ತಂದೆ ಸ್ವರ್ಗಸ್ಥನಾಗಿ ತಿಂಗಳೆರಡು ಉರುಳುವಷ್ಟರಲ್ಲಿ ಆಸ್ಪತ್ರೆಯ ಕಟ್ಟಡ ಸಂಪೂರ್ಣ ಸಿದ್ಧ. ರಂಜಿನಿ ಕಮಲ್ ಕಿರಣ್-ಗೆ ಮನದಲ್ಲೇ ವಿದಾಯ ಹೇಳಿ ಆಸ್ಪತ್ರೆಯ ವ್ಯವಹಾರದಲ್ಲಿ ಸಂಪೂರ್ಣ ಮುಳುಗಿ ಹೋದಳು. ದಿನೇ ದಿನೇ ಮುಂಬೆಳೆಯುವ ಆಸ್ಪತ್ರೆ, ಮುದ್ದು ಮುದ್ದು ಮಾತಾಡುತ್ತ ನಲಿದಾಡುವ ಮಗು ಮನಃಪ್ರಾಣಗಳನ್ನು ಸಂಮೋಹನಾಸ್ತ್ರದಿಂದ ಹೆಡೆಮುರಿಗಟ್ಟಿದುವು. ದೈಹಿಕ ಶ್ರಮ-ಮಾನಸಿಕ ಶಾಂತಿಗಳಿಂದ ಹೃದಯ ಪುಷ್ಪ ದಳದಳವಾಗಿ ಅರಳುತ್ತಿದ್ದರೆ ಇನ್ನೇನು ಬೇಕು? ರಂಜಿನಿಗೀಗ ಬಿಡುವು ಇಲ್ಲವೇ ಇಲ್ಲ. ರಾತ್ರಿ ಹತ್ತರವರೆಗೆ ಕೆಲಸ ಮಾಡಿ ಮನೆಗೆ ಬಂದ ಮೇಲೂ ಕರೆ ಬರುವು ದುಂಟು. ದಿನಕ್ಕೆ ನಾಲ್ಕಾರು ನಿಷ್ಕಳಂಕ ಜೀವಗಳನ್ನು ಈ ಜಗತ್ತಿಗೆ ಬರ ಮಾಡಿಕೊಳ್ಳುತ್ತಾಳೆ. ಇತರೆ ರೋಗಿಗಳ ವಿಭಾಗವೇ ಬೇರೆಯಿರುವುದರಿಂದ

ಹೆರಿಗೆಗಾಗಿ ಮೀಸಲಿಟ್ಟ ವಾರ್ಡುಗಳು ಕೆಲವೇ ಕೆಲವು. ಅವು ಖಾಲಿಯಾದಂತೆಲ್ಲಾ ಭರ್ತಿಯಾಗುತ್ತಲೇ ಇರುತ್ತವೆ.

ಅಂತಲೇ ಜೀವನ ಸ್ಫೂರ್ತಿ....

ರೇಡಿಯೋ ಸರಳ–ಸುಂದರ ದನಿಯಲ್ಲಿ ಶ್ಲೋಕಹಾಡಿತು, ಭಗವದ್ಗೀತೆಯಿಂದ.

ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ!

ಎಂತಹ ಸಂದೇಶ?

ತಾಯಿಗೂ ಈ ಮಗಳಿಲ್ಲದಿದ್ದರೆ ನಾನಾದರೂ ಎಲ್ಲಿಗೆ ಹೋಗಲಿ? ಎಂಬ ಪ್ರಶ್ನೆ ಏಳುತ್ತದೆ. ಆ ಮಗುವಿನೊಂದಿಗೆ ಆಟಪಾಟ ...ಮಗಳೊಂದಿಗೆ ಮಾತುಕತೆ–ವ್ಯವಹಾರ. ಇವುಗಳಿಂದ ಸುಗಮ ಕಾಲಯಾಪನೆ. ವೃದ್ಧಾಪ್ಯದ ಸೋಂಕೇ ಇಲ್ಲ.

ಮಗಳಿಗೆ ನಾಲ್ಕು ವರ್ಷ ತುಂಬುತ್ತಲೂ ಶಾಲೆಗೆ ಕಳುಹಿಸಿದಳು ರಂಜಿನಿ. ಶಾಲಾ ಜೀವನದಲ್ಲಿ ನಂದಿನಿ ಸುಖಿ. ಜನಸೇವೆಯಲ್ಲಿ ರಂಜಿನಿ ಸುಖಿ. ಮಗಳು ಮೊಮ್ಮಗಳು ಸಂಸರ್ಗದಿಂದ ತಾಯಿ ಸುಖಿ.

ರಂಜಿನಿ ಮದುವೆಯಾದ ಮೊದಲ ದಿನಗಳನ್ನು ಕಳೆದ ಸುಂದರ ಸಂದರ್ಭಗಳನ್ನು ಮನದಲ್ಲೇ ಮೆಲಕು ಹಾಕಿದಳು. ಮೈಸೂರಿನ ಬೃಂದಾವನದಲ್ಲಿ; ನೀಲಗಿರಿಯಲ್ಲಿ; ಮತ್ತು ಕಾಶ್ಮೀರದ ಸುಂದರ ದರ್ಶನೀಯ ಸ್ಥಳಗಳಲ್ಲಿ. ಕಮಲ್ ಕಿರಣ್ ಒಮ್ಮೆ ಹೇಳಿದ್ದ "ರಂಜಿನಿ! ಇನ್ನು ಹತ್ತು ವರ್ಷಕ್ಕೆ ಅಂದರೆ ಮದುವೆಯ ಹತ್ತನೆಯ ವಾರ್ಷಿಕೋತ್ಸವಕ್ಕೆ ನಾವು ಕಳೆಯಬೇಕಾದುದು ಇಲ್ಲೇ! ಇದು ಜ್ಞಾಪಕವಿರಲಿ."

ಅದು....ಆ ರಂಜನೀಯ ಸ್ಥಳ. ಚಾಮುಂಡಿ ಬೆಟ್ಟದ ಮೇಲೆ ವೈಭವೋಪೇತವಾಗಿರುವ ಹೊಟೇಲ್.

"ಹತ್ತು ವರ್ಷದ ನಂತರದ ಪ್ರೋಗ್ರಾಂ ಈಗ ನಿರ್ಧರಿಸಲಾಗುತ್ತದೆಯೇ?"

"ಪ್ರಯತ್ನ ಪಡಬೇಕು. ಐದನೆಯ ವರ್ಷದಲ್ಲಿ ನಾವು ಉತ್ಸವ ಆಚರಿಸಬೇಕಾದುದು ಎಲ್ಲಿ ಗೊತ್ತೆ? ಮಂಗಳೂರಿನ ಸಮುದ್ರ ತೀರ."

ಮಂಗಳೂರಿನ ಸಮುದ್ರ ತೀರದಲ್ಲಿ ಕಳೆದುದು ಸತ್ಯ. ಗೋವೆಗೆ ಹೋಗಿ

ಬರೋಣ ಎನ್ನುತ್ತಲೇ ಮೂರು ನಾಲ್ಕು ಬಾರಿ ಕಾರ್ಯಾರ್ಥವಾಗಿ ತಾನೇ ಹೋಗಿ ಬಂದಿದ್ದ.

ನಾಳೆಗೆ ಸರಿಯಾಗಿ ಮದುವೆಯಾಗಿ ಹತ್ತು ವರ್ಷ. ತಾನು ಇಲ್ಲಿ. ಅವನು ದೆಹಲಿಯಲ್ಲಿ. ನೋಡೋಣ. ಹೀಗೆಯೇ ನಡೆಯುವಷ್ಟು ಕಾಲ ನಡೆಯಲಿ....ವಿಧಿ ಸೂತ್ರದಾರ.

ವರ್ಷಮಾನಗಳು ಹೇಗೆ ಕಳೆದುವೊ....ಕೆಲಸ ಕಾರ್ಯಗಳು ಹೇಗೆ ನಡೆದುವೋ... ಜೀವನ ಮಾರ್ಗ ಯೋಗ ಏನೇನು ಭೋದಿಸಿತೊ....ಭಿನ್ನಾಭಿಪ್ರಾಯಗಳು ಯಾವ ಯಾವ ಚೋದನೆ ನೀಡಿದುವೊ ...ಎಂಬುದನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ತುಲನೆ ಮಾಡಿದರೆ ಬರುವ ಮೊತ್ತ ಶಾ....ಂ....ತಿ! ಅಶಾ....ಂ....ತಿ!!

ಕಮಲ್ ಕಿರಣ್ ವರ್ಷವರ್ಷವೂ ಉತ್ತಮ ಸೇವೆಗಾಗಿ ಚಿನ್ನದ ಪದಕಗಳನ್ನು ಪಡೆಯುತ್ತಲೇ ಇದ್ದಾನೆ. ಐದು ವರ್ಷಗಳ ದೆಹಲಿಯ ಸೇವೆಯ ನಂತರ ಕೇರಳದಲ್ಲಿ ಮೂರು ವರುಷ. ಮದರಾಸಿನಲ್ಲಿ ಮೂರು ವರ್ಷ. ಈಗ ಮಹಾರಾಷ್ಟ್ರಕ್ಕೆ ಹೋಗಿರುವುದು ಪತ್ರಿಕೆಗಳ ಮುಖೇನ ಮತ್ತು ಆತನ ಗೆಳೆಯರ ಮುಖೇನ ತಿಳಿದು ಬರುವುದುಂಟು. ಆತನ ಪ್ರಗತಿಯನ್ನು ಮನಸ್ಸು ಮೆಚ್ಚುತ್ತದೆ; ಹೃದಯ ಹರಸುತ್ತದೆ.

ಆದರೂ, ಆತನಿಗೆ ಹಣೆ ಮಣಿಯುವುದು ತನ್ನ ಬಿಂಕ ಬಿನ್ನಾಣಗಳಿಗೆ ಧಕ್ಕೆ! ಆತನ ಸೇವೆಗಿಂತ ನನ್ನ ಸೇವೆ ಏನೇನೂ ಕಡಿಮೆಯಾದದ್ದಲ್ಲ. ಅಧಿಕತರ ಜವಾಬ್ದಾರಿ ...ಜೀವನ ಮರಣ ಹೋರಾಟ. ಇದನ್ನೆಲ್ಲಾ ಅರಿತುಕೊಂಡು ತಾನೇ ಏಕೆ ಬರಬಾರದು? ಬಂದು ಹೋಗಬಾರದು?

ಒಮ್ಮೆ ಪ್ರೇಮ .. ಇನ್ನೊಮ್ಮೆ ಕೋಪ ...ಮತ್ತೊಮ್ಮೆ ಜುಗುಪ್ಸೆಗಳು ಸುಳಿಸುತ್ತುವ ಪರಿಭ್ರಮಣ ಮಾನಸಿಕ ವೇದಿಯಲ್ಲಿ. ಬಹುಶಃ ಕೈತುಂಬ ಕೆಲಸವಿಲ್ಲದಿದ್ದರೆ ಭಾವನಾತರಂಗಗಳಲ್ಲಿ ಮುಳುಗಿ ತೇಲಿ ಕೊಚ್ಚಿಹೋಗುತ್ತಿದ್ದೆನೋ ಏನೋ ಹೀಗಾದುದು ಒಳ್ಳೆಯದೆ. ಆದರೂ ಸಹ, ಹೃದಯ ಮಂದಿರದಲ್ಲಿ ನಾಟ್ಯವಾಡುವ ಪ್ರೇಮತರಂಗಿಣಿಯ ಮೃದು ಮಧುರ ನೂಪುರಗಳ ಸಪ್ಪಳ ಸ್ಪಷ್ಟವಾಗಿಯೇ ಇರುವಾಗ ಅಲ್ಲವೆನ್ನುವುದಾಗಲೀ ತಳ್ಳಿ ಹಾಕುವುದಾಗಲೀ ಸಾಧ್ಯವೇ ಇಲ್ಲ...ಎಂದುಕೊಳ್ಳುತ್ತಿರುವಾಗ ತಾಯಿ ಮುಖವನ್ನೇ

ನೋಡುತ್ತ 'ನಿನ್ನ ಮುಖವೇಕೆ ಬಾಡಿದೆ ಮಗಳೇ?' ಎಂದೊಮ್ಮೆ ಕೇಳಿದ್ದೂ ಉಂಟು.

ಇಂತಿಂಥ ಪ್ರಸಂಗಗಳೆಲ್ಲಾ ಹೇಗೆ ಪ್ರಾರಂಭವಾಗುವುವೋ, ಮರುಗಳಿಗೆಯಲ್ಲಿಯೇ ಹೇಗೆ ಪುರಾತನವಾಗುವುದೋ ಊಹಿಸುವುದು ಕಷ್ಟವೇ.

ಶಾಲೆಯಿಂದ ಬಂದ ಮಗಳು ಮುಖದ ಮೇಲೆ ಸ್ವೇದಬಿಂದುಗಳ ಸಮೇತ ಬಂದು ಬಿಗಿದಪ್ಪಿದಾಗಲೆಲ್ಲಾ ತಾನು ಮಾಡಬೇಕಾದುದೇನು? ಗಮ್ಯ ಸ್ಥಾನ ಯಾವುದು? ಎಂಬುದರ ಅರಿವು ಮೂಡುತ್ತದೆ. ಅದೇ ಕೂಡಲೇ ಕಮಲ್ ಕಿರಣನ ವಿಚಾರ ಹೀನತೆಗೆ ಮನಸ್ಸು ಅಸಹ್ಯಿಸಿಕೊಳ್ಳುವುದೂ ಸಹಜ.

* * * *

ನಂದಿನಿ ಹೈಸ್ಕೂಲು ಹಂತವನ್ನು ಮುಗಿಸಿ ಕಾಲೇಜಿಗೆ ಸೇರಿದಳು.

ಈ ನಡುವೆ ಎಷ್ಟೋ ಬಾರಿ ಬೆಂಗಳೂರಿಗೆ ಬಂದು ಹೋದ ಕಮಲ್ ಕಿರಣ್ ಒಮ್ಮೆಯೂ ಮನೆಗೆ ಬರಲಿಲ್ಲ. ಅವನು ಬಂದು ಹೋದುದು ಯಾರ ಯಾರ ಮುಖಾಂತರವೋ ತಿಳಿದು ಬರುತ್ತದೆ. ಈಗೀಗ ಎದೆಯ ಹಕ್ಕಿ ಅಷ್ಟೊಂದು ನಿರ್ದಯತೆ ಇರುವ ವ್ಯಕ್ತಿ ಬರದಿದ್ದರೆ ನಷ್ಟವಿಲ್ಲ, ಎಂದು ಕೂಗಿ ಹೇಳುತ್ತದೆ. ರಂಜನಿ ನಿರಾಳವಾಗಿ ಉಸಿರಾಡುತ್ತಾಳೆ

ಆದರೂ, ಅವನು ಬೇರೆ ಯಾವ ಹೆಣ್ಣಿನ ಸಂಗ ಬೆಳೆಸಿಲ್ಲ ಎಂಬುದು ಗೊತ್ತು. ಹಿಂದಿನ ಅಡಿಗೆಯ 'ತಾತ'ನೇ ಅವನೊಂದಿಗೆ ಇನ್ನೂ ಇದ್ದು ನಿಷ್ಠೆಯಿಂದ ನೋಡಿಕೊಳ್ಳುತ್ತಾನೆ ಎಂಬುದೂ ಗೊತ್ತು. ಆತನನ್ನು ಬಹಿರಂಗವಾಗಿ ತುಚ್ಛೀಕರಿಸಿದರೂ ಅಂತರಂಗಿಕವಾದ-ತಾನರಿತುಕೊಳ್ಳದ ಯಾವುದೋ ಮೃದು ಮಧುರ ಭಾವನಾಲಹರಿ ಇನ್ನೂ, ಈಗಲೂ ಜೀವಂತವಿದ್ದು ಕದ್ದಡಗಿ ಕೊಂಡಿದೆಯೆಂಬುದು ಒಮ್ಮೊಮ್ಮೆ ಅಂತರ್ದೃಷ್ಟಿಗೆ ಗೋಚರವಾದರೂ ಏನೋ ಒಂದು ರೀತಿಯಲ್ಲಿ ನಿರ್ಲಕ್ಷಿಸಿ ತನ್ನ 'ಕರ್ತವ್ಯ'ಕ್ಕೆ ಶರಣಾಗುವುದು ಯಾವತ್ತೂ ಇದ್ದದ್ದೆ.

ರಂಜನಿ ಆಸ್ಪತ್ರೆಗೆ ಹೋದಾಗ ಇನ್ನೂ ಬೆಳಗ್ಗೆ ಎಂಟರ ಸಮಯ.

ಆಗಲೇ ಹೊಚ್ಚ ಹೊಸ ಶಿಶುವೊಂದು ಜಗತ್ತಿನ ಬೆಳಕನ್ನು ಕಂಡಿತ್ತು. ರಂಜನಿ ಲೇಬರ್ ವಾರ್ಡಿನಲ್ಲಿ ತಾಯಿಯ ಆರೈಕೆಯಲ್ಲಿಯೇ ಇದ್ದಾಳೆ. ಬೆಳಗಿನ

ದಿನಚರಿ ಆಗಲೇ ಶುರುವಾಗಿದ್ದರೂ ಇನ್ನೂ ಮುಗಿದಿರಲಿಲ್ಲ. ಶ್ವೇತವಸನ ಧಾರಿಣಿಯರೂ, ಇಬ್ಬರು ಡಾಕ್ಟರುಗಳೂ ಕಾರ್ಯನಿರತರಾಗಿದ್ದಾರೆ. ಹಸು ಗೂಸುಗಳ ಅಳುದನಿ ಆಗಾಗ ಕೇಳಿಬರುತ್ತದೆ.

ಗಿಡುಮರಗಳಲ್ಲಿ ಪಕ್ಷಿಗಳ ಸುಮಧುರವಾದ ರಾಗಾಲಾಪನೆಯ ಆಮೋದ; ಒಯ್ಯೊಯ್ಯನೆ ತೀಡಿಬರುವ ತಂಗಾಳಿಯು ಸುಯ್ಯನೆ ಸುಯ್ಯುವ ಸುಯ್ದನಿಯ ಶ್ರುತಿ ; ಮುಗಿಲ ದಿಣ್ಣೆಯನ್ನೇರುತ್ತಿರುವ ಬಾಲಕೋಮಲ ದಿನಮಣಿ; ನಗರಿಯಲ್ಲಿ ಮಾನವ ಸಮಾಜ ಆರಂಭಿಸುತ್ತಿರುವ ದಿನಚರಿ ; ಒಂದೊಂದೂ ರಾಗರಸಮಯವೇ.

ರೊಯ್ಯೀeeee ಯೀeee ! ಧಡ್ ! ಧಡ್ !

ಎಂತಹ ಘನ ಘೋರ ಸದ್ದು ! ಎಲ್ಲಿಯದು ? ಏನಾಯ್ತು ?

ರಸ್ತೆಯಲ್ಲಿದ್ದ–ಮನೆಗಳಲ್ಲಿದ್ದ ಜನಜಂಗುಳಿಯೆಲ್ಲಾ ಸದ್ದು ಬಂದೆಡೆಗೆ ಧಾವಿಸಿದರು. ಆಸ್ಪತ್ರೆಯ ಬಳಿಯಲ್ಲೇ ಎರಡು ವಾಹನಗಳಿಗೆ ಢಿಕ್ಕಾಢಿಕ್ಕಿ ! ಹೋ ! ಎಂದು ಚೀರಿತು ಜನವೃಂದ !

ಕಪ್ಪು ಬಣ್ಣದ ಕಾರಿನಿಂದ ಹೊರ ಎಸೆಯಲ್ಪಟ್ಟ ವ್ಯಕ್ತಿಯನ್ನು ನೋಡಿ ನಾಲ್ಕಾರು ಜನ ಹೊತ್ತು ಆಸ್ಪತ್ರೆಗೆ ತಂದರು ! ಹಣೆಗೆ ಪೆಟ್ಟಾಗಿ ನೆತ್ತರು ಬಸಿದಿದೆ. ಬಲಗಾಲಿನ ಕೀಲು ತಪ್ಪಿದುದೂ ಅಲ್ಲದೆ ಮುಂಗಾಲಿನ ಮುರಿತ. ಸಣ್ಣಪುಟ್ಟ ಗಾಯಗಳೂ ಆಗಿವೆ. ಎಡಗೈ ಕಣಕೈಯೂ ಮುರಿದಿದೆ. ಪ್ರಜ್ಞೆಯೇ ಇಲ್ಲ.

ರಂಜಿನಿ ಕಣ್ಣರಳಿಸಿ ನೋಡುತ್ತಾಳೆ ! ಕಮಲ್ ಕಿರಣ್ ! ಅಯ್ಯೋ ದೇವರೇ ! ಈ ಸ್ಥಿತಿಯಲ್ಲಿ ಬರಬೇಕೆ ??

ತಕ್ಷಣವೇ ಒಳ್ಳೆಯ ಸರ್ಜನರಿಗೆ ಕರೆಕೊಟ್ಟು ಪೋಲೀಸ್ ಉಡುಪನ್ನು ಕತ್ತರಿಸಿ ಕಳಚಿ ತಾನೇ ಚಿಕಿತ್ಸೆ ಕೈಕೊಂಡಾಗ ಹಿರಿಯ ಡಾಕ್ಟರುಗಳಿಬ್ಬರು ಆಗಮಿಸಿದರು. ಎಲ್ಲರೂ ಕೂಡಿ ತುರ್ತು ಚಿಕಿತ್ಸೆ ಕೈಕೊಂಡರು.

ಮೂರನೆಯ ದಿನ ಬೆಳಗ್ಗೆ ಪ್ರಜ್ಞೆ ಮರಳಿ ಕಣ್ಣುಗಳನ್ನು ಬಿರಿಬಿರಿ ಬಿಟ್ಟು ನೋಡುತ್ತ ಕ್ಷೀಣಿತ ದನಿಯಲ್ಲಿ ಕೇಳಿದ ಅವನು "ನಾನೆಲ್ಲಿರುವೆ ?"

"ನೀನು ಸುರಕ್ಷಿತವಾಗಿದ್ದಿ. ಇದು ಆಸ್ಪತ್ರೆ" ಉತ್ತರಿಸಿದವಳು ರಂಜಿನಿ, ದುಃಖಗದ್ಗದಿತ ಕಂಠದಿಂದ.

"ಹಾ ...! ಬಹಳ ನೋವು !" ಸ್ವಲ್ಪ ಹೊತ್ತು ಕಣ್ಣು ಮುಚ್ಚಿಕೊಂಡಿದ್ದು ನಂತರ ಪುನಃ ಕಣ್ತೆರೆದು ನೋಡಿದ.

"ಯಾರು....ಯಾ....?"

"ನಾನು ರಂಜಿನಿ !"

"ಹಾ....ರಂಜಿನಿ !" ಕೈಯನ್ನು ಎತ್ತಲಾರದೇ ಎತ್ತಿ ನೀಡಿದ.

ರಂಜಿನಿಯೂ ತೊಯ್ದ ಕಣ್ಣುಗಳಿಂದ ನೋಡುತ್ತ ಕೈಯನ್ನು ಅದುಮಿ ಹಿಡಿದಳು.

ಪ್ರಮೀಳಾ

Lay up for yourselves treasures in heaven

—The Bible

ಪ್ರಜಾಪ್ರಗತಿ ಪತ್ರಿಕಾಲಯದಲ್ಲಿ ಉಪಸಂಪಾದಕನಾಗಿ ನೇಮಕಗೊಂಡ ಪ್ರಭುಪಾದ ಮಹಡಿಯ ಮೆಟ್ಟಿಲುಗಳನ್ನು ಏರಿ ಬಂದು, ಉಪಸಂಪಾದಕರ ಮಂಡಲಿಗೆ ಕರಗಳನ್ನು ವಿನಯದಿಂದ ಜೋಡಿಸಿಕೊಂಡು ತನ್ನನ್ನು ತಾನೇ ಪರಿಚಯಿಸಿಕೊಳ್ಳುತ್ತ ನುಡಿದ "ನನ್ನ ಹೆಸರು ಪ್ರಭುಪಾದ.... ನೀವು ಪ್ರಭು ಎಂದು ಕರೆದರೆ ಸಾಕು. ಮೊನ್ನೆ ನಾನು ತುಂಬಾ ಅವಸರದಲ್ಲಿದ್ದುದರಿಂದ ತಮ್ಮಗಳ ಪರಿಚಯ ಮಾಡಿಕೊಳ್ಳಲಾಗಲಿಲ್ಲ ದಯವಿಟ್ಟು ಕ್ಷಮಿಸಿ ..."

"ಪರವಾಗಿಲ್ಲ ಬನ್ನಿ !" ಅನೇಕ ದನಿಗಳು ಒಮ್ಮೆಗೇ ಸ್ವಾಗತಿಸಿದುವು.

ಅನಂತರ ಆ ಐವರನ್ನೂ ಪರಿಚಯ ಮಾಡಿಕೊಂಡು ತನ್ನ ಮೇಜನ್ನು

ಆಕ್ರಮಿಸಿಕೊಂಡ ಪ್ರಭು. ಹಿಂದಿನ ದಿನಗಳಲ್ಲಿ ಪ್ರಕಟಗೊಂಡ ಪತ್ರಿಕೆ-ಸಾಪ್ತಾಹಿಕ-ಮಾಸಿಕಗಳು ಮೇಜಿನ ಮೇಲಿದ್ದುವು. ಪ್ರಭು ಪತ್ರಿಕೆ ಕೈಗೆ ತೆಗೆದುಕೊಂಡ. ಅದರ ಉದ್ದಗಲಕ್ಕೂ ವಿಷಯ ತೃಷಿತ ದೃಷ್ಟಿ ಹರಿದಾಡಿತು. ದೇಶವ್ಯಾದ್ಯಂತ ಕೊಲೆ-ಸುಲಿಗೆ-ದರೋಡೆ ಮುಂತಾದ ಕುವಿಚಾರಗಳ ಸಂಗ್ರಹವೇ ಅಲ್ಲಿತ್ತು. ಎರಡು ಮೂರು ಕಡೆಗಳಲ್ಲಿ ಗಂಡಂದಿರು ಮಡದಿಯರನ್ನು ಕಟು ಹಿಂಸೆಗೆ ಗುರಿಪಡಿಸಿ ಕೊಲೆಮಾಡಿದ್ದಾರೆ. ಒಬ್ಬ ದೀನೆ ಮೂರು ಮಕ್ಕಳೊಂದಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಒಡನೆ ಸುತ್ತುಮುತ್ತಿನ ಗೋಡೆಯ ಮೇಲೆಲ್ಲಾ, ಮಂಜುಳೆಯ ಮುಖಬಿಂಬ ಸುಳಿಸುಳಿದಳಿಯಿತು. ಪಾದರಸದಂತಹ ಚುರುಕು ಬುದ್ಧಿಯ ಬಿ. ಎ ಓದಿದ ಮಾನಿನಿ! ಅವಳಿಗೆ ನಾನು ಗೈದ ಅಪರಾಧ....? ಹರೆ! ಶ್ಯಾಂ! ಘೋರಾತಿಘೋರ ಅಪರಾಧ! ನಾನು ತಪ್ಪು ಮಾಡಿರುವುದು ನಿಜ....ನೀನು ಯಾವ ಶಿಕ್ಷೆ ಕೊಟ್ಟರೂ ಸರಿಯೆ. ಶಿರವೊಡ್ಡಿ ಅನುಭವಿಸುವೆ!

ಕಾಂಚನಾ! ಕೆಟ್ಟ ಹೆಂಗಸು ಕಾಂಚನಾ! ಕಾಂಚನ ಮೃಗದಂತೆಯೇ ನನ್ನ ಮುಂದೆ ನಲಿದಾಡಿ ನನ್ನ ಮನವನ್ನು ಸೂರೆಗೊಂಡಳು. ಆ ದುಷ್ಟೆಯಿಂದ ಶಿಷ್ಟ ಕೆಟ್ಟ! ಇನ್ನು ಮಂಜುಳ ಒಲಿಯಬಲ್ಲಳೇ?

ಎದೆಯಾಳದಿಂದ ನಿಟ್ಟುಸಿರೊಂದು ತನಗರಿಯದಂತೆಯೇ ಹೊರ ಹೊಮ್ಮಿತು.

ಒಳಪುಟಗಳಲ್ಲಿ ಕಣ್ಣಾಡಿಸಿದ. ವಿಚಾರ ವಿಪ್ಲವ ಲೇಖನಗಳು.... ಜಾಹೀರಾತು ಪ್ರಪಂಚ....ಇತ್ಯಾದಿ ಎಲ್ಲವೂ ಸಮರ್ಪಕವೇ. ಸಧ್ಯ ಬೆಳ್ಳಿ ಹಬ್ಬ ಆಚರಿಸುತ್ತದೆ ಎಂದರೆ ತುಂಬಿದ ಅನುಭವ...

ಸಾಪ್ತಾಹಿಕ ತೆಗೆದುಕೊಂಡ ಅದರಲ್ಲಿ ಪ್ರಮೀಳ ಎಂಬ ಮಹಿಳೆಯ ಕಥೆ ಮತ್ತು ಚುಟುಕಗಳು ಕಂಡು ಬಂದುವು. ಮಾಸಿಕದಲ್ಲೂ ಅವಳ ಲೇಖನಗಳಿವೆ. ಶೈಲಿ ಮನೋರಂಜಕ. ಅವಳ ಭಾವ ನಿರೂಪಣೆ ಯಾವ ರೀತಿಯಲ್ಲೂ ಅತಿರೇಕಕ್ಕೆ ಹೋಗದೆ ಸುಮನೋಹರವಾದ ಶೈಲಿಯಲ್ಲಿ ಹರಿದಿರುವುದು ಸತ್ಯ ಸುಂದರ. ಮನಮಂಥನ-ಸಹಚಿಂತನ ಇತ್ಯಾದಿ....ಇತ್ಯಾದಿ, ಭಲೆ! ಪ್ರಮೀಳ! ನಿಜವಾಗಿಯೂ ಪ್ರಾಜ್ಞೆ! ಹೆಸರು ನೋಡಿದರೆ....?

ಪ್ರಭು ಲೇಖನವೊಂದನ್ನು ತೆಗೆದುಕೊಂಡು ಎಡಿಟ್ ಮಾಡಿ ಚೊಕ್ಕ

ವಿಷಯ ನಿರೂಪಣೆ ಮಾತ್ರ ಉಳಿಸಿ ಉಳಿದ ವ್ಯರ್ಥ ಸಾಹಿತ್ಯವನ್ನು ಹೊಡೆದು ಪ್ರಕಟಣೆಗೆ ಅಣಿಗೊಳಿಸಿದ.

"ಹರೇ! ಶ್ಯಾಂ! ಕೊನೆಗೂ ಸಾರ್ಥಕ ಜೀವನ!" ಮನಸ್ಸು ಉಲಿಯಿತು.

* * * *

ಮೃದು ಮಂದ ಪಾದ ಸಪ್ಪಳ ನೇರವಾಗಿ ಮೇಜಿನ ಬಳಿಗೇ ಬಂದು ನಿಂತಿತು.

ಪ್ರಭು ಗಂಭೀರವಾಗಿ ತಲೆಯೆತ್ತಿ ನೋಡಿದ.

"ನೋಡಿ ಸಾರ್! ಲೇಖನ ಇರಬೇಕಾದದು ಇಲ್ಲಿ. ಜಾಹೀರಾತು ಹಚ್ಚಬೇಕಾದುದು ಆ ಕಡೆ."

ಮೆಲುದನಿ ಮೃದುವಾಗಿ ಕರ್ಣಪಟಲವನ್ನು ತಾಗಿತು. ತೋರು ಬೆರಳಿಂದ ತೋರುತ್ತ ಇಪ್ಪತ್ತೈದರ ಪ್ರೌಢ ಹೆಣ್ಣೊಂದು ವಿಷಯವನ್ನು ಮುಂದಿಟ್ಟಿತು. ಪ್ರಭು ಅವಳ ಸಲಹೆಯನ್ನು ಮಾನಿಸಿದ. ಒಂದು ಕಾಲ ದಲ್ಲಿ ಅವನ ರೀತಿಯೇ ಬೇರೆ. ಯಾರ ಸಲಹೆಗಳೂ ಅನುಚಿತ ಎಂಬಷ್ಟು ಗರ್ವ. ಈಚೆಗೆ ನಾನು ಪಾಠ ಕಲಿತಿರುವೆ ಎಂಬುದೊಂದು ಸಂತಸದ ಸಂಗತಿ. ಮುಂದೆಯೂ ಹೀಗೆಯೇ ಸುಧಾರಿಸಿಕೊಳ್ಳಬಲ್ಲೆನಾದರೆ.....

ಮನಃಪಕ್ಷಿ ಗಗನಗಾಮಿಯಾಗಿದ್ದುದರಿಂದಲೋ ಏನೋ....ಕೆಲವು ತಪ್ಪುಗಳು ಸಂಭವಿಸಿದುವು. ತಕ್ಷಣ ಅವನು ಮನವನ್ನು ಕೆಲಸದ ಕಡೆ ನೆಟ್ಟ. ಮುಂದಿನ ಮಾಸಿಕಕ್ಕಾಗಿ ಆಗಲೇ ಪ್ರಮಿಳಾಳ ಲೇಖನ ಬಂದಿದೆ. ಅವಳ ಕೃತಿಯನ್ನು ಓದದೆಯೂ ಪ್ರಕಟಣೆಗೆ ಕಳುಹಿಸುವಷ್ಟು ಪ್ರಭುದ್ಧ.

"ಇವರ ಲೇಖನ ತುಂಬಾ ಮೆಚ್ಚಿಕೊಳ್ಳುತ್ತಾರೆ ಜನ. ಒಳ್ಳೆಯ ಲೇಖನ ಗಳಿಂದಾಗಿಯೇ ಪತ್ರಿಕೆ ಪ್ರಸಿದ್ಧಿ. ಇಂಥ ಲೇಖಕರಿಗೆ ಉತ್ತೇಜನ ನೀಡ ಬೇಕಾದುದು ನ್ಯಾಯ"

"ಎಷ್ಟು ದಿನಗಳಿಂದ ಬರೆಯುತ್ತಾರೆ ಈ ಲೇಖಿಕೆ." ಕುತೂಹಲದಿಂದ ಹೊಮ್ಮಿತು ಪ್ರಶ್ನೆ.

"ಬಹುಶಃ ನಾಲ್ಕಾರು ವರ್ಷಗಳಿಂದ. ಇವರ ಕಥಾ ನಿರೂಪಣೆ-

ಭಾಷೆಯ ಶೈಲಿ ಬಲು ಸುಂದರ. ಈಗಿನ ಬಹುತೇಕ ಮಂದಿ ಇವರ ಎತ್ತರಕ್ಕೆ ಏರಲಾರರು. ಇದನ್ನು ಬರೆಹಗಾರರು ಯೋಚಿಸದೇ ಹೋದರೆ ಸಾಹಿತ್ಯ ಬರಡಲ್ಲವೇ ? ಕಲಿತವರ ಈಗಿನ ರೀತಿಯೇ ಅರ್ಥವಾಗುತ್ತಿಲ್ಲ!"

ಆ ಮಾತು ಅಂತರಾಳಕ್ಕಿಳಿಯಿತ್ತಲೂ ಮನಸ್ಸು ನೀರಿನಿಂದ ಹೊರ ತೆಗೆದ ಮೀನಿನಂತೆ ಚಡಪಡಿಸಿತು.

ಅದೇ ಕಂಠ ಪುನಃ ಮೊಳಗಿತು "ಮನ ಮಥಿಸದಿದ್ದರೆ ಅನುಭೂತಿ ಎಲ್ಲಿ ಸ್ವಾಮಿ?"

"ವಿಚಾರ ಶಕ್ತಿ ಬೆಳೆಯದಿದ್ದರೆ ಆಗುವುದೇ ಹೀಗೆ...."ಗಂಟಲನ್ನು ಯಾರೋ ಅದುಮುತ್ತಿರುವಷ್ಟು ಹಿಂಸೆ....ಪ್ರಾಣಹಿಂಸೆ.

ಪ್ರಭು ಉಗುಳು ನುಂಗಿ ಗಂಟಲು ಸರಿಪಡಿಸಿಕೊಂಡ. ಎದೆಯಾಳದಲ್ಲಿ ಬಿಸಿಯುಸಿರು ಸಿಕ್ಕಿಕೊಂಡಷ್ಟು ಬಾಧೆ. ಮುಖಬಿಂಬದ ಮೇಲೆ ಮಾನಸಿಕ ತಳಮಳ ಮುದ್ರಿತವಾಯಿತು ದಪ್ಪ ದಪ್ಪ ಅಕ್ಷರಗಳಲ್ಲಿ.

ಕೆಲಸ ಕುಂಟುತ್ತ ಸಾಗಿತು ಕುಂಟು ಕುದುರೆಯ ನಡಿಗೆಯಂತೆ... ಹಾ!

* * * *

ಕಟ ಕಟ, ಕಟ, ಕಟ....

"Yes please!"

ಬಾಗಿಲನ್ನು ತಳ್ಳಿ ಒಳ ಬಂದವರು ಜಾಹೀರಾತು ವಿಭಾಗದ ಮ್ಯಾನೇಜರು.

"ಸಾರ್! ಜಾಹೀರಾತನ್ನು ಕೊಡುವಾಗ ಒಳ್ಳೆಯ ಸಾಹಿತ್ಯವನ್ನೂ ಕೊಡಬೇಕಾಗುತ್ತದೆ. ಇದಕ್ಕೊಂದು ಒಳ್ಳೆಯ ಸಾಹಿತ್ಯ ಬರೆದುಕೊಡಿ; ಮಧ್ಯಾಹ್ನ ಅಚ್ಚಿಗೆ ಹೋಗುತ್ತದೆ."

ಅವನು ಒಂದು ಫೋಟೋವನ್ನು ಮುಂದಿಟ್ಟ. ಹರಿ! ಶಾಂ! ಮಂಜುಳೆಯ ಚಿತ್ರ!! ಆತನ ಮುಂದೆ ತನ್ನ ಯಾವೊಂದು ಭಾವವನ್ನೂ ವ್ಯಕ್ತಪಡಿಸದೆ ಗಂಭೀರವಾಗಿ ನೋಡಬೇಕು....ನೋಡಿದ. ಸ್ನೋ ಒಂದರ ಜಾಹೀರಾತಿ

ಗಾಗಿ ಕೊಟ್ಟ ಚಿತ್ರ. ದಿನದಿನಕ್ಕೂ ಬೆಳ್ಳಗಾದಂತೆ ತೋರುವ ನಾಲ್ಕು ಚಿತ್ರಗಳ ಗುಚ್ಛ.

ಹರೇ! ಶ್ಯಾಂ! ನಾನು ಎಂತಹ ಮೂರ್ಖ! ಚೆನ್ನದಂತಹ ಸಂಸಾರಕ್ಕೆ ಕಿಚ್ಚು ಹಚ್ಚಿದೆ!

"ಸಾರ್....ಸಾರ್!"

"ನೀವು ಏನೋ ಯೋಚಿಸುತಿದ್ದೀರಿ....ಇದು ಇನ್ನೊಂದು ಗಂಟೆಯೊಳಗಾಗಿ ತಯಾರಾಗಬೇಕು."

"ಆಗಲಿ...."

ಅವನು ಹೊರಟ. ಹಿಂದಿನಿಂದ ನಯನದ್ವಯಗಳು ಬೀಳ್ಕೊಟ್ಟುವು.

ಪ್ರಭು ಆ ದುರದೃಷ್ಟಕರ ದಿನಗಳನ್ನು ನೆನೆದ. ತಾನವಳನ್ನು ನಿಕೃಷ್ಟವಾಗಿ ಕಾಣುತಿದ್ದ ರೀತಿ ಚಿತ್ರವತ್ತಾಗಿ ಮನದಲೆಯಲ್ಲಿ ತೇಲಿಹೋಯಿತು. ಚಿತ್ರಗಳನ್ನು ಸಾಲಾಗಿ ಇಟ್ಟು ಬರೆಯಲಾರದ ಕೈಯಿಂದ ಬರೆಯತೊಡಗಿದ. ಒಂದು ಪಂಕ್ತಿಯಾದರೂ ಸುಂದರವಾಗಿ ಮೂಡಬೇಕೆ? ಬರೆದು-ಹೊಡೆದು ಮೂರು ನಾಲ್ಕು ಪಂಕ್ತಿಗಳ ಸಾಹಿತ್ಯವನ್ನು ಬರೆದು ಮುಗಿಸಿದರೂ ಒಳಗುದಿಯುದ್ಧ ನಡೆದೇ ಇತ್ತು....ಈಗ ಅವಳು ಸರ್ವ ಸ್ವತಂತ್ರೆ: ಹಾರುವ ಹಕ್ಕಿ. ನನ್ನೊಂದಿಗಿದ್ದಾಗ....?

ಎದೆಯಾಳದಿಂದ ನಿಟ್ಟುಸಿರೊಂದು ಹೊರಬಿತ್ತು. ಬರೆದು-ಹೊಡೆದು ಸಲಸಲಕ್ಕೂ ಸೋತ ಕಾಗದಗಳನ್ನು ಹರಿದು ಬುಟ್ಟಿಯಲ್ಲಿ ಚೆಲ್ಲಿ, ಸಾಹಿತ್ಯವನ್ನು ಪುನಃ ಪುನಃ ಓದಿದ. ಅವಳ ಲಾವಣ್ಯ ಹೇಗೆ ಹೆಚ್ಚಿತು ಎಂಬುದು ಲೇಖನಕ್ಕೆ ವಿಷಯ. ಅದಷ್ಟನ್ನು ಬರೆಯಲು ಒಂದು ಗಂಟೆಯೇ ಕಳೆದಿತ್ತು. ನಿಜಕ್ಕೂ ಲಜ್ಜೆಗೇಡಿನ ವಿಷಯ.......! ದಿಕ್ಕೆಟ್ಟ ಮನದ ತುಂಬೆಲ್ಲಾ ಮಂಜುಳೆಯ ಚಿತ್ರ. ಗೋಡೆಯ ಮೇಲೆಲ್ಲಾ ಸುಳಿಸುಳಿದಾಡುವ ಮುಖಬಿಂಬ.

ಪಟಪಟ ಪಾದರಕ್ಷೆಗಳ ಸದ್ದು ಮಾಡುತ್ತ ಮ್ಯಾನೇಜರ್ ಆಗಮಿಸಿದ. ಅವನು ಸಾಹಿತ್ಯವನ್ನು ನೋಡಿ ಪುನಃ ಪುನಃ ಓದಿ "ಇನ್ನೂ ಸ್ವಲ್ಪ ಸುಂದರವಾಗಿದ್ದರೆ ಚೆನ್ನಾಗಿತ್ತು ಸಾರ್. ವಿಷಯ ನಿರೂಪಣೆ ನಾಲ್ಕೇ ಪಂಕ್ತಿಯಾದರೂ ಶಬ್ದ ಜೋಡಣೆ ಇನ್ನಷ್ಟು ರಸವತ್ತಾಗಿದ್ದಿದ್ದರೆ ಒಳ್ಳೆಯದಿತ್ತು. ಏನು ಹೇಳುತ್ತೀರೀ?"

"ಬನ್ನಿ...ಹೇಗೆಯೋ ಕುಳಿತುಕೊಳ್ಳಿ. ಏನು ಮಾಡಬಹುದೋ ಾಡೋಣ."

ವ್ಯಾನೇಜರ್ ಬಳಿಯಲ್ಲಿ ಕುಳಿತುಕೊಂಡ. ಇಬ್ಬರೂ ಕೂಡಿ ೀರೊಂದು ಕಾಗದದ ಮೇಲೆ ರಸವತ್ತಾಗಿ ಬರೆದು ಪ್ರತಿ ಮಾಡಿದರು.

"ಈಗ ಸರಿಹೋಯಿತು ನೋಡಿ ಸಾರ್!"

ಈಗಿನದು ನಿಜವಾಗಿಯೂ ಉತ್ತಮವಾಗಿತ್ತು. ಪ್ರಭು ತಲೆಯಾಡಿಸಿ ಪ್ಪಿಗೆ ಸೂಸಿದ. ಮನಸ್ಸು ಸೋಲು ಒಪ್ಪಿಕೊಂಡಿದ್ದರೂ ಬಹಿರಂಗವಾಗಿ ನೂ ಹೇಳಲಿಲ್ಲ. ವ್ಯಾನೇಜರ್ ಚಿತ್ರಗಳ ಸಹಿತ ಹೊರಟ ತನ್ನ ಹೃದಯ ನ್ನೇ ಒಯ್ದಂತಾಯಿತು; ಪ್ರಭು ಆತ್ಮ ವಿಸ್ಮೃತಿಯಲ್ಲಿ ಮೈಮರೆತ. ಾವುದೋ ಕಾಣದ ಕೈ ಹೃದಯವನ್ನು ಹಿಸುಕಿತು.

ಹರೆ! ಶ್ಯಾಂ! ನಾನು ಎಂತಹ ಪರಿಸ್ಥಿತಿಯಲ್ಲಿ ಸಿಕ್ಕಿಕೊಳ್ಳುತ್ತಿರುವೆ? ರದಕ್ಷಿಣೆಯ ಸಹಿತ ಕೈಹಿಡಿದ ಪತ್ನಿಯನ್ನು ಕೈಬಿಟ್ಟು ಅವಳ ವಿಲಾಸವನ್ನು ೂರದಿಂದ ನೋಡುವಂತಾಯಿತೇ? ನಾನು ಇಲ್ಲಿಗೆ ಬರದೇಹೋಗಿದ್ದರೆ ೆನ್ನಾಗಿತ್ತು. ಅವಳ ಪಾವಿತ್ರ್ಯವನ್ನು ಪ್ರಶ್ನಿಸುವ ಹಕ್ಕು ನನಗಿಲ್ಲ ನಿಜ. ದರೂ....

ಯೋಚನೆ ತೇಜಿ ಅಲ್ಲಿಗೆ ಬಂದು ನಿಂತುಹೋಯಿತು. ಕಣ್ಣುಗಳು ಂಜು ಮಂಜು....!

ಅವಳನ್ನು ತೊರೆದು ಹೋಗಿ ಐದು ಸಂವತ್ಸರಗಳು ಕಳೆದುಹೋಗಿವೆ. ಷ್ಟು ಕಾಲವೂ ಅವಳು ಒಂಟಿಯಾಗಿಯೇ ಉಳಿದಿದ್ದಾಳೆಯೇ? ಅಥವಾ ಾರನ್ನಾದರೂ....ಹಾ!

* * * *

ಟೈಪ್‌ರೈಟರಿನ ಕಟಕಟ ಸದ್ದು.

ಪ್ರೆಸ್ಸಿನ ಗಡಕ್-ಗಡಕ್ ಸದ್ದು.

ಮಾತಿನ ಮೊರೆತ. ಪಾದಗಳ ಸಪ್ಪಳ. ಒಂದೇ, ಎರಡೇ ಕಿವಿಗಳನ್ನು ಡಚಿಕ್ಕುವಂತಹ ಸದ್ದುಗಳ ಸರಮಾಲೆ. ಆ ಗದ್ದಲದಿಂದ ದೂರಾಗ ಬಯಸಿ

ದರೂ ಅದು ಸಾಧ್ಯವಾಗದ ಮಾತು. ಆ ಗದ್ದಲದೊಂದಿಗೇ ಹೊಂದಿಕೊಂಡ ಬದುಕು....ಅದರಿಂದಲೇ ಜೀವನೋಪಾಯ. ಅದರಿಂದಲೇ ಶ್ರೇಯಸ್ಸು.

ಸುದ್ದಿಯನ್ನು ಮುಟ್ಟಿಸಬರುವವರು ಲೇಖನಗಳನ್ನು, ತರುವವರು, ಟಪ್ಪಾಲಿನವರು, ಗಿರಾಕಿಗಳು ಹೀಗೆ ಹೊರಗಡೆಯಿಂದ ಬರುವವರೇ ಹೆಚ್ಚು. ಜನವೇ ಜನ. ತಲೆಯಲ್ಲಿ ಆನೆಗಳು ಸುಗ್ಗಿದಷ್ಟು ಗೊಂದಲ.

ಪ್ರಭು ತಲೆಯಲ್ಲಿ ವಿಚಾರವಿಪ್ಲವ ನಡೆಯುತಿದ್ದಂತೆಯೇ ಕೆಲಸ ಆರಂಭಿಸಿದ. ಮನಃಪ್ರಾಣಗಳಲ್ಲಿ ಅತೀವ ಸಂಕಟದ ಝರಿಯು ಪ್ರಸರಣ. ಮೈಯಲ್ಲಿ ಏನೋ ಒಂದು ರೀತಿಯ ಆಲಸ್ಯ, ಇನ್ನೇನೋ ಒಂದು ರೀತಿಯ ಜಡತ್ವ, ಮತ್ತೇನೋ ಒಂದು ರೀತಿಯ ಜುಗುಪ್ಸೆ....ತನ್ನನ್ನು ಅತ್ತಿಂದಿತ್ತ ಎಳೆದಾಡುವಷ್ಟು ಹಿಂಸ್ರಕ....! ಹೇಗಾದರೂ ಮನಃಚಿತ್ತಗಳನ್ನು ಹತೋಟಿಯಲ್ಲಿಟ್ಟುಕೊಂಡು ಜೀವನಪುಟವನ್ನು ತೆರೆಯುಬೇಕು ಎಂಬ ಅಭಿಲಾಷೆಯೂ ಕೂಡ. ಅಂದಮೇಲೆ, ಪ್ರಯತ್ನಪೂರ್ವಕವಾಗಿ ಹೊಸ ತಿರುವು ಕೊಡಬೇಕು ಎಂದು ಬಾರಿ ಬಾರಿಗೂ ಅಂದುಕೊಳ್ಳುತಿದ್ದರೂ ಪ್ರತಿ ಸಲವೂ ಸೋಲು ಕಟ್ಟಿಟ್ಟ ಬುತ್ತಿ....ಜೀವನಮಾರ್ಗಯೋಗವೂ ಕಡುಕತ್ತಲೆ.

ಕೆಲಸದ ಮೇಲೆ ಮನವನ್ನು ದೃಢವಾಗಿ ಸ್ಥಿರೀಕರಿಸುವುದೊಂದೇ ದಾರಿ. ಅಂತಲೇ ಪ್ರಭು ಎಲ್ಲರಿಗಿಂತ ಮುಂದಾಗಿ ಕೆಲಸಕ್ಕೆ ಬಂದು, ಹಿಂದಾಗಿ ಹೊರಡುವ. ಅವನ ಬಹುತೇಕ ಹೊತ್ತೆಲ್ಲ ಪತ್ರಿಕಾಲಯದಲ್ಲಿಯೇ ಕಳೆಯುತ್ತದೆ. ಆದರೂ, ಕದಡಿದ ಮನಕ್ಕೆ ಶಾಂತಿ ಕೂಡಿಬರಲಿಲ್ಲ. ಒಂದೆಡೆ ಕಾಂಚನಾ ಇನ್ನೊಂದೆಡೆ ಮಂಜುಳಾ ಇವರ ರುದ್ರ ನಾಟ್ಯರಂಗ ಚಿತ್ರಕಲ್ಪ.

ಒಂದು ವೇಳೆ ಮಂಜುಳಾ ಮನ್ನಿಸುವುದಾದರೆ....? ಅದು ಸಾಧ್ಯವೇ?

ಪ್ರಶ್ನೋಪಪ್ರಶ್ನೆಗಳ ಪರಿಭ್ರಮಣ ಮನಃತರಂಗಗಳಲ್ಲಿ.

ಕೃಷ್ಣ ಕಾಗದ ಪತ್ರಗಳನ್ನು ಸರಿಗಾಗಿ ತಂದು ಮುಂದಿಟ್ಟು, ಮೇಜಿನ ಮೇಲಿದ್ದ ಪ್ರಮಿಳೆಯ ಚುಟಕಗಳನ್ನು ಓದಿ ನೋಡಿ ಅಂದ "ಪ್ರಮೀಳಾ ಒಳ್ಳೆಯ ಬರಹಗಾತಿ ಸಾರ್! ಅವರು ಹೇಗೆ ಸಮಯ ಹೊಂದಿಸಿಕೊಳ್ಳುತ್ತಾರೋ ದೇವರಿಗೇ ಗೊತ್ತು! ಉದ್ಯೋಗಸ್ಥೆ ಬೇರೆ"

"ಪೂರ್ವಜನ್ಮದ ಪುಣ್ಯ."

"ಇದ್ದರೂ ಇರಬಹುದು ಸಾರ್! ಕಟ್ಟಾ ಕೆಲಸಗಾತಿ; ಪರಿಶ್ರಮವಿಲ್ಲದೆ

ಯಾವುದೂ ಆಗುವುದಿಲ್ಲ ಬಿಡಿ. ಪುಣ್ಯ ಮತ್ತು ಪರಿಶ್ರಮ ಒಗ್ಗೂಡಿರುವುದ ರಿಂದ ಚಿತ್ರಕಲ್ಪ ಗಗನಕ್ಕೆ!"

"ಎಲ್ಲಿ ಕೆಲಸ ಮಾಡುತಿದ್ದಾರೆ?"

"ಶಾರದಾ ವಿದ್ಯಾಲಯದಲ್ಲಿ. ಸ್ಕೂಲು ಮತ್ತು ಕಾಲೇಜು ಎರಡರಲ್ಲೂ ಕೆಲಸ. ಮೇಲಾಗಿ ಸಾಹಿತ್ಯ ಸೇವೆ. ಹೇಗೆ ಸಮಯ ಹೊಂದಿಸಿಕೊಳ್ಳು ತ್ತಾರೋ ದೇವರಿಗೇ ಗೊತ್ತು...ಬಹಳ ಚುರುಕು ಸ್ವಭಾವ."

ಒಡನೆ ಮಡದಿ ಮಂಜುಳಾ ಚಿತ್ತ ಭಿತ್ತಿಯಲ್ಲಿ ತೇಲಿ ಬಂದಳು. ಅವಳೂ ಅಷ್ಟೆ. ಎಂತಹ ಚುರುಕು? ಚೆಂಡಿನಂತೆ ಪುಟಿಪುಟಿಯುವ ಚುರುಕು, ಅಂತಹವಳನ್ನು ಕೈಬಿಟ್ಟದ್ದು ಅಜ್ಞಾನ ಪ್ರೇರಣೆಯೋ ಅಥವಾ ಶನೀಶ್ವರನ ಪ್ರೇರಣೆಯೋ ಅಥವಾ ನನ್ನ ಗ್ರಹಚಾರವೊ ದೇವರಿಗೇ ಗೊತ್ತು! ಭಗವಂತ ಇನ್ನಾದರೂ ಪ್ರಸನ್ನನಾದರೆ....

*   *   *   *

ಢನ್....ಢನ್....ಢನ್....ಢನ್!

ಗಂಟಾರವ....!

ಸಮಯನಿಷ್ಠೆಯನ್ನು ಸಾರಿ ಹೇಳುವಂತೆ ಆ ಮಧುರಲಹರಿ ಕರ್ಣ ಪಟಲದ ಮೇಲೆ ಮೊಳಗುತ್ತಲೇ ಇದೆ. ಪ್ರಭು ಒಂದು ಕ್ಷಣ ಯೋಚಿಸಿ, ಒಂದು ಬಿಸಿ ಕಾಫಿಗಾಗಿ ಹೊರಹೋಗಿ ಬರೋಣವೆಂದು ಹೊರಟ. ಅದೇ ಹೆದ್ದಾರಿಯಲ್ಲಿ ನಾಲ್ಕಾರು ಅಂಗಡಿಗಳ ಆಚೆ ಕಾಮತ್ ಹೋಟೆಲು. ಕೆಲವೇ ನಿಮಿಷಗಳಲ್ಲಿ ಹೋಟೆಲ್ ಮುಟ್ಟಿದ. ಒಳಾಂತರಕ್ಕೆ ಪದಾರ್ಪಣೆ ಮಾಡು ತ್ತಲೂ ದೃಷ್ಟಿ ಒಂದೇ ಕ್ಷಣದಲ್ಲಿ ಕೊಠಡಿಯನ್ನು ಅಳೆದರೆ ಎಲ್ಲಾ ಮೇಜುಗಳೂ ಭರ್ತಿ. ಸ್ತ್ರೀ ಪುರುಷರ ನಗೆ ಮಾತುಗಳ ಮರ್ಮರದೊಂದಿಗೆ ಸಂತಸ ಉಕ್ಕುವಂತಹ ಕೂಟ. ತನ್ನ ಬರಡು ಜೀವನವನ್ನು ನೆನೆಯುತ್ತ ಮೇಜು ಗಳನ್ನು ದಾಟಿಕೊಂಡು ಮುಂದೆ ಮುಂದೆ ಹೋಗುತಿದ್ದಂತೆ ಮಾಣಿ ಅವನನ್ನು ಪಕ್ಕದ ಕೊಠಡಿಗೆ ಕರೆದೊಯ್ದ. ಅಲ್ಲಿಯೂ ಎರಡು ಕುರ್ಚಿ ಮಾತ್ರ ಖಾಲಿ, ಉಳಿದುದೆಲ್ಲಾ ಭರ್ತಿ. ಎಲ್ಲಾ ಮೇಜುಗಳಲ್ಲೂ ದಂಪತಿಗಳ ಕೂಟ... ಎದೆಯ ಜೇಗೆಗೆ ಕಿಚ್ಚು ಹಚ್ಚುವಂತೆ.

ಮಾಣಿಗೆ ಕಾಫಿ ತರಲು ಹೇಳಿದ ಪ್ರಭು. ಒಂದು ಕ್ಷಣ ಸುತ್ತಮುತ್ತ ಹರಿದ ನೋಟ ತಕ್ಷಣ ಹಿಂದಿರುಗಿತು.

ಸ್ವಲ್ಪ ಹೊತ್ತು ಉರುಳಿರಲಿಕ್ಕಿಲ್ಲ. ಅದೇ ವೈಟರ್ ಇನ್ನೊಬ್ಬ ಗಿರಾಕಿಯನ್ನು ಕರೆತಂದ. ನೋಡಿದರೆ ತನ್ನ ಬಾಲ್ಯದ ಆತ್ಮೀಯ ಗೆಳೆಯ ಮಾಧು! ಒಡನೆಯೇ ಅಂತರಾತ್ಮ ಉಲಿಯಿತು. ಹರೆ! ಶ್ಯಾಂ! ಎಂಥ ಸುದಿನ! "ಹಲ್ಲೊ! ಪ್ರಭು!" ಕೈಚಾಚಿದ ಗೆಳೆಯ.

ಪ್ರಭು ಎದ್ದು ಸಂತಸದಿಂದ ಕೈಕುಲುಕಿ "ನಿನಗಾಗಿಯೇ ಒಂದು ಕುರ್ಚಿ ಕಾದಿಟ್ಟಿರುವೆ!" ಎಂದ. ಹಾಸ್ಯ ಪ್ರಧಾನವಾಗಿ ಪರಸ್ಪರ ದರ್ಶನ ಲಾಭದಿಂದ ಮುಖಬಿಂಬಗಳು ಹೂವಿನಂತೆ ಅರಳಿದುವು.

"ಏನಯ್ಯಾ ಎಷ್ಟು ದಿನದ ಮೇಲೆ ನಿನ್ನ ಭೇಟಿ?"

"ಹೌದು ಪ್ರಭೂ! ಬಹಳ ದಿನಗಳಾದುವು. ನೀನು ಬೊಂಬಾಯಿಯಲ್ಲಿದ್ದೆ ಎಂದು ಕೇಳಿದ್ದೆನಲ್ಲಾ....?"

"ಹೌದು ಮಾಧು! ಅಲ್ಲಿ ಐದು ವರ್ಷ ಇದ್ದು ಇಲ್ಲಿಗೆ ಬಂದು ಕೆಲವು ದಿನಗಳಷ್ಟೆ. ನೀನು ಎಲ್ಲಿರುವೆ?"

"ನಾನು ಆಗಿನಿಂದಲೂ ನಾಗಪುರವೇ. ಇಲ್ಲಿಗೆ ಬರದೆ ಏಳು ವರ್ಷಗಳೇ ಆಗಿತ್ತು. ಈಗ ಸ್ವಲ್ಪ ಕೆಲಸ ಬಿದ್ದುದರಿಂದ ಬಂದೆ. ಅಂತೂ, ನಿನ್ನನ್ನು ನೋಡಿ ಬಹಳ ಸಂತೋಷ?"

"ನನಗೂ ಅಷ್ಟೆ ಕಣಯ್ಯಾ....! ಇದಂತೂ ಸುದಿನ ಎನ್ನಬಹುದು. ದಿನವೂ ಸಾಯಂಕಾಲ ಬಂದು ನೋಡಯ್ಯ. ನಾನು ಕೆಲಸ ಮಾಡುವುದು ಇಲ್ಲೇ. ಪ್ರಜಾ ಪ್ರಗತಿ ಆಫೀಸಿನಲ್ಲಿ. ನಾನೀಗ ಅಲ್ಲಿ ಉಪಸಂಪಾದಕ."

"ಈವರೆಗೆ ಏನು ಮಾಡುತ್ತಿದ್ದೆ!"

"ಹಾಳಾಗಲಿ ಅದೊಂದು ದುರಂತ ಕತೆ ಅದನ್ನು ಯೋಚಿಸದಿರುವುದೇ ಲೇಸು ಎನಿಸುತ್ತೆ."

"ಅಂದರೆ...? ಏನಾಯಿತು ಹೇಳಯ್ಯಾ ಪರವಾಯಿಲ್ಲ!"

"ಹುಡುಗತನ....ಹಾದಿ ತಪ್ಪಿದ್ದು ನಿಜ. ಏನೋ ಆಗಿ ಹೋಯಿತು ಬಿಡು. ಮುಂದಿನ ಅಧ್ಯಾಯವನ್ನು ಹೊಸ ರೀತಿಯಲ್ಲಿ ತೆರೆಯಬೇಕಾಗಿದೆ. ಹೇಗೆ ಎಂಬುದರ ತೀರ್ಮಾನ ಇನ್ನೂ ಆಗಿಲ್ಲ."

"ಅಂದರೆ ಏನೂ ಅರ್ಥವಾಗುತ್ತಿಲ್ಲವಲ್ಲಾ......ನೀನೊಂದು ಒಗಟಾಗಿ ತೋರುತ್ತಿ."

"ಕೈಹಿಡಿದ ಮಡದಿಯೊಂದಿಗೆ ಮೂರು ನಾಲ್ಕು ತಿಂಗಳೂ ಸರಿಯಾಗಿ ಬಾಳಲಿಲ್ಲ. ಅದೇ ಮೊದಲು ತಪ್ಪು. ಆ ತಪ್ಪನ್ನು ಈಗ ಸರಿಪಡಿಸಬೇಕಾಗಿದೆ." ಸಂಕಟ ಪೂರ್ಣ ದನಿ ಗಂಟಲಲ್ಲಿ ಚಡಪಡಿಸಿತು.

"ಈಗ ಅವಳೆಲ್ಲಿದ್ದಾಳೆ?"

"ಲೆಕ್ಚರಾಗಿ ಕೆಲಸ ಮಾಡುತ್ತಿದ್ದಾಳಂತೆ."

"ನೀನವಳನ್ನು ಭೇಟಿಯಾಗಲಿಲ್ಲವೇ?"

"ಇಲ್ಲ........"

* * * *

ಮಧ್ಯಾಹ್ನದ ರಣಬಿಸಿಲು....ಬಾರಿಬಾರಿಗೂ ಸ್ವೇದವರುವಷ್ಟು ಸೆಕೆ-ಧಗೆ.

ತಂಗಾಳಿಯ ದರ್ಶನವೇ ಇಲ್ಲ. ಗಿಡಮರಗಳಲ್ಲಿ ಒಂದು ಎಲೆಯೂ ಅಲುಗುತ್ತಿಲ್ಲ. ತಂಗಾಳಿಗಾಗಿ ಆಕರಿಸುತ್ತವೆ ತನುಮನಗಳು.

ಕಾಲೇಜಿನ ಆವರಣದ ತುಂಬೆಲ್ಲಾ ಹುಡುಗಿಯರ ಮಾತಿನ ಮರ್ಮರ. ಅಲ್ಲಲ್ಲಿ ಗುಂಪು ಗುಂಪಾಗಿ ಮರಗಳ ನೆರಳಿನಲ್ಲಿ ಊಟ ಮುಗಿಸಿ ವಿಶ್ರಮಿಸುವ ಹುಡುಗಿಯರ ಚಿತ್ರ ಸುರಮ್ಯ. ವರ್ಣರಂಜಿತ ಉಡುಪುಗಳ ಮೋಹಕ ಪ್ರದರ್ಶನ.

ಮಾಧು ಅತ್ತಿತ್ತ ಕಣ್ಣಾಡಿಸುತ್ತಲೇ ಕಾಲೇಜಿನ ಮೆಟ್ಟಿಲು ಹತ್ತಿದ. ಅಲ್ಲೇ ಒಳಾಂಗಣದಲ್ಲಿ ಜವಾನ ದೃಷ್ಟಿಗೆ ಬಿದ್ದ.

ಮಾಧು ಕೈಬೀಸಿ ಕರೆಯುತ್ತಲೂ ಅವನು ಸನಿಹಕ್ಕೆ ಬಂದು "ಏನು ಸ್ವಾಮಿ?" ಎಂದ, ಪ್ರಶ್ನಾರ್ಥಕ ನೋಟ ಬೀರಿ.

"ನಾನು ಲೆಕ್ಚರರ್ ಮಂಜುಳರವರನ್ನು ನೋಡಬೇಕಿತ್ತು."

"ತಮ್ಮ ವಿಜಿಟಿಂಗ್ ಕಾರ್ಡು ಕೊಡುತ್ತೀರಾ?"

ಮಾಧು ಜೇಬಿನಿಂದ ಕಾರ್ಡು ತೆಗೆದುಕೊಟ್ಟ. ಜವಾನ ಅದನ್ನು ಕೊಂಡೊಯ್ದು ವಿಶ್ರಾಂತಿ ಕೊಠಡಿಯಲ್ಲಿದ್ದ ಮಂಜುಳೆಯ ಕೈಗೆ ಕೊಟ್ಟ.

ಅವಳು ಅದನ್ನು ನೋಡಿ, "ಇವರಾರು? ಗೊತ್ತಾಗದಲ್ಲ....?" ಎಂದಳು, ಯೋಚನೆಯಾಳದಲ್ಲಿ ಮುಳುಗಿ.

"ಅವರು ನಿಮ್ಮನ್ನು ನೋಡಬೇಕಂತೆ, ಕಾದಿದ್ದಾರೆ."

ಮಂಜುಳ ತನ್ನಲ್ಲೇ ಯೋಚಿಸುತ್ತ ಕೊಠಡಿಯಿಂದ ಹೊರಟಳು. ಉದ್ದನೆಯ ಕಾರಿಡಾರನ್ನು ಹಾಯ್ದು ಹೊರ ಜಗಲಿಗೆ ಬಂದಾಗ ಅಪರಿಚಿತ ವ್ಯಕ್ತಿಯನ್ನು ನೋಡಿ– "ನಿಮ್ಮ ಪರಿಚಯವಿಲ್ಲ; ನನ್ನಿಂದೇನಾಗಬೇಕಿತ್ತು ?"

"ನಿಮ್ಮೊಂದಿಗೆ ಮಾತಾಡುವುದಿತ್ತು. ನಿಮಗೆ ಈಗ ಬಿಡುವು ಮಾಡಿಕೊಳ್ಳಲಾಗುತ್ತದೆಯೇ ?"

"ಏನಾಗಬೇಕು ? ಈಗಲೇ ಹೇಳಿಬಿಡಿ."

ಮಾಧು ಸ್ವಲ್ಪ ಹೊತ್ತು ಆಲೋಚನಾ ಶೀಲನಾಗಿದ್ದು ನಂತರ "ಒಂದೆರಡು ಮಾತುಗಳಲ್ಲಿ ಮುಗಿಯುವ ವಿಷಯವಲ್ಲ ಇದು. ಸಾವಕಾಶವಾಗಿ ಕುಳಿತು ಮಾತಾಡುವಂತಾದ್ದು."

"ಬಹುಶಃ ನೀವು ತಪ್ಪು ತಿಳಿದುಕೊಂಡಿದ್ದೀರಿ ಎಂದು ತೋರುತ್ತೆ. ನೀವು ಅಗತ್ಯವಾಗಿ ಮಾತಾಡಬೇಕಾದುದು ಬೇರೆ ಯಾರೋ 'ಮಂಜುಳ' ಇರಬಹುದು, ಎನಿಸುತ್ತೆ ನನಗೆ."

"ನೀವು ಇಂದ್ರಬಾಬುಗಳ ಮಗಳಲ್ಲವೇ ?"

"ಹೌದು......."

"ಸರಿ ... ನಾನು ಮಾತಾಡಿಸಬೇಕಾದುದು ನಿಮ್ಮನ್ನೇ."

"ಏನು.......ಹೇಳಿ ?"

"ತಂದೆ–ತಾಯಿ ಇದ್ದಾರೆಯೇ? ಬಹಳ ಹಿಂದೆ ಇಬ್ಬರನ್ನೂ ನೋಡಿದ್ದೆ.... ಗೆಳೆತನ ತುಂಬಾ ಇತ್ತು"

"ಇಬ್ಬರೂ ಇಲ್ಲ. ತಾಯಿ ತುಂಬಾ ಹಿಂದೆಯೇ ಹೋಗಿದ್ದರು. ತಂದೆ ಹೋದುದು ಈಚೆಗೆ, ಐದು ವರ್ಷಗಳ ಹಿಂದೆ."

"ನೀವು......."

"ಇದೆಲ್ಲಾ ನಿಮಗೇಕೆ? ಏಕೆ ಹೀಗೆ ಪ್ರಶ್ನಿಸುತಿದ್ದೀರಿ? ನನಗಂತೂ ತುಂಬಾ ಕೆಲಸವಿದೆ. ವೃಥಾ ಹೊತ್ತು ಕಳೆಯುವಷ್ಟು ಸಮಯವಿಲ್ಲ. ನೀವು ದಯವಿಟ್ಟು ...."

"ನಾನು ನಿಮಗೆ ತೊಂದರೆ ಕೊಡಬಯಸುತ್ತಿಲ್ಲ. ವಿಚಾರ ವಿನಿಮಯ ಕ್ಕಾಗಿ ಒಂದೆರಡು ಗಳಿಗೆ ಸಮಯಕೊಟ್ಟರೆ ಸಾಕು."

"ಏತಕ್ಕಾಗಿ ... ಏನು ಸಮಾಚಾರ? ನನಗೆ ನಿಮ್ಮ ಪರಿಚಯವಿಲ್ಲದಿದ್ದರೂ ಸ್ವವಿಚಾರಗಳನ್ನು ಬೆದಕುತಿದ್ದೀರಿ........ಇದೆಲ್ಲಾ ಏಕೆ?"

ಪ್ರಶ್ನೆಯ ಮೇಲೆ ಪ್ರಶ್ನೆ ಹೊರಡುತ್ತಲಿದ್ದರೆ ಮಾಧು ತಟ್ಟನೆ ಏನು ಹೇಳಬೇಕೋ ತಿಳಿಯದೆ ಒಂದೆರಡು ಗಳಿಗೆ ತತ್ತರಿಸಿದರೂ ಸಾವರಿಸಿಕೊಳ್ಳುತ್ತ ನುಡಿದ "ಕ್ಷಮಿಸಿ, ನಿಮ್ಮ ಸಮಯವನ್ನು ಹೆಚ್ಚು ತೆಗೆದುಕೊಳ್ಳುವುದಿಲ್ಲ. ಒಂದೆರಡು ಪ್ರಶ್ನೆಗಳಿಗೆ ದಯವಿಟ್ಟು...."

"ಏತರ ವಿಷಯ?"

"ಈಗ ನಿಮ್ಮ ಮುಂದೆ ವಿಷಯವನ್ನು ಮುಂದಿಡದೆ ವಿಧಿಯಿಲ್ಲ...ದಯವಿಟ್ಟು ನನ್ನ ಮೇಲೆ ಕೋಪಗೊಳ್ಳಬೇಡಿ. ವಿಷಯ ನಿಮಗೆ ಅಹಿತವಾಗಬಹುದೇನೋ...."

"ಹಾಗಿದ್ದರೆ ಬೇಡವೇ ಬೇಡ...."

"ಅಷ್ಟೊಂದು ಖಡಾ ಖಡಿಯಾದರೆ ಹೇಗೆ ತಾಯಿ?"

"..........."

ಅವಳ ಆಶ್ಚರ್ಯ ವಿಸ್ತೃತ ಲೋಚನಗಳ ಭಾವ ಪ್ರಶ್ನಾರ್ಥಕವಾಗಿರುವುದನ್ನು ಗಮನಿಸಿದ ಮಾಧು ಬಾಯ್ದೆರೆದ,

"ನಾನು ಪ್ರಭುಪಾದನ ಗೆಳೆಯ...."

ಮುಂದೆ ಮಾತು ಹೊರಡದಂತೆ ನಡುವೆ ಬಾಯಿ ಹಾಕಿದಳು ಅವಳು "ಆತನ ವಿಚಾರ ಈಗೇಕೆ?"

"ಆಗಲೆ ಕೇಳಿಕೊಂಡಿರುವೆ ದಯವಿಟ್ಟು ಕ್ಷಮಿಸಿ ಎಂದು."

ಆ ಮಾತಿಗೆ ಮಂಜುಳ ಸ್ವಲ್ಪ ಸಾವರಿಸಿಕೊಳ್ಳತೊಡಗಿದಳು. ಕಣ್ಣುಗಳ ಮಿಂಚು ಜಗಜಗಿಸಿತು.

"ಅವನು ಒಂದು ಕಾಲದಲ್ಲಿ ತಪ್ಪು ಮಾಡಿದ್ದಾನೆ. ತಪ್ಪು ಅಗಾಧವಾದುದೇ....! ಇಂಥ ತಪ್ಪುಗಳು ಯಾವತ್ತೂ ಮುಂದುವರಿಯಬೇಕು ಎಂಬುದೇನೂ ಇಲ್ಲ. ಈಗಲೂ ಪ್ರಯತ್ನಿಸಿದರೆ...."

"ಹಾ, ದಯವಿಟ್ಟು ಬೇಡವೇ ಬೇಡ! ಆ ಹೃದಯಹೀನ ಧೂರ್ತನ ಮುಖ ನೋಡುವುದೂ ಬೇಡ! ನೀವು ದಯವಿಟ್ಟು ಹೊರಟು ಹೋಗಿ!"

"ತಾಯಿ, ಅಮ್ಮಣ್ಣಿ....!"

"No....No....!"

ಆ ಮುಹೂರ್ತದಲ್ಲಿ ಅವಳ ಕಣ್ಣುಗಳಿಗೆ ಎಲ್ಲಿಂದಲೋ ತಟ್ಟನೆ ಒದಗಿ ಬಂದಂತೆ ಮಿಂಚಿದ ಸೆಳೆಮಿಂಚು ದ್ವಿಗುಣಿಸಿತು, ಪ್ರಸಂಗೋಚಿತವಾಗಿ.

* * * *

ಮಾಧು ಹಿಂತಿರುಗುವುದರೊಳಗಾಗಿ ಎದುರಾದ ಪ್ರೊಫೆಸರ್ ರಂಗನಾಥ,

"ಓಹೋ! ಏನಪ್ಪಾ! ಎಷ್ಟು ದಿನಗಳ ನಂತರ ನಿನ್ನ ಭೇಟಿ!" ಎಂದು ಕುಶಲ ಪ್ರಶ್ನೆ ಮಾಡಿದ ನಂತರ "ನಾವು ಬಹುಶಃ ಆರೇಳು ವರ್ಷಗಳಿಂದ ಭೇಟಿಯಾಗಿರಲಿಲ್ಲ. ಈಗ ಎಲ್ಲಿದ್ದಿ?" ಎಂದ, ಕೈಹಿಡಿದು ಆತ್ಮೀಯವಾಗಿ ಕುಲುಕುತ್ತ.

"ನಾಗಪುರದಲ್ಲಿ"

"ನಮ್ಮೊಂದಿಗೆ ಓದುತ್ತಿದ್ದ ಪ್ರಭುಪಾದ ಎಲ್ಲಿದ್ದಾನೆ?"

"ಅವನು ಇದುವರೆವಿಗೂ ಬೊಂಬಾಯಿಯಲ್ಲಿದ್ದನಂತೆ. ಈಗ ಇಲ್ಲಿಗೇ ಬಂದಿದ್ದಾನೆ."

"ಅವನು ಎಂಥ ಬದ್ಮಾಷ್ ಗೊತ್ತೆ? ಅವನು ಈ ಮಂಜುಳೆಯನ್ನು ಹತ್ತು ಸಾವಿರ ರೂಪಾಯಿ ವರದಕ್ಷಿಣೆ–ಜೊತೆಗೆ ಒಂದು ಮೋಟಾರ್‌ಸೈಕಲ್ ಪಡೆದುಕೊಂಡು ಮದುವೆಯಾಗಿ ಹಿಂಸೆ ಕೊಡುವಷ್ಟು ಕೊಟ್ಟಿದ್ದಾನೆ. ತಂದೆಗೆ ಕಾಹಿಲೆಯೆಂದು ಇವಳು ಉಪಚಾರಕ್ಕೆ ತಂದೆ ಮನೆಗೆ ಹೋದಾಗ ಕಾಂಚನ ಎಂಬ ಸಿನಿಮಾ ಹುಡುಗಿಯನ್ನು ಕಟ್ಟಿಕೊಂಡು ಮನೆಯ ಸಾಮಾನಿನೊಂದಿಗೆ ಬೊಂಬಾಯಿಗೆ ಪರಾರಿ! ಪಾಪ! ಇವಳು ತಂದೆಗೆ ಮಣ್ಣು ಕೊಟ್ಟು ಹಿಂದಿರುಗಿ ಬಂದರೆ ಮನೆಯೂ ಇಲ್ಲ; ಸಾಮಾನೂ ಇಲ್ಲ; ಗಂಡನೂ ಇಲ್ಲ. ಇವಳು ಎಂತಹ ಸಭ್ಯ ಹುಡುಗಿ ಗೊತ್ತೆ? ಬಹಳ ಬುದ್ಧಿವಂತ ಹುಡುಗಿ ಕೂಡ. ಹೈಸ್ಕೂಲು ಕಾಲೇಜು ಎರಡು ಕಡೆಯೂ ಕೆಲಸ. ಮೇಲಾಗಿ, ಉತ್ತಮ ಸಾಹಿತಿ.

ಅಹ! ಎಷ್ಟು ಚೆನ್ನಾದ ಸಾಹಿತ್ಯ! ಅವಳ ಲೇಖನಗಳು ಪ್ರಜಾ ಪ್ರಗತಿಯಲ್ಲಿ ಪ್ರಕಟವಾಗುತ್ತವೆ. ಓದಿ ನೋಡಿದರೆ ನಿನಗೆ ತಿಳಿಯುತ್ತೆ."

"good! ತುಂಬಾ ಒಳ್ಳೆಯದು! ಅವನೊಬ್ಬ ಶತಮೂರ್ಖ. ಅನ್ಯಾಯವಾಗಿ ಜೀವನವನ್ನು ಹಾಳು ಮಾಡಿಕೊಂಡ."

"ಕಾಲ ಮತ್ತು ಧರ್ಮಗಳು ಮಹಾದ್ರವ್ಯವೆಂಬುದನ್ನು ಮರೆತರೆ ಆಗುವುದು ಹೀಗೆಯೇ."

"ನಿಜ.... ನಿಜ."

"ಓಂ ಅಸತೋಮಾ ಸದ್ಗಮಯ. ಇಂಥ ಸುಭಾಷಿತಗಳೆಲ್ಲ ಈ ಕಾಲದಲ್ಲಿ ಪುಸ್ತಕದ ಬದನೆಕಾಯಿ ಅಷ್ಟೆ."

"ಹೌದಪ್ಪಾ, ಹೌದು!"

ಮಾಧು ಭ್ರಮಿತನಂತೆ, ಚಿಂತಿತನಂತೆ ಭಾರವಾದ ಹೃದಯದಿಂದ ಹೊರ ಹೊರಟ.

ಊಟದ ಬಿಡುವು ಕಳೆಯಿತು. ಕಾಲೇಜಿನ ಗಂಟೆ ಬಾರಿಸಿತು.

ಠಣ್. ಠಣ್. ಠಣ್. ಠಣ್.

ಅಲ್ಲಲ್ಲಿ ಗುಂಪುಗೂಡಿದ್ದ ಹೆಣ್ಣು ಮಕ್ಕಳೆಲ್ಲ ಎದ್ದು ಒಳಗಡೆ ಬರಲಾರಂಭಿಸಿದರು. ಮಾಧು ಅವರಿಗೆ ದಾರಿ ಬಿಡುವಂತೆ ಸಾಲು ಮೆಟ್ಟಿಲುಗಳ ಬದಿಗೆ ಸರಿದು ನಿಂತ. ಆ ನೂರಾರು ಹೆಣ್ಣು ಮಕ್ಕಳ ಮೇಲೆ ದೃಷ್ಟಿ ಭ್ರಮರದಂತೆ ಹರಿದಾಡಿತು. ಮುಂದೆ ಈ ಎಲ್ಲಾ ಜೀವಗಳೂ ಒಂದಲ್ಲ ಒಂದು ರೀತಿಯಲ್ಲಿ ಕಷ್ಟ ಸುಖಗಳ ಜಾಲದಲ್ಲಿ ಹೊರಳಾಡಲೇಬೇಕು. ಭಗವಂತನ ಸೃಷ್ಟಿ ನಿಯಮವನ್ನು ಪ್ರಶ್ನಿಸುವವರಾರು?

ಆದರೆ...!

ಭಗವಂತನ ಸೃಷ್ಟಿಯೊಂದಿಗೆ ಮಾನವ ಸೃಷ್ಟಿಯೂ ಇದೆ! ಅಂತರಂಗ ಕೂಗಿ ಹೇಳಿತು.

"ಲೋಕ ನಿಯಮ ಅಥವಾ ರೂಢಿ...."

"ಮನುಷ್ಯನ ನಿಷ್ಠುರ ನ್ಯಾಯ ಸ್ಥಾನದಲ್ಲಿ ನೀತಿ ನಿಯಮಗಳು ಏಕಮುಖ!"

"..........."

ಬ್ರಹ್ಮ ಸತ್ಯಂ, ಜಗತ್‌ಸ್ಫೂರ್ತಿ....

* * * *

ಮಾಧು ಪ್ರಜಾ ಪ್ರಗತಿ ಪತ್ರಿಕಾಲಯದ ಮಹಡಿಯ ಮೆಟ್ಟಿಲುಗಳನ್ನು ಏರಿ ಮಹಡಿಯ ಮೇಲಕ್ಕೆ ಹೋದ. ಪ್ರಭುಪಾದನ ಕೊಠಡಿಯ ಕದ ಮುಚ್ಚಿತ್ತು.

ಕಟ. ಕಟ. ಕಟ. ಕಟ.

Yes Please !

ಮಾಧು ಕದವನ್ನು ತಳ್ಳಿ ಒಳಾಂತರಕ್ಕೆ ಪದಾರ್ಪಣೆ ಮಾಡಿದ.

ಪ್ರಭು ತಲೆಯೆತ್ತಿ ನೋಡಿದ. ಕೈಬೆರಳ ಸಂಧಿಯಲ್ಲಿದ್ದ ಲೇಖನಿ ಮೇಜಿನ ಮೇಲೆ ವಿಶ್ರಾಂತಿ ಪಡೆಯಿತು. ಮಾಧು ಒಂದೇ ಉಸಿರಿಗೆ ಅಂದ "ಇಲ್ಲಿಗೆ ತಪ್ಪದೆ ಸಾಹಿತ್ಯವನ್ನು ಪ್ರಕಟಣೆಗಾಗಿ ಕಳುಹಿಸುವ ಪ್ರಮಿಳಾ ಯಾರು ಗೊತ್ತೆ ? ನಿನ್ನ ಮಂಜಳಾ !"

ಹರೆ ! ಶ್ಯಾಂ....!

ಆಕ್ಷಣ ಪ್ರಭುವಿನ ಮಸ್ತಕ ಬಿರುಗಾಳಿ ಹೊಯ್ದು ಕೆಡೆದ ನಾರೀಕೇಳದಂತೆ ಮೇಜಿನ ಮೇಲೆ ತಪ್ಪನೆ ಬಿದ್ದು ವಿಶ್ರಾಂತಿ ಪಡೆಯಿತು.

ಮಲ್ಲಿಕಾ ಕೃತಿಗಳು

1	ಜೀವನ ಗಂಗಾ	(ಕಾದಂಬರಿ)	30	00
2	ಡಾ॥ ಅಘೋರ	,,	30	00
3	ಡಾ॥ ಕಮಲೇಶ್	,,	30	00
4	ವಂದೇ ಮಾತರಂ	,,	30	00
5	ಅನಂತಾನಂತದೆಡೆಗೆ	,,	20	00
6	ರತ್ನಗರ್ಭಾವಸುಂಧರಾ	(ಕಥಾ ಸಂಕಲನ)	15	00
7	ಬಹುರತ್ನಾವಸುಂಧರಾ	,,	15	00
8	ಲಿಯೋನಾ	,,	15	00
9	ಶ್ರೀಮುಖಿ	,,	15	00
10	ವೈಶಾಖೀ ಪರ್ವ	,,	15	00
11	ಫಾಲ್ಗುಣೀ ಪರ್ವ	,,	15	00
12	ಪೂಜಾವಸಾನ ಸಮಯೇ....!	(ಕವಿತಾಸಂಕಲನ)	8	00
13	ಧ್ಯಾನಾವಸಾನ ಸಮಯೇ....!	,,	8	00
14	ಗಾನ ತೀರ್ಥ	,,	8	00
15	ನಾದ ಬಿಂದು	,,	8	00
16	ಗಗನ ಕುಸುಮ	,,	8	00
17	ಜೀವನ ಕುಸುಮ		8	00
18	ವಿಜಯ ಗಾಥಾ	(ದೇಶಭಕ್ತಿ ಗೀತೆ)	5	00
19	ಪುಣ್ಯಪಯೋನಿಧಿ	(ನಾಟಕ)	12	00
20	ಪುಣ್ಯಾಭಿಸಾರ	,,	12	00
21	ತರಂಗಿಣಿ	(ಸಾನೆಟ್ಟುಗಳು)	10	00
22	ಕೃತಂ ಸ್ಮರ ಕ್ರತುಂ ಸ್ಮರ	(ಉಪನಿಷತ್ಕಥಾ)	15	00
23	ಐಂದ್ರ ಕೀರ್ತಿ ಕೇತನಂ	(ಗದ್ಯ ಕಾವ್ಯ)	22	00
24	ಉತ್ತರೋತ್ತರಣಿ		12	00
25	ರಾಗಾನುರಾಗಿಣಿ		12	00
26	ಶ್ರೀಹರ್ಷಲಾ		15	00
27	ರಮಣಿಮಣಿ		15	00

ಲಕ್ಷ್ಮೀ ಪ್ರಕಾಶನ

7, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು-560 025